ಶುಕ್ರವಾರ, ಆಗಸ್ಟ್ 5, 2022 | ಬೆಂಗಳೂರು | ₹ 6.00 | ಸಂಪುಟ 75 | ಸಂಚಿಕೆ 216 | ಪುಟ 18

www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ವರಮಹಾಲಕ್ಷ್ಮೀ ಹಬ್ಬದ ಶುಭಾಶಯಗಳು

ಸಿನಿಮಾ ಪುರವಣಿ
ಗಣಿ, ದೂದ್‌ಪೇಢ ಜೊತೆಗೂಡಿ ಗಾಳಿಪಟವನ್ನು ಬಾನೆತ್ತರಕ್ಕೆ ಹಾರಿಸಲು ಸಜ್ಜಾದ ಪವನ್‌ಕುಮಾರ್ ಪಾತ್ರಕ್ಕಾಗಿ 10 ವರ್ಷ ಯಂಗ್ ಆಗಿದ್ದಾರಂತೆ



ಚಿನ್ನ (Std. 10g)	ಶುದ್ಧ ಬೆಳ್ಳಿ (kg)
₹53,550 (ಬೆಂಗಳೂರು) ▲	₹59,100 (ಬೆಂಗಳೂರು) ▲

ಲಕ್ಷ್ಮಿನಾರಾಯಣಗೆ ಸೌಹಾರ್ದ ಸಮ್ಮಾನ ಪುರಸ್ಕಾರ



ನವದೆಹಲಿ: ಉತ್ತರ ಪ್ರದೇಶದ ಹಿಂದಿ ಸಂಸ್ಥಾನ ನೀಡುವ 2021ನೇ ಸಾಲಿನ ಸೌಹಾರ್ದ ಸಮ್ಮಾನ ಪುರಸ್ಕಾರಕ್ಕೆ ಕನ್ನಡದ ಹಿರಿಯ ಲೇಖಕ ಡಾ. ಆರ್.ಲಕ್ಷ್ಮಿನಾರಾಯಣ ಆಯ್ಕೆಯಾಗಿದ್ದಾರೆ. 10

ಬಿಬಿಎಂಪಿ ಮೀಸಲಾತಿ: ಬಿಜೆಪಿಯಿಂದಲೇ ಆಕ್ರೋಶ

ಬೆಂಗಳೂರು: ಬಿಬಿಎಂಪಿಯ 243 ವಾರ್ಡ್‌ಗಳಿಗೆ ಮೀಸಲಾತಿಯನ್ನು ಬುಧವಾರ ರಾತ್ರಿ ಸರ್ಕಾರ ಪ್ರಕಟಿಸಿದ್ದು, ಪ್ರತಿಪಕ್ಷಗಳವರಷ್ಟೆ ಅಲ್ಲದೆ ಬಿಜೆಪಿಯ ಮುಖಂಡರೂ ಆಕ್ರೋಶ ವ್ಯಕ್ತಪಡಿಸಿದ್ದಾರೆ. 3A

ಅನುಭವ ಮಂಟಪ
ಪರಿಸರ ಸೂಕ್ಷ್ಮ ಪ್ರದೇಶ ಉದ್ದೇಶವೇ ಪ್ರಶ್ನಾರ್ಹ


ಚುನಾವಣೆಗೆ ಸಜ್ಜಾಗುತ್ತಿರುವ ರಾಷ್ಟ್ರೀಯ ಪಕ್ಷಗಳು: ಎಚ್ಚರಿಕೆ ಕೊಟ್ಟ ನೇತಾರರು

ನಾಯಕರಿಗೆ ಶಾ–ರಾಹುಲ್ ತಾಕೀತು

ರಾಜ್ಯ ವಿಧಾನಸಭೆಗೆ ವರ್ಷದೊಳಗೆ ನಡೆಯಲಿರುವ ಚುನಾವಣೆಯ ಮೊದಲ ಅಂಕದ ಪರದೆ ಸರಿದು, ರಾಜ್ಯದ ನಾಯಕರು ಹುರಿಗೊಳ್ಳುತ್ತಿರುವ ಹೊತ್ತಿನಲ್ಲೇ ನಾಡಿಗೆ ಬಂದಿದ್ದ ಕೇಂದ್ರ ಗೃಹ ಸಚಿವ ಅಮಿತ್ ಶಾ ಹಾಗೂ ಕಾಂಗ್ರೆಸ್ ಮುಖಂಡ ರಾಹುಲ್ ಗಾಂಧಿ ಅವರು ತಮ್ಮ ಪಕ್ಷಗಳ ತಲೆಯಾಳುಗಳ ಕಿವಿ ಹಿಂಡುವ ಕೆಲಸ ಮಾಡಿದ್ದಾರೆ.

‘ತಪ್ಪು ಮರುಕಳಿಸದಂತೆ ಜಾಗ್ರತೆ ವಹಿಸಿ’

ಬೆಂಗಳೂರು: ‘ಆಡಳಿತದ ಕಾರ್ಯಶೈಲಿ ಬದಲಿಸಿಕೊಳ್ಳಬೇಕು, ವಿಧಾನಸಭಾ ಚುನಾವಣೆಗೆ ಈಗಿನಿಂದಲೇ ಹೆಚ್ಚು ಆಕ್ರಮಣಕಾರಿ ರೀತಿಯಲ್ಲಿ ತಯಾರಿ ನಡೆಸಿಕೊಳ್ಳಬೇಕು ಮತ್ತು ಪ್ರವೀಣ್ ಹತ್ಯೆ ನಂತರ ನಡೆದ ಬೆಳವಣಿಗೆಗಳು ಮರುಕಳಿಸದಂತೆ ಎಚ್ಚರವಹಿಸಬೇಕು ’ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸರ್ಕಾರ ಮತ್ತು ಪಕ್ಷದ ಪ್ರಮುಖರಿಗೆ ಸೂಚನೆ ನೀಡಿದ್ದಾರೆ.



ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಪಕ್ಷದ ಹಿರಿಯ ನಾಯಕ ಬಿ.ಎಸ್. ಯಡಿಯೂರಪ್ಪ ಅವರ ಜತೆ ಗುರುವಾರ ಪ್ರತ್ಯೇಕ ಸಭೆ ನಡೆಸಿದ ಅಮಿತ್ ಶಾ, ರಾಜ್ಯದಲ್ಲಿನ ರಾಜಕೀಯ ಪರಿಸ್ಥಿತಿಗಳ ಬಗ್ಗೆ ಮಾಹಿತಿ ಪಡೆದರು. ಬೊಮ್ಮಾಯಿ ಜತೆ ಅವರ ಸಚಿವ ಸಂಪುಟದ ಸಹೋದ್ಯೋಗಿಗಳು ಇದ್ದರು. ಹಿರಿಯ ಪೊಲೀಸ್ ಅಧಿಕಾರಿಗಳನ್ನು ಕರೆಸಿಕೊಂಡು ದಕ್ಷಿಣ ಕನ್ನಡದಲ್ಲಿ ಇತ್ತೀಚೆಗೆ ನಡೆದ ಹತ್ಯೆಗಳ ಬಗ್ಗೆ ಮಾಹಿತಿ ಪಡೆದರು. ಕೋಮು ಸಾಮರಸ್ಯ ಕದಡುವ ಪ್ರಯತ್ನಗಳನ್ನು ಆರಂಭದಲ್ಲಿಯೇ ಚಿವುಟಿ ಹಾಕಬೇಕು ಎಂಬ ಸೂಚನೆಯನ್ನೂ ನೀಡಿದರೆಂದು ಮೂಲಗಳು ತಿಳಿಸಿವೆ.

ವೆಸ್ಟ್‌ಎಂಡ್ ಹೊಟೇಲ್‌ನಲ್ಲಿ ಯಡಿಯೂರಪ್ಪ ಅವರ ಜತೆ ಬೆಳಗಿನ ಉಪಹಾರ ಸೇವಿಸಿದ ಶಾ, ಸುಮಾರು ಅರ್ಧ ತಾಸು ಮಾತುಕತೆ ನಡೆಸಿದರು. ದಾವಣಗೆರೆಯಲ್ಲಿ ನಡೆದ ಸಿದ್ದರಾಮಯ್ಯ ಅವರ ಜನ್ಮದಿನ ಕಾರ್ಯಕ್ರಮದ ಪರಿಣಾಮಗಳು ಮತ್ತು ಇತರ ರಾಜಕೀಯ ವಿದ್ಯಮಾನಗಳ ಬಗ್ಗೆ ಯಡಿಯೂರಪ್ಪ ಮಾಹಿತಿ ನೀಡಿದರು. ‘ಸಿದ್ದರಾಮಯ್ಯ ಜನ್ಮದಿನದಂದು ನಿರೀಕ್ಷೆಗೂ ಮೀರಿ ಅಪಾರ ಸಂಖ್ಯೆಯಲ್ಲಿ ಜನ ಸೇರಿದ್ದರು. ಎಲ್ಲ ನಾಯಕರೂ ಒಗ್ಗಟ್ಟು ಪ್ರದರ್ಶಿಸಿದರು. ಇದನ್ನು ನಾವು ಹಗುರವಾಗಿ ಪರಿಗಣಿಸಬಾರದು. ಎಚ್ಚರಿಕೆಯ ಗಂಟೆ ಎಂದು ಪರಿಗಣಿಸಿ ಹೆಜ್ಜೆ ಇಡಬೇಕು. ಇಲ್ಲವಾದರೆ ಚುನಾವಣೆಯಲ್ಲಿ ಕಷ್ಟವಾಗಬಹುದು’ ಎಂಬುದಾಗಿ ಯಡಿಯೂರಪ್ಪ ಹೇಳಿದ್ದಾಗಿ, ಮೂಲಗಳು ಹೇಳಿವೆ.

10ನೇ ಪುಟ ನೋಡಿ

‘ಮುಲಾಜಿಲ್ಲದೇ ಉಚ್ಚಾಟಿಸಿ’

ಬೆಂಗಳೂರು: ಮುಂಬರುವ ವಿಧಾನಸಭೆ ಚುನಾವಣೆಯನ್ನು ಕಾಂಗ್ರೆಸ್ ‘ಸಾಮೂಹಿಕ ನಾಯಕತ್ವ’ದಲ್ಲಿ ಎದುರಿಸಲಿದೆ ಎಂದು ಸ್ಪಷ್ಟಡಿಸಿದ ಬಳಿಕವೂ ಪಕ್ಷದ ಕೆಲವು ನಾಯಕರು, ಮುಂದಿನ ಮುಖ್ಯಮಂತ್ರಿ ವಿಚಾರವನ್ನು ಪದೇ ಪದೇ ಪ್ರಸ್ತಾಪಿಸುವುದನ್ನು ಗಂಭೀರವಾಗಿ ಪರಿಗಣಿಸಿರುವ ಎಐಸಿಸಿ ನಾಯಕ ರಾಹುಲ್ ಗಾಂಧಿ, ಅಂಥವರಿಗೆ ನೋಟಿಸ್ ನೀಡಿ ಪಕ್ಷದಿಂದಲೇ ಉಚ್ಚಾಟಿಸುವಂತೆ ರಾಜ್ಯ ಘಟಕಕ್ಕೆ ಸೂಚಿಸಿದ್ದಾರೆ.



ಹುಬ್ಬಳ್ಳಿಯಲ್ಲಿ ಮಂಗಳವಾರ ರಾತ್ರಿ ನಡೆದ ರಾಜಕೀಯ ವ್ಯವಹಾರಗಳ ಸಮಿತಿ ಸಭೆಯಲ್ಲಿ ಈ ವಿಚಾರದ ಕುರಿತು ಚರ್ಚೆ ನಡೆದಿದೆ. ಹೈಕಮಾಂಡ್ ಸೂಚನೆ ಹೊರತಾಗಿಯೂ ಮುಖ್ಯಮಂತ್ರಿ ವಿಚಾರದಲ್ಲಿ ನೀಡುತ್ತಿರುವ ಹೇಳಿಕೆಗಳ ಬಗ್ಗೆ ಸಭೆಯಲ್ಲಿ ಎಐಸಿಸಿ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಮತ್ತು ವಿಧಾನಪರಿಷತ್ ವಿರೋಧ ಪಕ್ಷದ ನಾಯಕ ಬಿ.ಕೆ. ಹರಿಪ್ರಸಾದ್ ವಿಷಯ ಪ್ರಸ್ತಾಪಿಸಿದ್ದಾರೆ. ಅಲ್ಲದೆ, ಇದರಿಂದ ಪಕ್ಷ ಸಂಘಟನೆಗೆ ಹಿನ್ನಡೆಯಾಗುತ್ತಿರುವ ಬಗ್ಗೆಯೂ ಆತಂಕ ವ್ಯಕ್ತಪಡಿಸಿದ್ದಾರೆ.

25 ಸದಸ್ಯರಿರುವ ರಾಜಕೀಯ ವ್ಯವಹಾರಗಳ ಸಮಿತಿ ಸಭೆಯಲ್ಲಿ ಪಕ್ಷ ಸಂಘಟನೆ, ಮುಂದಿನ ಚುನಾವಣೆಯನ್ನು ಸಮರ್ಥವಾಗಿ ಎದುರಿಸುವ ನಿಟ್ಟಿನಲ್ಲಿ ರೂಪಿಸಬೇಕಾದ ಕಾರ್ಯತಂತ್ರ, ರಾಜ್ಯ ರಾಜಕೀಯದಲ್ಲಿನ ಪ್ರಸಕ್ತ ವಿದ್ಯಮಾನಗಳು, ಮುಂದಿನ ಹೋರಾಟಗಳ ಬಗ್ಗೆ ಚರ್ಚೆ ನಡೆದಿದೆ.

‘ಒಗ್ಗಟ್ಟಿನಿಂದ ಚುನಾವಣೆಗೆ ಹೋಗಬೇಕು. ಪಕ್ಷದ ಸೂಚನೆಯಿದು. ಪಕ್ಷಕ್ಕಿಂತ ಯಾರೂ ದೊಡ್ಡವರಲ್ಲ. ಈ ಬಗ್ಗೆ ಈಗಾಗಲೇ ನಾವು ಸ್ಪಷ್ಟವಾಗಿ ಹೇಳಿದ್ದೇವೆ. ಆ ಬಳಿಕವೂ ಮುಖ್ಯಮಂತ್ರಿ ವಿಚಾರದಲ್ಲಿ ಹೇಳಿಕೆಗಳನ್ನು ನೀಡುವುದು ಸರಿಯಲ್ಲ.ಇಂಥ ನಡೆಯನ್ನು ಪಕ್ಷದ ಶಿಸ್ತಿನ ಉಲ್ಲಂಘನೆ ಎಂದೇ ಪರಿಗಣಿಸಬೇಕಾಗುತ್ತದೆ. ಪಕ್ಷಕ್ಕಿಂತ ದೊಡ್ಡವರು ಯಾರೂ ಇಲ್ಲ’ ಎಂದು ಸಭೆಯಲ್ಲಿ ರಾಹುಲ್ ಹೇಳಿದರು ಎಂದು ಪಕ್ಷದ ಮೂಲಗಳು ತಿಳಿಸಿವೆ.

10ನೇ ಪುಟ ನೋಡಿ

ಯಂಗ್ ಇಂಡಿಯನ್ ಕಚೇರಿಯಲ್ಲಿ ಮತ್ತೆ ಶೋಧ

ನವದೆಹಲಿ (ಪಿಟಿಐ): ನ್ಯಾಷನಲ್ ಹೆರಾಲ್ಡ್ ಹಣ ಅಕ್ರಮ ವರ್ಗಾವಣೆ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು (ಇ.ಡಿ) ಇಲ್ಲಿನ ಯಂಗ್ ಇಂಡಿಯನ್ ಕಚೇರಿಯಲ್ಲಿ ಗುರುವಾರ ಮತ್ತೆ ಶೋಧಕಾರ್ಯ ಆರಂಭಿಸಿತು.

ಪ್ರಕರಣಕ್ಕೆ ಸಂಬಂಧಿಸಿದಂತೆ ಇಲ್ಲಿನ ‘ಹೆರಾಲ್ಡ್ ಹೌಸ್’ ಕಟ್ಟಡದಲ್ಲಿರುವ ಕಚೇರಿಯಲ್ಲಿ ಮಂಗಳವಾರ ಇ.ಡಿ ಶೋಧಕಾರ್ಯ ಆರಂಭಿಸಿತ್ತು. ಆದರೆ, ಶೋಧಕಾರ್ಯದ ವೇಳೆ ಯಂಗ್ ಇಂಡಿಯನ್‌ನ ಹಿರಿಯ ಅಧಿಕಾರಿಗಳು ಯಾರೂ ಇಲ್ಲದ ಕಾರಣ ಕಚೇರಿಗೆ ಇ.ಡಿ ಅಧಿಕಾರಿಗಳು ಬುಧವಾರ ಬೀಗ ಹಾಕಿದ್ದರು.

ಶೋಧಕಾರ್ಯ ನಡೆಸಲು ಸಾಧ್ಯವಾಗದೇ ಇದ್ದ ಕಾರಣ, ಇ.ಡಿ ಅಧಿಕಾರಿಗಳು ಯಂಗ್ ಇಂಡಿಯನ್ ಪದಾಧಿಕಾರಿಗಳಲ್ಲಿ ಒಬ್ಬರಾದ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಇ-ಮೇಲ್ ಮೂಲಕ ಸಮನ್ಸ್ ನೀಡಿದ್ದರು. ‘ಕಚೇರಿಯ ಶೋಧಕಾರ್ಯದ ವೇಳೆ ಹಾಜರಿರಬೇಕು’ ಎಂದು ಸೂಚಿಸಿದ್ದರು.

ಗುರುವಾರ ಮಧ್ಯಾಹ್ನ ರಾಜ್ಯಸಭಾ ಕಲಾಪದ ಮಧ್ಯೆಯೇ ಖರ್ಗೆ ಅವರು, ಹೆರಾಲ್ಡ್ ಹೌಸ್ ಕಟ್ಟಡಕ್ಕೆ ಬಂದರು. ಆನಂತರ ಇ.ಡಿ ಅಧಿಕಾರಿಗಳು ಯಂಗ್ ಇಂಡಿಯನ್ ಕಚೇರಿಯ ಬೀಗ ತೆಗೆದು, ಶೋಧಕಾರ್ಯಕ್ಕೆ ಮತ್ತೆ ಚಾಲನೆ ನೀಡಿದರು. ‘ಹಣ ಅಕ್ರಮ ವರ್ಗಾವಣೆಗೆ ಸಂಬಂಧಿಸಿದಂತೆ ಸಾಕ್ಷ್ಯಗಳು ಲಭ್ಯವಾಗುತ್ತವೆಯೇ ಎಂಬುದನ್ನು ಪರಿಶೀಲಿಸುತ್ತೇವೆ. ಸಾಕ್ಷ್ಯಗಳನ್ನು ಸಂಗ್ರಹಿಸುತ್ತೇವೆ’ ಎಂದು ಇ.ಡಿ ಅಧಿಕಾರಿಗಳು ಹೇಳಿದ್ದಾರೆ.

ಗುರುವಾರ ಮಧ್ಯಾಹ್ನ 2ರ ಹೊತ್ತಿಗೆ ಆರಂಭವಾದ ಶೋಧಕಾರ್ಯ ರಾತ್ರಿ 8ವರೆಗೂ ನಡೆಯಿತು.



ಯಂಗ್ ಇಂಡಿಯನ್ ಕಚೇರಿಯಲ್ಲಿ ಗುರುವಾರ ಇ.ಡಿ ಶೋಧಕಾರ್ಯದ ನಂತರ ಮಲ್ಲಿಕಾರ್ಜುನ ಖರ್ಗೆ ಅವರು ಹೊರಬಂದರು –ಪಿಟಿಐ ಚಿತ್ರ

ಇನ್ನೊಂದು ಸುದ್ದಿ 10

ಚಿನಕುರಳಿ
ಪ್ರಕಾಶ್ ಶೆಟ್ಟಿ



ಕಾರ್ಮಿಕರಿಗೆ ‘ಸಿಹಿ’: ಸಮ ಪ್ರಮಾಣದ ಕೆಲಸಕ್ಕೆ ಎಲ್ಲರಿಗೂ ಸಮಾನ ವೇತನ

ಕನಿಷ್ಠ ವೇತನ ಶೇ 10ರಷ್ಟು ಹೆಚ್ಚಳ

• ರಾಜೇಶ್ ರೈ ಚಟ್ಲ

ಬೆಂಗಳೂರು: ನಗರ ಸ್ಥಳೀಯ ಸಂಸ್ಥೆಗಳು ಹಾಗೂ ಪಂಚಾಯತ್‌ರಾಜ್ ಸಂಸ್ಥೆಗಳಲ್ಲಿ ಉದ್ಯೋಗದಲ್ಲಿರುವ ಮತ್ತು ಆ ವ್ಯಾಪ್ತಿಯ ಉದ್ದಿಮೆಗಳಲ್ಲಿ ದುಡಿಯುವ ಕಾರ್ಮಿಕರ ಕನಿಷ್ಠ ವೇತನವನ್ನು ರಾಜ್ಯ ಸರ್ಕಾರ ಪರಿಷ್ಕರಿಸಿದೆ.

ಸಾಮಾನ್ಯವಾಗಿ ಐದು ವರ್ಷಕ್ಕೊಮ್ಮೆ ಕನಿಷ್ಠ ವೇತನ ಪರಿಷ್ಕರಿಸಲಾಗುತ್ತದೆ. ಕನಿಷ್ಠ ವೇತನ ಕಾಯ್ದೆ 1948ರ ಅಡಿ 2016ರಲ್ಲಿ ಕೊನೆಯದಾಗಿ ವೇತನ ಪರಿಷ್ಕರಿಸಲಾಗಿತ್ತು. ಕಳೆದ ಐದು ವರ್ಷಗಳಲ್ಲಿ ಅನೇಕ ಬದಲಾವಣೆಗಳು ಸಂಭವಿಸಿದ್ದು, ಜೀವನನಿರ್ವಹಣೆ ವೆಚ್ಚ ಗಣನೀಯವಾಗಿ ಹೆಚ್ಚಾಗಿದೆ. ಹೀಗಾಗಿ, ಕನಿಷ್ಠ ವೇತನ ಪರಿಷ್ಕರಿಸುವಂತೆ ಕಾರ್ಮಿಕ ಸಂಘಟನೆಗಳು ಒತ್ತಾಯಿಸುತ್ತಲೇ ಬಂದಿದ್ದವು.

ಕನಿಷ್ಠ ವೇತನ ದರಗಳನ್ನು ಪರಿಷ್ಕರಿಸಲು ಕರಡು ಪ್ರಸ್ತಾವನೆಯನ್ನು 2021ರ ಡಿ. 31ರಂದು ರಾಜ್ಯಪತ್ರದಲ್ಲಿ ಪ್ರಕಟಿಸಿ, ಸಲಹೆ, ಆಕ್ಷೇಪಣೆ ಸಲ್ಲಿಸಲು ಎರಡು ತಿಂಗಳ ಕಾಲಾವಕಾಶ ನೀಡಲಾಗಿತ್ತು. ಕಾರ್ಮಿಕ ಇಲಾಖೆಯ ಆಯುಕ್ತ ಅಕ್ರಂ ಪಾಷಾ ಅಧ್ಯಕ್ಷತೆಯಲ್ಲಿ ಜೂನ್ 21ರಂದು ನಡೆದ ಕರ್ನಾಟಕ ರಾಜ್ಯ ಕನಿಷ್ಠ ವೇತನ ಸಲಹಾ ಮಂಡಳಿಯ ಸಭೆಯಲ್ಲಿ ಚರ್ಚಿಸಿ, ವೇತನ ಪರಿಷ್ಕರಣೆ ಸಂಬಂಧ ಸರ್ಕಾರಕ್ಕೆ ವರದಿ ಸಲ್ಲಿಸಲಾಗಿತ್ತು.

ಕನಿಷ್ಠ ವೇತನಕ್ಕೆ ತುಟ್ಟಿ ಭತ್ಯೆ (ವಿಡಿಎ), ಭವಿಷ್ಯ ನಿಧಿ ಶೇ 12, ಇಎಸ್‌ಐ (ಕಾರ್ಮಿಕ ರಾಜ್ಯ ವಿಮೆ) ಶೇ 3.5 ಸೇರಿಸಿ ಕಾರ್ಮಿಕರ ಮಾಸಿಕ ವೇತನ ನಿಗದಿಪಡಿಸಲಾಗುತ್ತದೆ.

12ನೇ ಪುಟ ನೋಡಿ




ರಾಜ್ಯ ಕನಿಷ್ಠ ವೇತನಾ ಸಲಹಾ ಮಂಡಳಿಯಲ್ಲಿ ಚರ್ಚಿಸಿ, ಕನಿಷ್ಠ ವೇತನ ಬಗ್ಗೆ ಸರ್ಕಾರಕ್ಕೆ ವರದಿ ನೀಡಲಾಗಿತ್ತು. ಆಗಸ್ಟ್ ತಿಂಗಳಿನಿಂದಲೇ ಪರಿಷ್ಕೃತ ಕನಿಷ್ಠ ವೇತನ ಜಾರಿಗೆ ಬರಲಿದೆ

ಅಕ್ರಂ ಪಾಷಾ, ಆಯುಕ್ತ, ಕಾರ್ಮಿಕ ಇಲಾಖೆ

ಪದಕಗಳಿಕೆಯಲ್ಲಿ ಭಾರತ ‘ಹೈ ಜಂಪ್’

ಬರ್ಮಿಂಗ್‌ಹ್ಯಾಮ್: ಇಲ್ಲಿ ನಡೆಯು ತ್ತಿರುವ ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಭಾರತದ ಅಥ್ಲೀಟ್‌ಗಳ ಪದಕ ಗಳಿಕೆಯ ಓಟ ಮುಂದುವರಿದಿದೆ. ತಂಡದಲ್ಲಿ ಕೊನೆಯ ಕ್ಷಣದಲ್ಲಿ ಸ್ಥಾನ ಪಡೆದಿದ್ದ ಹೈಜಂಪ್ ಸ್ಪರ್ಧಿ ತೇಜಸ್ವಿನ್ ಶಂಕರ್ ಪುರುಷರ ಹೈಜಂಪ್‌ನಲ್ಲಿ ಕಂಚು ಗೆದ್ದು ಐತಿಹಾಸಿಕ ಸಾಧನೆ ಮಾಡಿದರು. ಈ ವಿಭಾಗದಲ್ಲಿ ದೇಶಕ್ಕೆ ಸಂದ ಪ್ರಥಮ ಪದಕ.



ಗುರುದೀಪ್ ಸಿಂಗ್
ವೇಟ್‌ಲಿಫ್ಟಿಂಗ್
ವಿಭಾಗ: ಪುರುಷರ 109+ ಕೆಜಿ
ಎತ್ತಿದ ತೂಕ: ಒಟ್ಟು 390 ಕೆ.ಜಿ. (ಸ್ನ್ಯಾಚ್ 167 ಕೆ.ಜಿ+ಕ್ಲೀನ್, ಜರ್ಕ್ 223 ಕೆ.ಜಿ)

ಬಾಕ್ಸಿಂಗ್: ಸೆಮಿಫೈನಲ್‌ಗೆ ಅಮಿತ್ ಪಂಘಾಲ್, ಜಾಸ್ಮಿನ್, ನಿಖತ್ ಜರೀನ್, ಸಾಗರ್ ಅಹ್ಲಾವತ್
ಮಹಿಳೆಯರ ಹ್ಯಾಮರ್ ಥ್ರೋ: ಫೈನಲ್‌ಗೆ ಮಂಜು ಬಾಲಾ 13

ಸರ್ಕಾರ–ಪರಿಷತ್ತು ಒಟ್ಟಾಗಿ ಕನ್ನಡ ಕಟ್ಟಲಿವೆ: ಸಿ.ಎಂ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸರ್ಕಾರ ಮತ್ತು ಕನ್ನಡ ಸಾಹಿತ್ಯ ಪರಿಷತ್ತು ಒಟ್ಟಾಗಿ ಕನ್ನಡ ಕಟ್ಟುವ ಕೆಲಸ ಮಾಡಲಿವೆ' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

ಕನ್ನಡ ಸಾಹಿತ್ಯ ಪರಿಷತ್ತು ಅಭಿವೃದ್ಧಿಪಡಿಸಿರುವ ಮೊಬೈಲ್ ಆ್ಯಪ್ ಬಿಡುಗಡೆ ಮಾಡಿ ಮಾತನಾಡಿದ ಅವರು, 'ಕನ್ನಡ ಭಾಷೆಗೆ ದೇಶದಲ್ಲಿ ಅಗ್ರ ಸ್ಥಾನವಿದೆ. ಅದಕ್ಕೆ ತಕ್ಕಂತೆ ಆಯಾ ಕಾಲಘಟದಲ್ಲಿ ಸವಾಲುಗಳು ಬಂದೇ ಬರುತ್ತವೆ. ಕನ್ನಡ ಉಳಿಸಿ ಎಲ್ಲ ರಂಗದಲ್ಲಿ ಬೆಳೆಸುವುದಕ್ಕೆ ಕನ್ನಡ ಸಾಹಿತ್ಯ ಪರಿಷತ್ತಿನೊಂದಿಗೆ ಸರ್ಕಾರ ಜೊತೆಯಾಗಿ ಮುನ್ನಡೆಯಲಿದೆ' ಎಂದರು.

'ಹಾವೇರಿಯಲ್ಲಿ ನಡೆಯಲಿರುವ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನವನ್ನು ಹಿಂದೆಂದೂ ಕಂಡರಿಯದ ರೀತಿಯಲ್ಲಿ ಯಶಸ್ವಿಗೊಳಿಸಲಾಗುವುದು. ಇದೇ ಕಾರಣಕ್ಕೆ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಿಗೆ ರಾಜ್ಯ ಸಚಿವ ಸ್ಥಾನಮಾನ ನೀಡಲಾಗಿದೆ' ಎಂದು ಹೇಳಿದರು.



ಕನ್ನಡ ಸಾಹಿತ್ಯ ಪರಿಷತ್ತಿನ ಮೊಬೈಲ್ ಆ್ಯಪ್ ಅನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಬಿಡುಗಡೆ ಮಾಡಿದರು. ಶಾಸಕ ನೆಹರು ಓಲೇಕಾರ, ಕಾರ್ಮಿಕ ಸಚಿವ ಶಿವರಾಂ ಹೆಬ್ಬಾರ್, ಕಸಾಪ ಅಧ್ಯಕ್ಷ ಮಹೇಶ ಜೋಶಿ, ವಸತಿ ಸಚಿವ ವಿ.ಸೋಮಣ್ಣ, ಉನ್ನತ ಶಿಕ್ಷಣ ಸಚಿವ ಸಿ.ಎನ್. ಅಶ್ವತ್ಥನಾರಾಯಣ ಇದ್ದರು

ಕೆಎಸ್‌ಒಯು: ಪ್ರಮಾಣ ಪತ್ರ ನೀಡಲು ಆದೇಶ

ಬೆಂಗಳೂರು: ಮೈಸೂರಿನ ಕರ್ನಾಟಕ ಮುಕ್ತ ವಿಶ್ವವಿದ್ಯಾಲಯದ ಮಾನ್ಯತೆ ರದ್ದುಗೊಂಡ ಅವಧಿಯಲ್ಲಿ ಇನ್ ಹೌಸ್ ವಿದ್ಯಾರ್ಥಿಗಳಾಗಿ ವಿವಿಧ ತಾಂತ್ರಿಕೇತರ ಕೋರ್ಸ್‌ಗಳಲ್ಲಿ ಪಾಸಾದ ವಿದ್ಯಾರ್ಥಿಗಳಿಗೆ ಅಂಕಪಟ್ಟಿ ಮತ್ತು ಪ್ರಮಾಣ ಪತ್ರಗಳನ್ನು ಎರಡು ತಿಂಗಳ ಒಳಗಾಗಿ ನೀಡುವಂತೆ ಹೈಕೋರ್ಟ್ ಆದೇಶಿಸಿದೆ.

ಈ ಕುರಿತಂತೆ ರಾಮನಗರ ಜಿಲ್ಲೆ ಬಿಡದಿಯ ಗಂಗಮ್ಮ ಸೇರಿದಂತೆ 280ಕ್ಕೂ ಹೆಚ್ಚು ವಿದ್ಯಾರ್ಥಿಗಳು ಸಲ್ಲಿಸಿದ್ದ ರಿಟ್ ಅರ್ಜಿಗಳನ್ನು ನ್ಯಾಯಮೂರ್ತಿ ಪಿ.ಕೃಷ್ಣಭಟ್ ಅವರಿದ್ದ ಏಕಸದಸ್ಯ ನ್ಯಾಯಪೀಠ ಮಾನ್ಯ ಮಾಡಿದೆ. ಪಾಸಾದ ವಿದ್ಯಾರ್ಥಿಗಳ ಪದವಿ ಪ್ರಮಾಣ ಪತ್ರವನ್ನು ಪರಿಗಣಿಸುವಂತೆ ನ್ಯಾಯಪೀಠ ಸರ್ಕಾರಕ್ಕೆ ನಿರ್ದೇಶಿಸಿದೆ.

ಯುಜಿಸಿ ಮಾನ್ಯತೆ ರದ್ದಾಗಿದ್ದ 2013–2014 ಮತ್ತು 2014-2015ನೇ ಸಾಲಿನಲ್ಲಿ ತಾಂತ್ರಿಕೇತರ ಕೋರ್ಸ್‌ಗಳಿಗೆ ಇನ್ ಹೌಸ್ ವಿದ್ಯಾರ್ಥಿಗಳಾಗಿ ಪರೀಕ್ಷೆ ಬರೆದ ವಿದ್ಯಾರ್ಥಿಗಳು ತೊಂದರೆಗೆ ಸಿಲುಕಿದ್ದರು.

ನಗರದಲ್ಲಿ ಇಂದು

ಮನೆ-ಮನಗಳಲ್ಲಿ ಶಿವಪೂಜೆ ಶಿವಾನುಭವ ಹಾಗೂ ಸಿದ್ಧಾಂತ ಶಿಖಾಮಣಿ-ವಚನ ಪ್ರವಚನ ಕಾರ್ಯಕ್ರಮ: ಸಂಜೆ: ಶಾರದಾ ಬಿ. ಹಂಪಾಲಿ, ಬಸವರಾಜಪ್ಪ ಎಂ.ಹಂಪಾಲಿ, ನಂ.3397, 8ನೇ ಅಡ್ಡರಸ್ತೆ, 13ನೇ 'ಬಿ' ಮುಖ್ಯರಸ್ತೆ, ಎಚ್.ಎ.ಎಲ್ 2ನೇ ಹಂತ, ಇಂದಿರಾನಗರ

75ನೇ ಸ್ವಾತಂತ್ರ್ಯೋತ್ಸವದ ಅಂಗವಾಗಿ ರಾಜ್ಯಮಟ್ಟದ ವಿಚಾರಗೋಷ್ಠಿ: ಉದ್ಘಾಟನೆ: ಡಾ.ಸಿ.ಎನ್. ಅಶ್ವತ್ಥನಾರಾಯಣ, ಅತಿಥಿಗಳು: ಬಿ.ವಿ. ವಸಂತ್ ಕುಮಾರ್, ಜಯಕರ್.ಎಸ್.ಎಂ., ಎಂ.ಕೊಟ್ರೇಶ್, ಎನ್.ವಿ.ರಘುರಾಮ್, ಆಯೋಜನೆ: ಬೆಂಗಳೂರು ವಿಶ್ವವಿದ್ಯಾಲಯ, ಸ್ಥಳ: ಜ್ಞಾನ ಭಾರತಿ ಆವರಣ, ಬೆಳಿಗ್ಗೆ 10.30

ಫಲಪುಷ್ಪ ಪ್ರದರ್ಶನ ಉದ್ಘಾಟನ ಸಮಾರಂಭ: ಉದ್ಘಾಟನೆ: ಬಸವರಾಜ ಬೊಮ್ಮಾಯಿ, ಅತಿಥಿಗಳು: ಮುನಿರತ್ನ, ಶಿವರಾಜ್ ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಅಶ್ವಿನಿ ಪುನೀತ್ ರಾಜ್‌ಕುಮಾರ್, ಅಧ್ಯಕ್ಷತೆ: ಉದಯ್. ಬಿ. ಗುರುಡಾಚಾರ್, ಆಯೋಜನೆ: ತೋಟಗಾರಿಕೆ ಇಲಾಖೆ, ಮೈಸೂರು ಉದ್ಯಾನಕಲಾ ಸಂಘ, ಸ್ಥಳ: ಲಾಲ್‌ಬಾಗ್ ಗಾಜಿನ ಮನೆ, ಬೆಳಿಗ್ಗೆ 11

ಬೆಂಗಳೂರು ಚೇಂಬರ್ ಆಫ್ ಇಂಡಸ್ಟ್ರಿ ಆ್ಯಂಡ್ ಕಾಮರ್ಸ್, ವಾರ್ಷಿಕ ಸಾಮಾನ್ಯಸಭೆ: ಅತಿಥಿಗಳು: ಬಸವರಾಜ ಬೊಮ್ಮಾಯಿ, ಡಾ.ಸಿ. ಎನ್. ಅಶ್ವತ್ಥನಾರಾಯಣ, ಆಯೋಜನೆ: ಬೆಂಗಳೂರು ಚೇಂಬರ್ ಆಫ್ ಇಂಡಸ್ಟ್ರಿ ಆ್ಯಂಡ್ ಕಾಮರ್ಸ್, ಸ್ಥಳ: ಬಾಲ್ ರೂಮ್, ತಾಜ್ ವೆಸ್ಟ್‌ಎಂಡ್ , ರೇಸ್‌ಕೋರ್ಸ್ ರಸ್ತೆ, ಮಧ್ಯಾಹ್ನ 3.30



ಪ್ರವೀಣ ಕರಡಗಿ



ರಾಧಾ ದೇಸಾಯಿ

ಸಂಗೀತ ಸಂಧ್ಯಾ: ಅತಿಥಿಗಳು: ಡಾ.ಸಿ. ಎನ್. ಅಶ್ವತ್ಥನಾರಾಯಣ, ಅಧ್ಯಕ್ಷತೆ: ನಿರಂಜನ ವಾನಳ್ಳಿ, ಗಾಯನ: ಪ್ರವೀಣ ಕರಡಗಿ, ರಾಧಾ ದೇಸಾಯಿ, ತಬಲಾ: ಕೇಶವ ಜೋಷಿ, ಹಾರ್ಮೋನಿಯಂ: ಸೂರ್ಯ ಉಪಾಧ್ಯಾಯ, ಆಯೋಜನೆ: ಸಪ್ತಕ, ಸ್ಥಳ: ಕೃಪಾನಿಧಿ ಕಾಲೇಜ್, ಚಿಕ್ಕಬೆಳ್ಳಂದೂರು, ಸರ್ಜಾಪುರ ರಸ್ತೆ, ಸಂಜೆ 4.30

ಭರತನಾಟ್ಯ ಪ್ರದರ್ಶನ: ಪ್ರಸ್ತುತಿ: ಬಿಂಬ ಪ್ರತಿಬಂಬ: ಹೆಸರು: ಸುಮನಾ. ಯು.ಎನ್., ಆಯೋಜನೆ: ಸಾಧನಾ ಸಂಗಮ ನೃತ್ಯ ಕೇಂದ್ರ, ಸ್ಥಳ: ನಯನ ಸಭಾಂಗಣ, ಜೆ.ಸಿ.ರಸ್ತೆ ಸಂಜೆ 6.15

ಗುರು ಸಾರ್ವಭೌಮರ ಆರಾಧನಾ ಮಹೋತ್ಸವ: ಪ್ರವಚನ: ಪ್ರಶಾಂತ್ ಭಾರ್ಗವಾಚಾರ್, ಆಯೋಜನೆ: ರಾಘವೇಂದ್ರ ಸೇವಾ ಸಮಿತಿ, ಸ್ಥಳ: ರಾಘವೇಂದ್ರ ಸ್ವಾಮಿಗಳ ಮಠ, ಸುಧೀಂದ್ರ ನಗರ, ಮಲ್ಲೇಶ್ವರ, ಸಂಜೆ 6.30

ಶ್ರೀದೇವಿ ಮಹಾತ್ಮೆ ನಾಟಕ ಪ್ರದರ್ಶನ: ಬೆಳಕು: ಅರವಿಂದ್ ಕುಪ್ಳೀಕರ್, ರಂಗ ಸಜ್ಜಿಕೆ: ಶಶಿಧರ ಅಡಪ, ಸಂಗೀತ: ಗಜಾನನ.ಟಿ. ನಾಯ್ಕ, ಕಥೆ: ವಸುಧೇಂದ್ರ, ನಿರ್ದೇಶನ: ಮಂಗಳಾ.ಎಸ್. ಆಯೋಜನೆ: ಸಂಚಾರಿ ಥಿಯೇಟರ್, ಸ್ಥಳ: ಕಲಾಗ್ರಾಮ ಮಲ್ಲತ್ತಹಳ್ಳಿ, ಸಂಜೆ 7

‘ಚುನಾವಣೆ ನಿಲ್ಲುತ್ತೆ, ಸರ್ಕಾರಕ್ಕೆ ಬೇಕಿರುವುದು ಅದೇ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಸರ್ಕಾರ ಪ್ರಕಟಿಸಿರುವ ಬಿಬಿಎಂಪಿ ವಾರ್ಡ್ ಮೀಸಲಾತಿಯನ್ನು ಇಟ್ಟುಕೊಂಡು ಯಾರೇ ನ್ಯಾಯಾಲಯದ ಬಾಗಿಲು ತಟ್ಟಿದರೂ ಇಡೀ ಚುನಾವಣೆ ನಿಲ್ಲುತ್ತೆ. ಸರ್ಕಾರಕ್ಕೆ ಬೇಕಿರುವುದೂ ಇದೇ. ಸರ್ಕಾರಕ್ಕೆ ನಿಜಕ್ಕೂ ಹಿಂದುಳಿದ ವರ್ಗಗಳ ಬಗ್ಗೆ ಕನಿಷ್ಠ ಕಾಳಜಿ, ಬದ್ಧತೆ ಇದ್ದಿದ್ದರೆ ಇಂತಹ ಕಾಟಾಚಾರದ ಪ್ರಕ್ರಿಯೆಗೆ ಮುಂದಾಗುತ್ತಿರಲಿಲ್ಲ’ ಎಂದು ರಾಜ್ಯ ಹಿಂದುಳಿದ ವರ್ಗಗಳ ಆಯೋಗದ ಮಾಜಿ ಅಧ್ಯಕ್ಷ ಡಾ.ಸಿ.ಎಸ್.ದ್ವಾರಕಾನಾಥ್ ಟೀಕಿಸಿದ್ದಾರೆ.

‘ಹಿಂದುಳಿದ ವರ್ಗಗಳ ರಾಜಕೀಯ ಮೀಸಲಾತಿಗೆ ಸಂಬಂಧಿಸಿದಂತೆ ಸುಪ್ರೀಂ ಕೋರ್ಟ್ 2010ರಲ್ಲಿ, ಕೃಷ್ಣಮೂರ್ತಿ ಹಾಗೂ ಭಾರತ ಒಕ್ಕೂಟ ಸರ್ಕಾರ ಪ್ರಕರಣದಲ್ಲಿ ರಾಜಕೀಯವಾಗಿ ಹಿಂದುಳಿದ ವರ್ಗಗಳನ್ನು ಗುರುತಿಸುವಲ್ಲಿ ಪ್ರಾಯೋಗಿಕ ದತ್ತಾಂಶಗಳನ್ನು ಸಂಗ್ರಹಿಸಿ, ಕಟ್ಟುನಿಟ್ಟಿನ ವಿಶ್ಲೇಷಣೆಗೆ ಒಳಪಡಿಸಿ, ರಾಜಕೀಯವಾಗಿ ಹಿಂದುಳಿದವರನ್ನು ಗುರುತಿಸಬೇಕು ಎಂದು ತೀರ್ಪು ನೀಡಿದೆ. 12 ವರ್ಷಗಳ ನಂತರ ಕರ್ನಾಟಕ ಸರ್ಕಾರ ಸ್ಥಳೀಯ ನಗರ ಮತ್ತು ಪಂಚಾಯತ್ ಸಂಸ್ಥೆಗಳ ಚುನಾವಣೆಗೆ ಸ್ಪರ್ಧಿಸಲು ಅವಕಾಶವಾಗುವಂತೆ ರಾಜಕೀಯವಾಗಿ ಹಿಂದುಳಿದವರನ್ನು ಗುರುತಿಸಲು ಹೈಕೋರ್ಟ್ ನಿವೃತ್ತ ನ್ಯಾಯಮೂರ್ತಿ ಭಕ್ತವತ್ಸಲ ಅಧ್ಯಕ್ಷತೆಯ ಆಯೋಗವೊಂದನ್ನು ರಚಿಸಿ, ಮೂರು ತಿಂಗಳ ಅತ್ಯಲ್ಪ ಅವಧಿಯಲ್ಲಿ ಸರ್ಕಾರಕ್ಕೆ ವರದಿ ನೀಡಬೇಕೆಂದು ತಾಕೀತು ಮಾಡಿತು. ಸರ್ಕಾರ ನೀಡಿರುವ ಈ ಕಾಲಾವಧಿಯಿಂದಲೇ ಹಿಂದುಳಿದ ವರ್ಗಗಳ ಬಗ್ಗೆ ಅದಕ್ಕಿರುವ 'ಬದ್ಧತೆ' ಏನೆಂದು ಅರ್ಥವಾಗುತ್ತದೆ’ ಎಂದು ವ್ಯಂಗ್ಯವಾಡಿದ್ದಾರೆ.

‘ನ್ಯಾ. ಭಕ್ತವತ್ಸಲ ಅವರು ‘ಸಂತೆ ಸಮಯಕ್ಕೆ ಮೂರು ಮೊಳ ನೇಯ್ದಂತೆ’ ವರದಿಯನ್ನೂ ಕೊಟ್ಟರು. ಆದರೆ, ಸರ್ಕಾರ ಸದರಿ ವರದಿಯನ್ನು ಪ್ರಕಟಿಸಲಿಲ್ಲ, ಅನುಷ್ಠಾನಕ್ಕೆ ತರಲೂ ಇಲ್ಲ. ವರದಿಯಲ್ಲಿ ಏನಿದೆಯೆಂಬ ವಿವರ ಯಾರಿಗೂ ಗೊತ್ತಿಲ್ಲ. ಇದರ ಕುರಿತು ಸರ್ಕಾರದ ಪ್ರಕಟಣೆಯೂ ಹೊರಬೀಳಲಿಲ್ಲ. ಹೀಗಿರುವಾಗ ಬಿಬಿಎಂಪಿ ಚುನಾವಣೆಗೆ ಹಿಂದುಳಿದ ವರ್ಗಗಳ ಮೀಸಲಾತಿ ಪಟ್ಟಿ ಮಾತ್ರ ಆಶ್ಚರ್ಯವೆಂಬಂತೆ ಪ್ರಕಟವಾಗಿದೆ’ ಎಂದಿದ್ದಾರೆ.

‘ಈ ಪಟ್ಟಿ ಸುಪ್ರೀಂ ಕೋರ್ಟ್ ನೀಡಿರುವ ಆದೇಶಕ್ಕೆ ಬದ್ಧವಾಗಿದೆಯೋ ಇಲ್ಲವೋ ಗೊತ್ತಿಲ್ಲ ಅಥವಾ ನ್ಯಾ. ಭಕ್ತವತ್ಸಲ ಆಯೋಗ ನೀಡಿರುವ ವರದಿಯ ಆಧಾರದ ಮೇಲಿದೆಯೋ ಅದೂ ಗೊತ್ತಿಲ್ಲ. ಈ ಹಿನ್ನೆಲೆಯಲ್ಲಿ ಯಾವ ಮಾನದಂಡಗಳನ್ನು ಇಟ್ಟುಕೊಂಡು ಈ ಪಟ್ಟಿಯನ್ನು ಸಿದ್ಧಪಡಿಸಿದೆಯೋ ಎಂಬುದು ಪ್ರಶ್ನಾರ್ಹ’ ಎಂದಿದ್ದಾರೆ.

ಬಿಬಿಎಂಪಿ ವಾರ್ಡ್ ಮೀಸಲಾತಿ • ಬೇಕಾಬಿಟ್ಟಿ ಪ್ರಕಟ– ಪ್ರತಿಪಕ್ಷಗಳ ಆರೋಪ

ಬಿಜೆಪಿಯಿಂದಲೇ ಆಕ್ರೋಶ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ 243 ವಾರ್ಡ್‌ಗಳಿಗೆ ಮೀಸಲಾತಿಯನ್ನು ಬುಧವಾರ ರಾತ್ರಿ ಸರ್ಕಾರ ಪ್ರಕಟಿಸಿದ್ದು, ಪ್ರತಿಪಕ್ಷಗಳವರಷ್ಟೆ ಅಲ್ಲದೆ ಬಿಜೆಪಿಯ ಮುಖಂಡರೂ ಆಕ್ರೋಶ ವ್ಯಕ್ತಪಡಿಸಿದ್ದಾರೆ.

‘ಚುನಾವಣೆ ನಡೆಸಲು ಸರ್ಕಾರಕ್ಕೆ ಇಷ್ಟ ಇಲ್ಲ. ಅದಕ್ಕಾಗಿಯೇ ಬೇಕಾಬಿಟ್ಟಿ ಮೀಸಲಾತಿಯನ್ನು ಪ್ರಕಟಿಸಿದೆ’ ಎಂದು ಕಾಂಗ್ರೆಸ್ ಹಾಗೂ ಜೆಡಿಎಸ್ ಮುಖಂಡರು ಟೀಕಿಸುತ್ತಿದ್ದಾರೆ. ಇದಕ್ಕೆ ಬಿಜೆಪಿಯ ಮಾಜಿ ಕಾರ್ಪೊರೇಟರ್‌ಗಳೂ ಧ್ವನಿಗೂಡಿಸಿದ್ದಾರೆ.

‘ಬಿಜೆಪಿಯ ಮಾಜಿ ಕಾರ್ಪೊರೇಟರ್‌ಗಳು ಹಾಗೂ ಮುಖಂಡರಿಗೆ ಅನುಕೂಲವಾಗದ ರೀತಿಯಲ್ಲಿ ಮೀಸಲಾತಿ ನಿಗದಿ ಮಾಡಲಾಗಿದೆ. ಕೆಲವು ಶಾಸಕರು ಮೂರ್ನಾಲ್ಕು ಬಾರಿ ಕಾರ್ಪೊರೇಟರ್ ಆದವರಿಗೆ ಮೀಸಲಾತಿ ವಿರುದ್ಧವಾಗಿರುವಂತೆ ನೋಡಿಕೊಂಡಿದ್ದಾರೆ. ಹೀಗೆ ಅವರು ಮುಂದೆ ಕ್ಷೇತ್ರದಲ್ಲಿ ತಮಗೇ ಎದುರಾಳಿ ಆಗದಂತೆ ತಡೆಯುವಲ್ಲಿ ಯಶ ಸಾಧಿಸಿದ್ದಾರೆ’ ಎಂದು ಬಿಜೆಪಿ ಮಾಜಿ ಕಾರ್ಪೊರೇಟರ್‌ಗಳು ದೂರಿದರು.



‘ಪಕ್ಷಕ್ಕೆ, ಬಿಜೆಪಿ ಮುಖಂಡರಿಗೆ ಅನುಕೂಲವಾಗುವಂತೆ ಅವರಿಗೆ ಬೇಕಾದಂತೆ ಮೀಸಲಾತಿ ಮಾಡಿಕೊಂಡಿದ್ದಾರೆ. ಈ ಹಿಂದೆಯೂ ವಾರ್ಡ್ ಪುನರ್‌ವಿಂಗಡಣೆಯನ್ನೂ ಇದೇ ರೀತಿ ಮಾಡಿಕೊಂಡಿದ್ದರು. ಮೀಸಲಾತಿಯನ್ನು ಯಾವ ರೀತಿ ಮಾಡಿದ್ದಾರೆ ಎಂದು ಹೇಳಿಲ್ಲ. ಯಾವ ಮಾರ್ಗಸೂಚಿ ಅನುಸರಿಸಲಾಗಿದೆ ಎಂಬುದನ್ನೂ ಬಹಿರಂಗಪಡಿಸಿಲ್ಲ’ ಎಂದು ಶಾಸಕ ರಾಮಲಿಂಗಾರೆಡ್ಡಿ ಟೀಕಿಸಿದರು.

ಮೀಸಲಾತಿ ಹಂಚಿಕೆ

ಮೀಸಲಾತಿ	ಒಟ್ಟು ವಾರ್ಡ್	ಬಿಜೆಪಿ ಶಾಸಕರ ವ್ಯಾಪ್ತಿಗೆ	ಕಾಂಗ್ರೆಸ್ ಶಾಸಕರ ವ್ಯಾಪ್ತಿಗೆ	ಜೆಡಿಎಸ್ ಶಾಸಕರ ವ್ಯಾಪ್ತಿಗೆ
ಸಾಮಾನ್ಯ	65	49	14	2
ಸಾಮಾನ್ಯ ಮಹಿಳೆ	65	30	30	5
ಹಿಂದುಳಿದ ವರ್ಗ–ಎ	33	29	4	0
ಹಿಂದುಳಿದ ವರ್ಗ–ಎ (ಮಹಿಳೆ)	32	13	15	4
ಹಿಂದುಳಿದ ವರ್ಗ–ಬಿ	7	7	0	0
ಹಿಂದುಳಿದ ವರ್ಗ–ಬಿ(ಮಹಿಳೆ)	9	3	6	0
ಪರಿಶಿಷ್ಟ ಜಾತಿ	14	9	4	1
ಪರಿಶಿಷ್ಟ ಜಾತಿ (ಮಹಿಳೆ)	14	3	11	0
ಪರಿಶಿಷ್ಟ ಪಂಗಡ	2	0	2	0
ಪರಿಶಿಷ್ಟ ಪಂಗಡ (ಮಹಿಳೆ)	2	1	1	0

‘ನಾವೇಕೆ ಬೇಡ?’

‘ಪಕ್ಷಕ್ಕಾಗಿ ನಾವು 20–30 ವರ್ಷ ದುಡಿದಿದ್ದೇವೆ. ಈಗಲೂ ನಾವು ಪಕ್ಷನಿಷ್ಠರೇ. ನಮ್ಮದೇ ಪಕ್ಷ ಅಧಿಕಾರದಲ್ಲಿದೆ, ನಾವೇ ಬಿಬಿಎಂಪಿಯಲ್ಲೂ ಅಧಿಕಾರಕ್ಕೆ ಬರುತ್ತೇವೆ. ಆದರೆ ಪಕ್ಷಕ್ಕೆ ನಾವು ಮಾತ್ರ ಬೇಡ. ಅದಕ್ಕಾಗಿಯೇ ಎರಡು–ಮೂರು ಬಾರಿ ನಾವು ಗೆದ್ದಿರುವ ವಾರ್ಡ್‌ಗಳಲ್ಲಿ ನಮಗೆ ಸ್ಪರ್ಧೆಗೆ ಅವಕಾಶ ಇಲ್ಲದಂತೆ ಮೀಸಲಾತಿ ನಿಗದಿಮಾಡಿದ್ದಾರೆ’ ಎಂಬುದು ಬಿಜೆಪಿಯ ಮಾಜಿ ಕಾರ್ಪೊರೇಟರ್‌ಗಳ ಅಸಮಾಧಾನ.

‘ಕಾಂಗ್ರೆಸ್ ಹಾಗೂ ಜೆಡಿಎಸ್ ಅಧಿಕಾರದಲ್ಲಿದ್ದಾಗಲೂ ನಮಗೆ ಅನ್ಯಾಯ ಆಗಿರಲಿಲ್ಲ. ನಮ್ಮ ವಾರ್ಡ್‌ಗಳಲ್ಲಿ ನಮಗೆ ಮೀಸಲಾತಿ ಇತ್ತು. ಆದರೆ, ನಮ್ಮ ಸರ್ಕಾರವೇ ನಮ್ಮನ್ನು ಕಡೆಗಣಿಸಿದೆ. 55 ವರ್ಷವಾದವರು ಸ್ಪರ್ಧಿಸಬಾರದು ಎಂದೂ ಹೇಳಲಾಗುತ್ತಿದೆ. ನಾವು ಶಾಸಕ ಸ್ಥಾನಕ್ಕೂ ಸ್ಪರ್ಧಿಸಲು ಅವಕಾಶ ನೀಡಲ್ಲ, ಪಾಲಿಕೆಯಿಂದಲೂ ನಮ್ಮನ್ನು ದೂರ ಮಾಡಲಾಗುತ್ತಿದೆ. ಪಕ್ಷಕ್ಕೆ ನಾವೇಕೆ ಬೇಡ ಎಂಬುದು ನಮಗೆ ಅರ್ಥವಾಗುತ್ತಿಲ್ಲ’ ಎಂದು ಹೆಸರು ಬಹಿರಂಗಪಡಿಸಲು ಇಚ್ಛಿಸದ ಬಿಜೆಪಿಯ ಹಲವು ಮುಖಂಡರು ಹೇಳಿದರು.

‘ಎಲ್ಲರನ್ನೂ ಸಮಾಧಾನಪಡಿಸಲು ಸಾಧ್ಯವಿಲ್ಲ. ಎಲ್ಲಿ ಏನು ಮಾಡಿದರೂ ಯಾರಿಗಾದರೂ ತೊಂದರೆ ಆಗುತ್ತದೆ. ಕಾನೂನು ಪ್ರಕಾರವೇ ಮಾಡಬೇಕಾಗುತ್ತದೆ’ ಎಂದು ಬೆಂಗಳೂರು ದಕ್ಷಿಣ ಕ್ಷೇತ್ರದ ಶಾಸಕ ಎಂ. ಕೃಷ್ಣಪ್ಪ ಹೇಳಿದರು.

‘ಎಲ್ಲ ಕಾರ್ಯಕರ್ತರು, ಹಿಂದಿನ ಕಾರ್ಪೊರೇಟರ್‌ಗಳಿಗೆ ಸ್ಪರ್ಧಿಸಲು ಆಸೆ ಇರುತ್ತದೆ. ಆದರೆ ಎಲ್ಲರಿಗೂ ಅವಕಾಶ ಮಾಡಿಕೊಡಲು ಸಾಧ್ಯವಾಗುವುದಿಲ್ಲ. ಪಕ್ಷಕ್ಕಾಗಿ ಎಲ್ಲರೂ ದುಡಿಯಬೇಕು. ಮುಂದೆ ಅದಕ್ಕೆ ಫಲ ಸಿಕ್ಕೇ ಸಿಗುತ್ತದೆ’ ಎಂದು ಬಸವನಗುಡಿ ಶಾಸಕ ರವಿಸುಬ್ರಹ್ಮಣ್ಯ ತಿಳಿಸಿದರು.

ಯಾರಿಗೆ ಎಷ್ಟು ವಾರ್ಡ್?

ಸಾಮಾನ್ಯ	65
ಸಾಮಾನ್ಯ (ಮಹಿಳೆ)	65
ಹಿಂದುಳಿದ ವರ್ಗ ಎ	33
ಹಿಂದುಳಿದ ವರ್ಗ ಎ (ಮಹಿಳೆ)	32
ಹಿಂದುಳಿದ ವರ್ಗ ಬಿ	7
ಹಿಂದುಳಿದ ವರ್ಗ ಬಿ (ಮಹಿಳೆ)	9
ಎಸ್.ಸಿ.	14
ಎಸ್.ಸಿ. (ಮಹಿಳೆ)	14
ಎಸ್.ಟಿ.	2
ಎಸ್.ಟಿ. (ಮಹಿಳೆ)	2

122 ಮಹಿಳೆಯರು

ಮಹಿಳೆಯರಿಗೆ ಶೇ 50 ಮೀಸಲಾತಿಯನ್ನು ಪಾಲಿಸಲಾಗಿದ್ದು, 243 ವಾರ್ಡ್‌ಗಳಲ್ಲಿ ಎಲ್ಲ ಮೀಸಲಾತಿ ಸೇರಿ ಒಟ್ಟು 122 ವಾರ್ಡ್‌ಗಳಲ್ಲಿ ಮಹಿಳೆಯರಿಗೆ ಮೀಸಲಾತಿ ಕಲ್ಪಿಸಲಾಗಿದೆ. 130 ವಾರ್ಡ್‌ಗಳು ಸಾಮಾನ್ಯ ಹಾಗೂ ಸಾಮಾನ್ಯ ಮಹಿಳೆಗೆ ಮೀಸಲಾಗಿದೆ. ಹಿಂದುಳಿದ ವರ್ಗ 'ಎ' ಮೀಸಲಾತಿಯಲ್ಲಿ ಒಟ್ಟಾರೆ 55 ವಾರ್ಡ್‌ಗಳಿದ್ದು, ಇದರಲ್ಲಿ 32 ವಾರ್ಡ್‌ಗಳು ಮಹಿಳೆಯರಿಗೆ ಮೀಸಲಾಗಿದೆ. 16 ವಾರ್ಡ್‌ಗಳಲ್ಲಿ ಹಿಂದುಳಿದ ವರ್ಗ 'ಬಿ'ಗೆ ಮೀಸಲಾಗಿದ್ದು, ಇದರಲ್ಲಿ ಮಹಿಳೆಯರಿಗೆ 9 ವಾರ್ಡ್‌ಗಳಿವೆ. ಪರಿಶಿಷ್ಟ ಜಾತಿಗೆ 28 ವಾರ್ಡ್‌ಗಳು ಮೀಸಲಾಗಿದ್ದು, ಅದರಲ್ಲಿ ಮಹಿಳೆಯರಿಗೆ 14 ವಾರ್ಡ್‌ಗಳಿವೆ. ಪರಿಶಿಷ್ಟ ಪಂಗಡಕ್ಕೆ 4 ವಾರ್ಡ್‌ಗಳಿದ್ದು, ಅದರಲ್ಲಿ ಮಹಿಳೆಯರಿಗೆ 2 ವಾರ್ಡ್‌ಗಳನ್ನು ಮೀಸಲಿಡಲಾಗಿದೆ.

‘ಈಜಿಪುರ ವಾರ್ಡ್‌ನಲ್ಲಿ ಪರಿಶಿಷ್ಟ ವರ್ಗದವರು ಹೆಚ್ಚಿದ್ದಾರೆ. ಆದರೆ ಅದನ್ನು ಸಾಮಾನ್ಯ ಮಹಿಳೆಗೆ ಮೀಸಲಿಡಲಾಗಿದೆ. ನಮ್ಮ ಬಿಟಿಎಂ ಲೇಔಟ್ ಕ್ಷೇತ್ರದಲ್ಲಿ 9 ವಾರ್ಡ್‌ಗಳಲ್ಲಿ 8 ಅನ್ನು ಮಹಿಳೆಯರಿಗೆ ಮೀಸಲಿರಿಸಲಾಗಿದೆ. ಜಯನಗರ ಕ್ಷೇತ್ರದಲ್ಲಿ 6 ವಾರ್ಡ್‌ಗಳಲ್ಲಿ 5 ಮಹಿಳಾ ಮೀಸಲು ವಾರ್ಡ್‌ಗಳು. ಹೀಗೆ ಕಾಂಗ್ರೆಸ್ ಶಾಸಕರಿರುವ ಕ್ಷೇತ್ರಗಳಲ್ಲಿ ಬೇಕಾಬಿಟ್ಟಿ ಮೀಸಲಾತಿ ಮಾಡಿದ್ದಾರೆ’ ಎಂದರು.

‘ಸರ್ಕಾರಕ್ಕೆ ಯಾವುದರಲ್ಲೂ ನೀತಿ, ನಿಯಮ ಎಂಬುದೇ ಇಲ್ಲ. ಮನಸೋಇಚ್ಛೆ ಮೀಸಲಾತಿ ಮಾಡಿಕೊಂಡಿದ್ದಾರೆ. ದುಡ್ಡಿದೆ ಎಂಬ ಅಹಂನಿಂದ ಎಲ್ಲವನ್ನೂ ಮಾಡುತ್ತಿದ್ದಾರೆ. ಜನರೇ ಅವರಿಗೆ ತಕ್ಕ ಪಾಠ ಕಲಿಸುತ್ತಾರೆ’ ಎಂದು ವಿಜಯನಗರದ ಶಾಸಕ ಎಂ. ಕೃಷ್ಣಪ್ಪ ಪ್ರತಿಕ್ರಿಯಿಸಿದರು.

ಮುಸ್ಲಿಮರಿಗೆ ಅಡ್ಡಿ: ‘ಮುಸ್ಲಿಮರು ಹೆಚ್ಚಿರುವ ಶಿವಾಜಿನಗರ, ಪುಲಕೇಶಿ ನಗರ ಮತ್ತು ಚಾಮರಾಜಪೇಟೆ ವಿಧಾನಸಭೆ ಕ್ಷೇತ್ರಗಳಲ್ಲಿ ಮುಸ್ಲಿಮರಿಗೆ ಅನುಕೂಲವಾಗದ ಮೀಸಲಾತಿಯನ್ನು ನಿಗದಿಮಾಡಲಾಗಿದೆ. ಹಿಂದುಳಿದ ವರ್ಗ–ಎ ಮೀಸಲಾತಿಯನ್ನು ಬಿಜೆಪಿ ಶಾಸಕರಿರುವ ಕ್ಷೇತ್ರಗಳ ವಾರ್ಡ್‌ಗಳಿಗೆ ನೀಡಲಾಗಿದೆ. ಆ ವಾರ್ಡ್‌ಗಳಲ್ಲಿ ಮುಸ್ಲಿಮರ ಸಂಖ್ಯೆ ಕಡಿಮೆ ಇದೆ’ ಎಂದು ಕಾಂಗ್ರೆಸ್ ಮುಖಂಡರು ದೂರಿದರು.

‘ಗಂಗಾನಗರ, ಎಸ್.ಕೆ. ಗಾರ್ಡನ್, ಸಗಾಯಪುರ, ಪುಲಕೇಶಿನಗರ, ಕಾಡುಗೊಂಡನಹಳ್ಳಿ, ವೆಂಕಟೇಶಪುರ, ಲಿಂಗರಾಜನಗರ, ಮಾರುತಿ ಸೇವಾ ನಗರ, ರಾಮಸ್ವಾಮಿ ಪಾಳ್ಯ, ಭಾರತಿನಗರ, ಹಲಸೂರು, ಚಲವಾದಿ ಪಾಳ್ಯ, ಜಗಜೀವನರಾಮ್ ನಗರ, ಆಜಾದ್‌ನಗರ, ದೊಮ್ಮಲೂರು ಮತ್ತು ವನ್ನಾರ್ ಪೇಟೆ ವಾರ್ಡ್‌ಗಳಲ್ಲಿ ಮುಸ್ಲಿಮರು ಸ್ಪರ್ಧಿಸಲು ಸಾಧ್ಯವಾಗದಂತೆ ಪರಿಶಿಷ್ಟ ಜಾತಿ ಮತ್ತು ಪಂಗಡಗಳಿಗೆ ಮೀಸಲಾತಿಯನ್ನು ನಿಗದಿಪಡಿಸಿದ್ದಾರೆ’ ಎಂದು ಆರೋಪಿಸಿದರು.

ಕೆಪಿಟಿಸಿಎಲ್: ಕೋರ್ಟ್‌ಗೆ ಹೋದವರಿಗಷ್ಟೇ ಪರೀಕ್ಷೆಗೆ ಪ್ರವೇಶ!

• ಚಂದ್ರಹಾಸ ಹಿರೇಮಳಲಿ

ಪ್ರಜಾವಾಣಿ ವಿಶೇಷ

ಬೆಂಗಳೂರು: ಕರ್ನಾಟಕ ವಿದ್ಯುತ್ ಪ್ರಸರಣ ನಿಗಮದ (ಕೆಪಿಟಿಸಿಎಲ್) ಹುದ್ದೆಗಳ ನೇಮಕಾತಿ ಪ್ರಕ್ರಿಯೆಯಲ್ಲಿ ಕೋರ್ಟ್ ಮೊರೆ ಹೋದ ಅಭ್ಯರ್ಥಿಗಳ ತಿರಸ್ಕೃತಗೊಂಡ ಅರ್ಜಿಗಳನ್ನಷ್ಟೆ ಪುರಸ್ಕರಿಸಿರುವುದಕ್ಕೆ ಇತರ ಅಭ್ಯರ್ಥಿಗಳು ವಿರೋಧ ವ್ಯಕ್ತಪಡಿಸಿದ್ದಾರೆ.

ಕೆಪಿಟಿಸಿಎಲ್ ಜೆಇ ಮತ್ತು ಎಇ ಹುದ್ದೆಗಳ ಆಯ್ಕೆಗಾಗಿ ಜುಲೈ 23, 24ರಂದು ನಡೆದಿದ್ದ ನೇಮಕಾತಿ ಪರೀಕ್ಷಾ ಪ್ರಕ್ರಿಯೆಯಲ್ಲಿ 30,933 ಅರ್ಜಿಗಳು ತಿರಸ್ಕೃತಗೊಂಡಿದ್ದವು. ತಾಂತ್ರಿಕ ದೋಷದಿಂದ ಅರ್ಜಿಗಳು ತಿರಸ್ಕೃತಗೊಂಡಿದ್ದು, ಅವುಗಳನ್ನು ಪುರಸ್ಕರಿಸುವಂತೆ ಎಂಟು ಅಭ್ಯರ್ಥಿಗಳು ಹೈಕೋರ್ಟ್‌ಗೆ ಅರ್ಜಿ ಸಲ್ಲಿಸಿದ್ದರು. ಅವರ ಮನವಿಯನ್ನು ಮಾನ್ಯ ಮಾಡಿದ್ದ ಕೋರ್ಟ್, ತಿರಸ್ಕೃತ ಅರ್ಜಿಗಳನ್ನು ಪರಿಗಣಿಸುವಂತೆ ಸೂಚಿಸಿತ್ತು. ಆದರೆ, ಕೋರ್ಟ್ ಆದೇಶ ತಂದ ಅಭ್ಯರ್ಥಿಗಳಿಗೆ ಮಾತ್ರ ಪರೀಕ್ಷೆ ಬರೆಯಲು ಕೆಪಿಟಿಸಿಎಲ್ ಅವಕಾಶ ನೀಡಿ, ಉಳಿದವರಿಗೆ ಪ್ರವೇಶ ನಿರಾಕರಿಸಿತ್ತು.

ಹಾಗೆಯೇ, ಕೆಪಿಟಿಸಿಎಲ್‌ನ ಕಿರಿಯ ಸಹಾಯಕ ಹುದ್ದೆಗೆ ಸಲ್ಲಿಕೆಯಾಗಿದ್ದ 1,22,857 ಅರ್ಜಿಗಳು ತಿರಸ್ಕೃತವಾಗಿವೆ. ಈ ಹುದ್ದೆಗಳಿಗೆ ಆ.7ರಂದು ಪರೀಕ್ಷೆ ನಡೆಯಲಿದೆ. ತಿರಸ್ಕೃತಗೊಂಡ ಅರ್ಜಿಗಳಲ್ಲಿ ಸುಮಾರು 20 ಸಾವಿರ ಅರ್ಜಿಗಳು ತಾಂತ್ರಿಕ ಲೋಪದಿಂದ ತಿರಸ್ಕೃತಗೊಂಡಿವೆ. ತಮ್ಮ ಅರ್ಜಿಗಳನ್ನು ಪುರಸ್ಕರಿಸುವಂತೆ ಕೆಪಿಟಿಸಿಎಲ್‌ನ ಆಡಳಿತ ಮತ್ತು ಮಾನವ ಸಂಪನ್ಮೂಲ ವಿಭಾಗದ ನಿರ್ದೇಶಕರಿಗೆ ಮನವಿ ಸಲ್ಲಿಸಿದರೂ, ಸ್ಪಂದನೆ ದೊರೆತಿಲ್ಲ ಎನ್ನುವುದು ಅಭ್ಯರ್ಥಿಗಳ ಅಳಲು.

> **ತಿರಸ್ಕರಿಸಿದ ಅರ್ಜಿಗಳಿಗೂ, ಪರೀಕ್ಷಾ ಪ್ರಾಧಿಕಾರಕ್ಕೂ ಸಂಬಂಧವಿಲ್ಲ. ಕೆಪಿಟಿಸಿಎಲ್ ನೀಡಿದ ಪಟ್ಟಿಯಲ್ಲಿನ ಅಭ್ಯರ್ಥಿಗಳಿಗೆ ಪರೀಕ್ಷೆ ನಡೆಸುವುದಷ್ಟೆ ನಮ್ಮ ಕೆಲಸ.**
> **ಎಸ್.ರಮ್ಯಾ,** ಕಾರ್ಯನಿರ್ವಾಹಕ ನಿರ್ದೇಶಕಿ, ಕೆಇಎ

ನೇಮಕಾತಿ ಪ್ರಕ್ರಿಯೆಗೆ ಕೆಪಿಟಿಸಿಎಲ್ ಅಭಿವೃದ್ಧಿಪಡಿಸಿರುವ ಸಾಫ್ಟ್‌ವೇರ್ ವಿರುದ್ಧವೂ ಹಲವರು ಅಸಮಾಧಾನ ವ್ಯಕ್ತಪಡಿಸಿದ್ದಾರೆ.

‘ಜಾತಿ ಪ್ರಮಾಣಪತ್ರ ಸಲ್ಲಿಸದಿರುವ ಕಾರಣಕ್ಕೆ ನಮ್ಮ ಅರ್ಜಿಗಳು ತಿರಸ್ಕೃತವಾಗಿವೆ ಎನ್ನುವ ಕಾರಣ ನೀಡಲಾಗಿದೆ. ಎಲ್ಲ ದಾಖಲೆಗಳನ್ನು ಅಪ್‌ಲೋಡ್ ಮಾಡಿದ ಮೇಲೆ ಹಣ ಕಟ್ಟಲು ಚಲನ್ ದೊರೆಯುವುದು. ಈಗ ಹಣ ಕಟ್ಟಿದ್ದರೂ ಇತರ ದಾಖಲೆ ಅಪ್‌ಲೋಡ್ ಮಾಡಿಲ್ಲ ಎಂದರೆ ಹೇಗೆ? ಇದು ಸಾಫ್ಟ್‌ವೇರ್ ಲೋಪ’ ಎನ್ನುತ್ತಾರೆ ಅಭ್ಯರ್ಥಿ ಮುರಳೀಧರ.

‘ಜಾತಿ ಪ್ರಮಾಣಪತ್ರ ಇಲ್ಲವೆಂದರೆ ಸಾಮಾನ್ಯ ವರ್ಗದ ಅಡಿ ಪರೀಕ್ಷೆ ಬರೆಯಲು ಅವಕಾಶ ನೀಡಬಹುದಲ್ಲವೇ? ಇತರ ನೇಮಕಾತಿಗಳಲ್ಲಿ ದಾಖಲೆಗಳ ಪರಿಶೀಲನೆ ವೇಳೆ ಜಾತಿ, ಆದಾಯ ಪ್ರಮಾಣಪತ್ರ ಪರಿಗಣಿಸಲಾಗುತ್ತದೆ. ಕೆಪಿಟಿಸಿಎಲ್‌ಗೆ ಮಾತ್ರ ಬೇರೆ ನಿಯಮವೇ? ಅಷ್ಟೊಂದು ಅರ್ಜಿಗಳನ್ನು ತಿರಸ್ಕರಿಸಿದರೆ ನಿರುದ್ಯೋಗಿ ಯುವಕರ ಪಾಡೇನು’ ಎಂದು ಪ್ರಶ್ನಿಸುತ್ತಾರೆ ರಾಜಶೇಖರ್.

ಕಿರಿಯ ಸಹಾಯಕರ ಹುದ್ದೆಗೆ ಪರೀಕ್ಷೆ ನಡೆಯಲು ನಾಲ್ಕು ದಿನಗಳು ಬಾಕಿ ಇದೆ. ಈ ಸಮಯದಲ್ಲಿ ಕೋರ್ಟ್‌ಗೆ ಹೋಗಲು ಸಮಯವಿಲ್ಲ. ಹಣಹೊಂದಿಸುವುದೂ ಕಷ್ಟ. ಅನುಕೂಲಸ್ಥರು ಮಾತ್ರ ಕೋರ್ಟ್ ಆದೇಶ ತಂದು ಪರೀಕ್ಷೆ ಬರೆಯುತ್ತಿದ್ದಾರೆ ಎಂದು ಹಲವರು ಅಸಹಾಯಕತೆ ತೋಡಿಕೊಂಡರು.

ಎಡಿಟರ್ಸ್ ಗಿಲ್ಡ್ ಅಧ್ಯಕ್ಷರಾಗಿ ರವಿ ಹೆಗಡೆ ಆಯ್ಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಎಡಿಟರ್ಸ್ ಗಿಲ್ಡ್ ಆಫ್ ಬೆಂಗಳೂರು’ ಅಧ್ಯಕ್ಷರಾಗಿ ಕನ್ನಡ ಪ್ರಭ ಮತ್ತು ಸುವರ್ಣ ನ್ಯೂಸ್ ಪ್ರಧಾನ ಸಂಪಾದಕ ರವಿ ಹೆಗಡೆ ಆಯ್ಕೆಯಾಗಿದ್ದಾರೆ.

ವಿಸ್ತಾರ ನ್ಯೂಸ್ ಸಿಇಒ ಹಾಗೂ ಪ್ರಧಾನ ಸಂಪಾದಕ ಹರಿಪ್ರಕಾಶ್ ಕೋಣೆಮನೆ (ಪ್ರಧಾನ ಕಾರ್ಯದರ್ಶಿ), ‘ಪ್ರಜಾವಾಣಿ’ ಕಾರ್ಯನಿರ್ವಾಹಕ ಸಂಪಾದಕ ರವೀಂದ್ರ ಭಟ್ಟ (ಕಾರ್ಯದರ್ಶಿ), ವಿಜಯವಾಣಿ ಸಂಪಾದಕ ಕೆ.ಎನ್.ಚನ್ನೇಗೌಡ (ಖಜಾಂಚಿ) ಅವರು ಆಯ್ಕೆಯಾಗಿದ್ದಾರೆ.

ಗುರುವಾರ ನಡೆದ ಎಡಿಟರ್ಸ್ ಗಿಲ್ಡ್ ಸಭೆಯಲ್ಲಿ ಈ ಆಯ್ಕೆ ನಡೆದಿದೆ. ಗಿಲ್ಡ್‌ನ ಹಿಂದಿನ ಅಧ್ಯಕ್ಷರಾದ ವಿಶ್ವವಾಣಿ ಪ್ರಧಾನ ಸಂಪಾದಕ ವಿಶ್ವೇಶ್ವರ ಭಟ್, ಸಂಯುಕ್ತ ಕರ್ನಾಟಕ ಸಂಪಾದಕ ಹುಣಸವಾಡಿ ರಾಜನ್, ಹೊಸ ದಿಗಂತ ಸಂಪಾದಕ ವಿನಾಯಕ ಭಟ್ ಮೂರೂರು, ಉದಯವಾಣಿ ಸಂಪಾದಕ ಬಿ.ಕೆ. ಗಣೇಶ್ ಸಭೆಯಲ್ಲಿದ್ದರು.

ಎಟಿಜಿಎಂ ಪರೀಕ್ಷಾರ್ಥ ಉಡಾವಣೆ ಯಶಸ್ವಿ

ನವದೆಹಲಿ (ಪಿಟಿಐ): ರಕ್ಷಣಾ ಸಂಶೋಧನೆ ಹಾಗೂ ಅಭಿವೃದ್ಧಿ ಸಂಸ್ಥೆಯು (ಡಿಆರ್‌ಡಿಒ) ದೇಶೀಯವಾಗಿ ಅಭಿವೃದ್ಧಿಪಡಿಸಿರುವ ಯುದ್ಧ ಟ್ಯಾಂಕ್‌ಗಳನ್ನು ನಾಶಗೊಳಿಸುವಂತಹ ನಿಖರ ಗುರಿಯ ಲೇಸರ್ ನಿರ್ದೇಶಿತ ಕ್ಷಿಪಣಿಗಳ (ಎಟಿಜಿಎಂ) ಪರೀಕ್ಷೆ ಗುರುವಾರ ಯಶಸ್ವಿಯಾಗಿ ನಡೆದಿದೆ.

ಮಹಾರಾಷ್ಟ್ರದ ಅಹ್ಮದ್ ನಗರದ ಕೆ.ಕೆ.ರೇಂಜ್‌ನಲ್ಲಿ ಪ್ರಮುಖ ಯುದ್ಧ ಟ್ಯಾಂಕ್ ಅರ್ಜುನ್‌ನಿಂದ (ಎಂಬಿಟಿ) ಪರೀಕ್ಷಾರ್ಥವಾಗಿ ಉಡಾಯಿಸಿದ ಕ್ಷಿಪಣಿಗಳು ಎರಡು ಪ್ರತ್ಯೇಕ ಸ್ಥಳಗಳಲ್ಲಿನ ಗುರಿಗಳನ್ನು ಏಕಕಾಲಕ್ಕೆ ನಿಖರವಾಗಿ ಭೇದಿಸಿದವು ಎಂದು ರಕ್ಷಣಾ ಸಚಿವಾಲಯ ಹೇಳಿದೆ.

ಈ ಕ್ಷಿಪಣಿಗಳನ್ನು ಅಭಿವೃದ್ಧಿಪಡಿಸಿದ ಡಿಆರ್‌ಡಿಒ ಹಾಗೂ ಪರೀಕ್ಷಾರ್ಥ ಉಡಾವಣೆಯನ್ನು ಯಶಸ್ವಿಯಾಗಿ ಕೈಗೊಂಡ ಭಾರತೀಯ ಸೇನೆಯನ್ನು ರಕ್ಷಣಾ ಸಚಿವ ರಾಜನಾಥ್ ಸಿಂಗ್ ಅಭಿನಂದಿಸಿದ್ದಾರೆ.

ಜಲಪಾತ ಪ್ರದೇಶದ ಕಾಯಕಲ್ಪಕ್ಕೆ ನಿರ್ಲಕ್ಷ್ಯ

ಮುತ್ಯಾಲಮಡುವುಗೆ ಮತ್ತೆ ಜೀವಕಳೆ

ಪ್ರಜಾವಾಣಿ ವಾರ್ತೆ

ಆನೇಕಲ್: ಸುರಿಯುತ್ತಿರುವ ಭಾರಿ ಮಳೆಯಿಂದ ತಾಲ್ಲೂಕಿನ ಪ್ರವಾಸಿ ತಾಣವಾದ ಮುತ್ಯಾಲಮಡುವಿನಲ್ಲಿ ಜಲಧಾರೆ ಭೋರ್ಗರೆಯುತ್ತಿದ್ದು, ಪ್ರವಾಸಿಗರನ್ನು ಕೈಬೀಸಿ ಕರೆಯುತ್ತಿದೆ. ಆ ಮೂಲಕ ಜಲಪಾತದ ಗತವೈಭವ ಮರುಕಳಿಸಿದೆ.

ಕಳೆದ 15 ದಿನಗಳಿಂದಲೂ ತಾಲ್ಲೂಕಿನಾದ್ಯಂತ ಉತ್ತಮ ಮಳೆಯಾಗುತ್ತಿದೆ. ಮುತ್ಯಾಲಮಡುವಿನಲ್ಲಿ ನೀರು ಮುತ್ತಿನೋಪಾದಿಯಲ್ಲಿ ಧುಮ್ಮಿಕ್ಕುತ್ತಿರುವ ಹಸಿರಿನ ಕಣಿವೆಯಲ್ಲಿ ಜೀವಕಳೆ ತುಂಬಿದೆ. ಇಲ್ಲಿನ ಹಸಿರಿನ ಪ್ರಕೃತಿ ಸೌಂದರ್ಯವನ್ನು ನೋಡುವುದೇ ಕಣ್ಣಿಗೆ ಆನಂದ. ಜುಳು ಜುಳು ಹರಿಯುವ ನೀರಿನ ನಿನಾದಕ್ಕೆ ಕಿವಿಗೊಡುತ್ತಾ ಹಸಿರಿನ ನಡುವೆ 400ಕ್ಕೂ ಹೆಚ್ಚು ಮೆಟ್ಟಿಲು ಇಳಿದು ಕಣಿವೆ ತಲುಪಿದರೆ ಆಯಾಸ ಮರೆಯಾಗಿ ಮನಸ್ಸಿಗೆ ಮುದ ನೀಡುತ್ತದೆ. 300 ಅಡಿಗಳಿಗೂ ಎತ್ತರದಿಂದ ಕಣಿವೆಯತ್ತ ಧುಮ್ಮಿಕ್ಕುತ್ತಿರುವ ನೀರಿನ ಝರಿ ಕೈಬೀಸಿ ಕರೆಯುತ್ತದೆ.



ಧುಮ್ಮಿಕ್ಕುತ್ತಿರುವ ಮುತ್ಯಾಲಮಡುವು ಜಲಪಾತ

ಮುಖ್ಯ ಜಲಪಾತದಲ್ಲಿ ನೀರಿನ ಸೆಲೆ ಹೆಚ್ಚಾಗಿದ್ದು ಸುತ್ತಲಿನ ಪ್ರದೇಶದಲ್ಲಿ ಕಿರು ಜಲಪಾತಗಳು ಸೃಷ್ಟಿಯಾಗಿವೆ. ಬಂಡೆಗಳ ನಡುವೆ ಹರಿಯುವ ನೀರಿನಲ್ಲಿ ವಿಹರಿಸುವುದು ಹೊಸ ಅನುಭವವನ್ನು ಕಟ್ಟಿಕೊಡುತ್ತದೆ. ಮುತ್ಯಾಲಮಡುವಿನಲ್ಲಿ ನೀರು ಮುತ್ತಿನಂತೆ ಧುಮ್ಮಿಕ್ಕುವುದಕ್ಕೆ ಈ ಜಲಪಾತಕ್ಕೆ ಮುತ್ಯಾಲಮಡುವು ಎಂದು ಹೆಸರು ಬಂದಿದೆ. ಹಲವು ವರ್ಷಗಳಿಂದ ಮಳೆ ಇಲ್ಲದೆ ಕಣ್ಮರೆಯಾಗಿದ್ದ ಜಲಪಾತ ತನ್ನ ವೈಭವವನ್ನು ಮರಳಿ ಪಡೆದಿದ್ದು ಪ್ರವಾಸಿಗರಿಗೆ ಇಲ್ಲಿನ ತಂಪನೆಯ ವಾತಾವರಣ ಮುದ ನೀಡುತ್ತದೆ.

ತಲುಪುವುದು ಹೇಗೆ?

ಇದು ಬೆಂಗಳೂರಿನಿಂದ 40 ಕಿ.ಮೀ. ದೂರದಲ್ಲಿ ಆನೇಕಲ್ ಸೆರಗಿನಲ್ಲಿದೆ. ಇಲ್ಲಿಗೆ ಭೇಟಿ ನೀಡಲು ಸುಸಜ್ಜಿತವಾದ ರಸ್ತೆ ಸೌಕರ್ಯವಿದೆ. ಆದರೆ, ಬಸ್ ಸೌಕರ್ಯ ಇಲ್ಲ. ಸ್ವಂತ ವಾಹನಗಳಲ್ಲಿ ಬರಬಹುದು. ಕರ್ನಾಟಕ ಪ್ರವಾಸೋದ್ಯಮ ಇಲಾಖೆಯ ಹೋಟೆಲ್ ಹಾಗೂ ವಸತಿ ಗೃಹಗಳು ಇಲ್ಲಿವೆ. ಒಂದು ದಿನದ ಹೊರ ಸಂಚಾರವನ್ನು ಸಂತಸದಿಂದ ಕಳೆಯಲು ಪ್ರಶಸ್ತವಾದ ಸ್ಥಳವಾಗಿದೆ. ಮಳೆ ಹಾಗೂ ಮೋಡದ ಈ ವಾತಾವರಣ ಮುತ್ಯಾಲಮಡುವು ವೀಕ್ಷಣೆಗೆ ಹೇಳಿ ಮಾಡಿಸಿದಂತಿದೆ.

7 ಐಎಫ್‌ಎಸ್ ಅಧಿಕಾರಿಗಳ ವರ್ಗಾವಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅರಣ್ಯ ಇಲಾಖೆಯ ವಿಚಕ್ಷಣ ದಳದ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಂಶೋಧನೆ) ಸೀಮಾ ಗರ್ಗ್ ಸೇರಿ 7 ಐಎಫ್‌ಎಸ್ ಅಧಿಕಾರಿಗಳನ್ನು ವರ್ಗಾವಣೆ ಮಾಡಿ ರಾಜ್ಯ ಸರ್ಕಾರ ಗುರುವಾರ ಆದೇಶ ಹೊರಡಿಸಿದೆ.

ಸಂಶೋಧನೆ ವಿಭಾಗದ ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯಾಗಿ ಸೀಮಾ ಗರ್ಗ್ ಅವರನ್ನು ನಿಯೋಜಿಸಲಾಗಿದೆ.

ವರ್ಗಾವಣೆಗೊಂಡವರು: ಜಿ.ವಿ. ರಂಗ ರಾವ್– ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ರಾಷ್ಟ್ರೀಯ ಅರಣ್ಯೀಕರಣ ಕ್ರಿಯಾ ಯೋಜನೆ ಮತ್ತು ಬಂಬೂ ಮಿಷನ್)

ರಾಜ್‌ಕುಮಾರ್ ಶ್ರೀವಾಸ್ತವ್– ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಆಡಳಿತ ಮತ್ತು ಸಮನ್ವಯ)

ಮಹೇಶ್ ಬಿ. ಶಿರೂರ್– ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಭೂದಾಖಲೆಗಳು ಮತ್ತು ಅರಣ್ಯ ಕೋಶ, ಜಲಸಂಪನ್ಮೂಲ ಇಲಾಖೆ)

ವಿಜಯ್ ರಂಜನ್ ಸಿಂಗ್– ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ವಿಚಕ್ಷಣ ದಳ)

ಅನಿಲ್ ಕುಮಾರ್ ರತನ್– ಹೆಚ್ಚುವರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಸಿಬ್ಬಂದಿ ಮತ್ತು ನೇಮಕಾತಿ)

ಡಿ. ಯತೀಶ್ ಕುಮಾರ್– ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ (ಧಾರವಾಡ ವೃತ್ತ)

7ಕ್ಕೆ 'ಕನಕದಾಸ ದರ್ಶನ' ಬಿಡುಗಡೆ

ಬೆಂಗಳೂರು: ಲೇಖಕ, ಪ್ರಾಧ್ಯಾಪಕ ಡಾ.ಎಸ್. ಜಯಸಿಂಹ ಅವರು ಬರೆದ 'ಕನಕದಾಸ ದರ್ಶನ' (ಕನಕದಾಸರ ಜೀವನ, ಸಾಧನೆ, ಕೃತಿಗಳ ಪರಿಚಯ ಮತ್ತು ಸಂಗ್ರಹ) ಎಂಬ ಪುಸ್ತಕ ಆಗಸ್ಟ್ 7ರಂದು ಕೆ.ಆರ್. ರಸ್ತೆಲ್ಲಿರುವ ಗಾಯನ ಸಮಾಜದ ಸಭಾಂಗಣದಲ್ಲಿ ಬಿಡುಗಡೆ ಯಾಗಲಿದೆ.ಸುಪ್ರೀಂ ಕೋರ್ಟ್ ನಿವೃತ್ತ ನ್ಯಾಯಮೂರ್ತಿ ಎನ್.ವೆಂಕಟಾಚಲಯ್ಯ ಕಾರ್ಯಕ್ರಮವನ್ನು ಉದ್ಘಾಟಿಸಲಿದ್ದಾರೆ. ಲೋಕಾಯುಕ್ತ ನಿವೃತ್ತ ನ್ಯಾಯಮೂರ್ತಿ ಎನ್.ಸಂತೋಷ್ ಹೆಗ್ಡೆ, ವಿದ್ಯಾಧೀಶತೀರ್ಥ ಸ್ವಾಮೀಜಿ, ಸುವಿದ್ಯೇಂದ್ರ ತೀರ್ಥ ಸ್ವಾಮೀಜಿ ಸಾನ್ನಿಧ್ಯ ವಹಿಸಲಿದ್ದಾರೆ ಎಂದು ಪರಿಮಳ ಗೆಳೆಯರ ಬಳಗ ಪ್ರಕಟಣೆ ತಿಳಿಸಿದೆ.

ಲಾಲ್‌ಬಾಗ್ ಗಾಜಿನ ಮನೆಯಲ್ಲಿ ಫಲಪುಷ್ಪ ಪ್ರದರ್ಶನಕ್ಕೆ ಇಂದು ಚಾಲನೆ

ಪ್ಲಾಸ್ಟಿಕ್‌ಮುಕ್ತ ಪ್ರದರ್ಶನದತ್ತ ಜನರ ಚಿತ್ತ

• ಖಲೀಲಅಹ್ಮದ ಶೇಖ

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನಲ್ಲಿ ಆಯೋಜಿಸಿರುವ ಫಲಪುಷ್ಪ ಪ್ರದರ್ಶನದತ್ತ 'ಸಿಲಿಕಾನ್ ಸಿಟಿ' ಜನರ ಚಿತ್ತ. ಡಾ.ರಾಜ್, ಪುನೀತ್ ಪರಿಕಲ್ಪನೆ ಆಧಾರಿತ ಫಲಪುಷ್ಪ ಪ್ರದರ್ಶನ ಕಣ್ತುಂಬಿಕೊಳ್ಳಲು ಅಭಿಮಾನಿಗಳ ಕುತೂಹಲಕ್ಕೆ ಇಂದು ತೆರೆ ಬೀಳಲಿದೆ.

ಎರಡು ವರ್ಷಗಳಿಂದ ಲಾಲ್‌ಬಾಗ್ ಫಲಪುಷ್ಪ ಪ್ರದರ್ಶನ ಸ್ಥಗಿತಗೊಂಡಿತ್ತು. ಈ ಸಲ ಸ್ವಾತಂತ್ರ್ಯೋತ್ಸವದ ಅಂಗವಾಗಿ ಕನ್ನಡ ಚಿತ್ರರಂಗದ ಮೇರು ನಟರಾದ ಡಾ.ರಾಜ್ ಮತ್ತು ಪುನೀತ್ ರಾಜ್‌ಕುಮಾರ್ ಅವರ ಸ್ಮರಣಾರ್ಥ ಪ್ರದರ್ಶನವನ್ನು ಆಯೋಜಿಸಲಾಗಿದೆ. ಪ್ರದರ್ಶನವು ತ್ಯಾಜ್ಯ ಮತ್ತು ಪ್ಲಾಸ್ಟಿಕ್ ಮುಕ್ತವಾಗಿರಲಿದೆ.

'ಬಿಬಿಎಂಪಿ, ಸಾಹಸ್, ಬ್ಯೂಟಿಫುಲ್ ಬೆಂಗಳೂರು ಸಂಸ್ಥೆಗಳ ಸಹಯೋಗದೊಂದಿಗೆ ಈ ಬಾರಿ ಫಲಪುಷ್ಪ ಪ್ರದರ್ಶನವನ್ನು ಸ್ವಚ್ಛ ಮತ್ತು ಸುಂದರವಾಗಿ ಕಾಣಲು ಅಗತ್ಯ ಮುಂಜಾಗ್ರತಾ ಕ್ರಮಗಳನ್ನು ಕೈಗೊಳ್ಳಲಾಗಿದೆ. ಬಿಬಿಎಂಪಿ ವತಿಯಿಂದ ಮಾರ್ಷಲ್‌ಗಳೂ, ಪೊಲೀಸ್ ಸಿಬ್ಬಂದಿಯೂ ನಮ್ಮ ಕಾರ್ಯದಲ್ಲಿ ಕೈಜೋಡಿಸಲಿದ್ದಾರೆ' ಎಂದು ಸಾಹಸ್ ಎನ್‌ಜಿಒ ನಿರ್ದೇಶಕಿ ಸುನೀತಾ ಜಯರಾಮ್ ಮಾಹಿತಿ ನೀಡಿದರು.

ಆಗಸ್ಟ್ 5ರಿಂದ 15ರ ತನಕ ನಡೆಯುವ ಫಲಪುಷ್ಪ ಪ್ರದರ್ಶನಕ್ಕೆ 12–15 ಲಕ್ಷ ಜನ ಭೇಟಿ ನೀಡುವ ನಿರೀಕ್ಷೆ ಇದೆ. ಪ್ರದರ್ಶನದಲ್ಲಿ ಉತ್ಪತ್ತಿಯಾಗುವ ಒಣ ತ್ಯಾಜ್ಯವನ್ನು ಸಂಗ್ರಹಿಸಿ ಸಂಸ್ಕರಿಸಲಾಗುತ್ತದೆ. ಆದರೆ ಹಸಿ ಕಸವನ್ನು ಕಾಂಪೋಸ್ಟ್ ಮಾಡಲಾಗುತ್ತದೆ. ಸಾಹಸ್ ಹಾಗೂ ಬ್ಯೂಟಿಫುಲ್ ಬೆಂಗಳೂರು ಸಂಸ್ಥೆಗಳು ಫಲಪುಷ್ಪ ಪ್ರದರ್ಶನದ ಸಮಯದಲ್ಲಿ ಸಾರ್ವಜನಿಕರಿಗೆ ಕಸ ವಿಲೇವಾರಿ ಹಾಗೂ ಏಕ ಬಳಕೆಯ ಪ್ಲಾಸ್ಟಿಕ್ ನಿಷೇಧದ ಕುರಿತು ಜಾಗೃತಿ ಮೂಡಿಸಲು ಸ್ವಯಂಸೇವಕರನ್ನು ನಿಯೋಜಿಸಲಾಗಿದೆ ಎಂದು ಹೇಳಿದರು.

ಸ್ವಯಂ ಸೇವಕರ ಪಾತ್ರ: ಫಲಪುಷ್ಪ ಪ್ರದರ್ಶನದಲ್ಲಿ ಭಾಗಿಯಾಗುವ ಹೆಚ್ಚುವರಿ ಸಿಬ್ಬಂದಿಗೆ ಜಾಗೃತಿ ಸಭೆ, ಮಳಿಗೆಗಳಲ್ಲಿ ಉತ್ಪಾದಿಸಿದ ತ್ಯಾಜ್ಯ ವಿಲೇವಾರಿಗೆ ಪ್ರತ್ಯೇಕ ತೊಟ್ಟಿಗಳನ್ನು ಮೀಸಲಿಡಲಾಗಿದೆ. ಪೊಲೀಸ್ ಮತ್ತು ಲಾಲ್‌ಬಾಗ್ ಅಧಿಕಾರಿಗಳಿಗೆ ಮೀಸಲಿರುವ ಆಹಾರ ಕೇಂದ್ರಗಳಲ್ಲಿ ಸ್ಟಿಲ್ ವಸ್ತುಗಳ ಬಳಕೆಗೆ ಆದ್ಯತೆ.

ತ್ಯಾಜ್ಯದ ಮೂಲದಲ್ಲೇ ಪ್ರತ್ಯೇಕತೆ ಬಗ್ಗೆ ಅರಿವು ಮೂಡಿಸಲಾಗುವುದು. ಎರಡು ಬಣ್ಣದ ತೊಟ್ಟಿಗಳ ಉದ್ದೇಶವನ್ನು ಸಂದರ್ಶಕರಿಗೆ ವಿವರಿಸಿ ಅವುಗಳ ಬಳಕೆಗೆ ಮಾರ್ಗದರ್ಶನ ನೀಡಲಾಗುವುದು. ಅಗತ್ಯವಿರುವ ಕಡೆ ಸಾಹಸ್ ಸಂಸ್ಥೆಯಿಂದ ಹೆಚ್ಚುವರಿ ತೊಟ್ಟಿಗಳನ್ನೂ ಇಡಲಾಗುವುದು. ಲಾಲ್‌ಬಾಗ್ ಆವರಣದಲ್ಲಿ ಪ್ಲಾಸ್ಟಿಕ್ ನೀರಿನ ಬಾಟಲಿಗಳನ್ನು ನಿಷೇಧಿಸಲಾಗಿದೆ. ಅಲ್ಲಲ್ಲಿ ಖನಿಜಯುಕ್ತ ನೀರಿನ ವ್ಯವಸ್ಥೆ ಮಾಡಲಾಗಿದೆ.



ಸ್ವಾತಂತ್ರ್ಯೋತ್ಸವದ ಅಂಗವಾಗಿ ಲಾಲ್‌ಬಾಗ್‌ನಲ್ಲಿ ನಡೆಯುವ ಫಲಪುಷ್ಪ ಪ್ರದರ್ಶನದಲ್ಲಿ, ಡಾ.ರಾಜ್ ಮತ್ತು ಪುನೀತ್ ರಾಜ್‌ಕುಮಾರ್ ಅವರ ಕುಟುಂಬ ಮೈಸೂರಿನಲ್ಲಿ ಸ್ಥಾಪಿಸಿರುವ ಶಕ್ತಿಧಾಮದ ಪ್ರತಿಕೃತಿ ಪುಷ್ಪದಲ್ಲಿ ಅರಳಿರುವುದು ಪ್ರಜಾವಾಣಿ ಚಿತ್ರ / ಎಸ್.ಕೆ.ದಿನೇಶ್

ಪ್ರವೇಶ ದರ

- ವಯಸ್ಕರಿಗೆ ₹70 ರಜೆ ದಿನಗಳಲ್ಲಿ ₹75
- ಮಕ್ಕಳಿಗೆ ₹25

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ

ಪ್ರಜಾವಾಣಿ ನೋಡಿಯ

ಇಂದು ಚಾಲನೆ

ತೋಟಗಾರಿಕೆ ಇಲಾಖೆ ಮತ್ತು ಮೈಸೂರು ಉದ್ಯಾನ ಕಲಾಸಂಘ ವತಿಯಿಂದ ಆಯೋಜಿಸಿರುವ ಫಲಪುಷ್ಪ ಪ್ರದರ್ಶನಕ್ಕೆ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಚಾಲನೆ ನೀಡಲಿದ್ದಾರೆ. ಡಾ.ರಾಜ್ ಕುಟುಂಬದವರಾದ ಶಿವರಾಜ್ ಕುಮಾರ್, ರಾಘವೇಂದ್ರ ರಾಜ್‌ಕುಮಾರ್, ಅಶ್ವಿನಿ ಪುನೀತ್ ರಾಜ್‌ಕುಮಾರ್ ಭಾಗವಹಿಸಲಿದ್ದಾರೆ.

'ಆಗಸ್ಟ್ 5ರಂದು ಬೆಳಿಗ್ಗೆ 8ರಂದು ಕಂಠೀರವ ಸ್ಟುಡಿಯೋದಲ್ಲಿ ಡಾ.ರಾಜ್ ಮತ್ತು ಪುನೀತ್ ರಾಜ್‌ಕುಮಾರ್ ಸ್ಮಾರಕ ಸ್ಥಳದಿಂದ ಲಾಲ್‌ಬಾಗ್ ಗಾಜಿನ ಮನೆಯವರಿಗೆ ಜ್ಯೋತಿಯಾತ್ರೆ ಮತ್ತು ನಮ್ಮ ನಿಮ್ಮಿ ಸೈಕಲ್ ಫೌಂಡೇಷನ್ ಮುಖ್ಯಸ್ಥ ಎಚ್. ಆರ್. ಮುರಳಿ ನೇತೃತ್ವದಲ್ಲಿ ಪುನೀತ್ ಚಿತ್ರ ಇರುವ ಟಿ–ಶರ್ಟ್ ತೊಟ್ಟ 100ಕ್ಕೂ ಹೆಚ್ಚು ಸೈಕಲ್ ಯಾತ್ರಿಗಳು ಜಾಥಾದಲ್ಲಿ ಭಾಗವಹಿಸಲಿದ್ದಾರೆ. ಪ್ರದರ್ಶನ ಮುಕ್ತಾಯವಾಗುವವರೆಗೂ ಜ್ಯೋತಿ ಬೆಳಗಲಿದೆ.

ವಾಹನ ನಿಲುಗಡೆಗೆ ವ್ಯವಸ್ಥೆ

ಬೆಂಗಳೂರು: ಫಲಪುಷ್ಪ ಪ್ರದರ್ಶನ ವೀಕ್ಷಣೆಗೆ ಹೆಚ್ಚಿನ ಸಂಖ್ಯೆಯಲ್ಲಿ ಜನರು ಬರುವ ನಿರೀಕ್ಷೆ ಇರುವುದರಿಂದ, ಸಂಚಾರ ದಟ್ಟಣೆ ಉಂಟಾಗದಂತೆ ಪೊಲೀಸರು ಕ್ರಮ ಕೈಗೊಂಡಿದ್ದಾರೆ. ಲಾಲ್‌ಬಾಗ್ ಉದ್ಯಾನ ಎದುರಿನ ಕೆಲ ರಸ್ತೆಗಳಲ್ಲಿ ವಾಹನಗಳ ನಿಲುಗಡೆ ನಿಷೇಧಿಸಲಾಗಿದೆ. ಅದರಂತೆ, ಸಾರ್ವಜನಿಕರ ವಾಹನ ನಿಲುಗಡೆಗೆ ಪ್ರತ್ಯೇಕ ವ್ಯವಸ್ಥೆಯನ್ನೂ ಮಾಡಲಾಗಿದೆ.

'ಡಾ. ಮರಿಗೌಡ ರಸ್ತೆ, ಲಾಲ್‌ಬಾಗ್ ರಸ್ತೆ, ಕೆ.ಎಚ್. ರಸ್ತೆಯಲ್ಲಿ ಹೆಚ್ಚಿನ ವಾಹನ ದಟ್ಟಣೆ ಉಂಟಾಗುವ ಸಾಧ್ಯತೆ ಇದೆ. ಸಾರ್ವಜನಿಕರು ಸಾಧ್ಯವಾದಷ್ಟು ಬಿಎಂಟಿಸಿ ಬಸ್, ಮೆಟ್ರೊ ಹಾಗೂ ಕ್ಯಾಬ್ ಬಳಸಿ' ಎಂದು ಸಂಚಾರ ವಿಭಾಗದ ಜಂಟಿ ಕಮಿಷನರ್ ಬಿ.ಆರ್. ರವಿಕಾಂತೇಗೌಡ ತಿಳಿಸಿದ್ದಾರೆ.

ವಾಹನ ನಿಲುಗಡೆ ನಿಷೇಧಿಸಿರುವ ರಸ್ತೆಗಳು:

- ಡಾ. ಮರಿಗೌಡ ರಸ್ತೆ, ಲಾಲ್‌ಬಾಗ್ ಮುಖ್ಯದ್ವಾರದಿಂದ ನಿಮ್ಹಾನ್ಸ್‌ವರೆಗೆ ಎರಡೂ ಬದಿ; ಕೆ.ಎಚ್. ರಸ್ತೆಯಲ್ಲಿ ಕೆ.ಎಚ್. ವೃತ್ತದಿಂದ ಶಾಂತಿನಗರ ಜಂಕ್ಷನ್‌ವರೆಗಿನ ಎರಡೂ ಬದಿ
- ಲಾಲ್‌ಬಾಗ್ ರಸ್ತೆಯ ಸುಬ್ಬಯ್ಯ ವೃತ್ತದಿಂದ ಲಾಲ್‌ಬಾಗ್ ಮುಖ್ಯ ದ್ವಾರದವರೆಗೆ; ಸಿದ್ಧಯ್ಯ ರಸ್ತೆಯ ಊರ್ವಶಿ ಜಂಕ್ಷನ್‌ನಿಂದ ವಿಲ್ಸನ್ ಗಾರ್ಡನ್‌ನ 12ನೇ ಅಡ್ಡರಸ್ತೆಯವರೆಗೆ; ಬಿ.ಟಿ.ಎಸ್ ರಸ್ತೆಯ ಎರಡೂ ಬದಿ

ವಾಹನಗಳ ನಿಲುಗಡೆಗೆ ಅವಕಾಶವಿರುವ ಸ್ಥಳಗಳು:

- ಡಾ. ಮರಿಗೌಡ ರಸ್ತೆಯ ಅಲ್ ಅಮೀನ್ ಕಾಲೇಜು ಆವರಣದಲ್ಲಿ ದ್ವಿಚಕ್ರ ವಾಹನಗಳ ನಿಲುಗಡೆ; ಶಾಂತಿನಗರದ ಬಿಎಂಟಿಸಿ ಬಸ್ ಡಿಪೊ ಮೇಲ್ಭಾಗದ ಪಾರ್ಕಿಂಗ್ ಸ್ಥಳದಲ್ಲಿ ನಾಲ್ಕು ಚಕ್ರ ವಾಹನಗಳ ನಿಲುಗಡೆ
- ಡಾ. ಮರಿಗೌಡ ರಸ್ತೆಯ ಹಾಪ್‌ಕಾಮ್ಸ್ ಸ್ಥಳದಲ್ಲಿ ದ್ವಿಚಕ್ರ ವಾಹನ ಹಾಗೂ ನಾಲ್ಕು ಚಕ್ರ ವಾಹನಗಳ ನಿಲುಗಡೆಗೆ ಅವಕಾಶ
- ಜೆ.ಸಿ.ರಸ್ತೆಯ ಕಾರ್ಪೊರೇಷನ್ ಪಾರ್ಕಿಂಗ್ ಸ್ಥಳದಲ್ಲಿ ದ್ವಿಚಕ್ರ ವಾಹನ ಹಾಗೂ ನಾಲ್ಕು ಚಕ್ರದ ವಾಹನಗಳ ನಿಲುಗಡೆಗೆ ಅವಕಾಶ

₹22ಕ್ಕೆ ರಾಷ್ಟ್ರಧ್ವಜ ಮಾರಾಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಭಾರತ ಸ್ವಾತಂತ್ರ್ಯದ ಅಮೃತ ಮಹೋತ್ಸವದ ಅಂಗವಾಗಿ ಆ.13ರಿಂದ 15ರವರೆಗೆ ಪ್ರತಿ ಮನೆಯಲ್ಲೂ ರಾಷ್ಟ್ರಧ್ವಜ (ಹರ್ ಘರ್ ತಿರಂಗ) ಹಾರಿಸಲು, ಧ್ವಜಕ್ಕೆ ₹ 22ರಂತೆ ಸಾರ್ವಜನಿಕರಿಗೆ ಮಾರಾಟ ಮಾಡಲು ರಾಜ್ಯ ಸರ್ಕಾರ ನಿರ್ಧರಿಸಿದೆ.

ಸ್ಥಳೀಯವಾಗಿ ಧ್ವಜಗಳ ಲಭ್ಯತೆ ಕಡಿಮೆ ಇರುವ ಕಾರಣ 50 ಲಕ್ಷ ಧ್ವಜಗಳನ್ನು ಪೂರೈಸುವಂತೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವ ಸಲ್ಲಿಸಲಾಗಿತ್ತು. ಮನವಿ ಪುರಸ್ಕರಿಸಿದ ಕೇಂದ್ರ ಈಗಾಗಲೇ 25 ಲಕ್ಷ ಧ್ವಜಗಳನ್ನು ಪೂರೈಸಿದೆ. ಧ್ವಜಗಳ ಮಾರಾಟ, ಹಣ ಸಂಗ್ರಹ, ನ್ಯೂನತೆ ಪರಿಶೀಲನೆ, ಪ್ರತ್ಯೇಕಿಸುವುದರ ಜತೆಗೆ, ಕಾರ್ಯಕ್ರಮವನ್ನು ಯಶಸ್ವಿಗೊಳಿಸುವ ಹೊಣೆಗಾರಿಕೆಯನ್ನು ಆಯಾ ಜಿಲ್ಲಾಧಿಕಾರಿಗಳಿಗೆ ವಹಿಸಲಾಗಿದೆ.

ಮನೆಗಳ ಜತೆಗೆ, ಸರ್ಕಾರಿ ಕಚೇರಿಗಳು, ಖಾಸಗಿ ಸಂಸ್ಥೆಗಳ ಎಲ್ಲ ಕಟ್ಟಡಗಳ ಮೇಲೂ ಧ್ವಜ ಹಾರಾಟಕ್ಕೆ ಕ್ರಮ ಕೈಗೊಳ್ಳಬೇಕು. ಮಾರಾಟ ಮಾಡಿದ ಹಣವನ್ನು 'ಹರ್ ಘರ್ ತಿರಂಗಾ' ಖಾತೆಗೆ ಆ.15ರ ನಂತರ ಜಮೆ ಮಾಡಬೇಕು. ಅಧಿಕಾರಿಗಳು ಜವಾಬ್ದಾರಿ ವಹಿಸಿಕೊಂಡು ಕಾರ್ಯ ನಿರ್ವಹಿಸಬೇಕು ಎಂದು ಸರ್ಕಾರ ಆದೇಶದಲ್ಲಿ ಸೂಚಿಸಿದೆ.

2 ಪ್ಯಾಕೇಜ್ ಕಾಮಗಾರಿ 2023ಕ್ಕೆ ಪೂರ್ಣ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಂಗಳೂರು ನಗರದ ಸಂಚಾರ ದಟ್ಟಣೆಯನ್ನು ಕಡಿಮೆ ಮಾಡುವ ಉದ್ದೇಶದಿಂದ ಕೈಗೆತ್ತಿಕೊಂಡಿರುವ ಉಪನಗರ ವರ್ತುಲ ರಸ್ತೆ ಯೋಜನೆಯ ಎರಡು ಪ್ಯಾಕೇಜ್‌ಗಳ (80 ಕಿ.ಮೀ) ಕಾಮಗಾರಿ 2023ಕ್ಕೆ ಪೂರ್ಣಗೊಳ್ಳಲಿದೆ ಎಂದು ಕೇಂದ್ರ ಹೆದ್ದಾರಿ ಹಾಗೂ ಭೂಸಾರಿಗೆ ಸಚಿವ ನಿತಿನ್ ಗಡ್ಕರಿ ತಿಳಿಸಿದ್ದಾರೆ.

ಲೋಕಸಭೆಯಲ್ಲಿ ಚಿಕ್ಕಬಳ್ಳಾಪುರದ ಬಿಜೆಪಿ ಸಂಸದ ಬಿ.ಎನ್.ಬಚ್ಚೇಗೌಡ ಅವರು ಕೇಳಿರುವ ಪ್ರಶ್ನೆಗೆ ಗುರುವಾರ ಲಿಖಿತ ಉತ್ತರ ನೀಡಿರುವ ಸಚಿವರು, ರಾಷ್ಟ್ರೀಯ ಹೆದ್ದಾರಿ 648, ನ್ಯಾಷನಲ್ ಎಕ್ಸ್‌ಪ್ರೆಸ್ ವೇ 7 ಹಾಗೂ ರಾಷ್ಟ್ರೀಯ ಹೆದ್ದಾರಿ 948 ಎ ಯಲ್ಲಿ 288 ಕಿ.ಮೀ. ಉದ್ದದ ಉಪನಗರ ವರ್ತುಲ ರಸ್ತೆ ಯೋಜನೆ ಅನುಷ್ಠಾನಗೊಳಿಸಲಾಗುತ್ತಿದೆ ಎಂದರು.

ರಾಷ್ಟ್ರೀಯ ಹೆದ್ದಾರಿ 648ರಲ್ಲಿ ಮೂರು ಪ್ಯಾಕೇಜ್‌ಗಳ (101 ಕಿ.ಮೀ.) ಕಾಮಗಾರಿ ಕೈಗೆತ್ತಿಕೊಂಡಿದ್ದು, 80 ಕಿ.ಮೀ. ಕಾಮಗಾರಿ 2023ಕ್ಕೆ ಪೂರ್ಣಗೊಳ್ಳಲಿದೆ. 21 ಕಿ.ಮೀ.ಯ ಕಾಮಗಾರಿ 2024ಕ್ಕೆ ಮುಗಿಯಲಿದೆ. ಬೆಂಗಳೂರು–ಚೆನ್ನೈ ಎಕ್ಸ್‌ಪ್ರೆಸ್ ವೇ ಯಲ್ಲಿ ಏಳು ಕಿ.ಮೀ.ಯ ಕಾಮಗಾರಿ ಪ್ರಗತಿಯಲ್ಲಿದ್ದು, 2023ಕ್ಕೆ ಮುಗಿಯಲಿದೆ ಎಂದು ಅವರು ಹೇಳಿದ್ದಾರೆ.

ರಾಷ್ಟ್ರೀಯ ಹೆದ್ದಾರಿ 948 ಎಯಲ್ಲಿ ಆರು ಪ್ಯಾಕೇಜ್‌ಗಳ (180 ಕಿ.ಮೀ) ಕಾಮಗಾರಿಗಾಗಿ ಸಮಗ್ರ ಯೋಜನಾ ವರದಿ ಸಿದ್ಧಪಡಿಸಲಾಗುತ್ತಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ಸಂಕ್ಷಿಪ್ತ ಸುದ್ದಿ

ಗುಜರಿ ನೀತಿ ಯಥಾವತ್ ಜಾರಿಗೆ ಅಧಿಸೂಚನೆ

ಬೆಂಗಳೂರು: ಕೇಂದ್ರ ಸರ್ಕಾರ 2021ರ ಸೆಪ್ಟೆಂಬರ್‌ನಲ್ಲಿ ಘೋಷಿಸಿದ್ದ ವಾಹನಗಳ ಗುಜರಿ ನೀತಿಯನ್ನು ಯಥಾವತ್ತಾಗಿ ಜಾರಿಗೆ ತರಲು ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ.

ನೀತಿ ಜಾರಿ ಕುರಿತಂತೆ ಶೀಘ್ರವೇ ಸರ್ಕಾರ ರಾಜ್ಯಪತ್ರ ಹೊರಡಿಸಲಿದ್ದು, ನಂತರದಲ್ಲಿ ಜಾರಿಗೆ ಬರಲಿದೆ. ನೀತಿಯ ಜಾರಿಗೆ ಸಂಬಂಧಿಸಿದ ಮನವಿಗಳ ವಿಚಾರಣೆಗಳಿಗೆ ಸಾರಿಗೆ ಇಲಾಖೆ ಪ್ರಧಾನ ಕಾರ್ಯದರ್ಶಿ ನೇತೃತ್ವದಲ್ಲಿ ಮೇಲ್ಮನವಿ ಪ್ರಾಧಿಕಾರ ರಚಿಸುವ ಬಗ್ಗೆಯೂ ಅಧಿಸೂಚನೆ ತಿಳಿಸಿದೆ.

'ಮಲ್ಲಮ್ಮನನ್ನು ಮರೆತ ಸರ್ಕಾರ'

ಬೆಂಗಳೂರು: 'ಜಗತ್ತಿನಲ್ಲಿ ಪ್ರಥಮ ಮಹಿಳಾ ಸೈನ್ಯ ಕಟ್ಟಿದ ಬೆಳವಡಿ ಮಲ್ಲಮ್ಮನನ್ನು ರಾಜ್ಯ ಸರ್ಕಾರ ಮರೆತಿದೆ. ಈಗಲಾದರೂ ಅವರ ಸಾಹಸವನ್ನು ರಾಷ್ಟ್ರ ಮಟ್ಟದಲ್ಲಿ ಪರಿಚಯಿಸಿ, ದೆಹಲಿಯಲ್ಲಿ ಪ್ರತಿಮೆ ಸ್ಥಾಪಿಸುವ ಕೆಲಸ ಆಗಬೇಕು' ಎಂದು ಕನ್ನಡ ಗೆಳೆಯರ ಬಳಗ ಆಗ್ರಹಿಸಿದೆ.

'ಸ್ವಾತಂತ್ರ್ಯದ ಅಮೃತ ಮಹೋತ್ಸವದ ಈ ಸಂದರ್ಭದಲ್ಲಿ ಮಲ್ಲಮ್ಮ ಅವರನ್ನು ಸ್ಮರಿಸಿಕೊಳ್ಳುವುದು ನಾಡಿಗೆ ಹೆಮ್ಮೆಯ ಸಂಗತಿಯಾಗಬೇಕಾಗಿತ್ತು. ರಾಣಿ ಅಬ್ಬಕ್ಕ, ಕೆಳದಿಯ ಚೆನ್ನಮ್ಮ, ಕಿತ್ತೂರು ರಾಣಿ ಚನ್ನಮ್ಮ, ಝಾನ್ಸಿ ರಾಣಿ ಲಕ್ಷ್ಮಿಬಾಯಿ ಇವರೆಲ್ಲ ವೀರ ವನಿತೆಯರು. ಆದರೆ, ಮಲ್ಲಮ್ಮನ ಹಾಗೆ ಬೇರೆ ವೀರ ವನಿತೆಯರು ಸೈನ್ಯವನ್ನು ಕಟ್ಟಿ ಹೋರಾಡಲಿಲ್ಲ' ಎಂದು ಬಳಗದ ಸಂಚಾಲಕ ರಾ.ನಂ. ಚಂದ್ರಶೇಖರ ತಿಳಿಸಿದ್ದಾರೆ.

'ಕನ್ನಡಿಗರ ಹೆಮ್ಮೆಯ ಪ್ರತೀಕವಾಗಿರುವ ಮಲ್ಲಮ್ಮ ಅವರಿಗೆ ಸರ್ಕಾರ ಸೂಕ್ತ ಗೌರವ ನೀಡಬೇಕು' ಎಂದು ಒತ್ತಾಯಿಸಿದ್ದಾರೆ.

ದ್ವೇಷ ಹರಡುವ 130 ಪ್ರಕರಣ: ರಿಜಿಜು

ನವದೆಹಲಿ (ಪಿಟಿಐ): '2019ರ ಲೋಕಸಭೆ ಚುನಾವಣೆಯಿಂದ ಈ ವರ್ಷದ ಆರಂಭದಲ್ಲಿ ನಡೆದ ಐದು ರಾಜ್ಯಗಳ ಚುನಾವಣೆವರೆಗೆ 'ದ್ವೇಷ ಹರಡುವ ಸುದ್ದಿ'ಗೆ ಸಂಬಂಧಿಸಿದ 130 ಪ್ರಕರಣಗಳು ವರದಿಯಾಗಿವೆ' ಎಂದು ಕಾನೂನು ಸಚಿವ ಕಿರಣ್ ರಿಜಿಜು ರಾಜ್ಯಸಭೆಗೆ ಗುರುವಾರ ಲಿಖಿತ ಉತ್ತರ ನೀಡಿದ್ದಾರೆ.

'ತಂತ್ರಜ್ಞಾನದಿಂದ ಗುಣಮಟ್ಟದ ಆರೋಗ್ಯ ಸೇವೆ'

ಬೆಂಗಳೂರು: 'ವೈದ್ಯಕೀಯ ಕ್ಷೇತ್ರದಲ್ಲಿ ತಂತ್ರಜ್ಞಾನ ಅಳವಡಿಕೆಯ ಕಾರ್ಯ ವೇಗವಾಗಿ ನಡೆಯುತ್ತಿದೆ. ಜನಸಾಮಾನ್ಯರಿಗೆ ಕೈಗೆಟಕುವ ಬೆಲೆಯಲ್ಲಿ ಗುಣಮಟ್ಟದ ಆರೋಗ್ಯ ಸೇವೆ ಒದಗಿಸಲು ತಂತ್ರಜ್ಞಾನ ಸಹಕಾರಿ' ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ ತಿಳಿಸಿದರು.

ಸ್ಪರ್ಶ್ ಆಸ್ಪತ್ರೆಯು ನಗರದಲ್ಲಿ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ 'ಮಾಕೊ' ರೋಬೊ, 3ಡಿ ಮುದ್ರಣ ತಂತ್ರಜ್ಞಾನ ಸೇರಿ ವಿವಿಧ ಅತ್ಯಾಧುನಿಕ ಚಿಕಿತ್ಸಾ ಕ್ರಮಗಳಿಗೆ ಚಾಲನೆ ನೀಡಿ, ಮಾತನಾಡಿದರು.

ಆಸ್ಪತ್ರೆಯ ಅಧ್ಯಕ್ಷ ಡಾ. ಶರಣ ಶಿವರಾಜ್ ಪಾಟೀಲ, 'ಸಾಂಪ್ರದಾಯಿಕ ಶಸ್ತ್ರಚಿಕಿತ್ಸೆಗಳಿಗೆ ಹೋಲಿಸಿದರೆ ರೋಬೊಟಿಕ್ ಶಸ್ತ್ರಚಿಕಿತ್ಸೆ ಹೆಚ್ಚು ನಿಖರ. ರೋಗಿಯೂ ಬೇಗ ಚೇತರಿಸಿಕೊಳ್ಳಲು ಸಹಕಾರಿಯಾಗಲಿದೆ. ಕಳೆದೊಂದು ದಶಕದಲ್ಲಿ ವೈದ್ಯಕೀಯ ಕ್ಷೇತ್ರ ಸಾಕಷ್ಟು ಪ್ರಗತಿ ಹೊಂದಿದೆ. ತಂತ್ರಜ್ಞಾನಗಳನ್ನು ಸಮರ್ಪಕವಾಗಿ ಬಳಸಿಕೊಂಡಲ್ಲಿ ಚಿಕಿತ್ಸಾ ವೆಚ್ಚವೂ ತಗ್ಗಲಿದೆ' ಎಂದು ಹೇಳಿದರು.



ಸರ್ಜಾಪುರ ಮುಖ್ಯರಸ್ತೆಯ ವಿಪ್ರೊ ಗೇಟ್ ಬಳಿಯ ರೈನ್ ಬೋ ಅಪಾರ್ಟ್‌ಮೆಂಟ್ ಸಮುಚ್ಚಯದ ಆವರಣಕ್ಕೆ ನೀರು ನುಗ್ಗಿದ ಕಾರಣ ಟ್ರ್ಯಾಕ್ಟರ್ ಬಳಸಿ ಶಾಲೆಗೆ ತೆರಳುವ ಮಕ್ಕಳನ್ನು ಮುಖ್ಯರಸ್ತೆಗೆ ಕರೆತರಲಾಯಿತು



ಕಸ್ತೂರ್‌ಬಾ ರಸ್ತೆಯಲ್ಲಿ ಒಳಚರಂಡಿ ಬಾಯ್ದೆರೆದಿರುವುದು



ಹೊರವರ್ತುಲ ರಸ್ತೆಯ ನಾಗಶೆಟ್ಟಿಹಳ್ಳಿ ರೈಲ್ವೆ ಕೆಳಸೇತುವೆಯಲ್ಲಿ ಗುರುವಾರ ಹರಿಯುತ್ತಿದ್ದ ನೀರಿನಲ್ಲೇ ವಾಹನಗಳು ಸಂಚರಿಸಿದವು – ಪ್ರಜಾವಾಣಿ ಚಿತ್ರಗಳು

ಸರ್ಜಾಪುರ ಮುಖ್ಯರಸ್ತೆಯ ರೈನ್ ಬೋ ಅಪಾರ್ಟ್‌ಮೆಂಟ್ ಸಮುಚ್ಚಯದ ಆವರಣದಲ್ಲಿ ಜಲರಾಶಿ – ಪ್ರತಿಭಟನೆ

ಮಳೆ: ಅಪಾರ್ಟ್‌ಮೆಂಟ್‌ಗೆ ನುಗ್ಗಿದ ನೀರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ಕೆಲ ದಿನಗಳಿಂದ ಉತ್ತಮವಾಗಿ ಮಳೆ ಸುರಿಯುತ್ತಿದೆ. ಗುರುವಾರವೂ ಬೆಳಿಗ್ಗೆಯಿಂದ ರಾತ್ರಿಯವರೆಗೂ ಮಳೆ ಅಬ್ಬರವಿತ್ತು.

ಹಲವು ದಿನಗಳಿಂದ ನಗರದಲ್ಲಿ ಮೋಡ ಕವಿದ ವಾತಾವರಣವಿದ್ದು, ನಿರಂತರವಾಗಿ ತುಂತುರು ಮಳೆ ಸುರಿಯುತ್ತಿದೆ.

ಗುರುವಾರ ನಸುಕಿನಲ್ಲಿ ಬಿಡುವು ನೀಡಿದ್ದ ಮಳೆ, ಬೆಳಿಗ್ಗೆ 10 ಗಂಟೆ ಬಳಿಕ ತನ್ನ ಅಬ್ಬರ ಮುಂದುವರಿಸಿತು. ನಿರಂತರ ಮಳೆಯಿಂದಾಗಿ, ನಗರದ ಬಹುತೇಕ ಪ್ರದೇಶಗಳ ಕಾಲುವೆ ಹಾಗೂ ರಸ್ತೆಗಳಲ್ಲಿ ನೀರು ಹರಿಯಿತು.

ಕೆಂಗೇರಿ, ರಾಜರಾಜೇಶ್ವರಿನಗರ, ರಾಜಾಜಿನಗರ, ವಿಜಯನಗರ, ಬಸವೇಶ್ವರನಗರ, ಗಿರಿನಗರ, ಬಸವನಗುಡಿ, ಬನಶಂಕರಿ, ಕುಮಾರಸ್ವಾಮಿ ಲೇಔಟ್, ಹನುಮಂತನಗರ, ಜಯನಗರ, ಜೆ.ಪಿ.ನಗರ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ತುಂತುರು ಮಳೆಯ ಸಿಂಚನವಾಯಿತು.

ಯಶವಂತಪುರ, ಮಲ್ಲೇಶ್ವರ, ಹೆಬ್ಬಾಳ, ಆರ್.ಟಿ.ನಗರ, ಸಂಜಯನಗರ, ವಸಂತನಗರ, ಶಿವಾಜಿ ನಗರ, ಕಮರ್ಷಿಯಲ್ ಸ್ಟ್ರೀಟ್, ಎಂ.ಜಿ. ರಸ್ತೆ, ಅಶೋಕನಗರ, ಎಚ್‌ಎಎಲ್, ವಿವೇಕನಗರ, ಕೋರಮಂಗಲ, ಮಡಿವಾಳ, ಎಚ್‌ಎಸ್‌ಆರ್ ಲೇಔಟ್, ಗಾಂಧಿನಗರ, ಮೆಜೆಸ್ಟಿಕ್, ಶೇಷಾದ್ರಿಪುರ, ಮಲ್ಲೇಶ್ವರ ಹಾಗೂ ಸುತ್ತಮುತ್ತ ಮಳೆ ಸುರಿಯಿತು.

ಸಂಜೆಯವರೆಗೂ ಬಹುತೇಕ ಕಡೆ ಸೂರ್ಯನ ದರ್ಶನವೇ ಆಗಲಿಲ್ಲ. ಮಳೆ ನಿಲ್ಲುವ ಲಕ್ಷಣವೂ ಕಾಣಿಸಲಿಲ್ಲ. ರೇನ್‌ಕೋಟ್, ಜರ್ಕಿನ್, ಕೊಡೆ ಆಶ್ರಯದಲ್ಲೇ ಜನರು ಓಡಾಡಿದರು. ಕೆಲವರು ಸುರಿವ ಮಳೆಯಲ್ಲೇ ಹೆಜ್ಜೆ ಹಾಕಿದರು.

ಕುಸಿದ ಮುಚ್ಚಳ, ಭಯದಲ್ಲೇ ಸಂಚಾರ: ಮಳೆ ಸುರಿಯುತ್ತಿದ್ದ ಸಂದರ್ಭದಲ್ಲೇ, ಕಸ್ತೂರ್‌ಬಾ ರಸ್ತೆಯ ಮಧ್ಯದಲ್ಲಿರುವ ಒಳಚರಂಡಿ ಮುಚ್ಚಳ ಕುಸಿದಿತ್ತು. ಅಪಾಯಕ್ಕೆ ಆಹ್ವಾನ ನೀಡುವ ರೀತಿಯಲ್ಲಿದ್ದ ಒಳಚರಂಡಿ ತೆರೆದುಕೊಂಡಿತ್ತು. ಇದರಿಂದಾಗಿ ವಾಹನ ಸವಾರರು ಭಯದಲ್ಲೇ ಸಂಚರಿಸಿದರು.

ಕೆರೆಯಂತಾದ ರಸ್ತೆಗಳು: ನಿರಂತರವಾಗಿ ಮಳೆ ಸುರಿದಿದ್ದರಿಂದಾಗಿ ಬಹುತೇಕ ರಸ್ತೆ ಹಾಗೂ ಆವರಣಗಳಲ್ಲಿ ನೀರು ನಿಂತುಕೊಂಡಿತ್ತು. ಅದೇ ನೀರಿನಲ್ಲೇ ವಾಹನಗಳು ಸಂಚರಿಸಿದವು. ಕೆಲ ವಾಹನಗಳು ಕೆಟ್ಟು ನಿಂತಿದ್ದವು.

ಮೈಸೂರು ರಸ್ತೆ, ತುಮಕೂರು ರಸ್ತೆ, ಓಕಳಿಪುರ, ಮೆಜೆಸ್ಟಿಕ್ ಹಾಗೂ ಇತರೆ ರಸ್ತೆಗಳಲ್ಲಿ ವಾಹನಗಳ ದಟ್ಟಣೆಯೂ ವಿಪರೀತವಾಗಿತ್ತು.

ಶಾಶ್ವತ ಪರಿಹಾರಕ್ಕೆ ನಿವಾಸಿಗಳಿಂದ ಒತ್ತಾಯ

ಸರ್ಜಾಪುರ ಮುಖ್ಯರಸ್ತೆಯ ವಿಪ್ರೊ ಗೇಟ್ ಬಳಿಯ ರೈನ್ ಬೋ ಅಪಾರ್ಟ್‌ಮೆಂಟ್ ಸಮುಚ್ಚಯದ ಆವರಣಕ್ಕೆ ನೀರು ನುಗ್ಗಿತ್ತು. ಅಗ್ನಿಶಾಮಕ ದಳ ಹಾಗೂ ಪೊಲೀಸ್ ಸಿಬ್ಬಂದಿ, ಕಾರ್ಯಾಚರಣೆ ನಡೆಸಿ ನೀರು ತೆರವುಗೊಳಿಸಿದರು.

‘ಪ್ರತಿ ಬಾರಿ ಮಳೆ ಬಂದಾಗಲೆಲ್ಲ ಅಪಾರ್ಟ್‌ಮೆಂಟ್ ಸಮುಚ್ಚಯದೊಳಗೆ ನೀರು ನುಗ್ಗುತ್ತಿದೆ. ಇದಕ್ಕೆ ಶಾಶ್ವತ ಪರಿಹಾರ ಬೇಕು’ ಎಂದು ಆಗ್ರಹಿಸಿ ನಿವಾಸಿಗಳು ಪ್ರತಿಭಟನೆ ನಡೆಸಿದರು.

ಅಪಾರ್ಟ್‌ಮೆಂಟ್ ಸಮುಚ್ಚಯದ ಎದುರಿನ ರಸ್ತೆಯಲ್ಲಿ ವಾಹನಗಳ ಸಂಚಾರ ತಡೆದು ಪ್ರತಿಭಟಿಸಿದ ನಿವಾಸಿಗಳು, ಬೇಡಿಕೆ ಈಡೇರಿಕೆಗಾಗಿ ಘೋಷಣೆ ಕೂಗಿದರು.

ರಾಜಕಾಲುವೆ ಒತ್ತುವರಿ: ‘ರೈನ್ ಬೋ ಅಪಾರ್ಟ್‌ಮೆಂಟ್ ಮೇಲ್ಭಾಗದಲ್ಲಿ ಮಾಲನಾಯಕನಹಳ್ಳಿ ಕೆರೆ ಹಾಗೂ ಜುನ್ನಾಲಸಂದ್ರ ಕೆರೆಗಳಿವೆ. ಅವು ತುಂಬಿವೆ. ಅದರಿಂದ ಹೊರ ಹೋಗುವ ನೀರಿನ ಕಾಲುವೆಗಳು ಮುಚ್ಚಿಹೋಗಿವೆ. ಕೆಲವು ಕಡೆ ಒತ್ತುವರಿಯೂ ಆಗಿದೆ. ಅದನ್ನು ತೆರವುಗೊಳಿಸಿ ಕಾಲುವೆಯಲ್ಲಿ ನೀರು ಹರಿಯುವಂತೆ ಮಾಡಿದರೆ ಶಾಶ್ವತ ಪರಿಹಾರ ಸಿಗುತ್ತದೆ’ ಎಂದು ಬಿಬಿಎಂಪಿ ಮಹದೇವಪುರ ವಲಯದ ಮುಖ್ಯ ಎಂಜಿನಿಯರ್ ಬಸವರಾಜ ಕಬಾಡೆ ತಿಳಿಸಿದರು.

‘ಇನ್ನು ಸಣ್ಣ ಮಳೆಯಾದರೂ ಕೆರೆಗಳಿಂದ ನೀರು ಹೊರಬರುತ್ತದೆ. ನೀರು ಹೋಗಲು ಕಾಲುವೆ ಇಲ್ಲ. ಹೀಗಾಗಿ ಅಪಾರ್ಟ್‌ಮೆಂಟ್‌ಗೆ ನುಗ್ಗುತ್ತದೆ. ಕಾಲುವೆಯಲ್ಲಿನ ಒತ್ತುವರಿ ತೆರವಿಗೆ ರಾಜಕಾಲುವೆ ವಿಭಾಗಕ್ಕೆ ತಿಳಿಸಲಾಗಿದೆ. ಎಲ್ಲ ರೀತಿಯ ಸರ್ವೆ ಮಾಡಿಸಿ, ಒತ್ತುವರಿಯನ್ನು ತೆರವು ಮಾಡಿಸಿ, ರಾಜಕಾಲುವೆಯನ್ನು ಅಭಿವೃದ್ಧಿ ಮಾಡಲಾಗುತ್ತದೆ. ಇದಕ್ಕೆ ಸ್ಥಳೀಯರ ಸಹಕಾರವೂ ಅಗತ್ಯ’ ಎಂದು ಹೇಳಿದರು.

ಸುದ್ದಿ 2 ನಿಮಿಷ


ಅರೆನಗ್ನ ನೃತ್ಯ: ಬಾರ್‌ಗಳ ಮೇಲೆ ಪೊಲೀಸರ ದಾಳಿ

ಬೆಂಗಳೂರು: ಯುವತಿಯರಿಂದ ಅರೆನಗ್ನ ನೃತ್ಯ ಮಾಡಿಸುತ್ತಿದ್ದ ಆರೋಪದಡಿ ಎರಡು ಬಾರ್‌ಗಳ ಮೇಲೆ ಉಪ್ಪಾರಪೇಟೆ ಪೊಲೀಸರು ದಾಳಿ ಮಾಡಿದ್ದು, ಪ್ರತ್ಯೇಕ ಪ್ರಕರಣ ದಾಖಲಿಸಿಕೊಂಡಿದ್ದಾರೆ.

‘ಗಾಂಧಿನಗರದ ಎಸ್.ಸಿ. ರಸ್ತೆಯಲ್ಲಿರುವ ರಾಜಧಾನಿ ಬಾರ್ ಆ್ಯಂಡ್ ರೆಸ್ಟೋರೆಂಟ್ ಹಾಗೂ ವೈ. ರಾಮಚಂದ್ರ ರಸ್ತೆಯಲ್ಲಿರುವ ಸೆವೆನ್ ಹಿಲ್ಸ್ ಬಾರ್ ಆ್ಯಂಡ್ ರೆಸ್ಟೋರೆಂಟ್ ಮೇಲೆ ದಾಳಿ ಮಾಡಲಾಗಿದೆ. ಪರವಾನಗಿ ನಿಯಮ ಉಲ್ಲಂಘಿಸಿದ ಆರೋಪದಡಿ ಮಾಲೀಕರು ಹಾಗೂ ಇತರರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬಾರ್‌ನಲ್ಲಿ ಕೆಲಸಕ್ಕೆ ಯುವತಿಯರನ್ನು ನೇಮಿಸಿಕೊಂಡಿದ್ದ ಆರೋಪಿಗಳು, ಅವರಿಂದ ಅರೆನಗ್ನ ನೃತ್ಯ ಮಾಡಿಸುತ್ತಿದ್ದರು. ಗ್ರಾಹಕರನ್ನು ಸೆಳೆದು, ಪ್ರಚೋದಿಸುವ ಉದ್ದೇಶ ಮಾಲೀಕರದ್ದಾಗಿತ್ತು. ಈ ಬಗ್ಗೆ ಮಾಹಿತಿ ಬರುತ್ತಿದ್ದಂತೆ ದಾಳಿ ಮಾಡಿ, ಕೆಲವರನ್ನು ವಶಕ್ಕೆ ಪಡೆಯಲಾಗಿದೆ. ಯುವತಿಯರನ್ನು ವಿಚಾರಣೆ ಮಾಡಿ, ಹೇಳಿಕೆ ದಾಖಲಿಸಿಕೊಳ್ಳಲಾಗಿದೆ’ ಎಂದೂ ಮೂಲಗಳು ತಿಳಿಸಿವೆ.

ಗುದದ್ವಾರದಲ್ಲಿ 1 ಕೆ.ಜಿ 334 ಗ್ರಾಂ ಚಿನ್ನ



ಬೆಂಗಳೂರು: ಶ್ರೀಲಂಕಾದಿಂದ ಬೆಂಗಳೂರಿಗೆ ಅಕ್ರಮವಾಗಿ ಚಿನ್ನ ಸಾಗಿಸುತ್ತಿದ್ದ ಆರೋಪದಡಿ ಇಬ್ಬರು ಪ್ರಯಾಣಿಕರನ್ನು ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ ಕಸ್ಟಮ್ಸ್ ಅಧಿಕಾರಿಗಳು ಬಂಧಿಸಿದ್ದಾರೆ.

‘ಶ್ರೀಲಂಕಾ ಏರ್‌ಲೈನ್ಸ್ ವಿಮಾನದಲ್ಲಿ ಬುಧವಾರ ಬಂದಿಳಿದಿದ್ದ ಇಬ್ಬರು ಪ್ರಯಾಣಿಕರ ಬಳಿ ₹ 69.74 ಲಕ್ಷ ಮೌಲ್ಯದ 1 ಕೆ.ಜಿ 334 ಗ್ರಾಂ ಚಿನ್ನ ಜಪ್ತಿ ಮಾಡಲಾಗಿದೆ. ಇಬ್ಬರ ವಿರುದ್ಧ ಪ್ರಕರಣ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ. ಅಕ್ರಮ ಸಾಗಣೆ ಜಾಲದಲ್ಲಿ ಮತ್ತಷ್ಟು ಮಂದಿ ಶಾಮೀಲಾಗಿರುವ ಶಂಕೆ ಇದೆ. ಆರೋಪಿಗಳ ಹೆಸರು ಸದ್ಯಕ್ಕೆ ಬಹಿರಂಗಪಡಿಸಲಾಗದು’ ಎಂದು ಕಸ್ಟಮ್ಸ್ ಮೂಲಗಳು ಹೇಳಿವೆ.

‘ಆರೋಪಿಗಳು ಮುಂಬೈ ಮಾರ್ಗವಾಗಿ ಬೆಂಗಳೂರಿಗೆ ಬಂದಿಳಿದಿದ್ದರು. ಅವರಿಬ್ಬರ ಬಳಿ ಚಿನ್ನವಿರುವ ಮಾಹಿತಿ ಲಭ್ಯವಾಗಿತ್ತು. ಇಬ್ಬರನ್ನೂ ಪ್ರಾಥಮಿಕ ತಪಾಸಣೆಗೆ ಒಳಪಡಿಸಿದಾಗ ಯಾವುದೇ ಚಿನ್ನ ಪತ್ತೆಯಾಗಿರಲಿಲ್ಲ.’

‘ಮಾಹಿತಿ ಖಚಿತವಾಗಿದ್ದರಿಂದ ಇಬ್ಬರನ್ನೂ ವಿಶೇಷ ಕೊಠಡಿಗೆ ಕರೆದೊಯ್ದು ಹೆಚ್ಚಿನ ತಪಾಸಣೆಗೆ ಒಳಪಡಿಸಲಾಯಿತು. ಅವರಿಬ್ಬರೂ ತಮ್ಮ ಗುದದ್ವಾರದಲ್ಲಿ ಚಿನ್ನವನ್ನು ಬಚ್ಚಿಟ್ಟುಕೊಂಡಿರುವುದು ಪತ್ತೆಯಾಯಿತು. ಚಿನ್ನದ ಬಿಸ್ಕತ್‌ಗಳನ್ನು ಸಣ್ಣ ಗಾತ್ರದ ರಬ್ಬರ್ ಚೀಲದಲ್ಲಿ ಹಾಕಿ, ಗುದದ್ವಾರದಲ್ಲಿ ಇಟ್ಟುಕೊಂಡಿದ್ದರು. ವೈದ್ಯರ ಸಹಾಯದಿಂದ ಚಿನ್ನದ ಬಿಸ್ಕತ್‌ಗಳನ್ನು ಹೊರಗೆ ತೆಗೆಯಲಾಯಿತು’ ಎಂದೂ ಮೂಲಗಳು ತಿಳಿಸಿವೆ.

‘ಮೊಬೈಲ್ ಬಳಕೆಯಲ್ಲಿ ಡಿಜಿಟಲ್ ಕ್ರಾಂತಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೇಶದಲ್ಲಿ 100 ಕೋಟಿ ಜನರು ಮೊಬೈಲ್ ಬಳಸುತ್ತಿದ್ದು, ಕೃಷಿ ಸೇರಿದಂತೆ ಎಲ್ಲಾ ಕ್ಷೇತ್ರಗಳಿಗೂ ಡಿಜಿಟಲ್ ಮಾರುಕಟ್ಟೆ ಸೃಷ್ಟಿಸಲು ಹಾಗೂ ವಿಸ್ತರಿಸಲು ರಾಜ್ಯ ಸರ್ಕಾರ ಹಲವು ಉಪಕ್ರಮ ಕೈಗೊಂಡಿದೆ ಎಂದು ಐಟಿ, ಬಿಟಿ ಸಚಿವ ಸಿ.ಎನ್.ಅಶ್ವತ್ಥನಾರಾಯಣ ಹೇಳಿದರು.

ನಗರದಲ್ಲಿ ಗುರುವಾರ ನಡೆದ 'ಭಾರತ: ಪ್ರವರ್ಧಮಾನಕ್ಕೆ ಬರುತ್ತಿರುವ ‘ವೈಮಾಂತರಿಕ್ಷ ವಿದ್ಯುನ್ಮಾನ ಕ್ಷೇತ್ರ' ಸಮಾವೇಶದಲ್ಲಿ ಅವರು ಮಾತನಾಡಿದರು.

ರಾಜ್ಯದಲ್ಲಿ ಸೆಮಿಕಂಡಕ್ಟರ್, ವಿದ್ಯುನ್ಮಾನ ಕ್ಷೇತ್ರಗಳಿಗೆ ಆದ್ಯತೆ ನೀಡಲಾಗಿದೆ. ಹುಬ್ಬಳ್ಳಿ- ಧಾರವಾಡ, ಶಿವಮೊಗ್ಗ ಮತ್ತು ಮೈಸೂರುಗಳನ್ನು ವಿಶೇಷ ಹೂಡಿಕೆ ವಲಯಗಳಾಗಿ ಗುರುತಿಸಲಾಗಿದೆ. ಮೈಸೂರಿನಲ್ಲಿ ಸೆಮಿಕಂಡಕ್ಟರ್ ಅಭಿವೃದ್ಧಿ ಕೇಂದ್ರವನ್ನು ಸ್ಥಾಪಿಸಲು ಒಡಂಬಡಿಕೆ ಮಾಡಿಕೊಳ್ಳಲಾಗಿದೆ ಎಂದು ಮಾಹಿತಿ ನೀಡಿದರು.

ದೇಶದಲ್ಲಿ 17 ವರ್ಷ ಅಕ್ರಮ ವಾಸ ● ದಂಪತಿಯನ್ನು ಬಂಧಿಸಿದ ಪೊಲೀಸರು

‘ಕೆಐಎ’ನಲ್ಲಿ ಸಿಕ್ಕಿಬಿದ್ದ ಬಾಂಗ್ಲಾದೇಶದ ಪ್ರಜೆ

ಪ್ರಜಾವಾಣಿ ವಾರ್ತೆ

ಅಪರಾಧ ಸುದ್ದಿ

ಬೆಂಗಳೂರು: ದೇಶದಲ್ಲಿ 17 ವರ್ಷ ಅಕ್ರಮವಾಗಿ ನೆಲೆಸಿದ್ದ ಬಾಂಗ್ಲಾದೇಶದ ಪ್ರಜೆ ಅಪುರ್ಬ್ ರಾಯ್ (27) ಹಾಗೂ ಅವರ ಪತ್ನಿ ತುಲಿ ದಾಸ್ (20) ಎಂಬುವರನ್ನು ನಗರದ ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣದ (ಕೆಐಎ) ಪೊಲೀಸರು ಬಂಧಿಸಿದ್ದಾರೆ.

‘ಬಾಂಗ್ಲಾದೇಶ ಢಾಕಾದ ಖಸೂಲ್ ಬಿಕ್ರಮಪುರ್‌ದ ನಿವಾಸಿ ಅಪುರ್ಬ್ ರಾಯ್, 2005ರಲ್ಲಿ ಪರಿಚಯಸ್ಥರ ಜೊತೆ ಗಡಿ ಮೂಲಕ ದೇಶದೊಳಗೆ ಅಕ್ರಮವಾಗಿ ನುಸುಳಿದ್ದ. ಪಶ್ಚಿಮ ಬಂಗಾಳ, ಕರ್ನಾಟಕ ಹಾಗೂ ಇತರೆ ರಾಜ್ಯಗಳಲ್ಲಿ ವ್ಯಾಪಾರ ಮಾಡಿಕೊಂಡಿದ್ದ. ಇತ್ತೀಚೆಗೆ ಜುಲೈ 28ರಂದು ಅಬುದಾಬಿಗೆ ಹೋಗಲೆಂದು ವಿಮಾನ ನಿಲ್ದಾಣಕ್ಕೆ ಬಂದಿದ್ದಾಗ, ವಲಸೆ ಅಧಿಕಾರಿಗಳ ಕೈಗೆ ಸಿಕ್ಕಿಬಿದ್ದಿದ್ದಾನೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘10ನೇ ವಯಸ್ಸಿನಲ್ಲೇ ಭಾರತಕ್ಕೆ ಅಕ್ರಮವಾಗಿ ಬಂದು ನೆಲೆಸಿದ್ದ ಅಪುರ್ಬ್, ಮಧ್ಯವರ್ತಿಗಳ ಮೂಲಕ ನಕಲಿ ದಾಖಲೆಗಳನ್ನು ಸೃಷ್ಟಿಸಿ ಆಧಾರ್ ಹಾಗೂ ಇತರೆ ಗುರುತಿನ ಚೀಟಿಗಳನ್ನು ಮಾಡಿಸಿಕೊಂಡಿದ್ದ. ಅದರ ಮೂಲಕವೇ ಪಾಸ್‌ಪೋರ್ಟ್ ಸಹ ಪಡೆದು, ಆಗಾಗ ತನ್ನ ದೇಶಕ್ಕೆ ಹೋಗಿ ಬರುತ್ತಿದ್ದ. ಈತ ವಾಸವಿದ್ದ ಪ್ರದೇಶಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಿಸಲಾಗುತ್ತಿದೆ’ ಎಂದು ತಿಳಿಸಿವೆ.

ಬಾಂಗ್ಲಾ ಯುವತಿ ಮದುವೆ: ‘ಬಾಂಗ್ಲಾದೇಶದ ಯುವತಿ ತುಲಿ ಸಹಾ ಅವರನ್ನು ಮದುವೆಯಾಗಿದ್ದ ಅಪುರ್ಬ್, ಆಕೆಯನ್ನೂ ಅಕ್ರಮವಾಗಿ ಭಾರತಕ್ಕೆ ಕರೆಸಿಕೊಂಡಿದ್ದ. ನಕಲಿ ದಾಖಲೆ ಸೃಷ್ಟಿಸಿ ಪತ್ನಿಗೂ ಪಾಸ್‌ಪೋರ್ಟ್ ಮಾಡಿಸಿದ್ದ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಬೆಂಗಳೂರಿನಲ್ಲಿ ವಾಸವಿದ್ದ ದಂಪತಿ, ದುಬೈ ಹಾಗೂ ಇತರೆ ದೇಶಗಳ ಮೂಲಕ ಬಾಂಗ್ಲಾದೇಶಕ್ಕೆ ಹೋಗಿ ಬರುತ್ತಿದ್ದರು. ಜುಲೈ 28ರಂದು ಅಬುದಾಬಿಗೆ ಹೋಗಲೆಂದು ದಂಪತಿ ನಿಲ್ದಾಣಕ್ಕೆ ಬಂದಿದ್ದರು. ನಿರ್ಗಮನ ದ್ವಾರದಲ್ಲಿ ದಂಪತಿಯನ್ನು ತಡೆದು ದಾಖಲೆಗಳ ಪರಿಶೀಲನೆ ನಡೆಸಲಾಯಿತು. ದಂಪತಿ, ವಿವಾಹ ನೋಂದಣಿ ಪ್ರಮಾಣ ಪತ್ರ ನೀಡಿದ್ದರು. ಅವರಿಬ್ಬರ ಬಗ್ಗೆ ಅನುಮಾನಗೊಂಡು ಹೆಚ್ಚಿನ ಪರಿಶೀಲನೆ ನಡೆಸಲಾಯಿತು. ತಾವು ಬಾಂಗ್ಲಾದೇಶದ ಪ್ರಜೆಗಳೆಂಬುದನ್ನು ಒಪ್ಪಿಕೊಂಡರು’ ಎಂದೂ ಮೂಲಗಳು ತಿಳಿಸಿವೆ.

ನಕಲಿ ಆಯ್ಕೆ ಪಟ್ಟಿ: ಎಫ್‌ಐಆರ್ ದಾಖಲು

ಬೆಂಗಳೂರು: ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಹೆಸರಿನಲ್ಲಿ ನಕಲಿ ಫಲಾನುಭವಿಗಳ ಪಟ್ಟಿ ಸೃಷ್ಟಿಸಲಾಗಿದ್ದು, ಈ ಸಂಬಂಧ ವಿಧಾನಸೌಧ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

‘ನಿಗಮದ ವ್ಯವಸ್ಥಾಪಕ ನಿರ್ದೇಶಕ ಕೆ.ಎಂ. ಸುರೇಶ್‌ಕುಮಾರ್ ದೂರು ನೀಡಿದ್ದಾರೆ. ಅಪರಿಚಿತರ ವಿರುದ್ಧ ಎಫ್‌ಐಆರ್ ದಾಖಲಿಸಿಕೊಂಡು, ತನಿಖೆ ಮುಂದುವರಿಸಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.


‘ನಿಗಮದ ಲೆಟರ್ ಹೆಡ್ ಹಾಗೂ ’ಲೋಗೊ‘ವನ್ನು ಆರೋಪಿಗಳು ದುರ್ಬಳಕೆ ಮಾಡಿಕೊಂಡಿದ್ದಾರೆ. ಉದ್ಯಮಶೀಲತಾ ಅಭಿವೃದ್ಧಿ ಯೋಜನೆ ಹಾಗೂ ಐರಾವತ ಯೋಜನೆಯಡಿ ನಿರ್ದೇಶಕರ ಮಂಡಳಿ ವಿವೇಚನಾ ಕೋಟಾದಡಿ 11 ಫಲಾನುಭವಿಗಳ ನಕಲಿ ಮಂಜೂರಾತಿ ಪಟ್ಟಿ ಸೃಷ್ಟಿಸಲಾಗಿದೆ. ಈ ಪಟ್ಟಿಗೆ ವ್ಯವಸ್ಥಾಪಕ ನಿರ್ದೇಶಕರ ನಕಲಿ ಸಹಿ ಮಾಡಿ, ಜನರನ್ನು ವಂಚಿಸಲು ಯತ್ನಿಸಿರುವುದು ಮೇಲ್ನೋಟಕ್ಕೆ ಗೊತ್ತಾಗಿದೆ. ಅಸಲಿ ಪಟ್ಟಿಯೆಂದು ಹೇಳಿ ಸಾಮಾಜಿಕ ಮಾಧ್ಯಮಗಳಲ್ಲಿ ಹರಿಬಿಡಲಾಗಿದೆ. ಈ ಪಟ್ಟಿ ಗಮನಿಸಿದ್ದ ವ್ಯವಸ್ಥಾಪಕ ನಿರ್ದೇಶಕ ಸುರೇಶ್‌ಕುಮಾರ್, ‘ಫಲಾನುಭವಿಗಳನ್ನು ವಂಚಿಸುವ ಉದ್ದೇಶದಿಂದ ನಕಲಿ ಮಂಜೂರಾತಿ ಪಟ್ಟಿ ತಯಾರಿಸಲಾಗಿದೆ’ ಎಂದು ಆರೋಪಿಸಿ ದೂರು ನೀಡಿದ್ದಾರೆ’ ಎಂದೂ ಪೊಲೀಸ್ ಮೂಲಗಳು ತಿಳಿಸಿವೆ.

ಹ್ಯಾಶಿಶ್ ಆಯಿಲ್ ಮಾರಾಟ: ಇಬ್ಬರ ಬಂಧನ

ಪ್ರಜಾವಾಣಿ ವಾರ್ತೆ



ಶಿಫಾನ್



ಅಶ್ಫಕ್

ಬೆಂಗಳೂರು: ನಗರದ ಮಡಿವಾಳದಲ್ಲಿ ಪೇಯಿಂಗ್ ಗೆಸ್ಟ್ (ಪಿಜಿ) ನಡೆಸುವ ಸೋಗಿನಲ್ಲಿ ಮಾದಕ ವಸ್ತು ಹ್ಯಾಶಿಶ್ ಆಯಿಲ್ ಮಾರಾಟ ಮಾಡುತ್ತಿದ್ದ ಕೇರಳದ ಶಿಫಾನ್ ಹಾಗೂ ಮಂಗಳೂರಿನ ಅಶ್ಫಕ್ ಎಂಬ ಇಬ್ಬರು ಆರೋಪಿಗಳನ್ನು ಬೇಗೂರು ಠಾಣೆ ಪೊಲೀಸರು ಬಂಧಿಸಿದ್ದಾರೆ.

ಬಂಧಿತರಿಂದ ₹ 1.60 ಕೋಟಿ ಮೌಲ್ಯದ 2 ಕೆ.ಜಿ. 60 ಗ್ರಾಂ ತೂಕದ ಹ್ಯಾಶಿಶ್ ಆಯಿಲ್ ಸೇರಿ ವಿವಿಧ ಮಾದಕ ವಸ್ತು ಹಾಗೂ ದ್ವಿಚಕ್ರ ವಾಹನ ವಶಕ್ಕೆ ಪಡೆಯಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

‘ಪಿಜಿ ನಡೆಸುವ ಸೋಗಿನಲ್ಲಿ ಶಿಫಾನ್ ಹಾಗೂ ಯುಟ್ಯೂಬ್ ಚಾನೆಲ್ ಕಲಾವಿದರ ಮ್ಯಾನೇಜ್‌ಮೆಂಟ್ ಬಿಸ್‌ನೆಸ್ ನಡೆಸುವ ಸೋಗಿನಲ್ಲಿ ಅಶ್ಫಕ್ ಹ್ಯಾಶಿಶ್ ಮಾರಾಟದ ದಂಧೆ ಮಾಡುತ್ತಿದ್ದರು. ಬೇಗೂರು–ಕೊಪ್ಪ ರಸ್ತೆಯ ರೋಳ ಹೈಪರ್ ಮಾರುಕಟ್ಟೆ ಪ್ರದೇಶದಲ್ಲಿ ಸಂಜೆ ಸೇರುವ ಯುವಕರಿಗೆ ಮಾದಕ ವಸ್ತು ಪೂರೈಸುತ್ತಿದ್ದರು‘ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ಕಾಂಪೌಂಡ್ ಹಾರಿ 10 ವಿದೇಶಿ ಪ್ರಜೆಗಳು ಪರಾರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೊಡ್ಡಗುಬ್ಬಿಯ ಕೆ.ಆರ್.ಸಿ. ರಸ್ತೆಯಲ್ಲಿರುವ ‘ನ್ಯೂ ಆರ್ಕ್ ಮಿಷನ್ ಆಫ್ ಇಂಡಿಯಾ ಹೋಮ್ ಆಫ್ ಹೋಪ್’ ಆಶ್ರಮದಲ್ಲಿ ಇರಿಸಲಾಗಿದ್ದ 10 ವಿದೇಶಿ ಪ್ರಜೆಗಳು, ಆಶ್ರಮದ ಕಾಂಪೌಂಡ್ ಹಾರಿ ಪರಾರಿಯಾಗಿದ್ದಾರೆ.

ಜುಲೈ 19ರಂದು ಏಳು ಪ್ರಜೆಗಳು ಹಾಗೂ ಜುಲೈ 27ರಂದು ಮೂವರು ಪ್ರಜೆಗಳು ಪರಾರಿಯಾಗಿದ್ದಾರೆ. ಈ ಬಗ್ಗೆ ಆಶ್ರಮದ ಪ್ರತಿನಿಧಿ ಟಿ. ರಾಜ್ (55) ಅವರು ಕೊತ್ತನೂರು ಠಾಣೆಗೆ ದೂರು ನೀಡಿದ್ದಾರೆ. ಎಫ್‌ಐಆರ್ ದಾಖಲಿಸಿಕೊಂಡಿರುವ ಪೊಲೀಸರು, ಪರಾರಿಯಾಗಿರುವ ವಿದೇಶಿ ಪ್ರಜೆಗಳಿಗಾಗಿ ಹುಡುಕಾಟ ಆರಂಭಿಸಿದ್ದಾರೆ.

‘ಬಾಂಗ್ಲಾದೇಶದ ಮೊಹಮ್ಮದ್ ಸುಹೀಲ್ ರಾಣಾ (34), ಝುಲ್ಫಿಕರ್ ಅಲಿ (34), ಉಜ್ಜಲ್ ಅಲಿಯಾಸ್ ಮೊಹಮ್ಮದ್ ರಾಣಾ (30), ಮೊಹಮ್ಮದ್ ಹುಸೇನ್ (25), ಮುಸಾ ಶಕೆ ಅಲಿಯಾಸ್ ಮುಸಾಮೀಯಾ (27), ರಹೀಮ್ (27), ಅರೀಫುಲ್ಲ ಇಸ್ಲಾಂ (26), ಉಗಾಂಡಾದ ಮಹಿಳೆಯರಾದ ನಮಿರೆಂಬೆ ಕ್ಯಾಥರಿನ್ (25), ಮರಿಯಾ (30) ಹಾಗೂ ಚೆರೂಪ್ ಸಿಸ್ಕೊ ಶಿರ್ಹಾ (30) ಪರಾರಿಯಾಗಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಕೆಲ ವಿದೇಶಿ ಪ್ರಜೆಗಳು, ವೀಸಾ ಹಾಗೂ ಪಾಸ್‌ಪೋರ್ಟ್ ಅವಧಿ ಮುಗಿದರೂ ದೇಶದಲ್ಲಿ ಅಕ್ರಮವಾಗಿ ವಾಸವಿದ್ದರು. ಇವರನ್ನು ಪೊಲೀಸರ ಮೂಲಕ ಪತ್ತೆ ಮಾಡಿ ವಶಕ್ಕೆ ಪಡೆದಿದ್ದ ವಿದೇಶಿಗರ ಪ್ರಾದೇಶಿಕ ನೋಂದಣಿ ಕಚೇರಿ (ಎಫ್‌ಆರ್‌ಆರ್‌ಒ) ಅಧಿಕಾರಿಗಳು, ವಾಪಸು ದೇಶಕ್ಕೆ ಹೋಗುವಂತೆ ಎಚ್ಚರಿಕೆ ನೀಡಿದ್ದರು. ವಿದೇಶಿ ಪ್ರಜೆಗಳು ಕಾಲಾವಕಾಶ ಕೋರಿದ್ದರು.’

‘ದೇಶ ಬಿಟ್ಟು ಹೋಗುವವರೆಗೂ ಎಲ್ಲಿಯೂ ಓಡಾಡದಂತೆ ತಿಳಿಸಿದ್ದ ಎಫ್‌ಆರ್‌ಆರ್‌ಒ ಅಧಿಕಾರಿಗಳು, ಎಲ್ಲ ವಿದೇಶಿ ಪ್ರಜೆಗಳನ್ನು ‘ನ್ಯೂ ಆರ್ಕ್ ಮಿಷನ್ ಆಫ್ ಇಂಡಿಯಾ ಹೋಮ್ ಆಫ್ ಹೋಫ್’ ಆಶ್ರಮದಲ್ಲಿ ಇರಿಸಿದ್ದರು. ಬಾಂಗ್ಲಾ ಪ್ರಜೆಗಳು, ಆಶ್ರಮದ ಕಾಂಪೌಂಡ್ ಹಾರಿ ಪರಾರಿಯಾಗಿದ್ದಾರೆ. ಉಗಾಂಡದ ಮಹಿಳೆಯರು, ಹಗ್ಗದ ಸಹಾಯದಿಂದ ಗೇಟ್ ಹತ್ತಿ ಇಳಿದು ತಪ್ಪಿಸಿಕೊಂಡು ಹೋಗಿದ್ದಾರೆ’ ಎಂದು ಮೂಲಗಳು ತಿಳಿಸಿವೆ.

ಸಿದ್ದರಾಮಯ್ಯ ಜನ್ಮದಿನಕ್ಕೆ ಫ್ಲೆಕ್ಸ್: ದೂರು ದಾಖಲಿಸಿದ ಬಿಬಿಎಂಪಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಜನ್ಮದಿನಕ್ಕೆ ಶುಭಾಶಯ ಕೋರುವ ಫ್ಲೆಕ್ಸ್ ಅಳವಡಿಸಿದ್ದ ಕಾಂಗ್ರೆಸ್ ಮುಖಂಡರ ವಿರುದ್ಧ ವಿಧಾನಸೌಧ ಠಾಣೆಯಲ್ಲಿ ಎಫ್‌ಐಆರ್ ದಾಖಲಾಗಿದೆ.

‘ಬಿಬಿಎಂಪಿ ವಸಂತನಗರ ಉಪವಿಭಾಗದ ಸಹಾಯಕ ಕಂದಾಯ ಅಧಿಕಾರಿ ಬಿ.ವಿ. ವೀಣಾ ಅವರು ದೂರು ನೀಡಿದ್ದಾರೆ. ಫ್ಲೆಕ್ಸ್ ಅಳಡಿಸಿದ್ದರು ಎನ್ನಲಾದ ಕಾಂಗ್ರೆಸ್ ಮುಖಂಡರಾದ ಟಿ.ಎಸ್. ರಮೇಶ್ ಬಾಬು ಹಾಗೂ ಜಯಬಾಲ ಎಂಬುವವರ ವಿರುದ್ಧ ಪ್ರಕರಣ ದಾಖಲಿಸಿಕೊಳ್ಳಲಾಗಿದೆ’ ಎಂದು ಪೊಲೀಸ್ ಮೂಲಗಳು ಹೇಳಿವೆ.

‘ಅನುಮತಿ ಇಲ್ಲದೇ ನಗರದಲ್ಲಿ ಬ್ಯಾನರ್, ಫ್ಲೆಕ್ಸ್ ಹಾಗೂ ಇತರೆ ಜಾಹೀರಾತು ಫಲಕ ಅಳವಡಿಸುವುದನ್ನು ನಿಷೇಧಿಸಲಾಗಿದೆ. ಈ ಸಂಬಂಧ ಹೈಕೋರ್ಟ್ ಸಹ ನಿರ್ದೇಶನ ನೀಡಿದೆ. ಇದರ ನಡುವೆಯೇ ಆರೋಪಿಗಳು ಅನುಮತಿ ಪಡೆಯದೇ ಬಸವೇಶ್ವರ ವೃತ್ತದಲ್ಲಿ (ಚಾಲುಕ್ಯ ಹೋಟೆಲ್ ವೃತ್ತ) ಫ್ಲೆಕ್ಸ್ ಅಳವಡಿಸಿದ್ದರು. ಇದರಿಂದ ನಗರದ ಸೌಂದರ್ಯಕ್ಕೆ ಧಕ್ಕೆ ಉಂಟಾಗಿರುವುದಾಗಿ ದೂರುದಾರರು ತಿಳಿಸಿದ್ದಾರೆ’ ಎಂದೂ ಮೂಲಗಳು ವಿವರಿಸಿವೆ.

ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ. ರವಿ ಅವರಿಗೆ ಹುಟ್ಟುಹಬ್ಬದ ಶುಭಾಶಯ ಕೋರಿ ವಿಧಾನಸೌಧದ ಎದುರು ಫ್ಲೆಕ್ಸ್ ಅಳವಡಿಸಿದ್ದ ಜಿ. ಕಿಶನ್ ಗೌಡ್ರು ಹಾಗೂ ಎಲ್. ನರೇಂದ್ರ ಎಂಬುವರ ವಿರುದ್ಧವೂ ವಿಧಾನಸೌಧ ಠಾಣೆಯಲ್ಲಿ ಜುಲೈ 20ರಂದು ಎಫ್‌ಐಆರ್ ದಾಖಲಾಗಿತ್ತು.

ಅಸಮರ್ಪಕ ದಾಖಲೆ; ಅಕ್ರಮದ ವಾಸನೆ

ಪ್ರಜಾವಾಣಿ ವಾರ್ತೆ



ಬೆಂಗಳೂರು: ‘ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಗೆ ನಡೆದ ಚುನಾವಣೆಯಲ್ಲಿ ಸಮರ್ಪಕವಾದ ದಾಖಲೆಗಳನ್ನು ನಿರ್ವಹಿಸದಿರುವುದು ಮತ್ತು ಮತಗಳ ಅಂಕಿ ಅಂಶಗಳಲ್ಲಿ ಭಾರೀ ಅಂತರವಿರುವುದು ಕಂಡುಬಂದಿದ್ದು, ಈ ಚುನಾವಣೆಯಲ್ಲಿ ಅಕ್ರಮ ನಡೆದಿರುವ ಸಾಧ್ಯತೆ ದಟ್ಟವಾಗಿದೆ’ ಎಂದು ನಿರ್ಮಾಪಕರಾದ ಸಾ.ರಾ. ಗೋವಿಂದು, ಕರಿಸುಬ್ಬು ದೂರಿದರು.

ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಸಾ.ರಾ. ಗೋವಿಂದು, ‘ವಾಣಿಜ್ಯ ಮಂಡಳಿಯ ಚುನಾವಣೆಗೆ ಸಂಬಂಧಿಸಿ ಎಲೆಕ್ಟ್ರಾನಿಕ್ ಮತಯಂತ್ರಗಳ ಮೂಲಕ ಮತದಾನ ನಡೆಯಬೇಕು ಎಂದು ನಿರ್ಧಾರ ಆಗಿತ್ತು. ಆದರೆ, ಇಲ್ಲಿ ಮತಪತ್ರಗಳ ಮೂಲಕ ಮತದಾನ ನಡೆದಿದೆ. ಆದರೆ, ಮತಪತ್ರಗಳ ಕೌಂಟರ್‌ಫಾಯಿಲ್‌ನಲ್ಲಿ ಮತದಾರರ ಸಹಿಯನ್ನೂ ಪಡೆದಿಲ್ಲ. ಚುನಾವಣಾ ಪ್ರಕ್ರಿಯೆಯ ವಿಡಿಯೊ ದಾಖಲೆಯೂ ಸರಿಯಾಗಿ ನಡೆದಿಲ್ಲ. ಇಂಥ ಅನೇಕ ತಪ್ಪುಗಳಿಂದಾಗಿ ಸ್ಪರ್ಧಿಗಳು, ಮತದಾರರು ಸೇರಿ ಹಲವರಿಗೆ ಅನ್ಯಾಯವಾಗಿದೆ. ಇದನ್ನು ಚುನಾವಣಾಧಿಕಾರಿ ಗಮನಕ್ಕೆ ತಂದು ಸಮಜಾಯಿಷಿ ಕೇಳಿದರೂ ಅವರು ಪ್ರತಿಕ್ರಿಯಿಸಿಲ್ಲ’ ಎಂದು ದೂರಿದರು.


ವಕೀಲ ರವಿಶಂಕರ್ ಎಸ್.ಎಸ್. ಮಾತನಾಡಿ, ‘ಸಹಕಾರ ಸಂಘಗಳ ಉಪನಿಬಂಧಕರಿಗೆ ಈ ಬಗ್ಗೆ ದೂರು ನೀಡಿದಾಗ ಅವರು, ವಾಣಿಜ್ಯ ಮಂಡಳಿಯಲ್ಲಿ ಯಾವುದೇ ಸಭೆ ಅಥವಾ ಹಣಕಾಸು ವ್ಯವಹಾರಗಳನ್ನು ನಡೆಸುವಂತಿಲ್ಲ ಎಂದು ಆದೇಶ ನೀಡಿದರು. ಈ ಬೆಳವಣಿಗೆಗಳು ತೀವ್ರಗೊಂಡಾಗ ಹೈಕೋರ್ಟ್ ಕೂಡಾ ಇದೇ ತೀರ್ಮಾನವನ್ನು ಕೊಟ್ಟಿತು’ ಎಂದರು.

ನಿರ್ಮಾಪಕ ಕೆ.ಎಂ.ವೀರೇಶ್ ಮಾತನಾಡಿ, ‘ಸ್ಪರ್ಧಿಗಳಿಗೆ ಸಿಕ್ಕಿರುವ ಮತಗಳ ನಿಖರ ಸಂಖ್ಯೆಯನ್ನೂ ಕೊಟ್ಟಿಲ್ಲ. ಯಾವುದೇ ದಾಖಲೆಗಳಿಲ್ಲದೇ ಚುನಾವಣಾಧಿಕಾರಿ ಮಾಧ್ಯಮಗಳಿಗೆ ಹೇಳಿಕೆ ಕೊಟ್ಟಿದ್ದಾರೆ. ನಾವು ಸ್ಪಷ್ಟನೆ ಕೇಳಿದಾಗ ಬ್ಯಾಲೆಟ್ ಪೇಪರ್‌ಗಳನ್ನು ಸುರಿದು ವಿವಿಧ ವಿಭಾಗವಾರು ಮತಗಳ ಬೇರೆಯೇ ಅಂಕಿಗಳನ್ನು ಹೇಳಿದ್ದಾರೆ. ಅಭ್ಯರ್ಥಿಗಳ ಸಮ್ಮುಖದಲ್ಲಿ ಮತಗಳ ಸಂಖ್ಯೆಯನ್ನು ಹೇಳಿಲ್ಲ. ಕೆಲವು ಮತಗಳು ಕುಲಗೆಟ್ಟಿವೆ. ಹಲವರು ಮತದಾನ ವಂಚಿತರಾಗಿದ್ದಾರೆ. ಈ ಎಲ್ಲ ಕಾರಣದಿಂದ ಇಲ್ಲಿ ಗೊಂದಲ ಉಂಟಾಗಿದೆ’ ಎಂದರು.

‘ಚುನಾವಣೆಯಲ್ಲಿ ಈಗ ಗೆದ್ದಿದೆ ಎನ್ನಲಾದ ಕಾರ್ಯಕಾರಿ ಸಮಿತಿಗೂ ಅಧಿಕೃತವಾಗಿ ದಾಖಲೆಗಳು ಇಲ್ಲ’ ಎಂದರು.

‘ಬಿಜೆಪಿ ಬೊಗಳೆ ಆಡಳಿತ’: ಎಎಪಿ ಪುಸ್ತಕ

ಪ್ರಜಾವಾಣಿ ವಾರ್ತೆ



ಎಎಪಿಯಿಂದ ಬಿಡುಗಡೆಗೊಂಡ ‘ಬಿಜೆಪಿ ಬೊಗಳೆ ಆಡಳಿತ’ ಎಂಬ ಕಿರು ಪುಸ್ತಕದ ಮುಖಪುಟದ ಚಿತ್ರ

ಬೆಂಗಳೂರು: ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ನೇತೃತ್ವದ ಬಿಜೆಪಿ ಸರ್ಕಾರ ಒಂದು ವರ್ಷ ಪೂರೈಸಿರುವ ಹಿನ್ನೆಲೆಯಲ್ಲಿ ಸರ್ಕಾರದ ವೈಫಲ್ಯಗಳ ಕುರಿತು ಆಮ್ ಆದ್ಮಿ ಪಕ್ಷ ‘ಬಿಜೆಪಿಯ ಬೊಗಳೆ ಆಡಳಿತ’ ಎಂಬ ಕಿರು ಪುಸ್ತಕವನ್ನು ಬಿಡುಗಡೆ ಮಾಡಿದೆ.

‘ಜನರ ಆಶೋತ್ತರಗಳನ್ನು ಈಡೇರಿಸುವುದರಲ್ಲಿ ರಾಜ್ಯ ಬಿಜೆಪಿ ಸರ್ಕಾರ ಸಂಪೂರ್ಣ ವಿಫಲವಾಗಿದೆ. ಶೇಕಡಾ 40ರಷ್ಟು ಕಮಿಷನ್ ದಂಧೆಯಿಂದಾಗಿ ರಾಜ್ಯದ ಅಭಿವೃದ್ಧಿ ಕುಂಠಿತಗೊಂಡಿದೆ. ವೈಫಲ್ಯಗಳನ್ನು ಮರೆಮಾಚಲು ಮತ್ತು ರಾಜಕೀಯ ಲಾಭ ಪಡೆದುಕೊಳ್ಳಲು ಬಿಜೆಪಿ ಸರ್ಕಾರ ರಾಜ್ಯದಲ್ಲಿ ಕೋಮುದ್ವೇಷ ಹರಡುತ್ತಿದೆ. ರಾಜ್ಯದಲ್ಲಿ ಶಾಂತಿ ಸುವ್ಯವಸ್ಥೆ ಸಂಪೂರ್ಣ ಕುಸಿದಿದೆ’ ಎಂದು ಎಎಪಿ ಪ್ರಚಾರ ಸಮಿತಿ ಅಧ್ಯಕ್ಷ ‘ಮುಖ್ಯಮಂತ್ರಿ’ ಚಂದ್ರು ಬುಧವಾರ ಸುದ್ದಿಗೋಷ್ಠಿಯಲ್ಲಿ ಆರೋಪಿಸಿದರು.

‘ಅಧಿಕಾರಕ್ಕೆ ಬಂದ ಮೊದಲ ಸಚಿವ ಸಂಪುಟ ಸಭೆಯಲ್ಲಿ ಲೋಕಾಯುಕ್ತ ಸಂಸ್ಥೆ ಬಲಪಡಿಸುವುದಕ್ಕೆ ಅನುಮೋದನೆ ನೀಡುವುದಾಗಿ 2018ರ ಚುನಾವಣೆ ಪ್ರಣಾಳಿಕೆಯಲ್ಲಿ ಹೇಳಿತ್ತು. ಅಧಿಕಾರಕ್ಕೆ ಬಂದು ಮೂರು ವರ್ಷಗಳಾದರೂ ಇದುವರೆಗೂ ಯಾವುದೇ ಕ್ರಮ ಕೈಗೊಂಡಿಲ್ಲ. ಪಠ್ಯಪುಸ್ತಕ ಪರಿಷ್ಕರಣೆ ವಿವಾದ, ಕೋಮು ದ್ವೇಷ, ಪಿಎಸ್‌ಐ ಹಗರಣ, ಗುತ್ತಿಗೆ ಕಾಮಗಾರಿಗಲ್ಲಿ ಕಮಿಷನ್ ಪಡೆದಿರುವುದೇ ಸರ್ಕಾರದ ಪ್ರಮುಖ ಸಾಧನೆಗಳು’ ಎಂದರು.

ಎಎಪಿ ನಗರ ಘಟಕದ ಅಧ್ಯಕ್ಷ ಮೋಹನ್ ದಾಸರಿ ಮಾತನಾಡಿ, ‘ಬಿಜೆಪಿ ಆಡಳಿತದಲ್ಲಿ ಬೆಂಗಳೂರು ತೀವ್ರ ನಿರ್ಲಕ್ಷ್ಯಕ್ಕೆ ಒಳಗಾಗಿದೆ. ರಸ್ತೆ ಗುಂಡಿಗಳು, ಕಸದ ಅವೈಜ್ಞಾನಿಕ ವಿಲೇವಾರಿ, ಮಳೆ ಬಂದರೆ ಮನೆಗಳಿಗೆ ನುಗ್ಗುವ ನೀರು–ಒಂದೆಡೆ ಈ ಸಮಸ್ಯೆಗಳು; ಸರ್ಕಾರಿ ಶಾಲೆ, ಆರೋಗ್ಯ ಕೇಂದ್ರಗಳಲ್ಲಿ ಮೂಲ ಸೌಕರ್ಯಗಳಿಲ್ಲದೇ ಇರುವುದು ಇನ್ನೊಂದು ಕಡೆ ಎದ್ದುಕಾಣುತ್ತದೆ‘ ಎಂದು ಆರೋಪಿಸಿದರು.

ಎಎಪಿ ಮಾಧ್ಯಮ ಸಂಚಾಲಕ ಜಗದೀಶ ಸದಂ ಇದ್ದರು.

ರಾಜ್ಯ ವಕೀಲರ ಪರಿಷತ್ ವತಿಯಿಂದ ಬೀಳ್ಕೊಡುಗೆ ಸಮಾರಂಭ: ನ್ಯಾ.ಪಿ.ಕೃಷ್ಣ ಭಟ್

‘ಅಧಿಕಾರಿಗಳ ವಿರುದ್ಧ ದೂರು: ಮಂಪರು ಪರೀಕ್ಷೆ ಅಗತ್ಯ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ನ್ಯಾಯಾಂಗದ ಅಧಿಕಾರಿಗಳು, ಲೋಕಾಯುಕ್ತ, ಉಪಲೋಕಾಯುಕ್ತದಂತಹ ಮಹತ್ವದ ಸ್ಥಾನದಲ್ಲಿರುವವರ ವಿರುದ್ಧ ದೂರುಗಳು ಕೇಳಿಬಂದಾಗ ಮಂಪರು ಪರೀಕ್ಷೆಗೆ ಅವಕಾಶ ಇರಬೇಕು’ ಎಂದು ನ್ಯಾಯಮೂರ್ತಿ ಪಿ. ಕೃಷ್ಣ ಭಟ್ ಪ್ರತಿಪಾದಿಸಿದರು.

ಇದೇ 7ಕ್ಕೆ ನಿವೃತ್ತಿ ಹೊಂದುತ್ತಿರುವ ನ್ಯಾಯಮೂರ್ತಿ ಕೃಷ್ಣ ಭಟ್ ಅವರಿಗೆ ಗುರುವಾರ ರಾಜ್ಯ ವಕೀಲರ ಪರಿಷತ್ ವತಿಯಿಂದ ಹೈಕೋರ್ಟ್ ಹಾಲ್ 1ರಲ್ಲಿ ಬೀಳ್ಕೊಡುಗೆ ನೀಡಲಾಯಿತು. ಈ ವೇಳೆ ಮಾತನಾಡಿದ ಅವರು, ‘ವಿಚಾರಣಾಧೀನ ನ್ಯಾಯಾಲಯಗಳ ನ್ಯಾಯಾಂಗ ಅಧಿಕಾರಿಗಳು ಸಂಭವನೀಯ ಪ್ರತೀಕಾರಗಳಿಗೆ ಎದೆಗುಂದದೆ ಕೆಲಸ ಮಾಡಿದರೆ ಸ್ವತಂತ್ರರಾಗಿರುತ್ತೀರಿ’ ಎಂದು ಕಿವಿಮಾತು ಹೇಳಿದರು.

ಬೆಂಗಳೂರು ವಕೀಲರ ಸಂಘದ ವತಿಯಿಂದ ನೀಡಲಾದ ಬೀಳ್ಕೊಡುಗೆ ಸಮಾರಂಭದಲ್ಲಿ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ‘ನಿನ್ನೆಯಿಂದ ತೀವ್ರ ಜ್ವರದ ತಾಪದಲ್ಲಿದ್ದೆ. ಆದರೆ, ನಿಮ್ಮ ಈ ಪ್ರೀತ್ಯಾದರವನ್ನು ಬದಿಗಿರಿಸಲಾಗದೆ ಭಾವುಕನಾಗಿ ನಿಮ್ಮ ಮಧ್ಯದಲ್ಲಿ ನನ್ನನ್ನು ನಾನು ಕಂಡುಕೊಳ್ಳಲು ಬಂದಿದ್ದೇನೆ’ ಎಂದರು.

'ಬೆಂಗಳೂರು ವಕೀಲರ ಸಂಘದ ಚುನಾವಣಾ ಪದ್ಧತಿಯಲ್ಲಿ ಸಾಕಷ್ಟು ಬದಲಾವಣೆಯಾಗಬೇಕಿದೆ ಮತ್ತು ಇದರ ಆರೋಗ್ಯ ಸುಧಾರಿಸಬೇಕಾದ ಅವಶ್ಯಕತೆ' ಎಂದು ಅವರು, ದೇಶದ ಚುನಾವಣಾ ಪದ್ಧತಿಯ ಬಗ್ಗೆಯೂ ಕಳವಳ ವ್ಯಕ್ತಪಡಿಸಿದರು. ಇದಕ್ಕೆ ಪೂರಕವಾಗಿ, ಶೇಷನ್ ಅವರ ಸುಧಾರಣೆ ಮತ್ತು ಬೆಲ್ಜಿಯಂ ಲೇಖಕರೊಬ್ಬರ ‘ಏಗೆನೆಸ್ಟ್ ದಿ ಎಲೆಕ್ಷನ್’ ಪುಸ್ತಕದ ಸಂಗತಿಗಳನ್ನು ಉದಾಹರಿಸಿದರು.



ನ್ಯಾಯಮೂರ್ತಿ ಪಿ.ಕೃಷ್ಣ ಭಟ್ ಅವರಿಗೆ ಗುರುವಾರ ಬೆಂಗಳೂರು ವಕೀಲರ ಸಂಘದ ವತಿಯಿಂದ ಹೈಕೋರ್ಟ್‌ನಲ್ಲಿ ಬೀಳ್ಕೊಡುಗೆ ನೀಡಲಾಯಿತು. ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ, ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ ಮತ್ತು ಪದಾಧಿಕಾರಿಗಳು ಇದ್ದರು

ಬೆಂಗಳೂರು ವಕೀಲರ ಸಂಘದ ಅಧ್ಯಕ್ಷ ವಿವೇಕ್ ರೆಡ್ಡಿ, ‘ಕೃಷ್ಣ ಭಟ್ ಅವರು ಕಾರಣಾಂತರಗಳಿಂದ ತಮ್ಮ ಸೇವಾ ಅವಧಿಯಲ್ಲಿ ಬೇಗನೇ ಹೈಕೋರ್ಟ್ ನ್ಯಾಯಮೂರ್ತಿ ಪದನ್ನೋತಿ ಪಡೆಯಲಿಲ್ಲ. ಇದು ನ್ಯಾಯಾಂಗಕ್ಕೆ ಆದ ನಷ್ಟ’ ಎಂದರು.

ಹಿರಿಯ ವಕೀಲ ಉದಯ ಹೊಳ್ಳ ಅವರು ಮಾತನಾಡಿ, ‘ಕೃಷ್ಣ ಭಟ್ ಅವರ ಪ್ರಾಮಾಣಿಕತೆ ಮತ್ತು ವೃತ್ತಿನಿಷ್ಠೆ ಪ್ರಶ್ನಾತೀತ. ಆದರೂ ಇಂಥವರು ತಮ್ಮ ಸೇವಾ ಅವಧಿಯಲ್ಲಿ ಅನೇಕ ಸಂಕಟಗಳಿಗೆ ಈಡಾಗಿದ್ದರು. ಅತ್ಯುತ್ತಮ ಗುಣಗಳನ್ನು ಉಳ್ಳ ಇಂಥವರನ್ನು ಸರಿಯಾದ ಸಮಯದಲ್ಲಿ ಹೈಕೋರ್ಟ್ ನ್ಯಾಯಮೂರ್ತಿ ಮಾಡದೇ ಹೋದದ್ದು ಅನ್ಯಾಯ’ ಎಂದರು.

ಕಾರ್ಯಕ್ರಮದಲ್ಲಿ ಹಂಗಾಮಿ ಮುಖ್ಯ ನ್ಯಾಯಮೂರ್ತಿ ಅಲೋಕ್ ಆರಾಧೆ, ಅಡ್ವೊಕೇಟ್ ಜನರಲ್ ಪ್ರಭುಲಿಂಗ ಕೆ.ನಾವದಗಿ ಮಾತನಾಡಿದರು. ಹಿರಿ–ಕಿರಿಯ ವಕೀಲರು ಹಾಜರಿದ್ದರು.





ನಗರದ ಮಲ್ಲೇಶ್ವರ ಎಂಟನೇ ಅಡ್ಡರಸ್ತೆಯಲ್ಲಿ ವರಮಹಾಲಕ್ಷ್ಮಿ ಹಬ್ಬಕ್ಕಾಗಿ ಗುರುವಾರ ಜನರು ಹಣ್ಣು–ಹೂವು, ಬಾಳೆ ಕಂದು ಮತ್ತು ಇತರ ವಸ್ತುಗಳನ್ನು ಖರೀದಿಸಿದರು(ಎಡ ಚಿತ್ರ). ಮಾಗಡಿ ಮುಖ್ಯ ರಸ್ತೆಯ ಜೈ ಮುನಿರಾವ್ ವೃತ್ತದಲ್ಲಿರುವ ಮಳಿಗೆಯೊಂದರಲ್ಲಿ ಬುಧವಾರ ಮಹಾಲಕ್ಷ್ಮಿ ಮೂರ್ತಿಗಳ ಖರೀದಿಯಲ್ಲಿ ತೊಡಗಿದ್ದ ಮಹಿಳೆಯರು —ಪ್ರಜಾವಾಣಿ ಚಿತ್ರಗಳು/ ಎಂ.ಎಸ್. ಮಂಜುನಾಥ್/ ರಂಜು ಪಿ.

ತುಂತುರು ಮಳೆಯಲ್ಲೂ ವರಮಹಾಲಕ್ಷ್ಮಿ ಹಬ್ಬದ ಖರೀದಿಗೆ ಗ್ರಾಹಕರ ದಂಡು, ಸಂಚಾರ ದಟ್ಟಣೆ

ಏರಿದರೂ ದರ ಮಾರುಕಟ್ಟೆಯಲ್ಲಿ ಸಡಗರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವರಮಹಾಲಕ್ಷ್ಮಿ ಹಬ್ಬವನ್ನು ಶುಕ್ರವಾರ ಸಂಭ್ರಮ–ಸಡಗರದಿಂದ ಆಚರಿಸಲು ನಗರದ ಜನತೆ ಸಿದ್ಧವಾಗಿದ್ದು, ಹಬ್ಬದ ಮುನ್ನಾದಿನವಾದ ಗುರುವಾರಬೆಳಿಗ್ಗೆಯಿಂದ ಸುರಿಯುತ್ತಿದ್ದ ಮಳೆಯಲ್ಲಿಯೇ ಹೂವು ಮತ್ತು ಹಣ್ಣಿನ ಖರೀದಿಗೆ ಜನಜಂಗುಳಿ ಇತ್ತು. ಬೆಲೆ ಏರಿಕೆ ಬಿಸಿಯ ನಡುವೆಯೂ ಖರೀದಿಯ ಉತ್ಸಾಹ ಕಡಿಮೆಯೇನೂ ಆಗಿರಲಿಲ್ಲ.

ಕೆ.ಆರ್.ಮಾರುಕಟ್ಟೆ, ಮಲ್ಲೇಶ್ವರದಲ್ಲಿ ರಸ್ತೆಯ ಇಕ್ಕೆಲಗಳಲ್ಲಿ ನಡೆದಾಡಲು ಕಷ್ಟವಾಗುವಷ್ಟು ಗ್ರಾಹಕರು ಗುರುವಾರ ಜಮಾಯಿಸಿದ್ದರು. ಇದರಿಂದ ಸಂಚಾರ ದಟ್ಟಣೆಯುಂಟಾಗಿ ವಾಹನ ಸವಾರರು ಪರದಾಡಬೇಕಾಯಿತು. ಈ ಬಾರಿ ಹಬ್ಬದ ಖರೀದಿಗೆ ಬಂದಿದ್ದ ಗ್ರಾಹಕರ ಪ್ರಮಾಣ ಅಧಿಕವಾಗಿತ್ತು.

ವರಮಹಾಲಕ್ಷ್ಮಿ ಹಬ್ಬದಂದು ಮನೆಗಳಲ್ಲಿ ಲಕ್ಷ್ಮಿ ಮೂರ್ತಿಗಳನ್ನು ಕೂರಿಸಿ, ಪೂಜಿಸುವುದು ವಾಡಿಕೆ. ಈ ವೇಳೆ ಅಲಂಕಾರಕ್ಕಾಗಿ ತರಹೇವಾರಿ ಹೂಗಳು ಮತ್ತು ಹಣ್ಣನ್ನು ಬಳಸುತ್ತಾರೆ. ಹಾಗಾಗಿ, ಪ್ರತಿ ವರ್ಷದಂತೆ ಈ ಬಾರಿಯೂ ಹೂವು ಮತ್ತು ಹಣ್ಣಿನ ದರಗಳಲ್ಲಿ ಏರಿಕೆಯಾಗಿದೆ.



ವರಮಹಾಲಕ್ಷ್ಮಿ ಹಬ್ಬಕ್ಕೆ ಸಿದ್ಧತೆಯಲ್ಲಿ ತೊಡಗಿರುವ ಮಹಿಳೆಯರು ಗಾಂಧಿಬಜಾರ್‌ನ ಮಳಿಗೆಯೊಂದರಲ್ಲಿ ಬುಧವಾರ ಮಹಾಲಕ್ಷ್ಮಿ ಮೂರ್ತಿಗಳನ್ನು ಖರೀದಿಸಿದರು —ಪ್ರಜಾವಾಣಿ ಚಿತ್ರ/ಪ್ರಶಾಂತ್ ಎಚ್‌.ಜಿ.

ಹೂಗಳು ಗಗನಮುಖಿ: ‘ಕಳೆದ 8–10 ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಹೂವುಗಳ ಆವಕ ಕಡಿಮೆಯಾಗಿದ್ದು, ಹೂವಿನ ದರ ದುಬಾರಿಯಾಗಿದೆ. ಈ ಹಬ್ಬದಲ್ಲೇ ಹೂವಿನ ಬೆಳೆಗಾರರು ಮತ್ತು ವರ್ತಕರು ಕೊಂಚ ಲಾಭ ಕಾಣುತ್ತಾರೆ ಎಂದು ಕೆ.ಆರ್.ಮಾರುಕಟ್ಟೆಯ ಹೂವಿನ ವರ್ತಕ ದಿವಾಕರ ಮಾಹಿತಿ ನೀಡಿದರು.

ಈ ಬಾರಿಯ ವರಮಹಾಲಕ್ಷ್ಮಿ ಹಬ್ಬದ ಸಂದರ್ಭದಲ್ಲಿ ಮಲ್ಲಿಗೆ ಮತ್ತು ಕನಕಾಂಬರದ ಗರಿಷ್ಠ ದರ ಪ್ರತಿ ಕೆ.ಜಿ.ಗೆ ₹2,000 ಇದೆ. ಸೇವಂತಿಗೆ, ಗುಲಾಬಿ, ಸುಗಂಧರಾಜ ದರಗಳು ಕೆ.ಜಿಗೆ ₹250ರ ಆಸುಪಾಸಿನಲ್ಲಿವೆ ಎಂದು ತಿಳಿಸಿದರು.

ಹಬ್ಬದಲ್ಲಿ ಲಕ್ಷ್ಮಿ ಪೂಜೆಯ ವೇಳೆ ಬಗೆಬಗೆಯ ಹಣ್ಣುಗಳನ್ನು ಜೋಡಿಸುವುದರಿಂದ ಹಣ್ಣುಗಳ ದರ ಸ್ವಲ್ಪ ಏರಿಕೆಯಾಗಿದೆ. ತರಕಾರಿಗಳಲ್ಲಿ ಕೆಲವುಗಳ ಬೆಲೆಯಲ್ಲಿ ಏರಿಳಿತವಾಗಿದೆ. ಉಳಿದ ತರಕಾರಿ ದರಗಳು ಸ್ಥಿರವಾಗಿವೆ. ಸೊಪ್ಪಿನ ಬೆಲೆಯೂ ಕಡಿಮೆಯಾಗಿದೆ.

‘ಬೆಂಗಳೂರು, ತುಮಕೂರು, ಕುಣಿಗಲ್, ಶಿವಮೊಗ್ಗ, ಮೈಸೂರು ಮುಂತಾದ ಕಡೆಗಳಿಂದ ನಗರದ ಮಾರುಕಟ್ಟೆಗಳಿಗೆ ಹೂವು ಪೂರೈಕೆಯಾಗುತ್ತದೆ. ಕಳೆದ ಕೆಲ ದಿನಗಳಿಂದ ನಿರಂತರ ಮಳೆಯಿಂದಾಗಿ ಹೂವುಗಳು ಕೊಳೆತು ಹೋಗುತ್ತಿವೆ. ಇದರಿಂದ ತಾಜಾ ಹೂವಿನ ಪೂರೈಕೆಗೂ ತೊಂದರೆಯಾಗಿದೆ. ಹಬ್ಬಗಳು ಆರಂಭವಾಗಿರುವುದರಿಂದ ಹೂವಿಗೆ ಬೇಡಿಕೆ ಹೆಚ್ಚು. ಈ ಕಾರಣಕ್ಕೆ ದರದಲ್ಲಿ ಭಾರಿ ಏರಿಕೆಯಾಗಿದೆ’ ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವ್ಯಾಪಾರಿಗಳು ತಿಳಿಸಿದರು.

ಹೂವುಗಳ ದರ ಪ್ರತಿ ಕೆಜಿಗೆ (₹ ಗಳಲ್ಲಿ)	ಕಳೆದ ವಾರ	ಈ ವಾರ
ಚಿಲ್ಲರೆ ಮಾರುಕಟ್ಟೆ ಪ್ರತಿ ಕೆ.ಜಿಗೆ		
ಮಲ್ಲಿಗೆ	800	2,000
ಗುಲಾಬಿ	200	300
ಸೇವಂತಿಗೆ	200	270
ಕನಕಾಂಬರ	1,300	2,200
ಸುಗಂಧರಾಜ	250	
ಹಣ್ಣುಗಳ ದರ ಪ್ರತಿ ಕೆ.ಜಿಗೆ		
ಸೇಬು	280	320
ದಾಳಿಂಬೆ	55	80
ಬಾಳೆಹಣ್ಣು	80	130
ಸೀತಾಫಲ	150	200
ತರಕಾರಿ ದರ ಪ್ರತಿ ಕೆ.ಜಿಗೆ		
ಬಟಾಣಿ	120	160
ಕ್ಯಾರೆಟ್	58	70
ಕ್ಯಾಪ್ಸಿಕಮ್	58	80
ಈರುಳ್ಳಿ	33	22
ಬೀನ್ಸ್	75	55

ಶ್ರವಣ ದೋಷ: ಸಿಇಟಿ ವಿದ್ಯಾರ್ಥಿಗೆ ಸಿಗದ ರ್‍ಯಾಂಕ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಎಸ್ಸೆಸ್ಸೆಲ್ಸಿ, ಪಿಯುನಲ್ಲಿ ಶ್ರವಣದೋಷವಿರುವ ಮಕ್ಕಳಿಗೆ ನೀಡುವ ಭಾಷಾ ಪರೀಕ್ಷೆಯ ವಿನಾಯಿತಿಯನ್ನು ಸಿಇಟಿಯಲ್ಲಿ ನೀಡದ ಕಾರಣ ಅಂತಹ ದೋಷವಿರುವ ಮಕ್ಕಳು ರ್‍ಯಾಂಕ್‌ನಿಂದ ವಂಚಿತರಾಗಿದ್ದಾರೆ.

ಮಂಡ್ಯ ಜಿಲ್ಲೆ ಬೇವಿನಹಳ್ಳಿಯ ಹೇಮಲತಾ–ಜವರಯ್ಯ ಅವರ ಪುತ್ರ ರಕ್ಷಿತ್ ಬಾಲ್ಯದಿಂದಲೂ ಶ್ರವಣ ದೋಷದ ಸಮಸ್ಯೆ ಎದುರಿಸುತ್ತಿದ್ದರು. ಮಂಡ್ಯದ ಅಭಿನವ ಭಾರತಿ ಪ್ರೌಢಶಾಲೆ ಮತ್ತು ಅದೇ ಸಂಸ್ಥೆಯ ಪಿಯು ಕಾಲೇಜಿನಲ್ಲಿ ಎಸ್ಸೆಸ್ಸೆಲ್ಸಿ, ವಿಜ್ಞಾನ ವಿಷಯದಲ್ಲಿ (ಪಿಸಿಎಂಬಿ) ಪಿಯು ಪೂರೈಸಿದ್ದಾರೆ. ಅಲ್ಲಿ ಕನ್ನಡ ಹೊರತುಪಡಿಸಿ, ಇತರೆ ದ್ವಿತೀಯ, ತೃತೀಯ ಭಾಷೆಗಳ ಪರೀಕ್ಷೆಯಿಂದ ವಿನಾಯಿತಿ ನೀಡಲಾಗಿತ್ತು. ಕನ್ನಡ ಮಾಧ್ಯಮದಲ್ಲೇ ಓದಿರುವ ಅವರು 2022ರ ಸಿಇಟಿ ಪರೀಕ್ಷೆಯಲ್ಲೂ ಇಂಗ್ಲಿಷ್ ಬಿಟ್ಟು ಕನ್ನಡ ಭಾಷಾ ಪರೀಕ್ಷೆ ಮಾತ್ರ ಬರೆದಿದ್ದರು. ಆದರೆ, ಸಿಇಟಿ ಅವರ ಫಲಿತಾಂಶವನ್ನು ಮಾನ್ಯ ಮಾಡಿಲ್ಲ.

‘ಪಿಯು ಹಾಗೂ ಸಿಇಟಿ ಕೀ ಉತ್ತರಗಳಲ್ಲಿ ಉತ್ತಮ ಅಂಕಗಳು ಬಂದಿದ್ದರೂ, ಈಚೆಗೆ ಪ್ರಕಟವಾದ ಸಿಇಟಿ ರ್‍ಯಾಂಕಿಂಗ್ ಪಟ್ಟಿಯಲ್ಲಿ ರಕ್ಷಿತ್ ಹೆಸರು ಇರಲಿಲ್ಲ. ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಅಧಿಕಾರಿಗಳ ಗಮನಕ್ಕೆ ತಂದೆವು. ಸಿಇಟಿಯಲ್ಲಿ ಇಂಗ್ಲಿಷ್ ಭಾಷಾ ಪರೀಕ್ಷೆ ಬರೆಯುವುದು ಕಡ್ಡಾಯ. ಹಾಗಾಗಿ, ರ್‍ಯಾಂಕ್ ನೀಡಿಲ್ಲ ಎಂದು ಸಮಜಾಯಿಷಿ ನೀಡಿದ್ದಾರೆ. ಕಷ್ಟಪಟ್ಟು ಓದಿದ್ದಾನೆ. ಈ ಬೆಳವಣಿಗೆಗಳಿಂದ ನೊಂದಿದ್ದಾನೆ’ ಎಂದು ರಕ್ಷಿತ್ ಪೋಷಕರು ಅಳಲು ತೋಡಿಕೊಂಡರು.

ಸಿಇಟಿಗೆ ವಿನಾಯಿತಿ ಅನ್ವಯಿಸದು: ಕೆಇಎ

ವೃತ್ತಿಪರ ಶಿಕ್ಷಣ ಕೋರ್ಸ್‌ಗಳ ಪ್ರವೇಶಕ್ಕೆ ನಡೆಯುವ ಸಾಮಾನ್ಯ ಪ್ರವೇಶ ಪರೀಕ್ಷೆಯು ಅಖಿಲ ಭಾರತ ತಾಂತ್ರಿಕ ಶಿಕ್ಷಣ ಸಮಿತಿಯ (ಎಐಸಿಟಿಇ) ನಿಯಮಗಳಿಗೆ ಒಳಪಟ್ಟಿರುತ್ತದೆ. ಹಾಗಾಗಿ, ಪರೀಕ್ಷೆ ತೆಗೆದುಕೊಳ್ಳುವ ವಿದ್ಯಾರ್ಥಿಗಳು ಇಂಗ್ಲಿಷ್ ಭಾಷಾ ವಿಷಯದ ಪರೀಕ್ಷೆ ಬರೆಯುವುದು ಕಡ್ಡಾಯ ಎಂದು ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ಕಾರ್ಯನಿರ್ವಾಹಕ ನಿರ್ದೇಶಕಿ ಎಸ್.ರಮ್ಯಾ ಮಾಹಿತಿ ನೀಡಿದರು.

ಸಿಇಟಿಗೆ ಸ್ಥಳೀಯ ನಿಯಮಗಳು ಅನ್ವಯಿಸುವುದಿಲ್ಲ. ಹಾಗಾಗಿ, ಎಸ್ಸೆಸ್ಸೆಲ್ಸಿ, ಪಿಯುನಲ್ಲಿ ದೊರೆತ ಭಾಷಾ ವಿಷಯಗಳ ಪರೀಕ್ಷೆಯ ವಿನಾಯಿತಿ ರಕ್ಷಿತ್‌ಗೆ ನೀಡಲು ಬರುವುದಿಲ್ಲ. ಮಾನವೀಯತೆ ದೃಷ್ಟಿಯಿಂದ ರ್‍ಯಾಂಕ್ ಪಟ್ಟಿಗೆ ಪರಿಗಣಿಸಲು ಅನುಮತಿ ಕೋರಿ ಎಐಸಿಟಿಇಗೆ ಪತ್ರ ಬರೆಯಲಾಗುವುದು. ಅಧಿಕಾರಿಗಳ ಜತೆ ಚರ್ಚಿಸಲಾಗುವುದು. ಅನುಮತಿ ಸಿಕ್ಕರೆ ಪಟ್ಟಿ ಪ್ರಕಟಿಸಲು ತಕ್ಷಣ ಕ್ರಮ ಕೈಗೊಳ್ಳಲಾಗುವುದು ಎಂದು ಅವರು ‘ಪ್ರಜಾವಾಣಿ’ಗೆ ಪ್ರತಿಕ್ರಿಯೆ ನೀಡಿದರು.

ಮೌಲ್ಯಮಾಪನ; 219 ವಿದ್ಯಾರ್ಥಿಗಳು ತೇರ್ಗಡೆ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅನುತ್ತೀರ್ಣರಾದ ನಂತರ ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದ 219 ವಿದ್ಯಾರ್ಥಿಗಳು ತೇರ್ಗಡೆಯಾಗಿದ್ದಾರೆ.

13,848 ವಿದ್ಯಾರ್ಥಿಗಳು ಮರು ಮೌಲ್ಯಮಾಪನಕ್ಕೆ ಅರ್ಜಿ ಸಲ್ಲಿಸಿದ್ದರು. ಅವರಲ್ಲಿ 532 ವಿದ್ಯಾರ್ಥಿಗಳು 10ಕ್ಕಿಂತ ಹೆಚ್ಚು ಅಂಕಗಳನ್ನು ಗಳಿಸಿದ್ದಾರೆ. ವಾರ್ಷಿಕ ಪರೀಕ್ಷೆಯಲ್ಲಿ 40 ಅಂಕಗಳನ್ನು ಗಳಿಸಿದ್ದ ವಿದ್ಯಾರ್ಥಿಯೊಬ್ಬರು ಮರು ಮೌಲ್ಯಮಾಪನದ ನಂತರ 99 ಅಂಕಗಳನ್ನು ಪಡೆದಿದ್ದಾರೆ. 59 ಅಂಕಗಳು ಆ ವಿದ್ಯಾರ್ಥಿಗೆ ಹೆಚ್ಚುವರಿ ಬಂದಿವೆ. 2020ರಲ್ಲಿ ಅಂಕಗಳ ವ್ಯತ್ಯಾಸ ಗರಿಷ್ಠ 35, 2021ರಲ್ಲಿ ಗರಿಷ್ಠ ಅಂಕ 21 ಆಗಿತ್ತು.

479 ವಿದ್ಯಾರ್ಥಿಗಳು ತಾವು ಗಳಿಸಿದ್ದಕ್ಕಿಂತ ಕಡಿಮೆ ಅಂಕ ಪಡೆದಿದ್ದಾರೆ. ಅಂತಹ ವಿದ್ಯಾರ್ಥಿಗಳು ಕಳೆದುಕೊಂಡ ಗರಿಷ್ಠ ಅಂಕ 20.

ಮರುಎಣಿಕೆಗೆ ಅರ್ಜಿ ಸಲ್ಲಿಸಿದ್ದ 1,249 ವಿದ್ಯಾರ್ಥಿಗಳಲ್ಲಿ ಹಲವು ವಿದ್ಯಾರ್ಥಿಗಳ ಅಂಕಗಳು ಹೆಚ್ಚಳವಾಗಿವೆ. ಅನುತ್ತೀರ್ಣನಾಗಿದ್ದ ಒಬ್ಬ ವಿದ್ಯಾರ್ಥಿ 66 ಹೆಚ್ಚುವರಿ ಅಂಕಗಳನ್ನು ಪಡೆದಿರುವುದು ಎಣಿಕೆಯ ಕಾರ್ಯದಲ್ಲೂ ಮೌಲ್ಯಮಾಪಕರು ಗಂಭೀರ ಲೋಪ ಎಸಗಿರುವುದು ಬೆಳಕಿಗೆ ಬಂದಿದೆ.

ಉತ್ತೀರ್ಣನಾಗಿದ್ದ ಒಬ್ಬ ವಿದ್ಯಾರ್ಥಿ ಮಾತ್ರ ನಾಲ್ಕು ಅಂಕಗಳನ್ನು ಕಳೆದುಕೊಂಡು ಅನುತ್ತೀರ್ಣ ಆಗಿದ್ದಾನೆ.

ಕೆ.ಆರ್.ಮಾರುಕಟ್ಟೆಗೆ ಮುಖ್ಯ ಆಯುಕ್ತ ಹಠಾತ್ ಭೇಟಿ

ಬೆಂಗಳೂರು: ಕೆ.ಆರ್.ಮಾರುಕಟ್ಟೆಗೆ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಹಠಾತ್ ಭೇಟಿ ನೀಡಿ, ತ್ಯಾಜ್ಯವನ್ನು ಒಂದೆಡೆ ಹಾಕಬೇಕು ಎಂದು ವ್ಯಾಪಾರಸ್ಥರಿಗೆ ಸೂಚನೆ ನೀಡಿದರು.

ಸಾರ್ವಜನಿಕರು ಸಂಚರಿಸಲು ಹಾಗೂ ವ್ಯಾಪಾರಸ್ಥರು ಸುಸೂತ್ರವಾಗಿ ವ್ಯಾಪಾರ ನಡೆಸಲು ಅನುಕೂಲವಾಗುವಂತೆ ಆಗಿಂದಾಗ್ಗೆ ಉತ್ಪತ್ತಿ ಆಗುವ ಕಸವನ್ನು ವಿಲೇ ಮಾಡಲು ಅಧಿಕಾರಿಗಳಿಗೆ ಸೂಚಿಸಿದರು.

ಮಹಾಲಕ್ಷ್ಮೀ ಹಬ್ಬದ ಹಿನ್ನೆಲೆಯಲ್ಲಿ ಗುರುವಾರ ಸಾಕಷ್ಟು ಮಂದಿ ಕೆ.ಆರ್. ಮಾರುಕಟ್ಟೆಗೆ ಭೇಟಿ ನೀಡಿದ್ದರು. ಮಾರುಕಟ್ಟೆಗೂ ಹೂ, ಬಾಳೆ ದಿಂಡು ಸಾಕಷ್ಟು ಪ್ರಮಾಣದಲ್ಲಿ ಬಂದಿದ್ದು, ಅದರಿಂದ ಉತ್ಪತ್ತಿ ಆಗುವ ತ್ಯಾಜ್ಯವನ್ನು ಎಲ್ಲೆಂದರಲ್ಲಿ ಬಿಸಾಡದೆ ಒಂದೇ ಸ್ಥಳದಲ್ಲಿ ಹಾಕಬೇಕು ಎಂದು ಹೇಳಿದರು.

‘ಘನತ್ಯಾಜ್ಯ ವಿಭಾಗದ ಕಾಂಪ್ಯಾಕ್ಟರ್ ಮೂಲಕ ಪಾಲಿಕೆ ಘನತ್ಯಾಜ್ಯ ಸಂಸ್ಕರಣಾ ಘಟಕಗಳಿಗೆ ತ್ಯಾಜ್ಯವನ್ನು ಕೊಂಡೊಯ್ಯಲಾಗುತ್ತದೆ. ಆದ್ದರಿಂದ ಮಾರಾಟಗಾರರು ಹಸಿ ಹಾಗೂ ಒಣ ತ್ಯಾಜ್ಯವನ್ನು ಬೇರ್ಪಡಿಸಿ ಕೊಡಬೇಕು’ ಎಂದು ಮಾರಾಟಗಾರರಿಗೆ ತುಷಾರ್ ಗಿರಿನಾಥ್ ಸೂಚನೆ ನೀಡಿದರು.

ಎನ್‌ಎಸ್‌ಡಿ ರಂಗೋತ್ಸವಕ್ಕೆ ಚಾಲನೆ ಇಂದು

ಬೆಂಗಳೂರು: ಸ್ವಾತಂತ್ರ್ಯೋತ್ಸವದ ಅಮೃತ ಮಹೋತ್ಸವದ ಪ್ರಯುಕ್ತರಾಷ್ಟ್ರೀಯ ನಾಟಕ ಶಾಲೆ (ಎನ್‌ಎಸ್‌ಡಿ) ಬೆಂಗಳೂರು ಕೇಂದ್ರವು ‘ಭಾರತ ರಂಗ ಮಹೋತ್ಸವ’ ಹಮ್ಮಿಕೊಂಡಿದೆ. ನಾಲ್ಕು ದಿನಗಳ ರಂಗೋತ್ಸವಕ್ಕೆ ಶುಕ್ರವಾರ ಚಾಲನೆ ದೊರೆಯಲಿದೆ.

ಇಲ್ಲಿನ ದೇವರಾಜ ಅರಸು ಭವನದಲ್ಲಿ ಪ್ರತಿದಿನ ಸಂಜೆ 7 ಗಂಟೆಗೆ ನಾಟಕಗಳು ಪ್ರದರ್ಶನ ಕಾಣಲಿವೆ. ಕಿರುತೆರೆ ನಟ ಅನಿರುದ್ಧ ಅವರು ರಂಗೋತ್ಸವ ಉದ್ಘಾಟಿಸಲಿದ್ದಾರೆ. ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆ ಆಯುಕ್ತ ಕೆ.ಎ. ದಯಾನಂದ ಮುಖ್ಯ ಅತಿಥಿಯಾಗಿ ಭಾಗವಹಿಸಲಿದ್ದಾರೆ. ರಾಷ್ಟ್ರೀಯ ನಾಟಕ ಶಾಲೆ ಕೇಂದ್ರ ಕಚೇರಿ ನಿರ್ದೇಶಕ ರಮೇಶ್ ಚಂದ್ರ ಗೌರ್ ಅಧ್ಯಕ್ಷತೆ ವಹಿಸಲಿದ್ದಾರೆ. ದೇಶದ ವಿವಿಧ ಭಾಗಗಳ ಕಲಾ ತಂಡಗಳು ನಾಟಕಗಳನ್ನು ಪ್ರದರ್ಶಿಸಲಿವೆ ಎಂದು ಕೇಂದ್ರದ ನಿರ್ದೇಶಕಿ ವೀಣಾ ಶರ್ಮಾ ಭೂಸನೂರಮಠ ತಿಳಿಸಿದ್ದಾರೆ.

‘ನವದೆಹಲಿಯ ರಾಷ್ಟ್ರೀಯ ನಾಟಕ ಶಾಲೆಯು ಸ್ವಾತಂತ್ರ್ಯದ ಅಮೃತ ಮಹೋತ್ಸವದ ಪ್ರಯುಕ್ತ ದೇಶದ ವಿವಿಧೆಡೆ 30 ನಾಟಕಗಳನ್ನು ಪ್ರದರ್ಶಿಸುತ್ತಿದೆ. ಈ ಮೂಲಕ ಸ್ವಾತಂತ್ರ್ಯ ಹೋರಾಟಗಾರರಿಗೆ ಗೌರವ ಸಲ್ಲಿಸಲಾಗುತ್ತಿದೆ. ನಾಟಕಗಳ ಪ್ರದರ್ಶನಕ್ಕೆ ನವದೆಹಲಿ, ಭುವನೇಶ್ವರ, ವಾರಾಣಸಿ, ಅಮೃತಸರ, ಬೆಂಗಳೂರು ಮತ್ತು ಮುಂಬೈ ಆಯ್ಕೆ ಮಾಡಲಾಗಿದೆ. ಇದರ ಭಾಗವಾಗಿ ನಗರದಲ್ಲಿ ರಂಗೋತ್ಸವ ಆಯೋಜಿಸಲಾಗಿದ್ದು, ಇದೇ 8ರವರೆಗೆ ನಾಟಕಗಳು ಪ್ರದರ್ಶನ ಕಾಣಲಿವೆ’ ಎಂದಿದ್ದಾರೆ.

ನಾಟಕಗಳು: ಆ.5ರಂದು ವೀರೇಂದ್ರ ಗನ್ವಿರ್ ನಿರ್ದೇಶನದ ‘ಹಿಟ್ಲರ್ ಕಿ ಆಧಿ ಮೌತ್’, 6ರಂದು ಯೋಗೇಂದ್ರ ಚೌಬೆ ನಿರ್ದೇಶನದ ‘ಪಹಾಟಿಯಾ’, 7ರಂದು ಸಂಜಯ್ ಗರ್ಗ್ ನಿರ್ದೇಶನದ ‘ವೀರ್ ವಿಪ್ಲವಿ’ ಹಾಗೂ 8ರಂದು ಪ್ರೇಮ್ ಗುಪ್ತಾ ನಿರ್ದೇಶನದ ‘ಅವಂತಿ ಬಾಯಿ’ ನಾಟಕ ಪ್ರದರ್ಶನ ಕಾಣಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಕೆರೆ ಹೋರಾಟ: ಎಫ್‌ಐಆರ್‌ಗೆ ತಡೆ

ಬೆಂಗಳೂರು: ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ(ಬಿಬಿಎಂಪಿ) ವಿರುದ್ಧ ಸಾಮಾಜಿಕ ಜಾಲತಾಣಗಳಲ್ಲಿ ಆಕ್ಷೇಪಾರ್ಹ ಪೋಸ್ಟ್ ಮಾಡಿದ್ದ ಆರೋಪದಡಿ ಸಾಮಾಜಿಕ ಕಾರ್ಯಕರ್ತ ಅನಿರುದ್ಧನ್ ಸಂದೀಪ್ ವಿರುದ್ಧದ ಎಫ್‌ಐಆರ್ ಮತ್ತು ವಿಚಾರಣೆಗೆ ಹೈಕೋರ್ಟ್ ಮಧ್ಯಂತರ ತಡೆ ನೀಡಿದೆ.

ಈ ಕುರಿತಂತೆ ಅನಿರುದ್ಧನ್ ಸಂದೀಪ್ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

‘ಪಟ್ಟಂದೂರು ಅಗ್ರಹಾರ ಕೆರೆಯ ಬಫರ್ ವಲಯದಲ್ಲಿ ಬಿಬಿಎಂಪಿ ಅಕ್ರಮವಾಗಿ ರಸ್ತೆ ನಿರ್ಮಿಸುತ್ತಿದೆ’ ಎಂದು ಸಂದೀಪ್ ಸಾಮಾಜಿಕ ಜಾಲತಾಣದಲ್ಲಿ ಪೋಸ್ಟ್ ಮಾಡಿದ್ದರು.

ಇದನ್ನು ನಿರಾಕರಿಸಿದ್ದ ಬಿಬಿಎಂಪಿ, ಅನಿರುದ್ಧನ್ ವಿರುದ್ಧ ದೂರು ದಾಖಲಿಸಿತ್ತು. ‘ಸಾರ್ವಜನಿಕ ಕಾರ್ಯಗಳನ್ನು ನಿರ್ವಹಿಸುವಲ್ಲಿ ಸಾರ್ವಜನಿಕ ಸೇವಕರಿಗೆ ಅಡ್ಡಿಪಡಿಸುತ್ತಿದ್ದಾರೆ ಮತ್ತು ಸಾಮಾಜಿಕ ಜಾಲತಾಣಗಳ ಮೂಲಕ ಸಾರ್ವಜನಿಕರಿಗೆ ತಪ್ಪು ಸಂದೇಶ ನೀಡಿ ಗಲಭೆ ಉಂಟು ಮಾಡುವ ಉದ್ದೇಶದಿಂದ ಪ್ರಚೋದನೆ ನೀಡುತ್ತಿದ್ದಾರೆ’ ಎಂಬ ಆರೋಪದಡಿ ವೈಟ್‌ಫೀಲ್ಡ್ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿತ್ತು.

ನಗರದ ಜೀವಸಂಕುಲಕ್ಕೆ ಮಾಲಿನ್ಯದ ಮುಸುಕು

ಪಟಾಕಿ ಪರಿಸರಕ್ಕೆ ಮಾರಕ: ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪಟಾಕಿಗಳನ್ನು ಬೆಂಗಳೂರು ನಗರ ಪ್ರದೇಶದ ಹೊರವಲಯದಲ್ಲಿ ಮಾರಾಟ ಮಾಡುವ ನಿಟ್ಟಿನಲ್ಲಿ ಹೊರಡಿಸಿದ್ದ ಪೊಲೀಸ್ ಇಲಾಖೆಯ ಆದೇಶವನ್ನು ಎತ್ತಿಹಿಡಿದಿರುವ ಹೈಕೋರ್ಟ್, ‘ನಗರ ಪ್ರದೇಶಗಳ ಒಳಗೆ ಪಟಾಕಿ ಮಾರಾಟ ನಡೆಸುವುದು ಜೀವಸಂಕುಲಕ್ಕೆ ಅತ್ಯಂತ ಅಪಾಯಕಾರಿಯಾದುದು’ ಎಂದು ಅಭಿಪ್ರಾಯಪಟ್ಟಿದೆ.

ಬೆಂಗಳೂರು ಮಹಾನಗರದ ಮಾರುಕಟ್ಟೆ ಮತ್ತು ಜನನಿಬಿಡ ಪ್ರದೇಶಗಳಲ್ಲಿ ಪಟಾಕಿ ಮಾರಾಟ ಮಾಡುವುದಕ್ಕೆ ನೀಡಲಾಗಿದ್ದ ನಿರಾಕ್ಷೇಪಣ ಪತ್ರವನ್ನು ಹಿಂಪಡೆದ ಪೊಲೀಸ್ ಇಲಾಖೆಯ ಆದೇಶ ಪ್ರಶ್ನಿಸಿ ಮೆಸರ್ಸ್ ಮಧಿ ಟ್ರೇಡಿಂಗ್ ಕಂಪನಿ ಸೇರಿದಂತೆ ಒಟ್ಟು 10 ವ್ಯಾಪಾರಸ್ಥರು ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಅವರಿದ್ದ ಏಕಸದಸ್ಯ ನ್ಯಾಯಪೀಠ ವಜಾಗೊಳಿಸಿದೆ.

‘ಪಟಾಕಿ ಮಾರಾಟ ಮಾಡುವುದು ಸಂವಿಧಾನದ 19ನೇ ವಿಧಿಯ ಅಡಿಯಲ್ಲಿ ಮೂಲಭೂತ ಹಕ್ಕು ಎನಿಸುವುದಿಲ್ಲ. ಯಾಕೆಂದರೆ ಈ ವಿಧಿಯಡಿ, ವಿಷ, ಲಿಕ್ಕರ್, ತಂಬಾಕು, ಸ್ಫೋಟಕ ವಸ್ತುಗಳ ಮಾರಾಟ ಹೇಗೆ ಮೂಲಭೂತ ಹಕ್ಕು ಎನ್ನಿಸಿಕೊಳ್ಳುವುದಿಲ್ಲವೋ ಅದೇ ರೀತಿ ಪಟಾಕಿ ಮಾರಾಟವೂ ಕೂಡಾ ಮೂಲಭೂತ ಹಕ್ಕಿನ ವ್ಯಾಪ್ತಿಗೆ ಒಳಪಡುವುದಿಲ್ಲ’ ಎಂದು ಸುಪ್ರೀಂ ಕೋರ್ಟ್‌ನ ಹಲವು ಮಹತ್ವದ ತೀರ್ಪುಗಳನ್ನು ಉಲ್ಲೇಖಿಸಿದೆ.

‘ಕೋರ್ಟ್, ಸರ್ಕಾರ ರೂಪಿಸುವ ಶಾಸನಗಳ ಪ್ರಕ್ರಿಯೆಯನ್ನು ಪರಾಂಬರಿಸಿ ತೀರ್ಪು ನೀಡಬಹುದೇ ಹೊರತು ಇಂತಹುದನ್ನು ಮಾಡಬೇಕು ಅಥವಾ ಮಾಡಬಾರದು ಎಂದು ಹೇಳುತ್ತಾ ಸರ್ಕಾರವನ್ನು ನಡೆಸಲು ಆಗುವುದಿಲ್ಲ. ಹಾಗಾಗಿ, ಇಂತಹ ಪ್ರಕರಣಗಳಲ್ಲಿ ಕೋರ್ಟ್, ಮೂಗು ತೂರಿಸಲು ಸಾಧ್ಯವಿಲ್ಲ. ಆದಾಗ್ಯೂ, ಪಟಾಕಿ ವ್ಯಾಪಾರಸ್ಥರಿಗೆ ನಗರ ಪ್ರದೇಶದಲ್ಲಿ ವ್ಯಾಪಾರ ನಡೆಸಲು ನೀಡಿದ್ದ ನಿರಾಕ್ಷೇಪಣ ಪತ್ರ ಹಿಂಪಡೆದಿರುವ ಪೊಲೀಸ್ ಇಲಾಖೆಯ ಕ್ರಮ ಸಮಂಜಸವಾಗಿಯೇ ಇದೆ’ ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

‘ಬೆಂಗಳೂರಿನಂತಹ ಜನನಿಬಿಡ ಪ್ರದೇಶಗಳು ಈಗಾಗಲೇ ಶಬ್ದ ಹಾಗೂ ವಾಯು ಮಾಲಿನ್ಯದಿಂದ ತತ್ತರಿಸುತ್ತಿವೆ. ಇಂತಹುದರಲ್ಲಿ ಪಟಾಕಿ ಸುಡುವುದಕ್ಕೆ ಅವಕಾಶ ಮಾಡಿಕೊಟ್ಟರೆ ಈಗಿರುವ ಸಂಕಟ ಮತ್ತಷ್ಟು ಹೆಚ್ಚುತ್ತದೆ’ ಎಂದು ನ್ಯಾಯಪೀಠ ಕಳವಳ ವ್ಯಕ್ತಪಡಿಸಿದೆ.

‘ಪಟಾಕಿಗಳು ವ್ಯಾಪಾರ ವಹಿವಾಟು ನಡೆಸಲು ಅತೀತವಾದ ಸರಕುಗಳ (ರೆಸ್ ಎಕ್ಸ್ಟ್ರಾ ಕಮರ್ಶಿಯಮ್) ವ್ಯಾಪ್ತಿಗೆ ಒಳಪಡುತ್ತವೆ. ಅಂತೆಯೇ, ಹಸಿರು ಪಟಾಕಿಗಳೂ ಸ್ಫೋಟಕವೇ ಆದ್ದರಿಂದ ಅವೂ ಪರಿಸರಕ್ಕೆ ಮಾರಕ. ಹಾಗಾಗಿ, ಪಟಾಕಿಗಳ ಉತ್ಪಾದನೆ, ಸಾಗಾಟ ಮೂಲಭೂತ ಹಕ್ಕಿನ ಮಿತಿಯಲ್ಲಿ ಪ್ರಶ್ನಾರ್ಹ ಎನಿಸುವುದಿಲ್ಲ ಹಾಗೂ ಪಟಾಕಿಗಳನ್ನು ಸುಡುವುದರಿಂದ ಪ್ರಕೃತಿ ಮಾತೆಗೆ ಅಪಾಯವಿದೆ ಎಂದು ಹೇಳುವುದಕ್ಕೆ ಯಾವುದೇ ಹೆಚ್ಚಿನ ಸಂಶೋಧನೆ ಬೇಕಿಲ್ಲ’ ಎಂದು ನ್ಯಾಯಪೀಠ ವಿವರಿಸಿದೆ.

ಮುಖ್ಯಾಂಶಗಳು

- ಪಟಾಕಿ ಮಾರಾಟ ಮೂಲಭೂತ ಹಕ್ಕಲ್ಲ
- 20 ವರ್ಷದ ಒಳಗಿನವರೇ ಅಪಾಯಕ್ಕೇ ತುತ್ತು
- ಹಸಿರು ಪಟಾಕಿಗಳೂ ಮಾರಕ



ಪಟಾಕಿಗಳಿಂದ ಮಕ್ಕಳು ಹಾಗೂ ಯುವಕರು ತಮ್ಮ ಕಣ್ಣು ಕಳೆದುಕೊಂಡು ಅಂಧರಾಗಿದ್ದು, ಅವರ ಜೀವಿಸುವ ಹಕ್ಕಿನ ಉಲ್ಲಂಘನೆಯಾಗುತ್ತಿದೆ.

ಕೃಷ್ಣ ಎಸ್.ದೀಕ್ಷಿತ್, ನ್ಯಾಯಮೂರ್ತಿ

ತೀರ್ಪಿನಲ್ಲಿ ಫೋಟೊ: ದೇಶದಲ್ಲೇ ಮೊದಲು

ಪಟಾಕಿ ಸಿಡಿತದಿಂದ ಕಣ್ಣಿಗೆ ಹಾನಿಯಾದವರ ಎರಡು ಕ್ಲಿನಿಕಲ್ ಛಾಯಾಚಿತ್ರಗಳನ್ನು ತೀರ್ಪಿನ ಒಂಬತ್ತನೇ ಪುಟದಲ್ಲಿ ಮುದ್ರಿಸಲು ಅವಕಾಶ ಕಲ್ಪಿಸಲಾಗಿದೆ. ಈ ಮೂಲಕ ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್ ಹೈಕೋರ್ಟ್ ತೀರ್ಪುಗಳ ಸಂಪ್ರದಾಯವನ್ನು ಮುರಿದಿದ್ದು, ದೇಶದ ಹೈಕೋರ್ಟ್ ತೀರ್ಪುಗಳಲ್ಲಿ ಇದೇ ಮೊದಲ ಬಾರಿಗೆ ಇಂತಹ ಪ್ರಯತ್ನ ನಡೆಸಿದ ಮೊದಲ ನ್ಯಾಯಮೂರ್ತಿ ಎನಿಸಿದ್ದಾರೆ.

ಪುನಶ್ಚೇತನ ಕೇಂದ್ರ ಕಟ್ಟಡ: 7 ರಂದು ಭೂಮಿಪೂಜೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆನೇಕಲ್ ತಾಲ್ಲೂಕಿನ ಚಂದಾಪುರದ ಮರಸೂರು ಗೇಟ್ ಬಳಿಯ ಪಂಚವಟಿಯಲ್ಲಿ ಇದೇ 7ರಂದು ಬೆಳಿಗ್ಗೆ 10ಗಂಟೆಗೆ ವಿಶೇಷ ಮಕ್ಕಳ ಪುನಶ್ಚೇತನ ಕೇಂದ್ರದ ಕಟ್ಟಡ ನಿರ್ಮಾಣಕ್ಕೆ ಭೂಮಿಪೂಜೆ ಮತ್ತು ಟೇಲರಿಂಗ್ ತರಬೇತಿ ಪಡೆದ ಮಹಿಳೆಯರಿಗೆ ಪ್ರಮಾಣ ಪತ್ರ ವಿತರಣಾ ಸಮಾರಂಭ ನಡೆಯಲಿದೆ.

ಹಿಂದೂ ಸೇವಾ ಪ್ರತಿಷ್ಠಾನ ಹಾಗೂ ಮನೋನಂದ ವಿಶೇಷ ಮಕ್ಕಳ ಪುನಶ್ಚೇತನ ಕೇಂದ್ರದಿಂದ ಈ ಸಮಾರಂಭ ಆಯೋಜಿಸಲಾಗಿದೆ. ವಿಧಾನ ಪರಿಷತ್ ಸದಸ್ಯರಾದ ಎಚ್.ಎಸ್. ಗೋಪಿನಾಥ್ ರೆಡ್ಡಿ, ಪಿ.ಎಂ. ಮುನಿರಾಜುಗೌಡ, ಎಸ್‌ಈಜಿ ಆಟೊಮೋಟಿವ್ ಕಂಪನಿ ಅಧ್ಯಕ್ಷ ಎಂ.ಆರ್. ಅನಿಲ್‌ಕುಮಾರ್, ಮರಸೂರು ಗ್ರಾಮ ಪಂಚಾಯಿತಿ ಅಧ್ಯಕ್ಷೆ ಸರಿತಾ ವೆಂಕಟಸ್ವಾಮಿ, ಉಪಾಧ್ಯಕ್ಷ ವೆಂಕಟಸ್ವಾಮಿ ರೆಡ್ಡಿ, ಬೆಂಗಳೂರಿನ ಹಿಂದೂ ಸೇವಾ ಪ್ರತಿಷ್ಠಾನದ ನಿರ್ದೇಶಕ ಸುರೇಶ್ ಅತಿಥಿಗಳಾಗಿ ಭಾಗವಹಿಸಲಿದ್ದಾರೆ. ಮನೋನಂದನ ಸಂಸ್ಥೆಯ ಮಿಲಿಂದ್ ಎಸ್. ಗೋಖಲೆ ಅಧ್ಯಕ್ಷತೆವಹಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಸಂಕ್ಷಿಪ್ತ ಸುದ್ದಿ

ಮಾಲ್, ಅಪಾರ್ಟ್‌ಮೆಂಟ್‌ಗಳಲ್ಲೇ ತ್ಯಾಜ್ಯ ಸಂಸ್ಕರಣೆ

ಬೆಂಗಳೂರು: ಬೃಹತ್ ಪ್ರಮಾಣದಲ್ಲಿ ತ್ಯಾಜ್ಯ ಉತ್ಪಾದನೆಯಾಗುವ ಸ್ಥಳದಲ್ಲೇ ಅದನ್ನು ಸಂಸ್ಕರಿಸಬೇಕು ಎಂದು ಬಿಬಿಎಂಪಿ ಸೂಚಿಸಿದೆ.

ಬಿಬಿಎಂಪಿ ಘನತ್ಯಾಜ್ಯ ನಿರ್ವಹಣಾ ನಿಯಮ ಮತ್ತು ಘನತ್ಯಾಜ ನಿರ್ವಹಣೆ ಉಪನಿಯಮಗಳಂತೆ, 100ಕ್ಕಿಂತ ಅಧಿಕ ಘಟಕಗಳನ್ನು ಹೊಂದಿದ ಅಪಾರ್ಟ್‌ಮೆಂಟ್‌ಗಳು, 100 ಕೆ.ಜಿಗೂ ಅಧಿಕ ತ್ಯಾಜ್ಯ ಉತ್ಪಾದಕರು ಅಥವಾ 5,000 ಚ.ಮೀ ವಿಸ್ತೀರ್ಣವುಳ್ಳ ಮಾಲ್‌ಗಳು, ಪಂಚತಾರಾ ಹೋಟೆಲ್, ಐಟಿ ಟೆಕ್ ಪಾರ್ಕ್ಸ್, ಬಹುರಾಷ್ಟ್ರೀಯ ಕಂಪನಿಗಳು, ಗೇಟೆಡ್ ಕಮ್ಯುನಿಟೀಸ್, ಕಲ್ಯಾಣ ಮಂಟಪಗಳು, ಸರ್ಕಾರಿ ಕಚೇರಿಗಳಲ್ಲಿ ಉತ್ಪತ್ತಿಯಾಗುವ ತ್ಯಾಜ್ಯವನ್ನು ಆಯಾ ಸ್ಥಳಗಳ ಆವರಣದಲ್ಲಿಯೇ ಸಂಸ್ಕರಿಸಬೇಕು ಎಂದು ಘನತ್ಯಾಜ್ಯ ವಿಭಾಗದ ವಿಶೇಷ ಆಯುಕ್ತ ಡಾ. ಹರೀಶ್ ಕುಮಾರ್ ಅವರು ಅಧಿಸೂಚನೆ ಹೊರಡಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಪಾಲಿಕೆಯ ವ್ಯಾಪ್ತಿಯಲ್ಲಿನ ಎಲ್ಲ ಬೃಹತ್ ತ್ಯಾಜ್ಯ ಉತ್ಪಾದಕರು ಕೆಲವು ಅಂಶಗಳನ್ನು ಪಾಲಿಸುವಂತೆ ಸೂಚಿಸಲಾಗಿದೆ.

ಉತ್ಪತ್ತಿಯಾಗುವ ತ್ಯಾಜ್ಯವನ್ನು ಮೂಲದಲ್ಲಿಯೇ ಒಣತ್ಯಾಜ್ಯ, ಹಸಿತ್ಯಾಜ್ಯ ಹಾಗೂ ನೈರ್ಮಲ್ಯ/ ಗೃಹ ಹಾನಿಕಾರಕ ತ್ಯಾಜ್ಯವೆಂದು ಪ್ರತ್ಯೇಕವಾಗಿ ಬೇರ್ಪಡಿಸಿ ಸಂಗ್ರಹಿಸಬೇಕು.

ಹಸಿ ತ್ಯಾಜ್ಯವನ್ನು ತಮ್ಮ ಆವರಣದೊಳಗೆ ಲಭ್ಯವಿರುವ ಸ್ಥಳಾವಕಾಶಕ್ಕೆ ಅನುಗುಣವಾಗಿ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿ ಅಥವಾ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿ ಅಥವಾ ಪಾಲಿಕೆಯಿಂದ ನೋಂದಾಯಿಸಲಾದ ಅಧಿಕೃತ ಸೇವಾದಾರರಿಂದ ಬಯೋಮಿಥೇನೇಶನ್ ಮೂಲಕ ಅಥವಾ ಕಾಂಪೋಸ್ಟಿಂಗ್ [ಗೊಬ್ಬರ ತಯಾರಿಕೆ] ಮೂಲಕ ಸಂಸ್ಕರಣೆ ಮಾಡಬೇಕು. ನೈರ್ಮಲ್ಯ ತ್ಯಾಜ್ಯವನ್ನು ಒಂದೆಡೆ ಸಂಗ್ರಹಿಸಿ, ಪಿಸಿಬಿಯಿಂದ ನೋಂದಾಯಿತ ಬಯೋಮೆಡಿಕಲ್ ವೇಸ್ಟ್ ಮ್ಯಾನೇಜ್‌ಮೆಂಟ್ ಅವರಿಗೆ ನಿಗದಿಪಡಿಸಿದ ದರಗಳನ್ವಯ ವಿಲೇವಾರಿಗೊಳಿಸಬೇಕು.

ರೂಪಾ ಮೌದ್ಗಿಲ್, ಸಂಧ್ಯಾ ಶರ್ಮಾಗೆ ‘ಗಾರ್ಗಿ’ ಪ್ರಶಸ್ತಿ

ಬೆಂಗಳೂರು: ಅಖಿಲ ಕರ್ನಾಟಕ ವಿಪ್ರ ವನಿತಾ ಸೇವಾ ಪ್ರತಿಷ್ಠಾನ ವತಿಯಿಂದ ನೀಡುವ ‘ಗಾರ್ಗಿ ಪ್ರಶಸ್ತಿ’ಗೆ ನಾಲ್ವರು ಆಯ್ಕೆಯಾಗಿದ್ದಾರೆ.

ಕರ್ನಾಟಕ ಕರಕುಶಲ ಅಭಿವೃದ್ಧಿ ನಿಗಮದ ವ್ಯವಸ್ಥಾಪಕ ನಿರ್ದೇಶಕಿ ರೂಪಾ ಮೌದ್ಗಿಲ್, ಪ್ರವಾಸೋದ್ಯಮಿ ವಾಣಿಶ್ರೀ, ಲೇಖಕಿ–ರಂಗಕರ್ಮಿ ವೈ.ಕೆ. ಸಂಧ್ಯಾ ಶರ್ಮಾ ಹಾಗೂ ಶಿಕ್ಷಣ ತಜ್ಞೆ ಮಂಗಳಾ ಪ್ರಿಯದರ್ಶಿನಿ ಭಾಜನರಾಗಿದ್ದಾರೆ. ಎನ್.ಆರ್. ಕಾಲೊನಿ ಪತ್ರಿ ಸಭಾಂಗಣದಲ್ಲಿ ಆಗಸ್ಟ್ 7ರಂದು ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಕರಡು ಯುವ ನೀತಿ ಸರ್ಕಾರಕ್ಕೆ ಸಲ್ಲಿಕೆ

ಬೆಂಗಳೂರು: ಡಾ.ಆರ್.ಬಾಲಸುಬ್ರಹ್ಮಣ್ಯ ಸಮಿತಿ ಗುರುವಾರ ಕರಡು ಯುವ ನೀತಿಯನ್ನು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರಿಗೆ ಸಲ್ಲಿಸಿತು.

ಬೊಮ್ಮಾಯಿ ಮಾತನಾಡಿ, ದೇಶದ ಜನಸಂಖ್ಯೆಯ ಶೇ 46ರಷ್ಟು ಯುವಕರಿದ್ದಾರೆ. ಇವರನ್ನು ದೇಶ ಕಟ್ಟುವ ಕೆಲಸದಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬೇಕಾಗಿದೆ. ಆರ್ಥಿಕ ಅಭಿವೃದ್ಧಿಯ ಮೂಲಕ ಯುವ ಸಬಲೀಕರಣ, ಉತ್ತಮ ವ್ಯಕ್ತಿತ್ವ ನಿರ್ಮಾಣವಾಗಬೇಕಾಗಿದೆ. ಮುಂದಿನ ಆಯವ್ಯಯದಲ್ಲಿ ಯುವ ಬಜೆಟ್ ರೂಪಿಸಲಾಗುವುದು. ಸಚಿವ ಸಂಪುಟದ ಅನುಮೋದನೆ ಪಡೆದು ಕರಡು ನೀತಿಯನ್ನು ಜಾರಿಗೊಳಿಸಲಾಗುವುದು ಎಂದು ಮಾಹಿತಿ ನೀಡಿದರು.

ಡಾ. ಬಾಲಸುಬ್ರಹ್ಮಣ್ಯ ಮಾತನಾಡಿ, ನೀತಿಯ ಅನುಷ್ಠಾನಕ್ಕೆ ಕಾರ್ಯತಂತ್ರ, ಮೇಲ್ವಿಚಾರಣೆ ಹಾಗೂ ಮೌಲ್ಯಮಾಪನದ ಅಂಶಗಳನ್ನೂ ಒಳಗೊಂಡಿದೆ. ಸುಸ್ಥಿರ ಅಭಿವೃದ್ಧಿ ಗುರಿಯೊಂದಿಗೂ ಸಂಯೋಜನೆ ಮಾಡಲಾಗಿದೆ ಎಂದು ವಿವರಿಸಿದರು.

ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆ: ಯುವಸಮೂಹದ ಸಬಲೀಕರಣಕ್ಕಾಗಿ ಸ್ವಾಮಿ ವಿವೇಕಾನಂದ ಯುವಶಕ್ತಿ ಯೋಜನೆಯನ್ನು ಬೊಮ್ಮಾಯಿ ಅವರು ಆಯವ್ಯಯದಲ್ಲಿ ಘೋಷಿಸಿದ್ದರು.

ಯುವಕರು ಸ್ವ ಉದ್ಯೋಗ ಕೈಗೊಳ್ಳಲು ಯುವಕರ ಸ್ವಸಹಾಯ ಸಂಘಗಳಿಗೆ ಸಾಲ ಸೌಲಭ್ಯ ಒದಗಿಸುವ ಯೋಜನೆಗೆ ರಾಜ್ಯ ಸರ್ಕಾರ ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾದ ಜತೆಗೆ ಒಪ್ಪಂದಕ್ಕೆ ಸಹಿ ಹಾಕಿತು. ಈ ವೇಳೆ, ಸಚಿವರಾದ ನಾರಾಯಣಗೌಡ, ವಿ.ಸೋಮಣ್ಣ, ಅಶ್ವತ್ಥನಾರಾಯಣ, ಶಿವರಾಮ ಹೆಬ್ಬಾರ, ಸರ್ಕಾರದ ಮುಖ್ಯ ಕಾರ್ಯದರ್ಶಿ ವಂದಿತಾ ಶರ್ಮ, ಮುಖ್ಯ ಕಾರ್ಯದರ್ಶಿ ಡಾ. ಶಾಲಿನಿ ರಜನೀಶ್, ಮುಖ್ಯಮಂತ್ರಿ ಕಾರ್ಯದರ್ಶಿಗಳಾದ ಎಂ.ಎಸ್.ಶ್ರೀಕರ್, ಜಯರಾಮ್ ರಾಯಪುರ ಉಪಸ್ಥಿತರಿದ್ದರು.

ಪ್ಲಾಸ್ಟಿಕ್ ಜಪ್ತಿ

ಬೆಂಗಳೂರು: ಬಿಬಿಎಂಪಿ ದಾಸರಹಳ್ಳಿ ವಲಯದಲ್ಲಿ 2,856 ಕೆ.ಜಿ ಪ್ಲಾಸ್ಟಿಕ್ ಜಪ್ತಿ ಮಾಡಿ, ₹5 ಸಾವಿರ ದಂಡ ವಿಧಿಸಲಾಗಿದೆ.

ರಾಜಗೋಪಾಲನಗರದಲ್ಲಿ ಬೆಂಗಳೂರು ಪ್ಲಾಸ್ಟಿಕ್ಸ್ ಕಾರ್ಖಾನೆಯನ್ನು ಪರಿಶೀಲಿಸಿ, ನಿಷೇಧಿತ ಪ್ಲಾಸ್ಟಿಕ್ ಬ್ಯಾಗ್‌ಗಳನ್ನು ವಶಪಡಿಸಿಕೊಳ್ಳಲಾಗಿದೆ. ವಶಪಡಿಸಿಕೊಂಡ ನಿಷೇಧಿತ ಪ್ಲಾಸ್ಟಿಕ್ ಅನ್ನು ದೊಡ್ಡಬಿದರಕಲ್ಲು ಘನತ್ಯಾಜ್ಯ ಸಂಸ್ಕರಣಾ ಘಟಕಕ್ಕೆ ವಿಲೇವಾರಿ ಮಾಡಲು ವಲಯ ಆಯುಕ್ತರು ಸೂಚನೆ ನೀಡಿದರು.

ಚಿತ್ರಾವಳಿ



ಗೋವಿಂದರಾಜನಗರ ವಿಧಾನಸಭೆ ಕ್ಷೇತ್ರದ ನಾಯಂಡಹಳ್ಳಿ ವಾರ್ಡ್‌ನಲ್ಲಿ ಕೊರೆಯಲಾದ ಸಾರ್ವಜನಿಕ ಕೊಳವೆಬಾವಿಗೆ ಸ್ಥಳೀಯ ಶಾಸಕ ಹಾಗೂ ಸಚಿವ ವಿ. ಸೋಮಣ್ಣ ಚಾಲನೆ ನೀಡಿದರು. ಬಿಜೆಪಿಯ ಗೋವಿಂದರಾಜನಗರ ಮಂಡಲ ಅಧ್ಯಕ್ಷ ವಿಶ್ವನಾಥ ಗೌಡ, ವಾರ್ಡ್ ಅಧ್ಯಕ್ಷ ಹರೀಶ್, ಮುಖಂಡರಾದ ಎಂ.ರಾಜು, ಮಂಡ್ಯ ವೆಂಕಟೇಶ್, ವಜ್ರಪ್ಪ ಹಾಗೂ ಕೃಷ್ಣಪ್ಪ ಇದ್ದಾರೆ.



ನಾರಾಯಣ ಹೆಲ್ತ್ ಸಿಟಿಯಲ್ಲಿ ವಿಕಿರಣ ಆಂಕಾಲಜಿ ಸೌಲಭ್ಯಕ್ಕೆ ಆಸ್ಪತ್ರೆಯ ಅಧ್ಯಕ್ಷ ಡಾ.ದೇವಿಪ್ರಸಾದ್ ಶೆಟ್ಟಿ ಚಾಲನೆ ನೀಡಿದರು.

ವಿದ್ಯಾರ್ಥಿನಿಲಯ ಸ್ಥಳಾಂತರ: ವಿದ್ಯಾರ್ಥಿಗಳ ವಿರೋಧ

ಬೆಂಗಳೂರು: ಬೆಂಗಳೂರು ಉತ್ತರ ವಲಯದಲ್ಲಿರುವ ಹಿಂದುಳಿದ ವರ್ಗಗಳ ಕಲ್ಯಾಣ ಇಲಾಖೆಯ ಮೆಟ್ರಿಕ್ ನಂತರದ ವಿದ್ಯಾರ್ಥಿನಿಲಯಗಳನ್ನು ಏಕಾಏಕಿ ಸ್ಥಳಾಂತರಿಸಲಾಗುತ್ತಿದೆ ಎಂದು ವಿದ್ಯಾರ್ಥಿಗಳು ದೂರಿದ್ದಾರೆ.

ಹೆಬ್ಬಾಳದ ಬಿಸಿಎಂ ವಿದ್ಯಾರ್ಥಿನಿಲಯ, ಬಸವೇಶ್ವರ ನಗರದ ಬಿಸಿಎಂ ವಿದ್ಯಾರ್ಥಿನಿಲಯ, ಮಾಗಡಿ ರಸ್ತೆಯ ಬೇಡರಹಳ್ಳಿಯ ಅಂಜನಾನಗರದ ಬಿಸಿಎಂ ವಿದ್ಯಾರ್ಥಿನಿಲಯ ಮತ್ತು ಆರ್.ಟಿ. ನಗರದ ದಿಣ್ಣೂರು ಮುಖ್ಯ ರಸ್ತೆಯ ಬಿಸಿಎಂ ವಿದ್ಯಾರ್ಥಿನಿಲಯಗಳನ್ನು ಹೊಸ ಕಟ್ಟಡಗಳಿಗೆ ಸ್ಥಳಾಂತರಿಸಲು ನಿರ್ಧರಿಸಲಾಗಿದೆ ಎಂದು ತಿಳಿಸಿದ್ದಾರೆ.

ಹೊಸ ಕಟ್ಟಡಗಳು ರಾಜಾನುಕುಂಟೆ ಬಳಿಯ ಮುತ್ತುಗದಹಳ್ಳಿ ಗ್ರಾಮದಲ್ಲಿದೆ. ಇದು ನಗರದಿಂದ ಸುಮಾರು 40 ಕಿ.ಮೀ. ದೂರದಲ್ಲಿದೆ. ಸಂಚಾರ ದಟ್ಟಣೆಯಿಂದಾಗಿ ಪ್ರತಿದಿನ ಕಾಲೇಜು ಮತ್ತು ವಿಶ್ವವಿದ್ಯಾಲಯಗಳಿಗೆ ತೆರಳುವುದು ಕಷ್ಟವಾಗುತ್ತದೆ. ನಿತ್ಯ ಕನಿಷ್ಠ ನಾಲ್ಕು ಗಂಟೆಗಳ ಕಾಲ ಸಮಯ ವ್ಯರ್ಥವಾಗುತ್ತದೆ ಎಂದು ಅಳಲು ತೋಡಿಕೊಂಡಿದ್ದಾರೆ.

ಸಿಪಿಐ(ಎಂಎಲ್) ರೆಡ್ ಸ್ಟಾರ್ 11ನೇ ರಾಜ್ಯ ಸಮ್ಮೇಳನ

‘ಬಜರಂಗದಳ ರೌಡಿಗಳ ಸಂಘಟನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ರೌಡಿಗಳು ಸೇರಿ ಕಟ್ಟಿರುವ ಸಂಘಟನೆ ಬಜರಂಗದಳ, ಭಯೋತ್ಪಾದಕರು ಸೇರಿರುವ ಸಂಸ್ಥೆಯೇ ಸನಾತನ ಸಂಸ್ಥೆ, ಸನ್ಯಾಸಿಗಳ ಸಂಘಟನೆ ವಿಶ್ವ ಹಿಂದೂ ಪರಿಷತ್’ ಎಂದು ವಕೀಲ ಎಸ್.ಬಾಲನ್ ಟೀಕಿಸಿದರು.

ಸಿಪಿಐ(ಎಂಎಲ್) ರೆಡ್ ಸ್ಟಾರ್ 11ನೇ ರಾಜ್ಯ ಸಮ್ಮೇಳನದಲ್ಲಿ ಮಾತನಾಡಿದ ಅವರು, ‘ಈ ರೀತಿಯ ಸಂಘಟನೆಗಳನ್ನು ಮುಂದಿಟ್ಟುಕೊಂಡು ಸಂಸ್ಕೃತಿಯ ಹೆಸರಿನಲ್ಲಿ ದೇಶವನ್ನು ಬಿಜೆಪಿ ಲೂಟಿ ಮಾಡುತ್ತಿದೆ’ ಎಂದರು.

‘ಚಾತುರ್ವರ್ಣವನ್ನು ಮನು ಪ್ರತಿಪಾದಿಸಿದರೆ, ನರೇಂದ್ರ ಮೋದಿ ನಾಲ್ಕು ಸಂಹಿತೆಗಳನ್ನು ಜಾರಿಗೆ ತಂದು ಕಾರ್ಮಿಕರ ಹಕ್ಕುಗಳನ್ನು ಕಸಿದುಕೊಂಡಿದ್ದಾರೆ. ದೇಶದಲ್ಲಿ 45 ಕೋಟಿಯಷ್ಟು ಕಾರ್ಮಿಕರಿದ್ದಾರೆ. ಹೊಸ ಸಂಹಿತೆಗಳ ಪ್ರಕಾರ ಅವರೆಲ್ಲರೂ ಈಗ ಉದ್ಯೋಗಸ್ಥರಲ್ಲ, ಎಲ್ಲರನ್ನೂ ಕೂಲಿ ಆಳುಗಳನ್ನಾಗಿ ಮಾಡಲಾಗಿದೆ’ ಎಂದು ಅಸಮಾಧಾನ ವ್ಯಕ್ತಪಡಿಸಿದರು.

‘ರಾಜ್ಯದಲ್ಲಿ ಬಸವರಾಜ ಬೊಮ್ಮಾಯಿ ಹೆಸರಿಗಷ್ಟೇ ಮುಖ್ಯಮಂತ್ರಿ. ಎಲ್ಲವೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಆಣತಿಯಂತೆ ನಡೆಯುತ್ತಿದೆ. ಎಲ್ಲಾ ಕಾಮಗಾರಿಗಳ ಗುತ್ತಿಗೆಗಳನ್ನೂ ಗುಜರಾತ್ ಮತ್ತು ರಾಜಸ್ಥಾನದ ಬನಿಯಾ ಕಂಪನಿಗಳಿಗೆ ಕೊಡಿಸಿ ರಾಜ್ಯದ ತೆರಿಗೆ ಹಣ ಲೂಟಿ ಮಾಡಲಾಗುತ್ತಿದೆ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ದಲಿತ ಸಂಘರ್ಷ ಸಮಿತಿ(ಅಂಬೇಡ್ಕರ್ ವಾದ) ರಾಜ್ಯ ಸಂಚಾಲಕ ಮಾವಳ್ಳಿ ಶಂಕರ್ ಮಾತನಾಡಿ, ‘ಸಂವಿಧಾನದ ಮೇಲೆ ಆಣೆ ಮಾಡಿರುವ ಮುಖ್ಯಮಂತ್ರಿ ಸಂವಿಧಾನ ವಿರೋಧಿಯಾಗಿ ನಡೆದುಕೊಳ್ಳುತ್ತಿದ್ದಾರೆ. ಒಂದು ಧರ್ಮದವರನ್ನು ಮಾತ್ರ ಓಲೈಸುವ ಪ್ರವೃತ್ತಿ ಹೆಚ್ಚಾಗುತ್ತಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಹತ್ಯೆಯಾದ ಹಿಂದೂ ಯುವಕನ ಮನೆಗೆ ಮಾತ್ರ ಭೇಟಿ ನೀಡಿರುವುದು ಮನುಷ್ಯ ವಿರೋಧಿ ನಡವಳಿಕೆ’ ಎಂದು ಹೇಳಿದರು.

‘ಮಕ್ಕಳ ಮನಸ್ಸಿನಲ್ಲಿ ವಿಷಬೀಜ ಬಿತ್ತಲು ಪಠ್ಯಪುಸ್ತಕದಲ್ಲಿ ಹಿಂದುತ್ವ ತುಂಬುವ ಕೆಲಸವನ್ನು ಸರ್ಕಾರ ಮಾಡಿದೆ. ಸಂಸದೀಯ ಮಾರ್ಗಗಳನ್ನೇ ಬಳಸಿಕೊಂಡು ಸರ್ವಾಧಿಕಾರ ಮಾಡಲಾಗುತ್ತಿದೆ. ಈ ರೀತಿಯ ಜನವಿರೋಧಿ ಸರ್ಕಾರದ ವಿರುದ್ಧ ಸ್ಪಷ್ಟ ಹೋರಾಟಕ್ಕೆ ಅಣಿಯಾಗಬೇಕಿದೆ’ ಎಂದು ಹೇಳಿದರು.



ಸಮ್ಮೇಳನದಲ್ಲಿ ಕರ್ನಾಟಕ ಜನಶಕ್ತಿ ರಾಜ್ಯ ಸಮಿತಿಯ ನೂರ್‌ಶ್ರೀಧರ್, ಸಿಪಿಐ(ಎಂಎಲ್) ಪ್ರಧಾನ ಕಾರ್ಯದರ್ಶಿ ಕೆ.ಎನ್. ರಾಮಚಂದ್ರನ್, ರಾಜ್ಯ ಕಾರ್ಯದರ್ಶಿ ಬಿ.ರುದ್ರಯ್ಯ, ವಕೀಲ ಎಸ್.ಬಾಲನ್, ಮಾವಳ್ಳಿ ಶಂಕರ, ಪೂರ್ಣಿಮಾ ಅವರು ಲಾಲ್ ಸಲಾಂ ಘೋಷಣೆ ಮೊಳಗಿಸಿದರು —ಪ್ರಜಾವಾಣಿ ಚಿತ್ರ







ರಾಣೆಬೆನ್ನೂರಿನ ಕೊಟ್ಟೂರೇಶ್ವರನಗರದ ದೊಡ್ಡ ಕೆರೆ ಕೋಡಿ ಬಿದ್ದು ಮನೆಗಳಿಗೆ ನೀರು ನುಗ್ಗಿದೆ(ಮೊದಲ ಚಿತ್ರ). ಕೊಡಗು ಜಿಲ್ಲೆಯ ಚೆಂಬು ಗ್ರಾಮದ ಊರುಬೈಲು ಮಾರ್ಪಡ್ಕ ಸೇತುವೆ ಮಳೆಯಿಂದ ಗುರುವಾರ ಕೊಚ್ಚಿಕೊಂಡು ಹೋಗಿದೆ

ಶಾ ತೃಪ್ತಿ: ಆರಗ

ಬೆಂಗಳೂರು: ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಸರ್ಕಾರದ ಕಾರ್ಯವೈಖರಿಯ ಬಗ್ಗೆ ತೃಪ್ತಿ ವ್ಯಕ್ತಪಡಿಸಿದ್ದು, ಯಾವುದೇ ಅಸಮಾಧಾನ ವ್ಯಕ್ತಪಡಿಸಿಲ್ಲ ಎಂದು ಗೃಹ ಸಚಿವ ಆರಗ ಜ್ಞಾನೇಂದ್ರ ಅವರು ತಿಳಿಸಿದರು.

ಕಾಳಜಿ ಕೇಂದ್ರದಲ್ಲಿ ಸಾವಿರಾರು ಜನರಿಗೆ ಆಶ್ರಯ • ನೂರಾರು ಜಾನುವಾರು ಸಾವು

ಮುಸಲಧಾರೆಗೆ ಜನರು ಹೈರಾಣ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಹಲವು ಜಿಲ್ಲೆಗಳಲ್ಲಿ ಬುಧವಾರ ರಾತ್ರಿ ಮತ್ತು ಗುರುವಾರವೂ ಧಾರಾಕಾರ ಮಳೆಯಾಗಿದೆ. ಮಳೆ ಸಂಬಂಧಿತ ಅವಘಡಗಳಲ್ಲಿ ಇಬ್ಬರು ಮೃತಪಟ್ಟಿದ್ದರೆ, ತುಮಕೂರು ಜಿಲ್ಲೆಯಲ್ಲಿ ಬುಧವಾರ ರಾತ್ರಿ ನೀರಿನಲ್ಲಿ ಕೊಚ್ಚಿಕೊಂಡು ಹೋದವರಿಗಾಗಿಹುಡುಕಾಟನಡೆದಿದೆ.

ದಕ್ಷಿಣ ಕನ್ನಡ ಜಿಲ್ಲೆಯ ಸುಳ್ಯ ತಾಲ್ಲೂಕಿನಲ್ಲಿ ಮಾರ್ಪಡ್ಕ ಸೇತುವೆ ನೀರು ಪಾಲಾಗಿದ್ದು, ಊರುಬೈಲು ಭಾಗದ 200 ಮನೆಗಳಿಗೆ ಸಂಪರ್ಕ ಕಡಿತಗೊಂಡಿದೆ.

ತುಮಕೂರು ಜಿಲ್ಲೆ ಕೊರಟಗೆರೆ ತಾಲ್ಲೂಕಿನ ಕುರುಡುಗನಹಳ್ಳಿಯ ಲಕ್ಷ್ಮಮ್ಮ (70) ಜಮೀನಿಗೆ ಹೋಗಿದ್ದು, ವಾಪಸ್ ಬರುವಾಗ ಹುಂಜಿನಹಳ್ಳದಲ್ಲಿ ಕೊಚ್ಚಿ ಹೋಗಿದ್ದಾರೆ. ಶವ ಪತ್ತೆಯಾಗಿದೆ. ಗುಬ್ಬಿ ತಾಲ್ಲೂಕಿನ ಕೋಣೆಮಾದನಹಳ್ಳಿಯ ಅರುಣ್ ಕುಮಾರ್ (30) ಮೇವು ತರುವ ಸಂದರ್ಭದಲ್ಲಿ ನೀರಿನಲ್ಲಿ ಕಾಲು ಜಾರಿ ಬಾವಿಗೆ ಬಿದ್ದು ಸಾವನ್ನಪ್ಪಿದ್ದಾರೆ.

ಬುಧವಾರ ರಾತ್ರಿ ನೀರಿನಲ್ಲಿ ಕೊಚ್ಚಿಕೊಂಡು ಹೋದವರಿಗಾಗಿ ಹುಡುಕಾಟ ನಡೆದಿದ್ದು, ಗುರುವಾರ ಸಂಜೆವರೆಗೂ ಪತ್ತೆಯಾಗಿಲ್ಲ. ಮಧುಗಿರಿ ತಾಲ್ಲೂಕು ನಾಗಲಾಪುರ ಗ್ರಾಮದ ಸಮೀಪ ಹಳ್ಳ ದಾಟುತ್ತಿದ್ದಾಗ ದ್ವಾರಪ್ಪ (69) ನೀರಿನಲ್ಲಿ ಕೊಚ್ಚಿಕೊಂಡು ಹೋಗಿದ್ದಾರೆ. ತುರುವೇಕೆರೆ ತಾಲ್ಲೂಕಿನ ಕೊಂಡಜ್ಜಿ- ಸೊಪ್ಪನಹಳ್ಳಿ ಮಧ್ಯೆ ತುಂಬಿ ಹರಿಯುತ್ತಿದ್ದ ಹಳ್ಳದ ನೀರಿನಲ್ಲಿ ಸಂಚರಿಸುತ್ತಿದ್ದ ವ್ಯಾನ್ ಕೊಚ್ಚಿಕೊಂಡು ಹೋಗಿದೆ. ಅದರಲ್ಲಿದ್ದ ಪಟೇಲ್ ಕುಮಾರಸ್ವಾಮಿ ಕೊಚ್ಚಿಕೊಂಡು ಹೋಗಿದ್ದಾರೆ.

ಮೈಸೂರು ಭಾಗದ ಮೈಸೂರು, ಕೊಡಗು, ಹಾಸನ, ಮಂಡ್ಯದಲ್ಲಿ ಗುರುವಾರವೂ ಧಾರಾಕಾರ ಮಳೆ ಮುಂದುವರಿದಿದ್ದು, ಜಲದಿಗ್ಬಂಧನದ ವಾತಾವರಣ ಏರ್ಪಟ್ಟಿದೆ.

ಮಂಡ್ಯ ನಗರದ ಬೀಡಿ ಕಾರ್ಮಿಕರ ಕಾಲೊನಿ ನಡುಗಡ್ಡೆಯಂತಾಗಿದ್ದು, ನೂರಾರು ಮನೆಗಳಿಗೆ ನೀರು ನುಗ್ಗಿದೆ. ಕಾಳಜಿ ಕೇಂದ್ರ ತೆರೆಯಲಾಗಿದ್ದು ಸಾವಿರಕ್ಕೂ ಹೆಚ್ಚು ಜನ ಆಶ್ರಯ ಪಡೆದಿದ್ದಾರೆ.

ಮದ್ದೂರು ತಾಲ್ಲೂಕಿನ ವಳಗೆರೆಹಳ್ಳಿಯಲ್ಲಿ ಮನೆಯ ಚಾವಣಿ ಕುಸಿದು ಹಸುವೊಂದು ಮೃತಪಟ್ಟಿದೆ. ಚಂದೂಪುರದಲ್ಲಿ ಕೋಳಿ, ಮೇಕೆ ಫಾರಂಗೆ ಶಿಂಷಾ ನದಿ ನೀರು ನುಗ್ಗಿ, 500 ಕೋಳಿ, 16 ಮೇಕೆ, 2 ಹಸು ಮೃತಪಟ್ಟಿವೆ.

ಕೊಡಗು ಜಿಲ್ಲೆಯ ಭಾಗಮಂಡಲ ವ್ಯಾಪ್ತಿಯಲ್ಲಿ ಬೆಟ್ಟಗುಡ್ಡಗಳಿಂದ ಕೆಸರು ಮಿಶ್ರಿತ ನೀರು ಹರಿಯುತ್ತಿದ್ದು, ಕಲ್ಲು–ಮಣ್ಣು ರಸ್ತೆಗೆ ಕುಸಿದಿರುವುದರಿಂದ ಜನರ ರಕ್ಷಣೆ, ಕೆಸರು ತೆರವು ಕಾರ್ಯಾಚರಣೆಗೂ ಅಡ್ಡಿಯಾಗಿದೆ.

ಭಾಗಮಂಡಲ, ಕರಿಕೆ, ತಣ್ಣೀಮಾಣಿ ರಸ್ತೆಗಳು ಸಂಪೂರ್ಣ ಬಂದ್ ಆಗಿವೆ. ಒಂದೇ ರಾತ್ರಿಯಲ್ಲಿ 19 ಸೆಂ.ಮೀ ಮಳೆಯನ್ನು ಕಂಡಿರುವಚೆಂಬು ಗ್ರಾಮಸ್ಥರು ಹೈರಾಣಾಗಿದ್ದಾರೆ. ಗ್ರಾಮವನ್ನು ಸಂಪರ್ಕಿಸುವ ದಬ್ಬಡ್ಕ, ಮಾರ್ಪಡ್ಕ, ಊರುಬೈಲು ಸೇತುವೆಗಳು ಕೊಚ್ಚಿಕೊಂಡು ಹೋಗಿವೆ.

ಕಬಿನಿ, ಕೆಆರ್‌ಎಸ್ ಜಲಾಶಯಗಳಿಂದ ಭಾರಿ ಪ್ರಮಾಣದಲ್ಲಿ ನೀರು ಹರಿಸುತ್ತಿರುವುದರಿಂದ ಕೊಳ್ಳೇಗಾಲ ತಾಲ್ಲೂಕಿನಲ್ಲಿ ಕಾವೇರಿ ನದಿ ಉಕ್ಕಿ ಹರಿಯುತ್ತಿದೆ. ಸುವರ್ಣಾವತಿ ಹಾಗೂ ಚಿಕ್ಕಹೊಳೆ ಜಲಾಶಯ ವ್ಯಾಪ್ತಿಯಲ್ಲಿ ಭಾರಿ ಪ್ರಮಾಣದ ನೀರು ಹರಿದು ಬರುತ್ತಿದೆ.

ಹಾಸನ ಜಿಲ್ಲೆಯ ಶ್ರವಣಬೆಳಗೊಳ ಹೋಬಳಿಯ ಬೆಕ್ಕ ಗ್ರಾಮದ ಕೆರೆಯ ಏರಿ ಬುಧವಾರ ರಾತ್ರಿ ಒಡೆದು ಜನವಸತಿ ಪ್ರದೇಶಕ್ಕೆ ನೀರು ನುಗ್ಗಿತ್ತು. ಮನೆಯಲ್ಲಿದ್ದ ಬಾಣಂತಿ ಹಾಗೂ ಒಂದೂವರೆ ತಿಂಗಳ ಹಸುಗೂಸನ್ನು ಅಗ್ನಿಶಾಮಕದಳ ಸಿಬ್ಬಂದಿ ರಕ್ಷಿಸಿದರು.

ಹಾಸನ ತಾಲ್ಲೂಕಿನ ಅಂಕಪುರದಲ್ಲಿ ಮನೆ ಗೋಡೆ ಕುಸಿದು ದಂಪತಿ ಗಾಯಗೊಂಡರು. ಹಬಾಗೂರು ಕೆರೆ ಕೋಡಿಯಿಂದ ನುಗ್ಗೇಹಳ್ಳಿ–ನವಿಲೆ ಮಾರ್ಗದ ರಸ್ತೆ ಸಂಪೂರ್ಣ ಬಂದ್ ಆಗಿದೆ.



ಮಾಗಡಿ ತಾಲ್ಲೂಕಿನ ಈಡಿಗರ ಪಾಳ್ಯದ ಸೌಭಾಗ್ಯ ಎಂಬ ಬಾಣಂತಿ ಮಗುವಿನೊಂದಿಗೆ ತೆಪ್ಪದಲ್ಲಿ ರಸ್ತೆ ದಾಟಿ ಆಸ್ಪತ್ರೆಗೆ ತೆರಳಿದರು

ತೆಪ್ಪದಲ್ಲಿ ತೆರಳಿದ ಬಾಣಂತಿ–ಶಿಶು

ರಾಮನಗರ: ಮಾಗಡಿ ತಾಲ್ಲೂಕಿನ ಈಡಿಗರಪಾಳ್ಯದಲ್ಲಿ ಗುರುವಾರ ಸೌಭಾಗ್ಯಾ ಎಂಬ ಬಾಣಂತಿ ತನ್ನ ಆರು ದಿನದ ಶಿಶುವಿನೊಂದಿಗೆ ತೆಪ್ಪದಲ್ಲಿ ತೆರಳಿ ಆಸ್ಪತ್ರೆಯಲ್ಲಿ ಚುಚ್ಚುಮದ್ದು ಪಡೆದರು.

ಸೌಭಾಗ್ಯಾಗೆ ಆರು ದಿನಗಳ ಹಿಂದೆ ಸೋಲೂರು ಆಸ್ಪತ್ರೆಯಲ್ಲಿ ಹೆರಿಗೆ ಆಗಿದ್ದು, ಬಾಣಂತಿ ಹಾಗೂ ಮಗುವನ್ನು ಈಡಿಗರಪಾಳ್ಯಕ್ಕೆ ಕರೆತರಲಾಗಿತ್ತು. ಮಳೆಯಿಂದ ಈ ಗ್ರಾಮವು ಜಲಾವೃತಗೊಂಡಿದೆ. ಇದರಿಂದ ನೆರೆ ಊರುಗಳ ನಡುವೆ ಸಂಪರ್ಕ ಕಡಿತಗೊಂಡಿದೆ.

ಸ್ಥಳೀಯರ ತಿರುಗಾಟಕ್ಕೆ ಶಾಸಕರು ತೆಪ್ಪದ ವ್ಯವಸ್ಥೆ ಮಾಡಿದ್ದಾರೆ. ಆ ತೆಪ್ಪದಲ್ಲೇ ಅವರು ಸಂಚರಿಸಿ, ತಿಪ್ಪಸಂದ್ರ ಗ್ರಾಮದ ಮುಖ್ಯರಸ್ತೆ ತಲುಪಿ ನಂತರ ಸೋಲೂರು ಆಸ್ಪತ್ರೆಗೆ ತೆರಳಿದರು.

ಶಿರಾಡಿ: ರಾತ್ರಿಯೂ ಸಂಚಾರಕ್ಕೆ ಅನುಮತಿ

ಹಾಸನ: ಸಕಲೇಶಪುರ ತಾಲ್ಲೂಕಿನ ದೋಣಿಗಲ್ ಬಳಿ ಭೂಕುಸಿತವಾದ ಹಿನ್ನೆಲೆಯಲ್ಲಿ ವಾಹನಗಳ ಸಂಚಾರಕ್ಕೆ ವಿಧಿಸಿದ್ದ ನಿರ್ಬಂಧ ಸಡಿಲಿಸಿ, ಪ್ರಯಾಣಿಕ ಬಸ್‌ಗಳು ಈ ಮಾರ್ಗದಲ್ಲಿ ರಾತ್ರಿ ವೇಳೆಯೂ ಸಂಚರಿಸಲು ಹಾಸನ ಜಿಲ್ಲಾಧಿಕಾರಿ ಆರ್. ಗಿರೀಶ್ ಅನುಮತಿ ನೀಡಿದ್ದಾರೆ.

ಖಾಸಗಿ ಹಾಗೂ ಸರ್ಕಾರಿ ಬಸ್‌ಗಳು, ರಾಜಹಂಸ, ಐರಾವತ, ಅಂಬಾರಿ, ಡ್ರೀಮ್ ಕ್ಲಾಸ್ ಸ್ಲೀಪರ್, ನಾನ್ ಎಸಿ ಸ್ಲೀಪರ್, ಸ್ಕ್ಯಾನಿಯಾ, ಮಲ್ಟಿ ಆಕ್ಸೆಲ್ ವೋಲ್ವೊ ಬಸ್‌ಗಳಲ್ಲಿ ಜನ ಸಂಚರಿಸಬಹುದು.

ಎರಡು ದಿನ ಗುಡುಗು ಸಹಿತ ಮಳೆ

ಬೆಂಗಳೂರು: ರಾಜ್ಯದ ಎಲ್ಲ ಜಿಲ್ಲೆಗಳಲ್ಲಿ ಒಂದೆರಡು ಕಡೆ ಮುಂದಿನ ಎರಡು ದಿನ ಗುಡುಗು ಸಹಿತ ಮಳೆಯಾಗಲಿದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಉತ್ತರ ಕನ್ನಡ, ಉಡುಪಿ, ದಕ್ಷಿಣ ಕನ್ನಡ, ಚಿಕ್ಕಮಗಳೂರು ಹಾಗೂ ಕೊಡಗು ಜಿಲ್ಲೆಗೆ ಶುಕ್ರವಾರ 'ರೆಡ್ ಅಲರ್ಟ್' ಘೋಷಿಸಲಾಗಿದೆ. ಹಾಸನ, ಶಿವಮೊಗ್ಗ, ಗದಗ, ಧಾರವಾಡ ಹಾಗೂ ಬೆಳಗಾವಿಗೆ 'ಆರೆಂಜ್ ಅಲರ್ಟ್' ನೀಡಲಾಗಿದೆ. ಬೀದರ್, ಕಲಬುರ್ಗಿ, ಬೆಂಗಳೂರು ನಗರ ಸೇರಿ 13 ಜಿಲ್ಲೆಗಳಿಗೆ 'ಯೆಲ್ಲೊ ಅಲರ್ಟ್' ಘೋಷಿಸಲಾಗಿದೆ.

ಕರಾವಳಿಯ ಎಲ್ಲ ಜಿಲ್ಲೆಗಳು ಮತ್ತು ದಕ್ಷಿಣ ಒಳನಾಡಿನ ಬಳ್ಳಾರಿ, ಚಿಕ್ಕಮಗಳೂರು, ಕೊಡಗು ಹಾಗೂ ಶಿವಮೊಗ್ಗದಲ್ಲಿ ಶನಿವಾರದವರೆಗೆ ಭಾರಿಯಿಂದ ಅತಿ ಭಾರಿ ಮಳೆಯಾಗುವ ಸಾಧ್ಯತೆಯಿದೆ. ಉತ್ತರ ಒಳನಾಡಿನ ಬಾಗಲಕೋಟೆ, ಬೆಳಗಾವಿ, ಧಾರವಾಡ, ಗದಗ, ಹಾವೇರಿ, ಕಲಬುರ್ಗಿ, ವಿಜಯಪುರ ಹಾಗೂ ದಕ್ಷಿಣ ಒಳನಾಡಿನ ಬೆಂಗಳೂರು ನಗರ, ಬೆಂಗಳೂರು ಗ್ರಾಮಾಂತರ, ಚಿತ್ರದುರ್ಗ, ದಾವಣಗೆರೆ, ಚಿಕ್ಕಬಳ್ಳಾಪುರ, ಚಾಮರಾಜನಗರ, ಹಾಸನ, ಕೋಲಾರ, ಮಂಡ್ಯ, ಮೈಸೂರು, ತುಮಕೂರು, ರಾಮನಗರ ಜಿಲ್ಲೆಯ ಒಂದೆರಡು ಕಡೆ ಭಾರಿ ಮಳೆಯಾಗುವ ಸಾಧ್ಯತೆ ಇದೆ ಎಂದು ಇಲಾಖೆ ತಿಳಿಸಿದೆ.

ಕರಾವಳಿ ತೀರದಲ್ಲಿ ಬಿರುಗಾಳಿಯ ವೇಗವು ಪ್ರತಿ ಗಂಟೆಗೆ 50 ಕಿ.ಮೀ.ನಿಂದ 60 ಕಿ.ಮೀ. ತಲುಪುವ ಸಾಧ್ಯತೆಯಿದೆ. ಆದ್ದರಿಂದ ಮೀನುಗಾರರು ಸಮುದ್ರಕ್ಕೆ ತೆರಳಬಾರದು ಎಂದು ಇಲಾಖೆ ಸೂಚಿಸಿದೆ.

ಮಳೆ ವಿವರ (ಸೆಂ.ಮೀಗಳಲ್ಲಿ)	
ಚೆಂಬು (ಮಡಿಕೇರಿ ತಾ.)	19
ಸಂಪಾಜೆ	15
ಮರ್ಕುಲಿ (ಹಾಸನ)	13.5
ಬೆಳ್ತಂಗಡಿ	12.4
ಶಿರಾಡಿ	12.2
ತಗಡೂರು	11.9
ಸುಳ್ಯೇರಿ	11

64 ಜನರ ಸಾವು: ಅಶೋಕ

ಕೆ.ಆರ್.ಪೇಟೆ (ಮಂಡ್ಯ ಜಿಲ್ಲೆ): 'ಜೂನ್ 1ರಿಂದ ಆಗಸ್ಟ್ 4ರವರೆಗೆ ಸುರಿದಿರುವ ಭಾರಿ ಮಳೆಗೆ ರಾಜ್ಯದಾದ್ಯಂತ 64 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. 14 ಜಿಲ್ಲೆಗಳಿಗೆ ತೊಂದರೆಯಾಗಿದೆ' ಎಂದು ಕಂದಾಯ ಸಚಿವ ಆರ್.ಅಶೋಕ ಗುರುವಾರ ತಿಳಿಸಿದರು.

ತಾಲ್ಲೂಕಿನಲ್ಲಿ ಮಳೆಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಮಾತನಾಡಿದ ಅವರು '14,956 ಜನ ಪ್ರವಾಹದಿಂದ ತೊಂದರೆಗೀಡಾಗಿದ್ದಾರೆ. 608 ಮನೆಗಳು ಸಂಪೂರ್ಣವಾಗಿ ನಾಶವಾಗಿವೆ. 2,450 ಮನೆಗಳಿಗೆ ಭಾಗಶಃ ಹಾನಿಯಾಗಿದೆ. ಮುಂಜಾಗ್ರತಾ ಕ್ರಮವಾಗಿ ಈಗಾಗಲೇ 8,057 ಜನರನ್ನು ಸ್ಥಳಾಂತರಿಸಲಾಗಿದೆ. ಕಾಳಜಿ ಕೇಂದ್ರಗಳಲ್ಲಿ 6,933 ಜನ ಆಶ್ರಯ ಪಡೆದಿದ್ದಾರೆ' ಎಂದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು
ಕೆಆರ್‌ಎಸ್*	124.80	124.38	68,586	80,161
ಹಾರಂಗಿ	2,859	2,856.53	2,960	3,300
ಕಬಿನಿ	2,284	2,283.15	12,338	15,000
ಹೇಮಾವತಿ	2,922	2,922	14,112	14,050
ಲಿಂಗನಮಕ್ಕಿ	1,819	1,800	8,215	4,318
ಸೂಪಾ (ಮೀ)	564	542.07	5,285	2,498
ಮಾಣಿ	595	584	750	00
ತುಂಗಭದ್ರಾ	1,633	1,631.78	69,983	70,768
ಮಲಪ್ರಭಾ	2,079.50	2,070.30	5,225	294
ಘಟಪ್ರಭಾ	2,175	2,159.31	4,724	165
ಭದ್ರಾ	186	184	5,660	4,768
ಆಲಮಟ್ಟಿ (ಮೀ)	519.60	518.71	14,828	18,451
ನಾರಾಯಣಪುರ (ಮೀ)	492.25	491.81	6,000	6,000

ದಕ್ಷಿಣ ಕನ್ನಡ ಜಿಲ್ಲೆಗೆ ಎಡಿಜಿಪಿ ಅಲೋಕ್ ಕುಮಾರ್ ಭೇಟಿ, ಪರಿಶೀಲನೆ

ಕೇರಳ ಗಡಿಯಲ್ಲಿ 1 ವರ್ಷ ಕಣ್ಗಾವಲು

ಪ್ರಜಾವಾಣಿ ವಾರ್ತೆ

ಸುಳ್ಯ/ಮಂಗಳೂರು: 'ದಕ್ಷಿಣ ಕನ್ನಡ ಜಿಲ್ಲೆಗೆ ಹೊಂದಿಕೊಂಡಿರುವ ಕೇರಳ ಗಡಿಭಾಗದಲ್ಲಿ 12 ಹಾಗೂ ಮಂಗಳೂರು ನಗರ ವ್ಯಾಪ್ತಿಯಲ್ಲಿ 6 ಚೆಕ್‌ಪೋಸ್ಟ್ ಆರಂಭಿಸಿ, ಕೆಎಸ್‌ಆರ್‌ಪಿ ಪಡೆ ನಿಯೋಜಿಸಲಾಗಿದೆ.

ಗಡಿ ಭಾಗದಲ್ಲಿ ಸಿಸಿಟಿವಿ ಕ್ಯಾಮೆರಾ ಅಳವಡಿಸಲಾಗುವುದು. ಹತ್ಯೆ ಆರೋಪಿಗಳೆಲ್ಲರೂ ಸೆರೆ ಸಿಕ್ಕ ನಂತರವೂ ಈ ವ್ಯವಸ್ಥೆ ಕನಿಷ್ಠ ಒಂದು ವರ್ಷ ಮುಂದುವರಿಯಲಿದೆ' ಎಂದು ಕಾನೂನು ಮತ್ತು ಸುವ್ಯವಸ್ಥೆ ವಿಭಾಗದ ಎಡಿಜಿಪಿ ಅಲೋಕ್ ಕುಮಾರ್ ತಿಳಿಸಿದರು.

ಗುರುವಾರ ಬೆಳ್ಳಾರೆ ಪೊಲೀಸ್ ಠಾಣೆಗೆ ಭೇಟಿ ನೀಡಿ ಪ್ರವೀಣ್ ಹತ್ಯೆ ಪ್ರಕರಣದ ತನಿಖೆ ಪ್ರಗತಿಯ ಮಾಹಿತಿ ಪಡೆದ ನಂತರ ಅವರು ಸುದ್ದಿಗಾರರೊಂದಿಗೆ ಮಾತನಾಡಿದರು.

'ಪ್ರವೀಣ್ ನೆಟ್ಟಾರು ಹತ್ಯೆ ಪ್ರಕರಣದಲ್ಲಿ ಯಾರು ಶಾಮೀಲಾಗಿದ್ದಾರೆ, ಸಂಚು ರೂಪಿಸಿದವರು ಯಾರು ಎಂಬ ಮಾಹಿತಿ ಲಭ್ಯವಾಗಿದೆ. ಎನ್‌ಐಎ ಅಧಿಕಾರಿಗಳ ಜೊತೆಯೂ ನಾವು ಸಂಪರ್ಕದಲ್ಲಿದ್ದೇವೆ. ಪ್ರಮುಖ ಆರೋಪಿಯನ್ನು ನಾವೇ ಬಂಧಿಸುತ್ತೇವೆ' ಎಂದರು.

'ಜಿಲ್ಲೆಯಲ್ಲಿ ಸದ್ಯ ಪರಿಸ್ಥಿತಿ ಶಾಂತವಾಗಿದೆ. ಕಿಡಿಗೇಡಿಗಳ ಮೇಲೆ ಕಣ್ಗಾವಲು ಇಡಲಾಗಿದೆ. ಕ್ರಿಮಿನಲ್‌ಗಳನ್ನು ಕ್ರಿಮಿನಲ್‌ಗಳನ್ನಾಗಿಯೇ ಉಪಚರಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ' ಎಂದು ಹೇಳಿದರು.

ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ನಿರ್ಬಂಧ ಸಡಿಲ (ಮಂಗಳೂರು ವರದಿ): ಮೂರು ಹತ್ಯೆಗಳ ಕಾರಣಕ್ಕಾಗಿ ಮೂಡಿದ್ದ ಆತಂಕದ ವಾತಾವರಣವನ್ನು ನಿವಾರಿಸಲು ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ವಿಧಿಸಲಾಗಿದ್ದ ನಿರ್ಬಂಧಗಳನ್ನು ಈಗ ಭಾಗಶಃ ಸಡಿಸಲಿಸಲಾಗಿದೆ.

ಸಂಜೆ 6ರಿಂದ ಬೆಳಿಗ್ಗೆ 6ರ ವರೆಗಿನ ನಿರ್ಬಂಧ ಸಡಿಲಗೊಳಿಸಿ, ಆ.5ರಿಂದ ಮುಂದಿನ ಮೂರು ದಿನಗಳವರೆಗೆ ರಾತ್ರಿ 9 ಗಂಟೆಯವರೆಗೆ ಅಂಗಡಿ, ಮಾಲ್‌ಗಳನ್ನು ತೆರೆಯಲು ಜಿಲ್ಲಾಡಳಿತ ಅನುಮತಿ ನೀಡಿದೆ. ಆ.5ರಿಂದ ಮದ್ಯದ ಅಂಗಡಿಗಳನ್ನು ತೆರೆಯಲು ಅನುಮತಿ ನೀಡಿದ್ದು, ಸಂಜೆ 6 ಗಂಟೆಯೊಳಗೆ ಮುಚ್ಚಬೇಕು ಎಂದು ಸೂಚಿಸಿದೆ.

ಸಿಆರ್‌ಪಿಸಿ 144 ಸೆಕ್ಷನ್ ಅಡಿಯಲ್ಲಿ ಉಳಿದ ನಿರ್ಬಂಧಗಳು ಈಗಿನಂತೆ ಜಾರಿಯಲ್ಲಿರುತ್ತವೆ ಎಂದು ಜಿಲ್ಲಾಧಿಕಾರಿ ಡಾ.ರಾಜೇಂದ್ರ ಕೆ.ವಿ ಅವರು ತಿಳಿಸಿದ್ದಾರೆ.

ಅರ್ಧಗಂಟೆಯಲ್ಲೇ ಆದೇಶ ವಾಪಸ್

ಮಂಗಳೂರು ನಗರದಲ್ಲಿ ಆ.5ರಿಂದ ಮೂರು ದಿನ ಸಂಜೆ 6ರಿಂದ ಬೆಳಿಗ್ಗೆ 6 ಗಂಟೆಯವರೆಗೆ ದ್ವಿಚಕ್ರ ವಾಹನಗಳಲ್ಲಿ 18 ವರ್ಷ ಮೇಲಿನ ಪುರುಷ ಸಹ ಸವಾರರ ಸಂಚಾರವನ್ನು ನಿರ್ಬಂಧಿಸಿ ನಗರ ಪೊಲೀಸ್ ಕಮಿಷನರ್ ಎನ್. ಶಶಿಕುಮಾರ್ ಗುರುವಾರ ಸಂಜೆ ಆದೇಶ ಹೊರಡಿಸಿದ್ದರು. ಅರ್ಧ ಗಂಟೆಯಲ್ಲೇ ಆದೇಶವನ್ನು ವಾಪಸ್ ಪಡೆದರು.

ಯಾರು ಯಾರಿಗೆ ಕೈ ಎತ್ತುತ್ತಾರೆ ನೋಡೋಣ– ಎಚ್‌ಡಿಕೆ

ರಾಮನಗರ: 'ನಾನು ಕೈ ಎತ್ತಿಸಿಕೊಂಡು ಬೆನ್ನಿಗೆ ಚೂರಿ ಹಾಕಿಸಿಕೊಂಡಾಗಿದೆ. ಈಗ ಇಬ್ಬರು ಕೈ ಎತ್ತಿ ಜನರಿಗೆ ತೋರಿಸಿದ್ದಾರೆ. ಯಾರು ಯಾರ ಬೆನ್ನಿಗೆ ಚೂರಿ ಹಾಕುತ್ತಾರೆ ಅಂತ ಮುಂದೆ ನೋಡೋಣ' ಎಂದು ಜೆಡಿಎಸ್ ಶಾಸಕಾಂಗ ಪಕ್ಷದ ನಾಯಕ ಎಚ್.ಡಿ. ಕುಮಾರಸ್ವಾಮಿ ವ್ಯಂಗ್ಯವಾಡಿದರು.

ದಾವಣಗೆರೆಯಲ್ಲಿ ನಡೆದ ಸಿದ್ದರಾಮಯ್ಯ ಜನ್ಮದಿನಾಚರಣೆ ಕಾರ್ಯಕ್ರಮದ ವೇದಿಕೆಯಲ್ಲಿ ಸಿದ್ದರಾಮಯ್ಯ ಹಾಗೂ ಡಿ.ಕೆ. ಶಿವಕುಮಾರ್ ಜೊತೆಯಾಗಿ ಕೈಎತ್ತಿ ಒಗ್ಗಟ್ಟು ಪ್ರದರ್ಶಿಸಿದ ಕುರಿತು ಚನ್ನಪಟ್ಟಣದಲ್ಲಿ ಗುರುವಾರ ಪತ್ರಕರ್ತರಿಗೆ ಅವರು ಪ್ರತಿಕ್ರಿಯೆ ನೀಡಿದರು.

'ಸಮ್ಮಿಶ್ರ ಸರ್ಕಾರದ ಸಂದರ್ಭದಲ್ಲಿ ನಾನೂ ಹೀಗೆ ಕೈ ಎತ್ತಿದ್ದೆ. ಕೈ ಎತ್ತುವುದು, ಇಳಿಸುವುದು ಸಂದರ್ಭಕ್ಕೆ ತಕ್ಕಂತೆ ನಡೆಯುತ್ತವೆ' ಎಂದರು.

'ಈ ಜನ್ಮದಲ್ಲಿ ಒಂದಾಗುವುದಿಲ್ಲ'

ಕೆ.ಆರ್.ಪೇಟೆ: 'ಸಿದ್ದರಾಮಯ್ಯ ಹಾಗೂ ಡಿ.ಕೆ.ಶಿವಕುಮಾರ್ ಹಾವು– ಮುಂಗುಸಿಯಾಗಿದ್ದು ಈ ಜನ್ಮದಲ್ಲಿ ಒಂದಾಗುವುದಿಲ್ಲ' ಎಂದು ಸಚಿವ ಆರ್.ಅಶೋಕ ಹೇಳಿದರು.

ಇಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಅವರು, 'ಡಿಕೆಶಿ ಅವರನ್ನು ಸಿದ್ದರಾಮಯ್ಯ ಬಲವಂತದಿಂದ ಆಲಿಂಗಿಸಿಕೊಂಡಿದ್ದಾರೆ. ರಾಹುಲ್ ಗಾಂಧಿ ಹೇಳಿದ ಪಾಠ ಕೇಳಿದ್ದಾರೆ. ಜನರು ಕಷ್ಟದಲ್ಲಿದ್ದಾಗ ರಾಹುಲ್ ಗಾಂಧಿ ಮುಖಂಡರಿಗೆ ಬುದ್ಧಿ ಹೇಳಬೇಕಾಗಿತ್ತು' ಎಂದರು.

ಚಿಂಚನಸೂರು ಅವಿರೋಧ ಆಯ್ಕೆ



ಬೆಂಗಳೂರು: ವಿಧಾನಪರಿಷತ್ತಿನಲ್ಲಿ ಖಾಲಿ ಇದ್ದ ಒಂದು ಸ್ಥಾನ ಭರ್ತಿ ಮಾಡಲು ನಿಗದಿಯಾಗಿದ್ದ ಉಪಚುನಾವಣೆಯಲ್ಲಿ ಬಿಜೆಪಿ ಅಭ್ಯರ್ಥಿ ಬಾಬುರಾವ್ ಚಿಂಚನಸೂರು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಸಿ.ಎಂ.ಇಬ್ರಾಹಿಂ ರಾಜೀನಾಮೆಯಿಂದ ಈ ಸ್ಥಾನ ತೆರವಾಗಿತ್ತು. ವಿಧಾನಸಭೆಯಲ್ಲಿ ಬಿಜೆಪಿಗೆ ಸಂಖ್ಯಾ ಬಲ ಇದ್ದ ಕಾರಣ, ಕಾಂಗ್ರೆಸ್ ಮತ್ತು ಜೆಡಿಎಸ್ ಪಕ್ಷ ಅಭ್ಯರ್ಥಿಗಳನ್ನು ಕಣಕ್ಕಿಳಿಸಿರಲಿಲ್ಲ.

ಸದಸ್ಯತ್ವದ ಅವಧಿ 2024 ರ ಜೂನ್ 17 ರವರೆಗೆ ಇದೆ.

ನಟ ಟೆನ್ನಿಸ್ ಕೃಷ್ಣ ಎಎಪಿಗೆ ಸೇರ್ಪಡೆ

ಬೆಂಗಳೂರು: ಹಾಸ್ಯ ನಟ ಟೆನ್ನಿಸ್ ಕೃಷ್ಣ ಅವರು ಗುರುವಾರ ಆಮ್ ಆದ್ಮಿ ಪಕ್ಷಕ್ಕೆ (ಎಎಪಿ) ಸೇರ್ಪಡೆಯಾಗಿದ್ದಾರೆ.

ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ಪೃಥ್ವಿ ರೆಡ್ಡಿ ಅವರು ಕೃಷ್ಣ ಅವರನ್ನು ಪಕ್ಷಕ್ಕೆ ಬರಮಾಡಿಕೊಂಡರು. ಕೃಷ್ಣ ಪುತ್ರ ನಾಗಾರ್ಜುನ ಸಹ ಎಎಪಿಗೆ ಸೇರ್ಪಡೆಯಾದರು.

ಹೈಕೋರ್ಟ್‌ಗೆ ಸಿಇಟಿ ಗೊಂದಲ

ಬೆಂಗಳೂರು: 2022ನೇ ಸಾಲಿನಲ್ಲಿ ವೃತ್ತಿಪರ ಕೋರ್ಸ್‌ಗಳ ಪ್ರವೇಶಕ್ಕೆ ನಡೆದ ಸಾಮಾನ್ಯ ಪ್ರವೇಶ ಪರೀಕ್ಷೆಗೆ (ಸಿಇಟಿ) 2020–21ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆಯ ಅಂಕಗಳನ್ನು ಪರಿಗಣಿಸದೇ ಇರುವ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ (ಕೆಇಎ) ಕ್ರಮವನ್ನು ಪ್ರಶ್ನಿಸಿ ಸಿಇಟಿ ಪುನರಾವರ್ತಿತ ವಿದ್ಯಾರ್ಥಿಗಳು ಹೈಕೋರ್ಟ್ ಮೆಟ್ಟಿಲೇರಿದ್ದಾರೆ.

ಚಿಕ್ಕಮಗಳೂರಿನ ಆರ್.ಈಶ್ವರ್ ಸೇರಿ 8 ವಿದ್ಯಾರ್ಥಿಗಳು ಈ ಸಂಬಂಧ ರಿಟ್ ಅರ್ಜಿ ಸಲ್ಲಿಸಿದ್ದು, ಗುರುವಾರ ನ್ಯಾಯಮೂರ್ತಿ ಎಸ್.ಆರ್. ಕೃಷ್ಣಕುಮಾರ್ ಅವರ ನ್ಯಾಯಪೀಠದ ಮುಂದೆ ವಿಚಾರಣೆಗೆ ನಿಗದಿಯಾಗಿತ್ತು. ಇದೇ ವಿಚಾರಕ್ಕೆ ಸಂಬಂಧಿಸಿದಂತೆ ಮತ್ತೊಂದು ಅರ್ಜಿ ಸಲ್ಲಿಕೆಯಾಗಿದ್ದ ಕಾರಣ ಎರಡೂ ಅರ್ಜಿಗಳನ್ನು ಒಟ್ಟಿಗೆ ವಿಚಾರಣೆ ನಡೆಸುವುದಾಗಿ ತಿಳಿಸಿದ ನ್ಯಾಯಪೀಠ ವಿಚಾರಣೆಯನ್ನು ಇದೇ 8ಕ್ಕೆ ಮುಂದೂಡಿದೆ.

'ಸಿಇಟಿ ರ‍್ಯಾಂಕ್‌ಗಳಿಗೆ 2021ನೇ ಸಾಲಿನ ದ್ವಿತೀಯ ಪಿಯು ಪರೀಕ್ಷೆಯಲ್ಲಿ ಅರ್ಜಿದಾರರು ಪಡೆದ ಅಂಕಗಳನ್ನು ಪರಿಗಣಿಸುವಂತೆ ಕೆಇಎಗೆ ನಿರ್ದೇಶಿಸಬೇಕು. ಅರ್ಜಿ ಇತ್ಯರ್ಥವಾಗುವವರೆಗೂ ಸಿಇಟಿ ಕೌನ್ಸೆಲಿಂಗ್‌ಗೆ ತಡೆ ನೀಡಬೇಕು' ಎಂದು ಅರ್ಜಿದಾರರು ಕೋರಿದ್ದಾರೆ.

'ಅಲ್ ಕೈದಾ' ಸೇರಲು ಸಿದ್ಧತೆ; ಇಬ್ಬರ ವಿಚಾರಣೆ

ಬೆಂಗಳೂರು: ಅಲ್ ಕೈದಾ ಉಗ್ರ ಸಂಘಟನೆ ಸೇರಲು ಹೊರಟಿದ್ದ ಪಶ್ಚಿಮ ಬಂಗಾಳದ ಅಬ್ದುಲ್ ಅಲೀಂ ಮಂಡಲ್ ಜೊತೆ ಒಡನಾಟವಿಟ್ಟುಕೊಂಡಿದ್ದ ಸ್ನೇಹಿತ ಅಬು ಸೈಯದ್‌ನನ್ನು ನಗರದ ಸಿಸಿಬಿ ಪೊಲೀಸರು ವಿಚಾರಣೆ ಮಾಡಿದ್ದಾರೆ.

ತಮಿಳುನಾಡಿನ ಸೇಲಂನ ಗಾರ್ಮೆಂಟ್ಸ್ ಕಾರ್ಖಾನೆಯೊಂದರ ಕಾರ್ಮಿಕ ಅಬ್ದುಲ್ ಅಲೀಂನನ್ನು ಈಚೆಗೆ ಸಿಸಿಬಿ ಪೊಲೀಸರು ಬಂಧಿಸಿದ್ದರು. ಈತನ ವಿಚಾರಣೆ ವೇಳೆ ಸಿಕ್ಕ ಮಾಹಿತಿ ಆಧರಿಸಿ ತಂಡ ಕೊಲ್ಕತ್ತಗೆ ಹೋಗಿದೆ.

'ಅಲ್ ಕೈದಾ ಸಂಘಟನೆ ಸೇರಲು ಹೊರಟಿದ್ದ ಅಬ್ದುಲ್ ಅಲೀಂ ಜೊತೆ ಸೈಯದ್ ಹೆಚ್ಚು ಮಾತನಾಡುತ್ತಿದ್ದ. ಅಬು ಸೈಯದ್ ಸಹ ಅಲ್ ಕೈದಾ ಸಂಘಟನೆ ಸೇರಲು ಇಚ್ಛಿಸಿರುವ ಮಾಹಿತಿ ಇತ್ತು. ಹೀಗಾಗಿ, ಕೊಲ್ಕತ್ತದಲ್ಲಿ ಆತನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಲಾಗಿದೆ. ಆರೋಪಕ್ಕೆ ಸಂಬಂಧಿಸಿ ಪುರಾವೆಗಳು ಸಿಗದ ಕಾರಣ ವಿಚಾರಣೆ ಬಳಿಕ ಅಬು ಸೈಯದ್‌ನನ್ನು ಬಿಡಲಾಗಿದೆ' ಎಂದು ಮೂಲಗಳು ಹೇಳಿವೆ.

'ಶಂಕಿತ ಅಬ್ದುಲ್ ಅಲೀಂ, ಸಾಮಾಜಿಕ ಮಾಧ್ಯಮಗಳ ಮೂಲಕ ಅಲ್‌ಕೈದಾ ಉಗ್ರರನ್ನು ಸಂಪರ್ಕಿಸುತ್ತಿದ್ದ. ಇದಕ್ಕೆ ಅಬು ಸೈಯದ್ ಸಹಾಯ ಮಾಡುತ್ತಿದ್ದ' ಎಂದು ಮೂಲಗಳು ತಿಳಿಸಿವೆ.

'25 ವರ್ಷದ ಪ್ರಗತಿಗೆ ಮಾರ್ಗಪಥ ಸಿದ್ಧ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ದೇಶದ ಭವಿಷ್ಯದ 25 ವರ್ಷದ ಪ್ರಗತಿಗೆ ಮಾರ್ಗಪಥವನ್ನು ಈಗಲೇ ರೂಪಿಸಲಾಗಿದೆ. ಅದರ ಯಶಸ್ಸಿಗೆ ಎಲ್ಲರೂ ಕೈಜೋಡಿಸಬೇಕು' ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದರು.

ಕೇಂದ್ರ ಸಂಸ್ಕೃತಿ ಸಚಿವಾಲಯ ಭಾರತೀಯ ಕೈಗಾರಿಕಾ ಒಕ್ಕೂಟದ (ಸಿಐಐ) ಸಹಯೋಗದಲ್ಲಿ ನಗರದಲ್ಲಿ ಆಯೋಜಿಸಿದ್ದ ಮೂರನೇ ಆವೃತ್ತಿಯ 'ಸಂಕಲ್ಪ್ ಸೆ ಸಿದ್ಧಿ' ಸಮ್ಮೇಳನದಲ್ಲಿ ಅವರು ಮಾತನಾಡಿದರು. 'ಪ್ರಧಾನಿ ಮೋದಿ ನೇತೃತ್ವದ ಸರ್ಕಾರ 8 ವರ್ಷಗಳಲ್ಲಿ 'ಸರ್ವ ವ್ಯಾಪಿ, ಸರ್ವ ಸ್ಪರ್ಶಿ'ಯಾಗಿ ಕಾರ್ಯನಿರ್ವಹಿಸಿದೆ' ಎಂದರು.

'ಸ್ವಾತಂತ್ರ್ಯ ಹೋರಾಟಗಾರರ ತ್ಯಾಗ, ಬಲಿದಾನ ಬಗ್ಗೆ ಅರಿವು ಮೂಡಿಸುವುದು, ಸ್ವಾತಂತ್ರ್ಯದ ಶತಮಾನೋತ್ಸವ ವೇಳೆಗೆ ಎಲ್ಲ ಕ್ಷೇತ್ರಗಳಲ್ಲಿ ಭಾರತ ಪ್ರಥಮ ಸ್ಥಾನಕ್ಕೇರುವ ಸಂಕಲ್ಪ, ಯೋಜನೆ, ಅಭಿವೃದ್ಧಿ, ಉದ್ಯಮ, ವಹಿವಾಟು ಹೀಗೆ ಎಲ್ಲ ಒಳಗೊಂಡು ಅಮೃತ ಸ್ವಾತಂತ್ರ್ಯೋತ್ಸವ ಆಚರಣೆಗೆ ಮಹತ್ವ ಬಂದಿದೆ' ಎಂದು ಹೇಳಿದರು.

'2014ಕ್ಕೂ ಮೊದಲು ಕೇಂದ್ರ ಸರ್ಕಾರದ ನೀತಿಗಳಿಗೆ ಪಾರ್ಶ್ವವಾಯು ಬಡಿದಂತಿತ್ತು. ಪ್ರಧಾನಿಯವರನ್ನು ಹಿಂದೆ ಯಾರೂ ಪ್ರಧಾನಿಯಂತೆ ಕಾಣುತ್ತಿರಲಿಲ್ಲ. ಪ್ರತಿಯೊಬ್ಬ ಕೇಂದ್ರ ಸಚಿವರು ಪ್ರಧಾನಿ ಎಂಬಂತೆ ವರ್ತಿಸುತ್ತಿದ್ದರು. ಆರ್ಥಿಕತೆ ಬೆಳಗಣಿಗೆಗೆ ಗೊತ್ತು ಗುರಿ ಇರಲಿಲ್ಲ. 2014ರಲ್ಲಿ ಜನಾದೇಶ ಪಡೆದ ಪ್ರಧಾನಿ ನರೇಂದ್ರ ಮೋದಿ, ಅಭಿವೃದ್ಧಿಗೆ ಒಂದು ನಿರ್ದಿಷ್ಟ ಪಥ ರೂಪಿಸಿದರು' ಎಂದು ತಿಳಿಸಿದರು.

'ಮುಂಬರುವ ವರ್ಷಗಳಲ್ಲಿ ತಲಾ 100 ವಿಮಾನ ನಿಲ್ದಾಣ ಮತ್ತು ಹೆಲಿಪೋರ್ಟ್ ನಿರ್ಮಿಸುವ ಚಿಂತನೆಯಿದೆ' ಎಂದು ಕೇಂದ್ರ ಸಂಸ್ಕೃತಿ ಸಚಿವ ಜಿ. ಕಿಶನ್ ರೆಡ್ಡಿ ಅವರು ಹೇಳಿದರು.



'ಸಂಕಲ್ಪದಿಂದ ಸಿದ್ಧಿ' ಕಾರ್ಯಕ್ರಮಕ್ಕೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಮಳೆಯಿಂದಾಗಿ ಕೊಡೆ ಹಿಡಿದು ಬಂದ ಪರಿ ಪ್ರಜಾವಾಣಿ ಚಿತ್ರ/ ರಂಜು ಪಿ.

'ಆತ್ಮವಿಶ್ವಾಸ ತುಂಬಿದ ಮೋದಿ'

'ರಾಜ್ಯದಲ್ಲಿ ಸಂಶೋಧನೆ ಮತ್ತು ಅಭಿವೃದ್ಧಿ ನೀತಿಗೆ ಅನುಮೋದನೆ ನೀಡಲಾಗಿದೆ. ಗ್ಯಾರೇಜ್ ಸಂಶೋಧನೆಗಳಿಂದ ಹಿಡಿದು ಸಾಂಸ್ಥಿಕ ಸಂಶೋಧನೆಗಳವರೆಗೆ ಪ್ರೋತ್ಸಾಹ, ಸಹಕಾರವನ್ನು ನೀಡಲಾಗುವುದು' ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ತಿಳಿಸಿದರು.

'ಪ್ರಧಾನಿ ಮೋದಿ ಪ್ರತಿಯೊಬ್ಬರಲ್ಲೂ ಆತ್ಮವಿಶ್ವಾಸ ತುಂಬಿದ್ದಾರೆ. ದೇಶಕ್ಕೆ ದೂರದೃಷ್ಟಿಯ, ಶಕ್ತಿಯುತ ನಾಯಕ ಬೇಕಾಗುತ್ತದೆ. ಈ ಗುಣಗಳನ್ನು ಪ್ರಧಾನಿ ಮೋದಿ ಹಾಗೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರಲ್ಲಿ ಕಾಣಬಹುದು' ಎಂದರು.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ



ಸುಭಾಷಿತ

ಜೀವ ನಮ್ಮ ಮಾತನ್ನು ಕೇಳುವುದಿಲ್ಲ, ಯಾವಾಗ ಬೇಕಾದರೂ ಹೋಗಬಹುದು. ಜೀವನ ನಮ್ಮ ಮಾತನ್ನು ಕೇಳುತ್ತದೆ, ಹೇಗೆ ಬೇಕಾದರೂ ರೂಪಿಸಿಕೊಳ್ಳಬಹುದು.

– ಸ್ವಾಮಿ ವಿವೇಕಾನಂದ

ಮಳೆಹಾನಿ: ಸಂತ್ರಸ್ತರ ಸಂಕಷ್ಟಕ್ಕೆ ಸ್ಪಂದಿಸಿ, ತಕ್ಷಣ ಪರಿಹಾರ ಕೊಡಿ

ಅಧಿಕ ಮಳೆ, ಉಕ್ಕಿ ಹರಿಯುತ್ತಿರುವ ನದಿ-ಹಳ್ಳಗಳು ಹಾಗೂ ಭೂಕುಸಿತದಿಂದ ಆಗಿರುವ ಹಾನಿಗೆ ಅರ್ಧ ರಾಜ್ಯ ನಲುಗಿದೆ. ಮಳೆ ಬಂದು ಹಾನಿ ಸಂಭವಿಸಿದಾಗಷ್ಟೆ ಎಚ್ಚೆತ್ತುಕೊಳ್ಳುವ ಸರ್ಕಾರದ ನಡೆಯಿಂದಾಗಿ ಜನ ಸಂಕಷ್ಟ ಅನುಭವಿಸುವಂತಾಗಿದೆ. ಮಳೆಯಿಂದಾಗಿ 64 ಮಂದಿ ಪ್ರಾಣ ಕಳೆದುಕೊಂಡಿದ್ದಾರೆ. 18,280 ಹೆಕ್ಟೇರ್ ಕೃಷಿ ಬೆಳೆ, 4,565 ಹೆಕ್ಟೇರ್ ತೋಟಗಾರಿಕೆ ಬೆಳೆ, 1,730 ಕಿ.ಮೀ. ಲೋಕೋಪಯೋಗಿ ರಸ್ತೆ, 5,419 ಗ್ರಾಮೀಣ ರಸ್ತೆಗಳು, 899 ಕಿರು ಸೇತುವೆಗಳು, 4,324 ಶಾಲೆಗಳು, 55 ಆರೋಗ್ಯ ಕೇಂದ್ರಗಳು, 2,146 ಅಂಗನವಾಡಿಗಳು, 16,510 ವಿದ್ಯುತ್ ಕಂಬಗಳು, 1,880 ವಿದ್ಯುತ್ ಪರಿವರ್ತಕಗಳು ಹಾಗೂ 61 ಕೆರೆಗಳು ಹಾನಿಗೊಳಗಾಗಿವೆ. 8,057 ಜನರನ್ನು ಸುರಕ್ಷಿತ ಸ್ಥಳಕ್ಕೆ ಸ್ಥಳಾಂತರ ಮಾಡಲಾಗಿದೆ. ಕಾಳಜಿ ಕೇಂದ್ರಗಳಲ್ಲಿ 6,933 ಮಂದಿ ನೆಲೆ ಕಂಡುಕೊಂಡಿದ್ದಾರೆ ಎಂದು ಕಂದಾಯ ಸಚಿವ ಆರ್. ಅಶೋಕ ಅವರು ಮಾಹಿತಿ ನೀಡಿದ್ದಾರೆ. ಇವಿಷ್ಟೂ ಸರ್ಕಾರ ಕೊಟ್ಟ ಲೆಕ್ಕ. ಲೆಕ್ಕಕ್ಕೆ ಸಿಗದೇ ಇರುವ ಸಾವು-ನೋವು ಮತ್ತು ನಷ್ಟದ ಪ್ರಮಾಣ ಹಲವು ಪಟ್ಟು ಹೆಚ್ಚು ಇದ್ದಿರುವ ಸಾಧ್ಯತೆ ಇದೆ. 'ಜಿಲ್ಲಾಧಿಕಾರಿಗಳ ಪಿ.ಡಿ. ಖಾತೆಯಲ್ಲಿ ಸಾಕಷ್ಟು ಹಣವಿದೆ. ಪರಿಹಾರ ಕಾರ್ಯಕ್ಕೆ ತೊಂದರೆ ಇಲ್ಲ' ಎನ್ನುವುದು ಮಳೆಯಿಂದ ಹಾನಿ ಸಂಭವಿಸಿದ ಕೂಡಲೇ ಸರ್ಕಾರ ನಡೆಸುವವರು ಹೇಳುವ ಮಾತು. ಜನರ ತೊಂದರೆ ಪರಿಹರಿಸಲು ಹಣವೊಂದೇ ಸಾಲದು. ಜನರ ನೋವಿಗೆ ಮಿಡಿಯುವ ಮನಃಸ್ಥಿತಿ, ತಕ್ಷಣಕ್ಕೆ ಬೇಕಾದ ಆಶ್ರಯ, ಆಹಾರ, ಹೊದಿಕೆ ಮತ್ತು ಮಕ್ಕಳ ಓದಿಗೆ ಅಗತ್ಯವಾದ ನೆರವನ್ನು ಸಕಾಲದಲ್ಲಿ ಒದಗಿಸುವ ಬದ್ಧತೆ ಕೂಡ ಅಗತ್ಯ. 2019ರಲ್ಲಿ ಹೀಗೆಯೇ ಹಾನಿಯಾದಾಗ ಮುಖ್ಯಮಂತ್ರಿಯಾಗಿದ್ದವರು ಬಿ.ಎಸ್. ಯಡಿಯೂರಪ್ಪ. ಸಚಿವ ಸಂಪುಟ ವಿಸ್ತರಣೆ ಮಾಡಲು ಬಿಜೆಪಿ ವರಿಷ್ಠರು ಅವಕಾಶ ಕೊಟ್ಟಿರಲಿಲ್ಲ. ಅವರು ಏಕಾಂಗಿಯಾಗಿ ರಾಜ್ಯ ಸುತ್ತಿದ್ದರು. ಹಾನಿ ಪ್ರದೇಶಗಳಿಗೆ ದಕ್ಷ ನೋಡಲ್ ಅಧಿಕಾರಿಗಳನ್ನು ನೇಮಿಸಿ, ಸಂಕಷ್ಟದಲ್ಲಿದ್ದವರಿಗೆ ತಕ್ಷಣವೇ ಪರಿಹಾರ ತಲುಪುವಂತೆ ನೋಡಿಕೊಂಡಿದ್ದರು. ಮಳೆ-ಪ್ರವಾಹ ಇಳಿಯುವವರೆಗೆ ಜಿಲ್ಲೆಯಲ್ಲೇ ಮೊಕ್ಕಾಂ ಮಾಡಿ, ಪರಿಹಾರ ಕಾರ್ಯಾಚರಣೆಗೆ ಮಾರ್ಗದರ್ಶನ ಮಾಡುವಂತೆ ಉಸ್ತುವಾರಿ ಸಚಿವರಿಗೆ ಈ ಹಿಂದೆ ಮುಖ್ಯಮಂತ್ರಿಗಳಾಗಿದ್ದವರು ತಾಕೀತು ಮಾಡಿದ್ದರು. ಪರಿಹಾರದ ನಿರ್ಣಾಯಕ ಅಧಿಕಾರವನ್ನೂ ಅವರಿಗೇ ಕೊಟ್ಟಿದ್ದರು. ಅದರಿಂದಾಗಿ ಪರಿಹಾರ ಕೆಲಸಗಳು ತುಸು ವೇಗ ಪಡೆದುಕೊಳ್ಳಲು ಸಾಧ್ಯವಾಗಿತ್ತು. ಸಂತ್ರಸ್ತರಲ್ಲಿ ಒಂದಷ್ಟು ವಿಶ್ವಾಸ ಮೂಡಿಸುವಲ್ಲಿಯೂ ಈ ಉಪಕ್ರಮ ನೆರವಾಗಿತ್ತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಹಾಗೂ ಕಂದಾಯ ಸಚಿವರು ಮಳೆಹಾನಿ ಪ್ರದೇಶಗಳಿಗೆ ಭೇಟಿ ನೀಡಿ ಈಗ ಪರಿಶೀಲನೆ ನಡೆಸಿದ್ದಾರೆ. ಸಚಿವರು ತಮ್ಮ ಉಸ್ತುವಾರಿ ಜಿಲ್ಲೆಯಲ್ಲೇ ಮೊಕ್ಕಾಂ ಮಾಡಿ ಪರಿಹಾರ ಕಾರ್ಯಗಳ ಮೇಲೆ ನಿಗಾ ಇಟ್ಟ ವಿವರಗಳು ಇಲ್ಲ. ಜಿಲ್ಲೆಯಲ್ಲಿ ಮೊಕ್ಕಾಂ ಹೂಡುವಂತೆ ಮುಖ್ಯಮಂತ್ರಿ ಸೂಚಿಸಿದರೂ ಕೆಲವರು ಇದನ್ನು ಪಾಲಿಸಿಲ್ಲ. ಇನ್ನು ಕೆಲವರು ಅತಿಥಿಗಳಂತೆ ಜಿಲ್ಲೆಗೆ ಹೋಗಿ ಬರುತ್ತಿದ್ದಾರೆ. ಜನರ ಕಷ್ಟಗಳಿಗೆ ಸ್ಪಂದಿಸುವ ವಿಚಾರದಲ್ಲಿ ಅಸಡ್ಡೆ ತೋರುವುದು ಸರಿಯಲ್ಲ.



ಪರಿಹಾರ ಕಾರ್ಯಗಳಿಗೆ ರಾಜ್ಯ ಸರ್ಕಾರವು ಚುರುಕು ಮುಟ್ಟಿಸಬೇಕು. ಸಂತ್ರಸ್ತರಿಗೆ ಆಸರೆಯಾಗಿ ನಿಲ್ಲಬೇಕು. ಜನಪ್ರತಿನಿಧಿಗಳು ಸ್ಥಳದಲ್ಲೇ ಮೊಕ್ಕಾಂ ಹೂಡಿ ಪರಿಹಾರ ಕಾರ್ಯಗಳ ನಿಗಾ ವಹಿಸಬೇಕು

ಮಳೆ- ಪ್ರವಾಹದಿಂದ ಹಾನಿ ಆಗುವುದು ಹೊಸತೇನೂ ಅಲ್ಲ. ಸರ್ಕಾರದ ಅಂದಾಜಿನಂತೆ, 2019ರಿಂದ 2021ರವರೆಗೆ ಮೂರು ವರ್ಷಗಳಲ್ಲಿ ಮಳೆಯಿಂದ ಆಗಿರುವ ಒಟ್ಟಾರೆ ನಷ್ಟ ₹ 2 ಲಕ್ಷ ಕೋಟಿ. ರಾಷ್ಟ್ರೀಯ ವಿಪತ್ತು ಪರಿಹಾರ ನಿಧಿಯ ಮಾರ್ಗಸೂಚಿ ಪ್ರಕಾರ ಸುಮಾರು ₹ 55 ಸಾವಿರ ಕೋಟಿಯಷ್ಟು ನಷ್ಟವು ಬೆಳೆ ಹಾಗೂ ಮನೆಗಳ ಹಾನಿಯಿಂದ ಆಗಿದೆ. ಕೇಂದ್ರ ಸರ್ಕಾರವು ಸುಮಾರು ₹ 4,200 ಕೋಟಿಯಷ್ಟು ಪರಿಹಾರವನ್ನು ರಾಜ್ಯಕ್ಕೆ ನೀಡಿದೆ. ಒಕ್ಕೂಟ ವ್ಯವಸ್ಥೆಯಲ್ಲಿ ರಾಜ್ಯಗಳ ಕಷ್ಟಕ್ಕೆ ಹೆಗಲುಕೊಟ್ಟು, ಆಸರೆಯಾಗಬೇಕಾದ ಕೇಂದ್ರ ಸರ್ಕಾರವು ಇದರಿಂದ ನುಣುಚಿಕೊಳ್ಳುತ್ತಲೇ ಇದೆ. ಕೃಷಿ ಉತ್ಪನ್ನ ಹಾಗೂ ನಿರ್ಮಾಣ ಸಾಮಗ್ರಿಯ ಬೆಲೆ ಏರಿಳಿತ ಆಧರಿಸಿ ಪ್ರತೀ ಐದು ವರ್ಷಗಳಿಗೊಮ್ಮೆ ಪರಿಹಾರದ ಮೊತ್ತ ಪರಿಷ್ಕರಣೆಯಾಗಬೇಕು. 2015ರಲ್ಲಿ ಪರಿಷ್ಕರಣೆಯಾಗಿದ್ದ ಈ ದರ, 2020ಕ್ಕೆ ಪರಿಷ್ಕರಣೆ ಆಗಬೇಕಿತ್ತು. ಅವಧಿ ಮುಗಿದು ಎರಡು ವರ್ಷಗಳಾದರೂ ಪರಿಹಾರ ಮೊತ್ತವನ್ನು ಪರಿಷ್ಕರಣೆ ಮಾಡುವ ಕುರಿತು ಕೇಂದ್ರ ಆಸಕ್ತಿ ತೋರಿಲ್ಲ. ಇದರಿಂದಾಗಿ ರಾಜ್ಯ ಸರ್ಕಾರಗಳ ಸಾಲದ ಮೊತ್ತ ಹೆಚ್ಚುತ್ತಿದೆ. 15ನೇ ಹಣಕಾಸು ಆಯೋಗದ ಪ್ರಾಥಮಿಕ ವರದಿಯಲ್ಲಿ ಕರ್ನಾಟಕವು ಪ್ರವಾಹಪೀಡಿತ ರಾಜ್ಯಗಳಲ್ಲಿ ಒಂದು ಎಂದು ಉಲ್ಲೇಖಗೊಂಡಿತ್ತು. ಅನುದಾನ ನಿಗದಿ ಮಾಡುವಾಗ ಹೆಚ್ಚಿನ ಆದ್ಯತೆ ನೀಡಬೇಕು ಎಂದಿತ್ತು. ಪ್ರಾಕೃತಿಕ ವಿಕೋಪ ಮತ್ತು ಇತರ ವೆಚ್ಚಗಳಿಗಾಗಿ ಕರ್ನಾಟಕಕ್ಕೆ ಒಟ್ಟಾರೆ ₹5,495 ಕೋಟಿ ನೆರವು ನೀಡಬೇಕು ಎಂಬ ಶಿಫಾರಸು ಮಧ್ಯಂತರ ವರದಿಯಲ್ಲಿಯೂ ಇತ್ತು. ಅಂತಿಮ ವರದಿಯಲ್ಲಿ ಇದು ಕಾಣೆಯಾಗಿದೆ. ರಾಜ್ಯಗಳಲ್ಲಿನ ಮಳೆಹಾನಿ ಪರಿಶೀಲಿಸಿ ಪರಿಹಾರ ಕೊಡಿಸುವ ಹೊಣೆ ಕೇಂದ್ರ ಗೃಹ ಸಚಿವರದ್ದಾಗಿದೆ. ಅಮಿತ್ ಶಾ ಅವರು ಉದ್ಯಮಿಗಳ ಸಭೆಯೊಂದರಲ್ಲಿ ಪಾಲ್ಗೊಳ್ಳಲು ಈ ಸಂಕಟದ ಹೊತ್ತಿನಲ್ಲೇ ಕರ್ನಾಟಕಕ್ಕೆ ಬಂದಿದ್ದರು. ಇದರೊಂದಿಗೆ ಪ್ರವಾಹಪೀಡಿತ ಪ್ರದೇಶಗಳಿಗೂ ಅವರು ಭೇಟಿ ನೀಡಬಹುದಿತ್ತು. ಅದು ಆಗಲಿಲ್ಲ. ಇದೇನೇ ಇರಲಿ, ಪರಿಹಾರ ಕಾರ್ಯಗಳಿಗೆ ರಾಜ್ಯ ಸರ್ಕಾರವು ಚುರುಕು ಮುಟ್ಟಿಸಬೇಕು. ಸಂತ್ರಸ್ತರಿಗೆ ಆಸರೆಯಾಗಿ ನಿಲ್ಲಬೇಕು. ಅಲ್ಲದೆ, ಕೇಂದ್ರ ಸರ್ಕಾರದಿಂದ ರಾಜ್ಯಕ್ಕೆ ಸಿಗಬೇಕಾದ ಪಾಲನ್ನು ಪಡೆಯಲು ಒತ್ತಡ ಹೇರುವ ಕೆಲಸವೂ ಆಗಬೇಕು.

ದಿನದ ಟ್ವೀಟ್

ಕನ್ನಡ ಬಳಸಿ

ಕನ್ನಡಕ್ಕಿಂತ ದೊಡ್ಡವರು ಯಾರೂ ಇಲ್ಲ. ಕರ್ನಾಟಕದಲ್ಲಿ ನಡೆಯುವ ಕಾರ್ಯಕ್ರಮದಲ್ಲಿ ಕನ್ನಡ ಬಳಸಿ.



ಪ್ರಖ್ಯಾತ ಪುತ್ತೂರು, ನಾಗರಿಕ

ಕಿಡಿನುಡಿ

ಗುಜರಾತ್ ವಿಧಾನಸಭೆಗೆ ನಡೆಯಲಿರುವ ಚುನಾವಣೆಯಲ್ಲಿ ಅಮಿತ್ ಶಾ ಅವರನ್ನು ಮುಖ್ಯಮಂತ್ರಿ ಅಭ್ಯರ್ಥಿಯನ್ನಾಗಿ ಬಿಜೆಪಿ ಘೋಷಿಸಲಿದೆ ಎಂಬುದು ನಿಜವೇ?



ಅರವಿಂದ ಕೇಜ್ರಿವಾಲ್, ಎಎಪಿ ಸಂಚಾಲಕ

25 ವರ್ಷಗಳ ಹಿಂದೆ

ಮಂಗಳವಾರ, 5-8-1997

• 'ಕೇಸರಿ ಆಸ್ತಿಯ ಸಿಬಿಐ ತನಿಖೆ ದೋಷಯುಕ್ತ'

ನವದೆಹಲಿ, ಆ.4 (ಪಿಟಿಐ)– ಕಾಂಗ್ರೆಸ್ ಅಧ್ಯಕ್ಷ ಸೀತಾರಾಂ ಕೇಸರಿ ಅವರು ತಮ್ಮ ಆದಾಯ ಮೂಲಗಳಿಗಿಂತಲೂ ಹೆಚ್ಚಿಗೆ ಆಸ್ತಿಗಳನ್ನು ಹೊಂದಿರುವ ಬಗ್ಗೆ ಸಿಬಿಐ ನಡೆಸಿದ ತನಿಖೆಯಲ್ಲಿ ಸಾಕಷ್ಟು ಲೋಪದೋಷಗಳಿವೆ ಎಂದು ಇಂದು ಹೇಳಿರುವ ದೆಹಲಿ ಹೈಕೋರ್ಟ್, ಮೂರು ಪ್ರಮುಖ ವಿಷಯಗಳಿಗೆ ಸಂಬಂಧಿಸಿದಂತೆ ಸಿಬಿಐನಿಂದ ಸ್ಪಷ್ಟನೆ ಕೇಳಿದೆ.

ಕೇಸರಿ ಅವರ ಆಸ್ತಿ ಪ್ರಕರಣದ ಬಗ್ಗೆ ತನಿಖೆ ಮಾಡಿ ನೀಡಲಾಗಿರುವ ವರದಿಯಲ್ಲಿ ಸಿಬಿಐ ಅವರನ್ನು ಆರೋಪ ಮುಕ್ತರನ್ನಾಗಿಸಿದೆ. ಆದರೆ, ನ್ಯಾಯಮೂರ್ತಿ ಜಸ್ಪಾಲ್‌ಸಿಂಗ್ ಹಾಗೂ ನ್ಯಾಯಮೂರ್ತಿ ಮನಮೋಹನ ಸಿಂಗ್ ಅವರನ್ನೊಳಗೊಂಡ ವಿಭಾಗೀಯ ಪೀಠ, ಕೋರ್ಟ್ ಕೇಳಿರುವ ಪ್ರಶ್ನೆಗಳಿಗೆ ನಾಲ್ಕು ದಿನಗಳ ಒಳಗೆ ಪ್ರಮಾಣಪತ್ರ ಸಲ್ಲಿಸಬೇಕು ಎಂದು ಸಿಬಿಐಗೆ ಆದೇಶಿಸಿದೆ.

• ರೈಲಿನಲ್ಲಿ ಸ್ಫೋಟ: 19 ಮಂದಿಗೆ ಗಾಯ

ಕೋಲಾರ, ಆ.4– ಇಂದು ಬೆಳಿಗ್ಗೆ ಸುಮಾರು 6.15ರ ಸಮಯದಲ್ಲಿ ಟೇಕಲ್ ಹತ್ತಿರ ಮದುರೈ-ಬೆಂಗಳೂರು ಎಕ್ಸ್‌ಪ್ರೆಸ್ ರೈಲು ಕ್ರಾಸಿಂಗ್‌ಗಾಗಿ ನಿಂತಿದ್ದಾಗ ಬೋಗಿಯೊಳಗೆ ಸಣ್ಣ ಸ್ಫೋಟವಾಗಿದ್ದು 19 ಮಂದಿ ಗಾಯಗೊಂಡಿದ್ದಾರೆ. ಗಾಯಗೊಂಡವರೆಲ್ಲರನ್ನೂ ಕೆಜಿಎಫ್ ಸರ್ಕಾರಿ ಆಸ್ಪತ್ರೆಗೆ ಸೇರಿಸಲಾಗಿದೆ.

ಹದಿನೈದು ಬೋಗಿಗಳನ್ನು ಹೊಂದಿದ್ದ ರೈಲಿನಲ್ಲಿ ಹಿಂದಿನಿಂದ ಎರಡನೇ ಬೋಗಿಯಲ್ಲಿ ಸ್ಫೋಟವಾಗಿದೆ.

50 ವರ್ಷಗಳ ಹಿಂದೆ

ಶನಿವಾರ, 5-8-1972

• ರಾಜ್ಯಗಳಿಗೆ ಎಲ್ಲ ಕೃಷಿ ಅಗತ್ಯಗಳ ತುರ್ತು ಪೂರೈಕೆ: ಕೇಂದ್ರ ಕೃಷಿ ಖಾತೆ ಸುತ್ತೋಲೆ

ನವದೆಹಲಿ, ಆ.4– ದೇಶದ ಬಹುಭಾಗಗಳಲ್ಲಿ ಸಾಕಷ್ಟು ಮಳೆ ಬೀಳದೆ ಉಂಟಾಗಿರುವ ಗಂಭೀರ ಅಭಾವ ಪರಿಸ್ಥಿತಿಯನ್ನು ಸಮರ್ಪಕವಾಗಿ ಎದುರಿಸಲು ಕೇಂದ್ರ ಕೃಷಿ ಸಚಿವ ಖಾತೆ ಇಂದು ತ್ವರಿತಗತಿಯಲ್ಲಿ ಕಾರ್ಯೋನ್ಮುಖವಾಯಿತು.

ತುರ್ತು ಆದ್ಯತೆ ನೀಡಿ, ಕೊರತೆ ನೀಗಲು ಪೂರ್ಣ ಧನಸಹಾಯ ನೀಡುವ ಭರವಸೆಯಿತ್ತು, ರಾಜ್ಯ ಸರ್ಕಾರಗಳು ಕೂಡಲೇ ಸಾಕಷ್ಟು ಮಳೆಯಾಗದೆ ಹಾಗೂ ಬಹುಕಾಲದಿಂದ ಅನಾವೃಷ್ಟಿಯ ಕಾರಣ ಉಂಟಾಗಿರುವ ನಷ್ಟ ಎಷ್ಟೆಂಬುದನ್ನು ತಿಳಿಸಬೇಕು ಎಂದು ಕೇಳಿದೆ.

ಈಗಿನ ಅಭಾವಸ್ಥಿತಿಯ ನಿವಾರಣೆಗೆ ಸರ್ವ ಪ್ರಯತ್ನ ನಡೆಸಬೇಕೆಂದು ರಾಜ್ಯ ಸರ್ಕಾರಗಳಿಗೆ ತಿಳಿಸಿದೆ.

• ದುರ್ಬಲ ವರ್ಗಗಳ ಜನರಿಗೆ ನೆರವಾಗುವ ಸರ್ಕಾರದ ನೀತಿ ಅರಿಯಲು ಪೊಲೀಸರಿಗೆ ಕರೆ

ಬೆಂಗಳೂರು, ಆ.4– ದುರ್ಬಲ ವರ್ಗಗಳವರಿಗೆ ನೆರವಾಗುವ ಹಾಲಿ ಸರ್ಕಾರದ ಧೋರಣೆಯನ್ನು ಅರಿತುಕೊಂಡು ಪೊಲೀಸರು ಆ ರೀತಿ ನಡೆಯಬೇಕೆಂದು ಮುಖ್ಯಮಂತ್ರಿ ಡಿ.ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ತಿಳಿಸಿದರು.

'ಇದುವರೆಗೆ ಆಸ್ತಿವಂತರು ಮತ್ತು ಸಮಾಜದಲ್ಲಿ ಮೇಲ್ಮಟ್ಟದಲ್ಲಿರುವವರ ಕಡೆಗೆ ಒಲವು ತೋರಿಸಲಾಗುತ್ತಿತ್ತು. ಈಗಿನ ಸರ್ಕಾರದ ಒಲವು ಬಡವರ ಕಡೆಗೆ ಇದೆ' ಎಂದು ಅವರು ಹೇಳಿದರು.

ಸ್ವತಂತ್ರ ಭಾರತದ ಆಶಯ ಚಿತ್ರಿಸುವ ಜಿ.ಪಿ. ರಾಜರತ್ನಂರ 'ಅಶೋಕಚಕ್ರ ಧ್ವಜ'

'ಅಶೋಕ ಭಾರತ' ನಾವು ಮರೆತೆವೇ?



ಪಡಸಾಲೆ

ರಘುನಾಥ ಚ.ಹ.

'ನಾಲ್ಕು ವರ್ಣಗಳ ಸಮರಸವಾದ ಮಿಳನ, ಮಧ್ಯದ ಚಕ್ರದ ಆ ಸರ್ವಪ್ರಭುತ್ವ, ಆರೋಹಣ ಮಾಡಿದಾಗ ಈ ಧ್ವಜ ಹಾರುವ ಲಹರೀ– ಇದರ ಆನಂದ ಕಣ್ಣಿನಿಂದ ಕಂಡು ಆನಂದಿಸಬೇಕಾದ್ದು'.

ಜಿ.ಪಿ. ರಾಜರತ್ನಂ ತಮ್ಮ 'ಸ್ವತಂತ್ರ ಭಾರತದ ಅಶೋಕಚಕ್ರ ಧ್ವಜ' ಕೃತಿಯಲ್ಲಿ ರಾಷ್ಟ್ರಧ್ವಜವನ್ನು ಕುರಿತು ಉದ್ಗರಿಸಿರುವುದು ಹೀಗೆ. ರಾಜರತ್ನಂ ಹೇಳುವ ಆ ಆನಂದ, ಸ್ವಾತಂತ್ರ್ಯ ದಿನದ ಅಮೃತ ಮಹೋತ್ಸವದ ಹಿನ್ನೆಲೆಯಲ್ಲಿ ದೇಶದಾದ್ಯಂತ ಮೈದಳೆದಿರುವಾಗ, ನಮ್ಮ ಕಣ್ಣುಗಳ ಪುಣ್ಯ ಇನ್ನೆಷ್ಟು ದೊಡ್ಡದಿರಬೇಡ!

ರಾಷ್ಟ್ರಧ್ವಜ, ರಾಷ್ಟ್ರಗೀತೆ, ರಾಷ್ಟ್ರಲಾಂಛನಗಳ ಬಗೆಗಿನ ನಮ್ಮ ಬಹುತೇಕ ಮಾತುಗಳಲ್ಲಿ ಭಾವೋತ್ಕರ್ಷದ ಪಾಲೇ ಹೆಚ್ಚು. ನಮ್ಮಲ್ಲಿ ಬಹುತೇಕರಿಗೆ, ರಾಷ್ಟ್ರೀಯ ದಿನಾಚರಣೆಗಳ ಸಂದರ್ಭದಲ್ಲಿ ನೆನಪಾಗುವ ಮತ್ತು ನಾವು ಹೊತ್ತು ಮೆರೆಸುವ ಈ ಸಂಕೇತಗಳ ಬಾಹ್ಯ ಸ್ವರೂಪದ ಅರಿವಿದೆಯೇ ಹೊರತು, ಆಕಾರದ ಹಿಂದಿನ ಆಶಯಗಳ ತಿಳಿವಳಿಕೆಯಿಲ್ಲ. ಬಾಲ್ಯದಲ್ಲಿ ಆ ತಿಳಿವು ಮೂಡಿಸುವ ಕೆಲಸವನ್ನು ಶಾಲೆಗಳೂ ಮಾಡಿಲ್ಲ, ಮಾಡುತ್ತಿಲ್ಲ. ಮಕ್ಕಳ ಪಾಡಿಗೆ ಅವು ಉರು ಹೊಡೆಯಬೇಕಾದ ಸಂಗತಿಗಳು, ಒಂದಂಕದ ಪ್ರಶ್ನೆಗಳು. 'ಅಮೃತ ಮಹೋತ್ಸವ' ಸಂದರ್ಭದಲ್ಲಿ, ತಿರಂಗವನ್ನು ಮನೆಗಳಲ್ಲಿ ಹಾರಿಸಲು ಪ್ರೇರೇಪಣೆ ನೀಡುತ್ತಿರುವ ರಾಜಕಾರಣಿಗಳಿಗೆ, ತಿರಂಗದ ಆಶಯಗಳು ಮನದಲ್ಲೂ ಅನಾವರಣಗೊಳ್ಳಬೇಕು ಎನ್ನಿಸುತ್ತಿಲ್ಲ. ಅಂಥ ಅಗತ್ಯವೂ ಅವರಿಗೆ ಅರ್ಥವಾಗುವುದಿಲ್ಲ.

ರಾಷ್ಟ್ರೀಯ ಸಂಕೇತಗಳು ಮೊದಲು ಅನಾವರಣಗೊಳ್ಳಬೇಕಾಗಿರುವುದು ಹಾಗೂ ಅನವರತ ರಾರಾಜಿಸಬೇಕಿರುವುದು ಜನ ಮನ ಗಣದಲ್ಲಿ. ಈ ಸಂಕೇತಗಳು ನಿರ್ದಿಷ್ಟ ದಿನದಂದು ಉತ್ಸವಮೂರ್ತಿಗಳಾಗಿ ಕಂಗೊಳಿಸಿ, ಉಳಿದ ದಿನಗಳಲ್ಲಿ ಕಗ್ಗತ್ತಲ ಗರ್ಭ ಸೇರಬೇಕಾದ ಸಂಗತಿಗಳಲ್ಲ; ಅನುದಿನದ ಬದುಕಿನ ಚೆಲುವಿಗೆ ಪೂರಕವಾದ ದ್ರವ್ಯ ಅವುಗಳಲ್ಲಿದೆ. ಅದನ್ನು ಮನಗಾಣಿಸುವ ಪ್ರಯತ್ನ, ಜಿ.ಪಿ. ರಾಜರತ್ನಂ ಅವರ 'ಸ್ವತಂತ್ರ ಭಾರತದ ಅಶೋಕಚಕ್ರ ಧ್ವಜ' ಕೃತಿ.


1948ರ ಜುಲೈ 22ರಂದು ಮೊದಲ ಮುದ್ರಣವಾಗಿ ಪ್ರಕಟಗೊಂಡಿರುವ, ಒಂದೂವರೆ ರೂಪಾಯಿ ಮುಖಬೆಲೆಯ ಈ ಕೃತಿ, 'ಹಿಂದ್ ಕಿತಾಬ್ ಲಿಮಿಟೆಡ್ಸ್' (ಬೊಂಬಾಯಿ) ಪ್ರಕಟಣೆ. ದೇಶಕ್ಕೆ ಸ್ವಾತಂತ್ರ್ಯ ಲಭಿಸಿ ವರ್ಷ ತುಂಬುವ ಸಂದರ್ಭದಲ್ಲಿ ಈ ಕೃತಿ ಪ್ರಕಟಗೊಂಡಿದೆ. ರಾಷ್ಟ್ರೀಯ ಸಂಕೇತಗಳನ್ನು ಅರ್ಥೈಸುವ ಪ್ರಯತ್ನ ಕನ್ನಡದಲ್ಲಿದು ಮೊದಲಿರಬೇಕು.

ರಾಜರತ್ನಂ ಅವರ ಕೃತಿ ಎರಡು ಕಾರಣಗಳಿಗಾಗಿ ಮುಖ್ಯವೆನ್ನಿಸುತ್ತದೆ. ಒಂದು, ರಾಷ್ಟ್ರಧ್ವಜ ಮತ್ತು ಲಾಂಛನಗಳನ್ನು ಸವಿವರವಾಗಿ, ಸಚಿತ್ರವಾಗಿ ಅರ್ಥೈಸುವ ಮೂಲಕ ಸ್ವತಂತ್ರ ಭಾರತದ ಆಶೋತ್ತರಗಳನ್ನು ಕೃತಿ ಮನದಟ್ಟು ಮಾಡುತ್ತದೆ. ನಮ್ಮ ರಾಷ್ಟ್ರೀಯ ಲಾಂಛನಗಳ ಆಶಯಗಳಿಗೆ ವಿರುದ್ಧವಾದ ಪರಿಕಲ್ಪನೆಯೊಂದು ದೇಶಪ್ರೇಮದ ಹೆಸರಿನಲ್ಲಿ ರೂಪುಗೊಂಡಿರುವುದನ್ನು ಹಾಗೂ ಆ ಪರಿಕಲ್ಪನೆಯಲ್ಲಿನ ಪೊಳ್ಳುತನವನ್ನು ಕಾಣಿಸುವುದು ಕೃತಿ ಮುಖ್ಯವೆನ್ನಿಸಲಿಕ್ಕೆ ಎರಡನೆಯ ಕಾರಣ.

ಈ ಕೃತಿ ನಮ್ಮ ಕಣ್ಣ ಮುಂದಿರಿಸುವುದು 'ಬುದ್ಧ ಭಾರತ'ವನ್ನು. ಈ ಕೃತಿಯ ಬಗ್ಗೆ ಕೆಲವರಲ್ಲಿ ಮಾತನಾಡಿದಾಗ, 'ಇದರಲ್ಲಿ ಬುದ್ಧನ ಪರಿಮಳವೇ ತುಂಬಿಕೊಂಡಿದೆ' ಎನ್ನುವ ಪ್ರತಿಕ್ರಿಯೆ ಬಂದುದನ್ನು ಪ್ರಸ್ತಾಪಿಸುವ ರಾಜರತ್ನಂ – 'ಬುದ್ಧನ ಸಂಬಂಧವಾದ ಚಿಹ್ನೆಯೊಂದನ್ನು ಸ್ವೀಕರಿಸಿರುವಾಗ ಆತನ ಪರಿಮಳ ಹರಡುವುದು ಸಹಜ ತಾನೆ?' ಎಂದು ಪ್ರತಿಕ್ರಿಯಿಸಿದ್ದಾರೆ. ಬುದ್ಧನ ಪರಿಮಳವಷ್ಟೇ ಅಲ್ಲ, ಬುದ್ಧನ ಅನುಯಾಯಿ ಅಶೋಕನ ಪರಿಮಳವೂ ಸೇರಿಕೊಂಡು ಕೃತಿಯ ಹೊಳಪನ್ನು, ಘಮವನ್ನು ಹೆಚ್ಚಿಸಿದೆ. 'ಅಶೋಕಚಕ್ರ ಧ್ವಜ' ಎನ್ನುವ ಶೀರ್ಷಿಕೆಯೇ 'ರಾಜರತ್ನಂರ ಭಾರತ' ಯಾವುದು ಎನ್ನುವುದನ್ನು ಸೂಚಿಸುವಂತಿದೆ.

'ಪ್ರಜೆಗಳೆಲ್ಲರೂ ನನ್ನ ಮಕ್ಕಳು' ಎಂದು ತ್ರಿಕರಣಪೂರ್ವಕವಾಗಿ ನಂಬಿ, ನುಡಿದು, ನಡೆದು ತನ್ನ ಪುರುಷಾರ್ಥವನ್ನು ಸಾಧಿಸಿಕೊಂಡು ಕೃತಕೃತ್ಯನಾದ ಇವನ ಸಮ ಇನ್ನು ಇತಿಹಾಸದಲ್ಲಿ ಯಾರು?– ಅಶೋಕನನ್ನು ಕುರಿತು ರಾಜರತ್ನಂರ ಈ ಉದ್ಗಾರವನ್ನು ಗಮನಿಸಬೇಕು. ಇಂದಿನ ರಾಷ್ಟ್ರೀಯವಾದಿಗಳು ಶಿವಾಜಿ, ಸಾವರ್ಕರ್ ಅವರನ್ನು ಸ್ಮರಿಸುತ್ತಿರುವಾಗ, ಅಶೋಕನನ್ನು ಭಾರತದ ಚರಿತ್ರೆಯ ಪ್ರಾತಿನಿಧಿಕ ಚಕ್ರವರ್ತಿಯಾಗಿ ರಾಜರತ್ನಂ ಗುರ್ತಿಸಿರುವುದನ್ನು ಹೇಗೆ ಭಾವಿಸಬೇಕು? ಈ ಪ್ರಶ್ನೆಗೆ ಉತ್ತರವಾಗಿ – 'ಅಶೋಕನ ಆಡಳಿತದಲ್ಲಿ ಭಾರತ ಸಾಧಿಸಿದ ರಾಜಕೀಯ ಐಕ್ಯತೆ ಮತ್ತು ನಿಜವಾಗಿಯೂ 'ಅ-ಶೋಕ'ವೆನ್ನಿಸಿದ ಜನಜೀವನವನ್ನು ಸಾಧಿಸಿದವರು ಅವನಿಗೆ ಮೊದಲು ಇರಲಿಲ್ಲ, ನಂತರವೂ ಬರಲಿಲ್ಲ' ಎನ್ನುವ ರಾಜರತ್ನಂರ ಮಾತನ್ನೇ ಗಮನಿಸಬೇಕು.

'ರಾಜ್ಯವನ್ನು ವಿಸ್ತರಿಸಬೇಕು ಎಂಬ ಆಕಾಂಕ್ಷೆಯಿಲ್ಲ. ಲೋಕದ ಸುಖವನ್ನು ಸಾಧಿಸಬೇಕು ಎಂಬುದು ಪ್ರಮುಖ ಆಕಾಂಕ್ಷೆ. ವಿಶುದ್ಧವಾದ ಮೈತ್ರಿಯಿಂದ ಸ್ವಜನರನ್ನೂ ಪರಜನರನ್ನೂ ಒಲಿಸಿಕೊಳ್ಳಬೇಕೆಂಬುದೇ ಇದರ ಹಿರಿಯ ಆಸೆ. ಈ ಆಸೆಯನ್ನು ಸಾಧಿಸುವುದರಲ್ಲಿ ಸದಾ ನಿರತನಾಗಿರಬೇಕು ಎಂಬುದನ್ನು ನೆನಪಿಸುವುದಕ್ಕಾಗಿಯೇ ರಾಷ್ಟ್ರಧ್ವಜದಲ್ಲಿ ಅಶೋಕಚಕ್ರವಿದೆ' ಎನ್ನುವ ರಾಜರತ್ನಂ, ಸ್ವತಂತ್ರ ಭಾರತದ ಆದರ್ಶ ಹಾಗೂ ಅಶೋಕನ ಆದರ್ಶ ಬೇರೆಯಲ್ಲ ಎನ್ನುವುದನ್ನು ಬೇರೆ ಬೇರೆ ರೀತಿಯಲ್ಲಿ ಹೇಳಿದ್ದಾರೆ.



ಅಶೋಕನ ಸಾರನಾಥದ ಸ್ಮೃತಿಗಳು ಭಾರತದ ಆತ್ಮವಾಗಿ ಪರಿಣಮಿಸಿರುವುದನ್ನು ರಾಜರತ್ನಂ ಗುರ್ತಿಸಿರುವ ಬಗೆ ಕುತೂಹಲಕರವಾಗಿದೆ:

'ಬೌದ್ಧರಿಗೂ ಜೈನರಿಗೂ ವೈದಿಕರಿಗೂ ಪುಣ್ಯಭೂಮಿಯೆನ್ನಿಸಿದ ಸಾರನಾಥಕ್ಕೆ ಅಕ್ಬರ್‌ನ ತಂದೆ ಹುಮಾಯೂನ್ ಭೇಟಿ ಕೊಟ್ಟು ಒಂದು ದಿನ ತಂಗಿದ್ದನಂತೆ. ಆ ಭೇಟಿಯ ನೆನಪಿಗಾಗಿ ಅಕ್ಬರ್, ಸಾರನಾಥದ 'ಚೌಖಂಡಿ'ಯೆಂಬ ಮಣ್ಣು ದಿನ್ನೆಯ ಮೇಲೆ ಎಂಟು ಮೂಲೆಯ ಕಟ್ಟಡ ನಿರ್ಮಿಸಿ, ಅಲ್ಲೊಂದು ಶಾಸನ ಬರೆಸಿದ್ದಾನೆ. ಈ ರೀತಿಯಾಗಿ ಬೇರೆ ಬೇರೆ ಮತಗಳವರಿಗೂ– ಕಾರಣ ಬೇರೆ ಬೇರೆಯಾದರೂ– ಮಾನ್ಯವೆನ್ನಿಸಿದ ಸಾರನಾಥದ ಸಂಪರ್ಕವುಳ್ಳ ಅಶೋಕಚಕ್ರವನ್ನು ಕಣ್ಣೆದುರಿಗಿರಿಸಿಕೊಂಡ ಸ್ವತಂತ್ರಭಾರತ 'ಎಲ್ಲ ಮತಗಳವರನ್ನೂ ಒಂದೇ ಸಮನಾಗಿ ನಡೆಸಿಕೊಳ್ಳುವೆ'ವೆಂಬ ತಮ್ಮ ಹಿರಿಯ ಆದರ್ಶವನ್ನು ಮರೆಯುವುದು ಸಾಧ್ಯವಿಲ್ಲ.

ನಾಲ್ಕು ಮಹಾಸಿಂಹಗಳನ್ನೊಳಗೊಂಡ ಶಿಲಾ ಸ್ತಂಭದ ಮೇಲೆ ಅಶೋಕ ಬರೆಸಿರುವ ಶಾಸನದಲ್ಲಿ – 'ಒಂದೇ ಕೂಟವಾಗಿ ಬಾಳಬೇಕಾದ ಸಂಘದಲ್ಲಿ ಒಡಕನ್ನು ಉಂಟುಮಾಡಲು ಯಾವನಾದರೂ ಯತ್ನಿಸುವುದಾದರೆ, ಅಂತಹವನನ್ನು ಸಂಘದಿಂದ ಹೊರಗೆ ದೂಡಬೇಕು' ಎನ್ನುವ ಮಾತಿದೆ. ಭಾರತದ ಸಂಘಭೇದನೆಗೆ ಸನ್ನಾಹ ನಡೆಯುವ ಸಂದರ್ಭದಲ್ಲಿ ಈ ಶಾಸನವನ್ನು ನೆನಪು ಮಾಡಿಕೊಡುವ ಚಕ್ರದ ಚಿಹ್ನೆಯೇ ಅಗತ್ಯ'

'ಸ್ವತಂತ್ರ ಭಾರತದ ಅಶೋಕಚಕ್ರ ಧ್ವಜ' ಈ ಕಾಲದ ಮಕ್ಕಳು ಓದಬೇಕಾದ, ಮುಖ್ಯವಾಗಿ– ಬೆಳವಣಿಗೆ ನಿಂತ ಮಕ್ಕಳು ಓದಲೇಬೇಕಾದ, ಅರಿಯಬೇಕಾದ ಕೃತಿಯಾಗಿದೆ. ಸ್ವಾತಂತ್ರ್ಯದ ಅಮೃತ ಮಹೋತ್ಸವದ ಸಂದರ್ಭದಲ್ಲಿ ಮರು ಮುದ್ರಣಗೊಳ್ಳಬೇಕಾದ, ಎಲ್ಲ ಮನೆಗಳಿಗೆ ತಲುಪಬೇಕಾದ ಕೃತಿಯಿದು. ದೇಶಭಕ್ತಿ ಹೆಸರಿನ ಭಾವನೆಗಳ ಅಸಲಿಯತ್ತನ್ನು ಒರೆಗೆ ಹಚ್ಚಲು ಪುಸ್ತಕದ ಓದು ಒತ್ತಾಯಿಸುತ್ತದೆ. ಸ್ವತಂತ್ರ ಭಾರತದ ಆಶಯಗಳು ಯಾವುವಾಗಿದ್ದವು ಹಾಗೂ ಅವುಗಳ ಸ್ಥಿತಿ ಈಗ ಏನಾಗಿದೆ ಎನ್ನುವುದನ್ನು ರಾಷ್ಟ್ರಧ್ವಜ-ಲಾಂಛನಗಳ ಹಿನ್ನೆಲೆಯಲ್ಲಿ ಅರ್ಥ ಮಾಡಿಸುತ್ತದೆ. ಈಗ ಆ ಆಶಯಗಳು ವಿರೂಪಗೊಂಡಿರುವುದನ್ನು ನೋಡಿದರೆ, ದೇಶಭಕ್ತಿಯ ಹೆಸರಿನಲ್ಲಿ ನಾವು ರಾಷ್ಟ್ರೀಯ ಸಂಕೇತಗಳನ್ನೇ ಮುಕ್ಕುಗೊಳಿಸಿದ್ದೇವೆ ಎನ್ನಿಸುತ್ತದೆ.

ಅಮೃತ ಮಹೋತ್ಸವವು ದೇಶದ ಪಾಲಿಗೆ 'ಅಮೃತ ಮಥನ'ವಾಗಿ ಪರಿಣಮಿಸಬೇಕು. ಈವರೆಗಿನ ಮಥನದಲ್ಲಿ ಕಾಲಕೂಟವನ್ನು ಸಾಕಷ್ಟು ಕಂಡಾಗಿದೆ. ಏಳೂವರೆ ದಶಕಗಳ ನಂತರವೂ ಅಮೃತದ ಸುಳಿವೇ ಇಲ್ಲದಿರುವುದನ್ನು ನೋಡಿದರೆ, ಮಥನದ ನಮ್ಮ ಉದ್ದೇಶವೇ ಕಾಲಕೂಟವಾಗಿರಬಹುದೇ ಎನ್ನುವ ಪ್ರಶ್ನೆ ಉಂಟಾಗುತ್ತದೆ. ಈ ಪ್ರಶ್ನೆಯನ್ನು ಮತ್ತಷ್ಟು ಗಾಢವಾಗಿಸುವ ವಿದ್ಯಮಾನಗಳು ನಿರಂತರವಾಗಿ ನಡೆಯುತ್ತಿರುವ ಸನ್ನಿವೇಶದಲ್ಲಿ, 'ಅಮೃತದ ಅಪೇಕ್ಷೆ'ಯ ದಾರಿಯನ್ನು ನೆನಪಿಸುವ ಚೋದಕವಾಗಿ ರಾಜರತ್ನಂರ ಕೃತಿ ಕಾಣಿಸುತ್ತದೆ.

'ಸ್ವತಂತ್ರ ಭಾರತದ ಅಶೋಕಚಕ್ರ ಧ್ವಜ' ಪುಸ್ತಕದ ಆನ್‌ಲೈನ್ ಕೊಂಡಿ: bit.ly/3SntZkR

ಚುರುಮುರಿ



ಯಾಪಿ ಬರ್ತ್ ಡೇ!

• ಗುರು ಪಿ.ಎಸ್.

'ಯಾಪಿ ಬರ್ತ್ ಡೇ, ಯಾಪಿ ಬರ್ತ್ ಡೇ...' ಮಡದಿಗೆ ವಿಶ್ ಮಾಡಿದೆ.

'ಬರೀ ವಿಶ್‌ನಲ್ಲೇ ಮುಗಿಸೋದ್ ಬೇಡ. ನನ್ನ ಬರ್ತ್‌ಡೇನೂ ಗ್ರ್ಯಾಂಡ್ ಆಗಿ ಸೆಲಬ್ರೇಟ್ ಮಾಡಲೇಬೇಕ್' ಪಟ್ಟು ಹಿಡಿದ್ಲು ಪತ್ನಿ.

'ನಿನಗೇನಾಯ್ತೆ, ಯಾವತ್ತೂ ಜೋರಾಗಿ ಬರ್ತ್‌ಡೇ ಮಾಡ್ಕೊಂಡವಳಲ್ಲ, ಈಗ್ಯಾಕಿಷ್ಟು ಹಟ?'

'ನಾನು ಕೆಲವರಿಗೆ ಕೆಲವು ಮೆಸೇಜ್ ಪಾಸ್ ಮಾಡಬೇಕು ಅದಕ್ಕೆ. ಅದರಲ್ಲೂ ಎದುರು ಮನೆ ಕಮಲಂಗೆ ನನ್ನ ಪವರ್ ಏನು ಅಂತಾ ತೋರಿಸಬೇಕಿದೆ...'

ಕಮಲಳೇ ಮೂಗಿನ ಮೇಲೆ ಬೆರಳಿಟ್ಟುಕೊಳ್ಳೋ ಹಾಗೆ ಬರ್ತ್‌ಡೇ ಮಾಡಿದ್ದಾಯ್ತು. ಎಲ್ಲರಿಗಿಂತ ಜಾಸ್ತಿ ನನ್ನ ತಮ್ಮನ ಹೆಂಡ್ತಿ, ಅಂದ್ರೆ ಅವಳ ಓರಗಿತ್ತಿ ಜೊತೆಗೂ ಸಿಕ್ಕಾಪಟ್ಟೆ ಫೋಟೊ ತೆಗೆಸಿಕೊಂಡಳು ಮಡದಿ.

ಒಳಗೊಳಗೇ ಅಸಮಾಧಾನ, ಹೊಟ್ಟೆಕಿಚ್ಚು, ಸಿಟ್ಟು ಬರ್ತಿದ್ರೂ ಅದನ್ನ ತೋರಗೊಡದೇ ಫೋಟೊಗೆ ಪೋಸ್ ಕೊಡ್ತಿದ್ಲು ಓರಗಿತ್ತಿ.

'ರೀ ಫಂಕ್ಷನ್‌ನಲ್ಲಿ ಓರಗಿತ್ತಿ ಮುಖ ನೋಡಿದ್ರಾ..' ವ್ಯಂಗ್ಯಭರಿತ ಹೆಮ್ಮೆಯಲ್ಲಿ ಕೇಳಿದಳು ಹೆಂಡ್ತಿ.

'ನೋಡಿದ್ನಲ್ಲ, ತುಂಬಾ ಚೆನ್ನಾಗಿದೆ'

'ಹಾಗಲ್ಲ ರೀ, ಮುಂದಿನ ಸತ್ಯನಾರಾಯಣ ಸ್ವಾಮಿ ಪೂಜೆಗೆ ನಮಗಿಂತ ಅವಳೇ ತನ್ನ ಗಂಡನ ಜೊತೆ ಮುಂದಿನ ಸಾಲಿನಲ್ಲಿಯೇ ಕೂತ್ಕೊಬೇಕು ಅಂದ್ಕೊಂಡಿದ್ಲು. ಆದರೆ, ಈ ಮನೆಗೆ ಮುಂದಿನ ಯಜಮಾನಿ ನಾನೇ, ನಾನೇ ಪವರ್‌ಫುಲ್ ಅಂತಾ ಅತ್ತೆಗೆ ಮೆಸೇಜ್ ಪಾಸ್ ಮಾಡಬೇಕಿತ್ತು, ಮಾಡಿದೆ. ಅತ್ತೆನೂ ನನ್ನ ಪವರ್‌ಗೆ ಫಿದಾ ಆದಂಗಿದ್ದಾರೆ'

'ನಿನ್ನ ಮೆಸೇಜ್‌ಗಿಷ್ಟು... ನಿನ್ನ ಬರ್ತ್‌ಡೇ ಮಾಡೋಕೆ ನಾನು ಸಾಲ ಮಾಡಬೇಕಾಯಿತು. ಈಗ, ನನ್ನ ತಮ್ಮನ ಹೆಂಡ್ತಿನೂ ನಿನ್ನಂಗೇ ಹಟ ಹಿಡಿದ್ರೆ ಏನ್ ಮಾಡೋದು'

'ಅದೆಲ್ಲ ಆಗಲ್ಲ ಬಿಡಿ, ಅವಳ ಬರ್ತ್‌ಡೇ ಬರೋದ್ರೊಳಗೆ ಮುಂದಿನ ದೊಡ್ಡ ಹಬ್ಬ ಮುಗಿದೇಬಿಟ್ಟಿರುತ್ತೆ' ಉಳಿದಿರೋ ಕೇಕ್ ಪೀಸ್‌ನ ನನ್ನ ಬಾಯಿಗೆ ತುರುಕಿ ಹೊರಟ್ಲು ಹೆಂಡ್ತಿ!

ಸಂಗತ

ಸಮಸ್ಯಾತ್ಮಕ ಪರಿಹಾರದ ಮೇಲೇಕೆ ಒಲವು?

ಸಂಕುಚಿತ ಮನಃಸ್ಥಿತಿ ಈ ಕಾಲಕ್ಕೂ ಮೌಲ್ಯವಾಗಿ ಮುಂದುವರಿಯುವುದು ತರವಲ್ಲ

• ಎಚ್.ಕೆ. ಶರತ್

ಶಿಕ್ಷಕರೇ ಇರುವ ವಾಟ್ಸ್‌ಆ್ಯಪ್ ಗುಂಪಿಗೆ ಒಬ್ಬರು ಕಳಿಸಿದ್ದ ವಿಡಿಯೊ ವೀಕ್ಷಿಸಿದ ಮತ್ತೊಬ್ಬರು, ಈ ವಿಡಿಯೊವನ್ನು ಎಲ್ಲ ಪೋಷಕರಿಗೂ ತಲುಪಿಸುವ ಅಗತ್ಯವಿದೆ ಎಂಬ ಅಭಿಪ್ರಾಯ ವ್ಯಕ್ತಪಡಿಸಿದ್ದರು. ಎಲ್ಲ ಪೋಷಕರೂ ನೋಡಬೇಕಾದಂಥದ್ದು ಏನಿದೆ ಎನ್ನುವ ಕುತೂಹಲದೊಂದಿಗೆ ವಿಡಿಯೊ ವೀಕ್ಷಿಸಿದೆ. ಪೊಲೀಸ್ ಸಿಬ್ಬಂದಿಯೊಬ್ಬರು, ಇತ್ತೀಚೆಗೆ ಸುದ್ದಿಯಾದ ಮಂಗಳೂರಿನ ವಿದ್ಯಾರ್ಥಿಗಳ ಚುಂಬನದ ಪ್ರಕರಣವನ್ನು ಹಿನ್ನೆಲೆಯಾಗಿಟ್ಟುಕೊಂಡು ಪೋಷಕರಲ್ಲಿ ಜಾಗೃತಿ ಮೂಡಿಸುವ ಪ್ರಯತ್ನವನ್ನು ಆ ವಿಡಿಯೊ ಮೂಲಕ ಮಾಡಿದ್ದಾರೆ.

'ಆಧುನಿಕ ಜೀವನಶೈಲಿಗೆ ಮಾರುಹೋಗುತ್ತಿರುವ ಇಂದಿನ ಹೈಸ್ಕೂಲು, ಕಾಲೇಜು ವಿದ್ಯಾರ್ಥಿಗಳು ತರಗತಿಗಳಿಗೆ ಹಾಜರಾಗದೆ ಪಾರ್ಕುಗಳಲ್ಲಿ ಪ್ರಣಯದಲ್ಲಿ ತಲ್ಲೀನರಾಗುತ್ತಿದ್ದಾರೆ. ಪೋಷಕರು ತಮ್ಮ ಮಕ್ಕಳು ಎಲ್ಲಿಗೆ ಹೋಗುತ್ತಾರೆ, ಯಾರೊಂದಿಗೆ ಕಾಲ ಕಳೆಯುತ್ತಾರೆ ಎಂಬ ಕುರಿತು ಕಣ್ಣಿಡಬೇಕು. ತಾವು ಏನ್ ಮಾಡ್ತಿದ್ದೀವಿ ಅನ್ನೋದನ್ನು ತಮ್ಮ ತಂದೆ-ತಾಯಿ ಗಮನಿಸುತ್ತಿರುತ್ತಾರೆ ಎನ್ನುವ ಭಯ ಮಕ್ಕಳಲ್ಲಿ ಬೇರೂರದ ಹೊರತು ಇಂತಹದಕ್ಕೆಲ್ಲ ಕಡಿವಾಣ ಹಾಕುವುದು ಕಷ್ಟ. ಇಂದಿನ ಮಕ್ಕಳಲ್ಲಿ ಶಿಕ್ಷಕರು ಮತ್ತು ಪೊಲೀಸರ ಕುರಿತು ಮೊದಲಿನಂತೆ ಭಯ ಇಲ್ಲ. ತಮಗೆ ಹೇಳುವವರು ಕೇಳುವವರು ಯಾರೂ ಇಲ್ಲ, ಏನು ಬೇಕಾದರೂ ಮಾಡಬಹುದು ಎನ್ನುವ ಮನೋಭಾವ ಅವರಲ್ಲಿ ಬೇರೂರಿದೆ. ಮುಂಬರುವ ದಿನಗಳಲ್ಲಿ ಮಕ್ಕಳನ್ನು ಬೆಳೆಸುವುದು ತೀರಾ ಕಷ್ಟವಾಗಲಿದೆ. ಮಕ್ಕಳನ್ನು ನಿಯಂತ್ರಣದಲ್ಲಿಡುವ ಕೆಲಸವನ್ನು ಪೋಷಕರೇ ಮಾಡಬೇಕು. ಪೊಲೀಸರೇ ಎಲ್ಲವನ್ನೂ ನೋಡಿಕೊಳ್ಳುತ್ತಾರೆ, ಸರಿಪಡಿಸುತ್ತಾರೆ ಎನ್ನುವ ನಿಲುವು ತಾಳಬೇಡಿ' ಎಂಬುದನ್ನು ತಮಗೆ ತೋಚಿದ ಹಾಗೆ, ಕೆಲವೆಡೆ ಅಸಭ್ಯ ರೀತಿಯಲ್ಲಿ ಹೇಳಿದ್ದರು.

ತೀರಾ ಸಂಯಮದಿಂದ ವಿವೇಚಿಸಿ, ಪರಿಹಾರ ಕಂಡುಕೊಳ್ಳಬೇಕಿರುವ ಸಂಕೀರ್ಣ ಸಮಸ್ಯೆಗಳ ಕುರಿತು ತಮಗೆ ತೋಚಿದಂತೆ ಮಾತನಾಡಿ, ಈಗಾಗಲೇ ಬೇರೂರಿರುವ ಪೂರ್ವಗ್ರಹಗಳೇ ಸರಿ ಎಂದು ದೃಢೀಕರಿಸುವ ಮತ್ತು ಅವುಗಳಲ್ಲೇ ಪರಿಹಾರ ಅರಸುವವರ ಮಾತುಗಳೇ ಏಕೆ ಹಿತವಾಗುತ್ತಿವೆ? ಹದಿಹರೆಯದ ಮಕ್ಕಳ ನಡುವಿನ ಪರಸ್ಪರ ಆಕರ್ಷಣೆ, ಸ್ನೇಹ- ಪ್ರೀತಿ- ಪ್ರಣಯವನ್ನು ಭಯದಿಂದ ನಿಯಂತ್ರಿಸಲು ಸಾಧ್ಯವೇ, ಮತ್ತು ಅದು ಸಮಂಜಸವಾದುದೇ ಎಂದು ವಿವೇಚಿಸಬೇಕಲ್ಲವೇ? ಈ ದಿಸೆಯಲ್ಲಿ ತೀರ್ಮಾನಕ್ಕೆ ಬರುವ ಮುನ್ನ ದಿನನಿತ್ಯ ಹದಿಹರೆಯದ ಮಕ್ಕಳೊಂದಿಗೆ ಒಡನಾಡುವ ಪೋಷಕರು ಹಾಗೂ ಶಿಕ್ಷಕರು ಮಾರ್ಗದರ್ಶನ ಪಡೆಯಬೇಕಿರುವುದು ಯಾರಿಂದ? ಸಮಸ್ಯೆಯ ಆಳ- ಅಗಲವನ್ನು ವೈಜ್ಞಾನಿಕ ದೃಷ್ಟಿಕೋನದಿಂದ ಅರ್ಥೈಸಿಕೊಂಡು ಪರಿಹಾರ ಸೂಚಿಸಬಲ್ಲ ತಜ್ಞರಿಂದಲ್ಲವೇ? ಹದಿಹರೆಯದ ಮಕ್ಕಳ ದೇಹದಲ್ಲಿ ಉಂಟಾಗುವ ಬದಲಾವಣೆಗಳು ಅವರಲ್ಲಿ ಸಹಜವಾಗಿ ಉದ್ದೀಪಿಸುವ ಭಾವನೆಗಳನ್ನು ಸಂಯಮದಿಂದ ನಿರ್ವಹಿಸಲು ಬಳಸಬೇಕಿರುವುದು ತಿಳಿವಳಿಕೆಯನ್ನೋ ಅಥವಾ ಭಯವನ್ನೋ?

ಮೊಬೈಲು ಅಂತರ್ಜಾಲದ ಮೂಲಕ ಮಕ್ಕಳ ಎದುರು ತೆರೆದುಕೊಳ್ಳುತ್ತಿರುವ ಸಂಗತಿಗಳು ಅವರನ್ನು ನಾನಾ ರೀತಿಯ ಪ್ರಚೋದನೆಗೆ ಒಳಪಡಿಸುತ್ತಿರುವುದು ವಾಸ್ತವವೇ ಆದರೂ, ತಪ್ಪೆಲ್ಲವನ್ನೂ ಆಧುನಿಕತೆ ಮತ್ತು ಅದರ ಬಳುವಳಿಯಾದ ತಂತ್ರಜ್ಞಾನದ ಮೇಲಷ್ಟೆ ಹೊರಿಸಿ ಸುಮ್ಮನಿರಲಾದೀತೇ? ಹಿಂದೆ ಎಲ್ಲವೂ ಸರಿ ಇತ್ತೆ? ದೊಡ್ಡವರೇ ಮುಂದೆ ನಿಂತು ನಡೆಸುತ್ತಿದ್ದ ಬಾಲ್ಯ ವಿವಾಹಗಳಿಗೆ, ದೇವದಾಸಿ ಪದ್ಧತಿಗೆ ಯಾವ ತಂತ್ರಜ್ಞಾನ ಕಾರಣವಾಗಿತ್ತು? ವಿವಾಹೇತರ ಹಾಗೂ ವಿವಾಹಪೂರ್ವ ಲೈಂಗಿಕ ಸಂಪರ್ಕಗಳು ಹಿಂದೆಲ್ಲ ಏರ್ಪಡುತ್ತಲೇ ಇರಲಿಲ್ಲವೆ?

ಆಧುನಿಕ ತಂತ್ರಜ್ಞಾನವನ್ನು ಅತಿ ಉತ್ಸಾಹದಿಂದ ಅಪ್ಪಿಕೊಳ್ಳಲು ಸಿದ್ಧವಿರುವ ನಮಗೆ, ಈ ಕಾಲಘಟ್ಟಕ್ಕೆ ಅಗತ್ಯವಿರುವ ಮನೋಭಾವ ರೂಢಿಸಿಕೊಳ್ಳಲು ಸಾಧ್ಯವಾಗುತ್ತಿದೆಯೇ? ಮೊಬೈಲಿನ ಮೂಲಕ ಕ್ಯಾಮೆರಾ ಎಲ್ಲರ ಕೈ ಸೇರಿರುವ ಹೊತ್ತಿನಲ್ಲೂ ನಗ್ನತೆ ಮತ್ತು ಲೈಂಗಿಕತೆಯ ಕುರಿತು ನಮ್ಮಲ್ಲಿ ಬೇರೂರಿರುವ ಸಂಕುಚಿತ ಮನಃಸ್ಥಿತಿಯನ್ನೇ ಈ ಕಾಲಕ್ಕೂ ಅಗತ್ಯವಿರುವ ಮೌಲ್ಯವಾಗಿ ಮುಂದುವರಿಸಿಕೊಂಡು ಹೋಗಲು ಸಾಧ್ಯವಿದೆಯೇ? ವ್ಯಕ್ತಿಗಳ ನಡುವಿನ ಖಾಸಗಿ ಕ್ಷಣಗಳನ್ನು ಚಿತ್ರೀಕರಿಸಿಕೊಂಡು ಹೆದರಿಸಿ ಬೆದರಿಸಿ ಹಣ ಕೀಳುವ, ಲೈಂಗಿಕ ದೌರ್ಜನ್ಯ ಎಸಗುವ ಪ್ರಕರಣಗಳು ವರದಿಯಾಗುತ್ತಲೇ ಇವೆ. ಬೆಳಕಿಗೆ ಬಾರದ ಪ್ರಕರಣಗಳು ಎಷ್ಟಿರಬಹುದು?



ವ್ಯಕ್ತಿಯೊಬ್ಬರ ಮಾನ-ಮರ್ಯಾದೆಯನ್ನು ಅವರ ಲೈಂಗಿಕ ಆಯ್ಕೆಗಳನ್ನು ಆಧರಿಸಿ ಅಳೆಯುವ ಮಾನದಂಡ ಎಷ್ಟೋ ಜೀವಗಳನ್ನೇ ಬಲಿ ಪಡೆಯುತ್ತಿರುವ ಹೊತ್ತಿನಲ್ಲಾದರೂ ನಮ್ಮ ನಿಲುವು ಬದಲಾಗಬಾರದೆ? ಹದಿಹರೆಯದ ಮಕ್ಕಳು ಸರಸ-ಸಲ್ಲಾಪದಲ್ಲಿ ತೊಡಗಿರುವ ದೃಶ್ಯಗಳು ಸಾರ್ವಜನಿಕಗೊಂಡಾಗ, ಸಮಾಜ ಅವರನ್ನು ನಿಕೃಷ್ಟವಾಗಿ ನಡೆಸಿಕೊಳ್ಳಬೇಕೋ ಅಥವಾ ಲೈಂಗಿಕ ಭಾವನೆಗಳನ್ನು ಸೂಕ್ತ ರೀತಿಯಲ್ಲಿ ನಿರ್ವಹಿಸಲು ಅಗತ್ಯ ಮಾರ್ಗದರ್ಶನ ನೀಡಬೇಕೋ?

ಲೈಂಗಿಕತೆಯ ಕುರಿತು ನಮ್ಮಲ್ಲಿ ಬೇರೂರಿರುವ ಪೂರ್ವಗ್ರಹಗಳಿಂದಾಗಿ ಲೈಂಗಿಕ ದೌರ್ಜನ್ಯಕ್ಕೆ ತುತ್ತಾಗುವ ಎಷ್ಟೋ ಮಕ್ಕಳು, ವಯಸ್ಕರು ಮುಕ್ತವಾಗಿ ಅದನ್ನು ಹೇಳಿಕೊಂಡು, ಅದರಿಂದ ಪಾರಾಗುವ ದಾರಿ ಕಂಡುಕೊಳ್ಳುವುದೂ ದುಸ್ತರವಾಗಿರುವುದು ಕಣ್ಣೆದುರಿನ ವಾಸ್ತವವಲ್ಲವೇ? ನಮ್ಮ ಆಕ್ರೋಶದ ದನಿ ಹೊರಡಬೇಕಿರುವುದು ಲೈಂಗಿಕ ದೌರ್ಜನ್ಯದ ವಿರುದ್ಧವೇ ಹೊರತು ಲೈಂಗಿಕತೆಯ ಕುರಿತು ಅಲ್ಲ. ಸಂಸ್ಕೃತಿ, ಸಂಪ್ರದಾಯದ ಹೆಸರಿನಲ್ಲಿ ವೈಜ್ಞಾನಿಕ ಸತ್ಯಗಳಿಗೆ ಬೆನ್ನು ತೋರಿ ಕಂಡುಕೊಳ್ಳಲು ಹೊರಡುವ ಪರಿಹಾರಗಳೇ ಸಮಸ್ಯಾತ್ಮಕವಲ್ಲವೇ?

ವಾಚಕರ ವಾಣಿ

ಒಗ್ಗಟ್ಟು: ಆಗಿತ್ತು ಅನಿವಾರ್ಯ

ಕಾಂಗ್ರೆಸ್ ಮುಖಂಡ ಸಿದ್ದರಾಮಯ್ಯ ಅವರ 75ನೇ ಜನ್ಮದಿನದ ಪ್ರಯುಕ್ತ ದಾವಣಗೆರೆಯಲ್ಲಿ ಆಯೋಜಿಸಿದ್ದ ಸಮಾರಂಭದಲ್ಲಿ ಪಕ್ಷದ ಮುಖಂಡರು ಒಗ್ಗಟ್ಟು ಪ್ರದರ್ಶಿಸಿದ್ದಾರೆ. ಚುನಾವಣೆ ಸಮೀಪಿಸುತ್ತಿರುವ ಕಾರಣ ಪಕ್ಷಕ್ಕೆ ಇಂಥ ನಡೆ ಅನಿವಾರ್ಯವೂ ಆಗಿತ್ತು. ತಮ್ಮಲ್ಲಿ ಭಿನ್ನಾಭಿಪ್ರಾಯ ಇಲ್ಲ ಎಂಬುದನ್ನು ನಡೆ-ನುಡಿ ಮೂಲಕ ತೋರಿದ್ದರೂ ಮುಖ್ಯಮಂತ್ರಿ ಗಾದಿ ದಕ್ಕಿಸಿಕೊಳ್ಳುವ ವಿಚಾರದಲ್ಲಿ ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಮತ್ತು ಸಿದ್ದರಾಮಯ್ಯ ನಡುವೆ ಪೈಪೋಟಿ ಇದೆ ಎಂಬುದು ಎಲ್ಲರೂ ಬಲ್ಲ ಸತ್ಯ. ಈ ಕುರಿತು ಪಕ್ಷದ ಕಾರ್ಯಕರ್ತರಲ್ಲೂ ಗೊಂದಲ ಇದ್ದಿರಬಹುದು. ಅದನ್ನು ನಿವಾರಿಸಲು ಈ ವೇದಿಕೆ ಬಳಕೆಯಾಗಿದೆ. ಇದರ ಹಿಂದೆ ಹೈಕಮಾಂಡ್ ಸೂಚನೆ ಕೆಲಸ ಮಾಡಿರಲೂಬಹುದು. ಏನೇ ಆಗಲಿ, ಕಾರ್ಯಕರ್ತರಿಗೆ ಸಕಾರಾತ್ಮಕ ಸಂದೇಶ ರವಾನಿಸಲು ಈ ಹುಟ್ಟುಹಬ್ಬದ ಕಾರ್ಯಕ್ರಮ ನೆರವಾಗಿದೆ.

ನಾರಾಯಣರಾವ ಕುಲಕರ್ಣಿ, ಹಿರೇ ಅರಳಿಹಳ್ಳಿ, ಯಲಬುರ್ಗಾ

ಮಕ್ಕಳಿಗೆ ಮೊಟ್ಟೆ: ಸ್ವಾಗತಾರ್ಹ!

ಮಧ್ಯಾಹ್ನದ ಬಿಸಿಯೂಟ ಯೋಜನೆಯಡಿ, ರಾಜ್ಯದ ಸರ್ಕಾರಿ ಹಾಗೂ ಅನುದಾನಿತ ಶಾಲೆಗಳಲ್ಲಿ ಲಕ್ಷಾಂತರ ಮಕ್ಕಳು ಆಹಾರ ಸೇವಿಸುತ್ತಿದ್ದಾರೆ. ಮಕ್ಕಳ ದಾಖಲಾತಿ ಹಾಗೂ ಹಾಜರಾತಿಯಲ್ಲಿ ಗಣನೀಯ ಹೆಚ್ಚಳಕ್ಕೆ ಈ ಯೋಜನೆ ಪೂರಕವಾಗಿ ಒದಗಿಬಂದಿದೆ ಎಂಬ ಮಾತಿದೆ. ಇದು ಸ್ವಾಗತಾರ್ಹ. ಮಕ್ಕಳಿಗೆ ಪಾಠದ ಜೊತೆಗೆ ಸತ್ವಯುತ ಆಹಾರ ದೊರೆಯುತ್ತಿದೆ. ಇದರಿಂದಾಗಿ, ಕಲಿಕೆಯಲ್ಲಿ ಮಕ್ಕಳು ಹೆಚ್ಚು ಲವಲವಿಕೆಯಿಂದ ತೊಡಗಿಸಿಕೊಳ್ಳಲು ಸಾಧ್ಯವಾಗಿದೆ. ಈಗ ಮಧ್ಯಾಹ್ನದ ಬಿಸಿಯೂಟದ ಜೊತೆಗೆ ವಾರದಲ್ಲಿ ಎರಡು ದಿನ ಮಕ್ಕಳಿಗೆ ಮೊಟ್ಟೆ ನೀಡಲು ಸರ್ಕಾರ ನಿರ್ಧರಿಸಿರುವುದು ಒಳ್ಳೆಯ ಉಪಕ್ರಮ. ಹೆಚ್ಚಿನ ಪೌಷ್ಟಿಕಾಂಶ ಇರುವ ಮೊಟ್ಟೆಯು ಮಕ್ಕಳ ಬೆಳವಣಿಗೆಗೆ ಸಹಕಾರಿ.

ಮೊಟ್ಟೆ ತಿನ್ನದ ವಿದ್ಯಾರ್ಥಿಗಳಿಗೆ ಬಾಳೆಹಣ್ಣು ಅಥವಾ ಚಿಕ್ಕಿ ನೀಡಲು ನಿರ್ಧರಿಸಿರುವ ರಾಜ್ಯ ಸರ್ಕಾರದ ಕ್ರಮ ಕೂಡ ಮೆಚ್ಚುವಂತಹುದು. ನ್ಯೂನಪೋಷಣೆ ಹೋಗಲಾಡಿಸಲು ಈ ಬಗೆಯ ಉಪಕ್ರಮಗಳು ನೆರವಾಗಲಿವೆ. ಅಪೌಷ್ಟಿಕತೆಯು ಗಂಭೀರ ಸಮಸ್ಯೆ. ಅದನ್ನು ನಿವಾರಿಸಲು ಅಷ್ಟೇ ಗಂಭೀರ ಪ್ರಯತ್ನಗಳು ಆಗಬೇಕಿದೆ.

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

ಕ್ರಿಮಿನಾಶಕಗಳ ಬಳಕೆ: ತಿಳಿವಳಿಕೆ ಅಗತ್ಯ

ಬೆಂಗಳೂರು ನಗರದ ಮನೆಯೊಂದರಲ್ಲಿ ತಿಗಣೆ ನಿಯಂತ್ರಿಸಲು ಕ್ರಿಮಿನಾಶಕ ಸಿಂಪಡಿಸಿದ್ದರಿಂದ ಆರು ವರ್ಷದ ಒಬ್ಬ ಬಾಲಕಿ ಮೃತಪಟ್ಟಿರುವುದು ವರದಿಯಾಗಿದೆ. ಇದು, ಅತ್ಯಂತ ನೋವಿನ ಸಂಗತಿ. ಕ್ರಿಮಿನಾಶಕಗಳನ್ನು ಬೇರೆ ಬೇರೆ ಕಾರಣಕ್ಕೆ ಬಳಸುತ್ತೇವೆ. ಆದರೆ, ಅವುಗಳ ಬಳಕೆ ಮತ್ತು ಪರಿಣಾಮದ ಬಗೆಗೆ ಅನೇಕರಲ್ಲಿ ಸ್ಪಷ್ಟ ಅರಿವು ಇರುವುದಿಲ್ಲ. ಈ ಕಾರಣಕ್ಕಾಗಿ ಅವಘಡಗಳು ಸಂಭವಿಸುತ್ತವೆ.

ಮಾರುಕಟ್ಟೆಯಲ್ಲಿ ಕ್ರಿಮಿನಾಶಕಗಳು ಗ್ರಾಹಕರಿಗೆ ಸುಲಭವಾಗಿ ಸಿಗುತ್ತವೆ. ಆದರೆ, ಅವುಗಳನ್ನು ಮಾರುವ ಅಂಗಡಿ ಮಾಲೀಕರಿಗೂ ಅವುಗಳ ಬಳಕೆ ಬಗ್ಗೆ ಅರಿವು ಇರುವುದಿಲ್ಲ. ಮಾರಾಟ ಮಾಡುವುದಷ್ಟೇ ಗುರಿ. ಅಪಾಯಕಾರಿ ಕ್ರಿಮಿನಾಶಕಗಳ ಬಗೆಗೆ ಗ್ರಾಹಕರಲ್ಲಿ ಜಾಗೃತಿ ಮೂಡಿಸುವ ಕೆಲಸ ಆಗಬೇಕು.

ಡಾ. ಜಿ. ಬೈರೇಗೌಡ, ಬೆಂಗಳೂರು

ಬಲಿಷ್ಠ ಭಾರತಕ್ಕೆ ಬೇಕು ಸಮರ್ಥ ನಾಯಕತ್ವ

ದೇಶದ ಸುತ್ತ ಶತ್ರುಗಳಿದ್ದು, ಭದ್ರತೆ ಪ್ರಾಮುಖ್ಯ ಪಡೆದಿದೆ. ದೇಶ ರಕ್ಷಣೆಗೆ ಪ್ರಧಾನಿ ನರೇಂದ್ರ ಮೋದಿ ಅವರಂತಹ ಬಲಿಷ್ಠ ನಾಯಕರು ಬೇಕಿದೆ ಎಂದು ಚಿತ್ರದುರ್ಗದ ಮುರುಘಾ ಮಠದ ಶಿವಮೂರ್ತಿ ಮುರುಘಾ ಶರಣರು ಹೇಳಿದ್ದಾರೆ. ಅವರ ಅಭಿಪ್ರಾಯ ಸರಿಯಾಗಿದೆ. ಭಾರತದ ಬೆಳವಣಿಗೆಯನ್ನು ಕಂಡು ಕೆಲವು ದೇಶಗಳು ಕರುಬುತ್ತಿವೆ. ಇಲ್ಲಿ ಅಸ್ಥಿರತೆ ಸೃಷ್ಟಿಸಲು ಹಾತೊರೆಯುತ್ತಿವೆ. ಅಂತಹ ಪ್ರಯತ್ನಗಳನ್ನು ಎದುರಿಸಲು ದಿಟ್ಟ ನಾಯಕತ್ವ ಬೇಕು. ಹೊಸ ಕನಸುಗಳೊಂದಿಗೆ ಬಲಿಷ್ಠ ಭಾರತ ಕಟ್ಟಬೇಕಿದೆ. ಇದಕ್ಕೆ ಸಮರ್ಥ ನಾಯಕನ ಅವಶ್ಯಕತೆ ಇದೆ.

ಎಚ್.ಎನ್. ಕಿರಣ್ ಕುಮಾರ್, ಹಳೇಹಳ್ಳಿ, ಗೌರಿಬಿದನೂರು

ಪುಟಿದೇಳುವುದೇ ಬಿಎಸ್‌ಎನ್‌ಎಲ್?

ಕೇಂದ್ರ ಸರ್ಕಾರವು ಬಿಎಸ್‌ಎನ್‌ಎಲ್ ಪುನಶ್ಚೇತನಕ್ಕೆ ₹ 1.64 ಲಕ್ಷ ಕೋಟಿ ಮೊತ್ತದ ಬೃಹತ್ ಪ್ಯಾಕೇಜ್ ಪ್ರಕಟಿಸಿರುವುದು ಸ್ವಾಗತಾರ್ಹ ಕ್ರಮವಾದರೂ ದೇಕುತ್ತಿರುವ ಈ ಕಂಪನಿ ಎದ್ದು ನಿಲ್ಲಲು ಈ ನೆರವು ಅನುವಾಗಿಸುವುದೇ ಎಂಬುದು ಪ್ರಶ್ನೆ. ಒಂದು ಕಾಲದಲ್ಲಿ ಗ್ರಾಹಕರ ಅತ್ಯಂತ ನೆಚ್ಚಿನ ಕಂಪನಿಯಾಗಿದ್ದ ಇದು, ಈಗ ನಿಶ್ಶಕ್ತಗೊಂಡಿದೆ. ನೌಕರರಲ್ಲಿನ ಬದ್ಧತೆ ಕೊರತೆ ಹಾಗೂ ಸರ್ಕಾರದ ನಿರ್ಲಕ್ಷ್ಯದಿಂದ ನಲುಗಿಹೋಗಿದೆ. ಎಚ್‌ಎಂಟಿಗೆ ಒದಗಿದ ಗತಿ ಇದಕ್ಕೂ ಬರಬಹುದು ಎಂಬ ಅನುಮಾನ ಇದೆ. ಕಾಲಕ್ಕೆ ತಕ್ಕಂತೆ ತಂತ್ರಜ್ಞಾನ ಅಳವಡಿಸಿಕೊಂಡು, ದಕ್ಷತೆ ಹೆಚ್ಚಿಸಿಕೊಂಡರೆ ಪುಟಿದೇಳಬಹುದು. ಆದರೆ ಅದಕ್ಕೆ ಇಚ್ಛಾಶಕ್ತಿ ಬೇಕು.

ಯಲುವಹಳ್ಳಿ ಸೊಣ್ಣೇಗೌಡ, ಚಿಕ್ಕಬಳ್ಳಾಪುರ

ಮಂಕಿಪಾಕ್ಸ್: ಮುನ್ನೆಚ್ಚರಿಕೆ ಅಗತ್ಯ

ದೇಶದಲ್ಲಿ ಮಂಕಿಪಾಕ್ಸ್ ವೈರಾಣು ಸೋಂಕಿನ ಪ್ರಕರಣಗಳ ಸಂಖ್ಯೆ ಏರುತ್ತಿರುವ ಹಿನ್ನೆಲೆಯಲ್ಲಿ ಕೇಂದ್ರ ಆರೋಗ್ಯ ಸಚಿವಾಲಯವು ಮುನ್ನೆಚ್ಚರಿಕೆ ಕ್ರಮಗಳ ಪಟ್ಟಿಯನ್ನು ಬಿಡುಗಡೆ ಮಾಡಿದೆ. ಬರೀ ಒಂಬತ್ತೋ ಹತ್ತೋ ಪ್ರಕರಣಗಳು ವರದಿಯಾಗಿವೆ ಎಂದು ಉಪೇಕ್ಷೆ ಮಾಡದೆ ಮುನ್ನೆಚ್ಚರಿಕೆ ವಹಿಸುವುದು ಎಲ್ಲರ ಜವಾಬ್ದಾರಿ. ರೋಗ ಹರಡಲು ಅನುವು ಮಾಡಿಕೊಟ್ಟು ಬಳಿಕ ಪರಿತಪಿಸುವುದಕ್ಕಿಂತ ಹರಡುವಿಕೆಯನ್ನೇ ತಡೆಯುವುದು ಜಾಣ್ಮೆಯ ನಡೆ. ರೋಗ ಹರಡುವಿಕೆ ತಡೆಯಲು ನಾಗರಿಕರ ಸಹಕಾರ ಮುಖ್ಯ. ಸುತ್ತಮುತ್ತಲಿನ ಪರಿಸರವನ್ನು ಸ್ವಚ್ಛವಾಗಿಟ್ಟುಕೊಳ್ಳಲು ಎಲ್ಲರೂ ಗಮನಹರಿಸಬೇಕು.

ವಿಜಯಲಕ್ಷ್ಮಿ ಉಪ್ಪಾರ, ಧಾರವಾಡ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.



ಮಾಧವ ಗಾಡ್ಗೀಳ್ ಹಾಗೂ ಕಸ್ತೂರಿರಂಗನ್ ಅವರು ವರದಿ ಕೊಡುವ ಮೊದಲು ಸ್ಥಳೀಯರ ಅಭಿಪ್ರಾಯ ಆಲಿಸುವ ಗೋಜಿಗೇ ಹೋಗಿಲ್ಲ. ಎಲ್ಲಿಯೂ ಸಮೀಕ್ಷೆಯನ್ನೂ ನಡೆಸಿಲ್ಲ. ಬಹುರಾಷ್ಟ್ರೀಯ ಕಂಪನಿಗಳಿಂದ ಅನುದಾನ ಪಡೆಯುವ ಸ್ವಯಂ ಸೇವಾ ಸಂಸ್ಥೆಗಳು ಸಿದ್ಧಪಡಿಸಿದ ವರದಿಯನ್ನಷ್ಟೇ ಅವರು ನೀಡಿದರು. ಇಲ್ಲವೆಂದರೆ ಆರೇಳು ರಾಜ್ಯಗಳ, ಸಹಸ್ರಾರು ಚದರ ಕಿ.ಮೀ ಹರಡಿಕೊಂಡ ಪಶ್ಚಿಮಘಟ್ಟದ ಪಾರಿಸರಿಕ ವೈವಿಧ್ಯದ ಬಗ್ಗೆ ಕೇವಲ 18 ತಿಂಗಳಲ್ಲಿ ವರದಿ ನೀಡಲು ಗಾಡ್ಗೀಳ್ ಅವರಿಗೆ ಹೇಗೆ ಸಾಧ್ಯವಾಯಿತು?

ಪರಿಸರ ಸೂಕ್ಷ್ಮ ಪ್ರದೇಶ ಉದ್ದೇಶವೇ ಪ್ರಶ್ನಾರ್ಹ

• ಡಾ.ಕಲ್ಕುಳಿ ವಿಠಲ್ ಹೆಗ್ಗಡೆ



ಪಶ್ಚಿಮಘಟ್ಟ ಸೂಕ್ಷ್ಮ ಪ್ರದೇಶ ಎಂದು ಘೋಷಿಸುವಂತೆ ಶಿಫಾರಸು ಮಾಡಿದ ವರದಿಗಳನ್ನು ಜಾರಿಗೊಳಿಸಲು ಮುಂದಾದ ಉದ್ದೇಶವೇ ಪ್ರಶ್ನಾರ್ಹ. ಜಗತ್ತಿನ ಎಂಟನೇ ಪ್ರಮುಖ ಜೀವವೈವಿಧ್ಯ ತಾಣ (ಹಾಟ್ ಸ್ಪಾಟ್) ಎಂದು ಪ್ರತಿಪಾದಿಸುತ್ತಾ ಈ ಪ್ರದೇಶವನ್ನು ಯುನೆಸ್ಕೊ ಪಟ್ಟಿಗೆ ಸೇರಿಸಲಾಯಿತು. ಇದರ ಹಿಂದೆ ಜನರ ಕಾಳಜಿ, ಪರಿಸರದ ಕಾಳಜಿಯಿಲ್ಲ; ಯಾರ ಪ್ರತಿಷ್ಠೆಗೋಸ್ಕರ ಇದನ್ನು ಸೇರ್ಪಡೆ ಮಾಡಲಾಯಿತೋ ಗೊತ್ತಿಲ್ಲ; ಒಮ್ಮೆ ಯುನೆಸ್ಕೊ ಪಟ್ಟಿಗೆ ಸೇರಿಸಿದ ಮೇಲೆ ಆ ಪ್ರದೇಶ ಅಥವಾ ಸ್ಮಾರಕ/ಕಟ್ಟಡಗಳ ಯಥಾಸ್ಥಿತಿಯನ್ನು ಕಾಪಾಡಬೇಕು ಎಂಬ ನಿಯಮವಿದೆ. ಅಲ್ಲಿಂದಲೇ ಸಮಸ್ಯೆಗಳು ಶುರುವಾದವು.

ಪಶ್ಚಿಮಘಟ್ಟವು ಜೀವವೈವಿಧ್ಯ ತಾಣ, ಮಳೆಕಾಡಿನ ಪ್ರದೇಶ ಎಂಬುದೆಲ್ಲವೂ ಸರಿ. ಇಲ್ಲಿನ ಪರಿಸರ ಉಳಿಸಲು ಇಲ್ಲಿ ವಾಸಿಸುವವರು ನಿರಂತರವಾಗಿ ಹೋರಾಟ ಮಾಡುತ್ತಲೇ ಬಂದಿದ್ದೇವೆ. ಕುದುರೆಮುಖದ ಅಪಾರ ಪ್ರಮಾಣದ ಕಬ್ಬಿಣದ ಅದಿರನ್ನು ವಿದೇಶಕ್ಕೆ ಸಾಗಿಸುವಾಗ ಪರಿಸರದ ಕಾಳಜಿ ಬರಲಿಲ್ಲವೇ? ಅದನ್ನು ವಿರೋಧಿಸಿ ತುಂಗಾಮೂಲ ಉಳಿಸಿ ಹೋರಾಟವನ್ನು ನಾವೆಲ್ಲ ಒಗ್ಗೂಡಿ ನಡೆಸಿದ್ದಲ್ಲದೇ, ಕೊನೆಗೆ ಗಣಿಗಾರಿಕೆಗೆ ಅವಕಾಶ ದೊರೆಯದಂತೆ ನೋಡಿಕೊಂಡೆವು. ಪಶ್ಚಿಮ ಘಟ್ಟವನ್ನು ಉಳಿಸಲು ಇಂತಹ ಅನೇಕ ಹೋರಾಟಗಳು ನಡೆದಿವೆ; ನಡೆಯುತ್ತಲೇ ಇವೆ.

ದೇಶದ ಒಂದಿಷ್ಟು ಪ್ರದೇಶವನ್ನು ಮ್ಯೂಸಿಯಂ ರೀತಿ ಇಟ್ಟು, ಅಲ್ಲಿ ಪರಿಸರ ಉಳಿದರೆ ಇಡೀ ಜಗತ್ತಿನ ಪರಿಸರವೇ ಉಳಿಯುತ್ತದೆ ಎಂದು ವಾದಿಸಿದಂತಿದೆ ಮಾಧವ ಗಾಡ್ಗೀಳ್, ಕಸ್ತೂರಿರಂಗನ್ ಅವರು ನೀಡಿರುವ ವರದಿಗಳ ಸಾರಾಂಶ. ಹಾಗೆ ನೋಡಿದರೆ ಪ್ರಪಂಚದ ಎಲ್ಲ ಪ್ರದೇಶಗಳೂ ಪರಿಸರ ಸೂಕ್ಷ್ಮ ಪ್ರದೇಶವೇ ಆಗಿದ್ದು, ಅವೆಲ್ಲವನ್ನೂ ಸಂರಕ್ಷಣೆ ಮಾಡಬೇಕಾಗಿದೆ. ಒಂದು ಕೇಂದ್ರವನ್ನು ಇಟ್ಟುಕೊಂಡು ಉಳಿದ ಪ್ರದೇಶ ಬಿಟ್ಟರೆ ಹೇಗೆ? ಮಲೆನಾಡು ಭಾಗದಲ್ಲಿ 13 ರಾಷ್ಟ್ರೀಯ ಉದ್ಯಾನಗಳು, ಅನೇಕ ವನ್ಯಜೀವಿಧಾಮಗಳು, ಅರಣ್ಯ ಯೋಜನೆ, ಹುಲಿ ಯೋಜನೆ, ಆನೆ ಕಾರಿಡಾರ್‌ಗಳೇ ತುಂಬಿಕೊಂಡಿವೆ. ಸೂಕ್ಷ್ಮ ಪ್ರದೇಶ ಎಂದು ಘೋಷಿಸಲು ಉದ್ದೇಶಿಸಿದ ಪ್ರದೇಶಗಳಿಗಿಂತ ಹೆಚ್ಚಿನ ಪ್ರದೇಶವನ್ನು ಸಂರಕ್ಷಣೆ ಮಾಡಲಾಗಿದೆ. ಅರಣ್ಯ ಸಂರಕ್ಷಣೆ, ವನ್ಯ ಜೀವಿ ಸಂರಕ್ಷಣೆ ಕಾಯ್ದೆಗಳ ಅನ್ವಯವೇ ಇವನ್ನೆಲ್ಲ ಅನುಷ್ಠಾನ ಮಾಡಲಾಗಿದ್ದು, ಇದರಿಂದ ಜನರು ಸಾಕಷ್ಟು ತೊಂದರೆ ಅನುಭವಿಸಿದ್ದಾರೆ; ಅನುಭವಿಸುತ್ತಿದ್ದಾರೆ.

ಜಾಗತಿಕ ತಾಪಮಾನ ಹಾಗೂ ಹವಾಮಾನ ವೈಪರೀತ್ಯಗಳಿಗೆ ಕಾರಣವಾಗಿರುವುದು ಪಶ್ಚಿಮಘಟ್ಟದಲ್ಲಿರುವ ಜನರಲ್ಲ. ಮುಂದುವರಿದ ದೇಶಗಳ ಆರ್ಥಿಕ ನಡೆ ಹಾಗೂ ವೈಭವೋಪೇತ ಜೀವನಶೈಲಿ. ವಿದ್ಯುತ್, ಸಿಮೆಂಟ್, ಹವಾನಿಯಂತ್ರಣ ಸೌಲಭ್ಯ ಸೇರಿದಂತೆ ಅತ್ಯಾಧುನಿಕ ಸೌಲಭ್ಯಗಳನ್ನು ಬಳಸುತ್ತಿರುವವರು ನಗರವಾಸಿ ಜನರು. ಈ ನಗರವಾಸಿಗಳಿಗೆ 24 ಗಂಟೆ ನಿರಂತರ ವಿದ್ಯುತ್ ಬೇಕು, ಓಡಾಡಲು ಪೆಟ್ರೋಲ್-ಡೀಸೆಲ್ ಸಿಗುತ್ತಲೇ ಇರಬೇಕು, ಮನೆಗಳಲ್ಲಿ ಮಾತ್ರ ಎ.ಸಿಯಲ್ಲದೇ ಕಾರು, ಬಸ್, ಮೆಟ್ರೊ, ವಿಮಾನ, ರೈಲು, ಥಿಯೇಟರ್, ಹೋಟೆಲ್ ಹೀಗೆ ಎಲ್ಲ ಕಡೆ ಎ.ಸಿ ಇರಲೇಬೇಕು. ಮೋಜು ಭರಿತ ಜೀವನ ಶೈಲಿಗೆ ಯಾವುದೇ ಅಡಚಣೆ ಇರಬಾರದು. ಅಭಿವೃದ್ಧಿ ಹೆಸರಿನಲ್ಲಿ ಸುಖಸಮೃದ್ಧಿಯನ್ನು ನಗರದ ಜನರು ಅನುಭವಿಸುತ್ತಲೇ ಇರಬೇಕು. ಅವರ ನಾಗಾಲೋಟದ ಜೀವನಕ್ಕೆ ಯಾವುದೇ ನಿರ್ಬಂಧ ಇಲ್ಲ; ಇವ್ಯಾವುದಕ್ಕೂ ಕಡಿವಾಣ ಹಾಕದೇ ಪಶ್ಚಿಮಘಟ್ಟದ ಒಂದಿಷ್ಟು ಪ್ರದೇಶಕ್ಕೆ ನಿರ್ಬಂಧ ಹಾಕಿದರೆ ಜಾಗತಿಕ ತಾಪಮಾನ ನಿಯಂತ್ರಣಕ್ಕೆ ಬರಲಿದೆ ಎಂಬುದಕ್ಕೆ ಏನು ಖಾತರಿ ಕೊಡುವಿರಿ?

ಕಸ್ತೂರಿರಂಗನ್ ವರದಿಯೇ ಅವೈಜ್ಞಾನಿಕ ಹಾಗೂ ಅವಾಸ್ತವಿಕ. ಒಂದು ಚದರ ಕಿ.ಮೀ. ಪ್ರದೇಶದಲ್ಲಿ 100ಕ್ಕಿಂತ ಕಮ್ಮಿ ಜನ ಇದ್ದರೆ ಅದು ಪರಿಸರ ಸೂಕ್ಷ್ಮ ಪ್ರದೇಶ ಎಂದು ಗುರುತಿಸಲಾಗಿದೆ. ಅದರ ಜತೆಗೆ ರಾಸಾಯನಿಕ ಬಳಸಬೇಡಿ, ಮರಳು ತೆಗೆಯಬೇಡಿ ಎಂದೆಲ್ಲ ನಿರ್ಬಂಧ ಹಾಕಲಾಗಿದೆ. ಮಲೆನಾಡಿಗರಿಗೆ ಅಡಿಕೆಯೇ ಆರ್ಥಿಕ ಬೆಳೆಯಾಗಿದೆ. ಅಡಿಕೆಗೆ ಬರುವ ಕೊಳೆರೋಗ ತಪ್ಪಿಸಲು ಕೋಲ್ಮನ್ ಅವರು ಬೋರ್ಡೋ ಮಿಶ್ರಣವನ್ನು ಕಂಡು ಹಿಡಿದಿದ್ದರು. ಕಾಪರ್ ಸಲ್ಫೇಟ್ ಮಿಶ್ರಣವಾದ ಇದು ಅಡಿಕೆಯನ್ನು, ಬೆಳೆಗಾರರನ್ನು ರಕ್ಷಿಸಿದೆ. ಇದಕ್ಕೆ ಪರ್ಯಾಯವನ್ನೇ ಸರ್ಕಾರ ಕಂಡು ಹಿಡಿದಿಲ್ಲ. ಔಷಧ ಹೊಡೆಯದೇ ಇದ್ದರೆ ಅಡಿಕೆಯನ್ನು ಉಳಿಸಿಕೊಳ್ಳುವುದಾದರೂ ಹೇಗೆ? ನನಗೆ ಎರಡು ಗ್ರಾಮಗಳಲ್ಲಿ ತೋಟ ಇದೆ. ಒಂದು ಗ್ರಾಮ ಸೂಕ್ಷ್ಮ ವಲಯ ವ್ಯಾಪ್ತಿಯಲ್ಲಿದ್ದರೆ, ಮತ್ತೊಂದು ತೋಟ ವಲಯದ ವ್ಯಾಪ್ತಿಯಿಂದ ಹೊರಗಿದೆ. ತೋಟಕ್ಕೆ ಬೋರ್ಡೋ ಮಿಶ್ರಣ ಹೊಡೆದರೆ 10 ಕ್ವಿಂಟಲ್ ಅಡಿಕೆ ಸಿಗುತ್ತದೆ. ಇಲ್ಲದಿದ್ದರೆ 5 ಕ್ವಿಂಟಲ್. ಇದು ನನ್ನೊಬ್ಬನ ಕತೆಯಲ್ಲ; ಈ ನಷ್ಟವನ್ನು ಭರಿಸುವುದು ಯಾರು? ಇದಕ್ಕೆ ಸರ್ಕಾರ ಪರಿಹಾರ ಕೊಡುತ್ತದೆ ಎಂದಾದರೆ ಕಸ್ತೂರಿರಂಗನ್ ವರದಿಯನ್ನು ಒಪ್ಪಿಕೊಳ್ಳಬಹುದು.

ಮರಳು ಗಣಿಗಾರಿಕೆಯ ವಿಷಯಕ್ಕೆ ಬಂದರೆ ಮತ್ತೊಂದು ಯಡವಟ್ಟು. ಮರಳು ಗಣಿಗಾರಿಕೆಯಿಂದ ದೇಶದ ಯಾವುದೋ ಮೂಲೆಯಲ್ಲಾದ ಅನಾಹುತಗಳನ್ನು ನಮ್ಮ ಮೇಲೂ ಆರೋಪಿಸಿ ಅದಕ್ಕೆ ನಿರ್ಬಂಧ ಹೇರಲಾಗಿದೆ. ಮರಳು ತೆಗೆಯಬಾರದು ಎಂಬುದರ ಪರಿಣಾಮ ಏನಾಗಿದೆ ಎಂದರೆ ಹೊಳೆ, ಹಳ್ಳಗಳು ಸಂಪೂರ್ಣ ಕಣ್ಮರೆಯಾಗಿ, ಮಳೆಗಾಲದಲ್ಲಿ ಮಾತ್ರ ಪ್ರವಾಹ ಉಕ್ಕೇರುವಂತಾಗಿದೆ. ಸರ್ಕಾರದ ಬಳಿ ಕೆರೆ ಹೂಳು ತೆಗೆಯಲು ಕಾರ್ಯಕ್ರಮ, ಅನುದಾನ ಇದೆ. ನದಿಯ ಹೂಳು ತೆಗೆಯುವ ಯೋಜನೆ ಎಲ್ಲಿದೆ? ಮರಳು ತೆಗೆಯದೇ ಇರುವುದರಿಂದ ನದಿಗಳ ಸ್ವರೂಪವೇ ಬದಲಾಗುತ್ತಿದ್ದು, ಗುಂಡಿಗಳೇ ತುಂಬಿಕೊಂಡಿವೆ.

ಕೊಡಗಿನಲ್ಲಿ ಭೂ ಕುಸಿತಕ್ಕೆ ರೆಸಾರ್ಟ್, ಮಾನವನ ಹಸ್ತಕ್ಷೇಪ ಕಾರಣವಾಗಿದ್ದು, ಪಶ್ಚಿಮ ಘಟ್ಟ ಉಳಿಯಬೇಕಾದರೆ ವರದಿಯನ್ನು ಅನುಷ್ಠಾನ ಮಾಡಲೇಬೇಕು ಎಂದು ಕೆಲವು ವರ್ಷಗಳ ಹಿಂದೆ ಮಾಧವ ಗಾಡ್ಗೀಳ್ ಅವರಿಂದ ಹೇಳಿಕೆ ಕೊಡಿಸಲಾಯಿತು. ಆದರೆ, 120 ವರ್ಷಗಳ ಮಳೆ-ಅನಾಹುತದ ಅಧ್ಯಯನ ಮಾಡಿದರೆ ಬೇರೆಯದೇ ಸತ್ಯ ಗೋಚರವಾಗುತ್ತದೆ. 1924ರ ಜುಲೈ 23ರಂದು ಕೇರಳದಲ್ಲಿ ಮಹಾಪ್ರವಾಹ ಸಂಭವಿಸಿತ್ತಲ್ಲದೇ, ದೊಡ್ಡ ಅನಾಹುತವೂ ಘಟಿಸಿತ್ತು. ಬೃಹತ್ ಗುಡ್ಡವೊಂದು ಮುಲ್ಲ ಪೆರಿಯಾರ್ ನದಿಯ ಮೇಲೆ ಕುಸಿದಿದ್ದಲ್ಲದೇ, ಒಂದು ಅಣೆಕಟ್ಟೆ ಒಡೆದು ಹೋಗಿತ್ತು. ಸಾವಿರಾರು ಜನ ಸತ್ತಿದ್ದಲ್ಲದೇ, ಭೂ ಸಮಾಧಿಯಾಗಿದ್ದರು. 1924ರ ಜುಲೈ 26ರಂದು ಕರ್ನಾಟಕದಲ್ಲೂ ಅಂತಹ ಪ್ರವಾಹ ಬಂದು, ಭೂ ಕುಸಿತವಾಗಿತ್ತು. ಆಗ ಯಾವುದೇ ರೆಸಾರ್ಟ್-ಮಾನವನ ಹಸ್ತಕ್ಷೇಪಗಳು ಇರಲಿಲ್ಲ. ಪಶ್ಚಿಮಘಟ್ಟವೇ ಬಂಡೆಯ ಮೇಲಿನ ಮಣ್ಣಿನ ಬೃಹತ್ ರಾಶಿ. ಕಡಿಮೆ ಅವಧಿಯಲ್ಲಿ ಅತಿ ಹೆಚ್ಚು ಮಳೆ ಬಂದರೆ ಭೂಮಿಗೆ ಧಾರಣಾ ಶಕ್ತಿ ಇಲ್ಲ. ಇಲ್ಲಿನ ಮಣ್ಣು ಸ್ಪಾಂಜಿನ ರೀತಿಯಿದ್ದು, ನೀರನ್ನು ಹಿಡಿದುಕೊಂಡು ಹೊರಬಿಡುವ ಗುಣ ಹೊಂದಿದೆ. ಈ ಸಾಮಾನ್ಯ ಜ್ಞಾನ ಅರ್ಥಮಾಡಿಕೊಳ್ಳದವರು ಎಂತಹುದೋ ವರದಿ ಮುಂದಿಟ್ಟು, ಪಶ್ಚಿಮ ಘಟ್ಟದ ಮೇಲೆ ಹಸ್ತಕ್ಷೇಪವಲ್ಲ; ಆಕ್ರಮಣವನ್ನೇ ಮಾಡುತ್ತಿದ್ದಾರೆ.

ಪ್ರಾಣಿ-ಪಕ್ಷಿ, ಮರಗಿಡಗಳ ಜತೆಗೆ ಮನುಷ್ಯ ಕೂಡ ಜೀವವೈವಿಧ್ಯದ ಭಾಗವೇ. ಹೀಗಾಗಿ, ಇಡೀ ಪಶ್ಚಿಮಘಟ್ಟವನ್ನು ಜನರಹಿತವಾಗಿಸುವ ಯತ್ನವೇ ಜೀವ-ಪರಿಸರ ವಿರೋಧಿಯಾದುದು.

ಮಾಧವ ಗಾಡ್ಗೀಳ್ ಹಾಗೂ ಕಸ್ತೂರಿರಂಗನ್ ಅವರು ವರದಿ ಕೊಡುವ ಮೊದಲು ಸ್ಥಳೀಯರ ಅಭಿಪ್ರಾಯ ಆಲಿಸುವ ಗೋಜಿಗೇ ಹೋಗಿಲ್ಲ. ಎಲ್ಲಿಯೂ ಸಮೀಕ್ಷೆಯನ್ನೂ ನಡೆಸಿಲ್ಲ. ಬಹುರಾಷ್ಟ್ರೀಯ ಕಂಪನಿಗಳಿಂದ ಅನುದಾನ ಪಡೆಯುವ ಸ್ವಯಂ ಸೇವಾ ಸಂಸ್ಥೆಗಳು ಸಿದ್ಧಪಡಿಸಿದ ವರದಿಯನ್ನಷ್ಟೇ ಅವರು ನೀಡಿದರು. ಇಲ್ಲವೆಂದರೆ ಆರೇಳು ರಾಜ್ಯಗಳ, ಸಹಸ್ರಾರು ಚದರ ಕಿ.ಮೀ ಹರಡಿಕೊಂಡ ಪಶ್ಚಿಮಘಟ್ಟದ ಪಾರಿಸರಿಕ ವೈವಿಧ್ಯದ ಬಗ್ಗೆ ಕೇವಲ 18 ತಿಂಗಳಲ್ಲಿ ವರದಿ ನೀಡಲು ಗಾಡ್ಗೀಳ್ ಅವರಿಗೆ ಹೇಗೆ ಸಾಧ್ಯವಾಯಿತು?

ಸಣ್ಣದೊಂದು ಉದಾಹರಣೆ ಹೇಳುತ್ತೇನೆ. ಹುಲಿಗಳೇ ಇಲ್ಲದ ನಮ್ಮೂರಿನ ಹುಲಿಯೋಜನೆಗೆ ಅಮೆರಿಕದ ಎಕ್ಸಾನ್ ಮೊಬಿಲಿ ಎಂಬ ಪೆಟ್ರೋಲಿಯಂ ಕಂಪನಿ ನೆರವು ನೀಡುತ್ತಿದೆ. ಸಮುದ್ರ ಮಾಲಿನ್ಯ ಹಾಗೂ ಜೀವವೈವಿಧ್ಯದ ಧಕ್ಕೆಗೆ ದೊಡ್ಡ ಪಾಲು ನೀಡುತ್ತಿರುವ ಪೆಟ್ರೋಲಿಯಂ ರಿಫೈನರಿ ಕಂಪನಿಯು ಕುದುರೆಮುಖದ ಹುಲಿ ಯೋಜನೆಗೆ ದುಡ್ಡು ಕೊಡುತ್ತದೆ. ಅದರ ನಿರ್ದೇಶನದ ಮೇಲೆ ಇಲ್ಲಿ ನಿಯಮ-ಯೋಜನೆಗಳು ರೂಪುಗೊಳ್ಳುತ್ತವೆ. ಅಮೆರಿಕದಲ್ಲಿ ಹುಲಿಗಳೇ ಇಲ್ಲ; ಹಾಗಿದ್ದರೂ ಎಕ್ಸಾನ್ ಮೊಬಿಲಿ ಕಂಪನಿಯು ಹುಲಿಯನ್ನು ತನ್ನ ಲಾಂಛನವಾಗಿ ಮಾಡಿಕೊಂಡಿದೆ. ಆ ಉದ್ದೇಶಕ್ಕಷ್ಟೇ ಅದು ದುಡ್ಡು ಕೊಡುತ್ತಿಲ್ಲ. ತಾನು ವಿಶ್ವದಾದ್ಯಂತ ಬೇರೆ ಬೇರೆ ಕಡೆಗಳಲ್ಲಿ ಮಾಡಿದ ಪಾಪವನ್ನು ಪಶ್ಚಿಮ ಘಟ್ಟದ ಜನ ತೊಳೆಯಬೇಕು ಎಂಬ ಉದ್ದೇಶಕ್ಕೆ ಈ ದುಡ್ಡನ್ನು ಕೊಡುತ್ತಿದೆ. ಈ ವಾಸ್ತವ ಪಶ್ಚಿಮಘಟ್ಟವಾಸಿಗಳಿಗೆ ಅರ್ಥವಾಗಬೇಕಿದೆ.

ಜನರನ್ನು ಕಾಡಿನಿಂದ ಹೊರಹಾಕಿದರೆ ಏನಾಗುತ್ತದೆ ಎಂಬುದನ್ನು ಬಂಡೀಪುರ, ನಾಗರಹೊಳೆಯ ನಿದರ್ಶನಗಳು ತೋರಿಸಿಕೊಟ್ಟಿವೆ. ಬಂಡೀಪುರ, ನಾಗರಹೊಳೆಯಲ್ಲಿ ಆರಂಭಿಕ ಹಂತದಲ್ಲಿ ಬೆಂಕಿ ಕಾಣಿಸಿಕೊಂಡಾಗ ಅಲ್ಲಿ ಯಾರೂ ಇರಲಿಲ್ಲ. ಹೀಗಾಗಿ, ಬೆಂಕಿ ಕೆನ್ನಾಲಗೆ ಚಾಚುತ್ತಲೇ ಹೋಯಿತು. 21 ಸಾವಿರ ಎಕರೆಗೂ ಹೆಚ್ಚಿನ ಕಾಡು ಸುಟ್ಟು ನಾಶವಾಗಿ ಹೋಯಿತು. ಅಲ್ಲಿ ಮೂಲನಿವಾಸಿಗಳು ಇದ್ದಿದ್ದರೆ ಬೆಂಕಿ ಹಬ್ಬಲು ಬಿಡುತ್ತಿರಲಿಲ್ಲ. ಇದು ತಥಾಕಥಿತ ಪರಿಸರವಾದಿಗಳಿಗೆ ಅರ್ಥವಾಗಬೇಕಿದೆ.

ನಗರ ಪ್ರದೇಶದ ಜನರು, ಅಭಿವೃದ್ಧಿ ಹೆಸರಿನ ಲೋಲುಪತೆ-ಸೌಲಭ್ಯಗಳಿಂದಾದ ಪಾಪವನ್ನು ಪಶ್ಚಿಮಘಟ್ಟವಾಸಿಗಳು ಏಕೆ ತೊಳೆಯಬೇಕು? ನಿಮ್ಮ ಪಾಪವನ್ನು ನೀವೇ ತೊಳೆದುಕೊಳ್ಳಿ ಎಂದು ನಗರವಾಸಿಗಳಿಗೆ ಪಶ್ಚಿಮಘಟ್ಟವಾಸಿಗಳು ಬಲವಾಗಿ ಹೇಳಬೇಕಾದ ಕಾಲ ಇದಾಗಿದೆ.

ಲೇಖಕ: ಪರಿಸರ ಹೋರಾಟಗಾರ

'ಸೂಕ್ತ, ಅತ್ಯವಶ್ಯಕ'

ಪಶ್ಚಿಮ ಘಟ್ಟವನ್ನು ಪರಿಸರ ಸೂಕ್ಷ್ಮ ಪ್ರದೇಶವೆಂದು ಘೋಷಿಸುವುದು ತುಂಬಾ ಸೂಕ್ತ ಮತ್ತು ಅತ್ಯವಶ್ಯಕ. ಏಕೆಂದರೆ ಮಾನವನ ಚಟಕ್ಕೆ, ದುರಾಸೆಗೆ, ಕೆಟ್ಟ ಬಯಕೆಗೆ ಈಗಾಗಲೇ ಪ್ರಕೃತಿ ಸಾಕಷ್ಟು ಹಾನಿಗೊಳಗಾಗಿದೆ. ಇದು ಹೀಗೆಯೇ ಮುಂದುವರಿದರೆ ಪ್ರಕೃತಿಯ ವಿಕೋಪಕ್ಕೆ ಸಕಲ ಜೀವ ಸಂತತಿಯ ಸರ್ವನಾಶ ಕಟ್ಟಿಟ್ಟ ಬುತ್ತಿ. ಆದಕಾರಣ ಸರ್ಕಾರ ಯಾವ ಒತ್ತಡಕ್ಕೂ ಮಣಿಯದೆ ಕೂಡಲೇ ಈ ಘೋಷಣೆ ಮಾಡುವುದು ಸ್ವಾಗತಾರ್ಹವಾಗಿದೆ

ಸೋಮು ಎಂ. ಕಾವೇರಿಪುರ, ಮೈಸೂರು

'ಸಂತ್ರಸ್ತರಿಗೆ ತೊಂದರೆ ಕೊಡುತ್ತಿರುವುದು ಎಷ್ಟು ಸರಿ?'

ಪಶ್ಚಿಮಘಟ್ಟಗಳಲ್ಲಿ ಮಾನವ ಶತಮಾನಗಳಿಂದ ಪರಿಸರ ಸಮತೋಲನ ಕಾಪಾಡಿಕೊಂಡು ಬದುಕುತ್ತಾ ಬಂದಿದ್ದಾನೆ. ಆದರೆ, ಸರ್ಕಾರಗಳು ಪರಿಸರ ಸೂಕ್ಷ್ಮತೆಯನ್ನು ಅರಿತುಕೊಳ್ಳದೇ ಹಲವಾರು ವಿದ್ಯುತ್ ಮತ್ತು ನೀರಾವರಿ ಯೋಜನೆಗಳನ್ನು ಅನುಷ್ಠಾನಕ್ಕೆ ತಂದು ಕಾಡು ನಾಶಮಾಡಿ ಅಲ್ಲಿರುವ ಜೀವಸಂಕುಲಗಳ ವಿನಾಶಕ್ಕೆ ಕಾರಣವಾಗಿವೆ. ಈಗ 'ಊರು ಕೊಳ್ಳೆಹೊಡೆದ ಮೇಲೆ ಕೋಟೆ ಬಾಗಿಲು ಹಾಕಿದಂತೆ' ಎನ್ನುವ ಹಾಗೆ ಪರಿಸರ ಸೂಕ್ಷ್ಮಪ್ರದೇಶ ಎಂದು ಘೋಷಣೆ ಮಾಡಲು ಹೊರಟಿದೆ. ಇಲ್ಲಿಯೇ ತಲೆತಲಾಂತರಗಳಿಂದ ಮೇಲೆ ತಿಳಿಸಿದ ಯೋಜನೆಗಳಿಂದ ಸಂತ್ರಸ್ತರಾಗಿ ಬದುಕುತ್ತಿರುವವರಿಗೆ ತೊಂದರೆ ಕೊಡುತ್ತಿರುವುದು ಎಷ್ಟು ಸರಿ? ಹಲವು ಆದಿವಾಸಿ ಜನಾಂಗಗಳು ಇಲ್ಲಿನ ಅರಣ್ಯ ಉತ್ಪನ್ನಗಳನ್ನೇ ಅವಲಂಬಿಸಿ ಬದುಕುತ್ತಿದ್ದಾರೆಂಬ ಸೂಕ್ಷ್ಮತೆಯನ್ನು ಸಮಿತಿಯ ಸದಸ್ಯರು ಅರಿಯದಾದುದು ವಿಪರ್ಯಾಸವೇ ಸರಿ.

ಕೃಷ್ಣಮೂರ್ತಿ ಹಿಳ್ಳೋಡಿ, ಶಿವಮೊಗ್ಗ

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ

ಹೌದು 82%

ಅಲ್ಲ 18%

ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಲಾನ್ ಬಾಲ್ಸ್ ಕ್ರೀಡೆಯಲ್ಲಿ ಭಾರತ ಚಿನ್ನದ ಪದಕ ಗೆದ್ದಿದೆ. ಇದು, ಈ ಕ್ರೀಡೆಯ ಬಗ್ಗೆ ಭಾರತೀಯರಲ್ಲಿ ಆಸಕ್ತಿಯನ್ನು ಹೆಚ್ಚಿಸಬಹುದೇ?

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ



ವೇದವ್ಯಾಸರ ಶಿವಪುರಾಣಸಾರ

ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ | 191

ದಕ್ಷನಿಗೆ ಜೀವ ಕರುಣಿಸಿದ ಶಿವ

ಕ್ಷಮೆ ಬೇಡಿದ ವಿಷ್ಣು, ಬ್ರಹ್ಮ, ಇಂದ್ರಾದಿ ದೇವತೆಗಳಿಗೆ ಕರುಣಾಮಯನಾದ ಶಿವನು ಮಂದಹಾಸವನ್ನು ಸೂಸುತ್ತಾ ಹೀಗೆ ಅನುಗ್ರಹಿಸಿದ: 'ಎಲೈ ಬ್ರಹ್ಮವಿಷ್ಣುಗಳೇ, ಸಾವಧಾನ ಮನಸ್ಸಿನಿಂದ ನನ್ನ ಮಾತನ್ನು ಕೇಳಿ. ನಿಜವಾದ ವಿಚಾರವನ್ನು ಹೇಳುವೆನು. ಬಾಲಕರಾದ ನೀವೆಲ್ಲರೂ ನನ್ನ ಮಾಯೆಗೆ ಒಳಪಟ್ಟವರಾಗಿ ಅನಿಷ್ಟವನ್ನಾಚರಿಸಿರುವಿರಿ. ಅದರಿಂದ ನನಗೇನೂ ವ್ಯಥೆಯಿಲ್ಲ. ಆದರೆ ನಿಮಗೆ ಬುದ್ಧಿ ಬರಲೆಂದು ಆ ರೀತಿ ಶಿಕ್ಷಿಸಿರುವೆ. ದಕ್ಷನ ಯಜ್ಞನಾಶವನ್ನು ನಾನು ಬೇಕೆಂದು ಮಾಡಲಿಲ್ಲ. ಆದರೆ ಇನ್ನೊಬ್ಬರಿಗೆ ಕೇಡನ್ನು ಬಯಸಿದರೆ, ಅದು ತನಗೇ ಬಂದೊದಗುವುದು ಎಂದು ತೋರಿಸಲು ಹಾಗೆ ಯಜ್ಞವನ್ನು ಧ್ವಂಸಗೊಳಿಸಿದೆ. ಪರರಿಗೆ ತೊಂದರೆಯಾಗುವಂತಹ ಕಾರ್ಯವನ್ನು ಯಾರೂ ಮಾಡಬಾರದು. ಹಾಗೆ ಮಾಡಿದರೆ, ಅದು ತನಗೇ ಕೇಡಾಗುವುದು. ಇದಕ್ಕೆ ದಕ್ಷನೇ ದೃಷ್ಟಾಂತವು. ಶಿರಸ್ಸನ್ನು ಕಳೆದುಕೊಂಡ ದಕ್ಷನು ಮುಖವುಳ್ಳವನಾಗಲಿ, ಮಿತ್ರನೆಂಬ ಆದಿತ್ಯನ ಕಣ್ಣಿನಿಂದ ಭಗದೇವತೆಯು ಯಜ್ಞಭಾಗವನ್ನು ನೋಡುವವನಾಗಲಿ, ಹಲ್ಲುಗಳನ್ನು ಕಳೆದುಕೊಂಡ ಸೂರ್ಯನು ಕರ್ಮಗಳಲ್ಲಿ ಮೊಸರು, ಹಿಟ್ಟು (ಸಕ್ತು) ಮುಂತಾದ ಹವಿಸ್ಸನ್ನು ಪಡೆಯಲಿ. ನನ್ನನ್ನು ತೀವ್ರವಾಗಿ ವಿರೋಧಿಸಿದ ಭೃಗುಮುನಿಯು ಆಡಿನಂತೆ ಗಡ್ಡವುಳ್ಳವನಾಗಲಿ. ಮಿಕ್ಕ ದೇವತೆಗಳೆಲ್ಲರೂ ಆರೋಗ್ಯವನ್ನು ಹೊಂದಲಿ. ಸೂರ್ಯ ಮತ್ತು ಅಶ್ವಿನಿ ದೇವತೆಗಳು ವಾಹನಗಳನ್ನು ಮಾಡಿಕೊಂಡು ಬಾಹು ಮತ್ತು ಕೈಗಳಿಂದ ಸಂಚರಿಸುವವರಾಗಲಿ. ಮಿಕ್ಕ ಅಧ್ವರ್ಯುಗಳೆಲ್ಲರೂ ನೀವು ಹೇಳಿದಂತೆ ಆರೋಗ್ಯವನ್ನು ಹೊಂದಲಿ' ಎಂದು ಹೇಳಿ ಪರಮೇಶ್ವರನು ಸುಮ್ಮನಾದನು.

ಶಂಕರನ ಮಾತನ್ನು ಕೇಳಿ ವಿಷ್ಣು ಮೊದಲಾದವರೆಲ್ಲರೂ ಸಂತೋಷಪಟ್ಟರು. ಅವರೆಲ್ಲ ತಿರುಗಿ ದಕ್ಷಯಜ್ಞ ಶಾಲೆಗೆ ಹಿಂದಿರುಗಲು ನಿರ್ಧರಿಸಿದರು. ಶಿವನು ಸಹ ತಮ್ಮೊಡನೆ ಕನಖಲ ಕ್ಷೇತ್ರದಲ್ಲಿರುವ ದಕ್ಷಯಜ್ಞಶಾಲೆಗೆ ಬರಬೇಕೆಂದು ಕೋರಿದರು. ಅದರಂತೆ ಶಿವನು ವಿಷ್ಣು, ಬ್ರಹ್ಮ, ಇಂದ್ರಾದಿ ದೇವತೆಗಳೊಂದಿಗೆ ದಕ್ಷಯಜ್ಞಶಾಲೆಗೆ ಬಂದ. ಅಲ್ಲಿ ಸ್ವಾಹಾದೇವಿ, ಸ್ವಧಾದೇವಿ, ಪೂಷಾ, ಧೃತಿ, ತುಷ್ಟಿದೇವಿ, ಸರಸ್ವತೀ, ಋಷಿಗಳು, ಪಿತೃಗಳು, ಅಗ್ನಿಪುರುಷರು, ಯಕ್ಷರು, ಗಂಧರ್ವರು, ರಾಕ್ಷಸರು ಇದ್ದರು. ಇವರಲ್ಲಿ ಕೆಲವರನ್ನು ವೀರಭದ್ರನು ಹೊಡೆದು ಗಾಯಗೊಳಿಸಿದ್ದರೆ, ಇನ್ನೂ ಕೆಲವರು ಮೃತರಾಗಿದ್ದರು. ಧ್ವಂಸವಾದ ಯಜ್ಞವನ್ನು ನೋಡಿ ಶಂಕರನು ನಗುತ್ತಾ, ಮಹಾವೀರನಾದ ವೀರಭದ್ರನನ್ನು ಕರೆದು, 'ಎಲೈ ವೀರಭದ್ರನೆ, ಇದೆಂತಹ ಕಾರ್ಯವನ್ನು ಮಾಡಿರುವೆ? ದೇವತೆಗಳಿಗೂ ಮುನಿಗಳಿಗೂ ಮಹಾಶಿಕ್ಷೆಯನ್ನೇ ವಿಧಿಸಿರುವೆ. ದಕ್ಷನು ವಿಲಕ್ಷಣವಾದ ಯಾಗವನ್ನು ಮಾಡಿದ. ಅದಕ್ಕೆ ತಕ್ಕ ಫಲವು ಅವನಿಗೆ ಲಭಿಸಿತು. ಆ ದಕ್ಷನನ್ನು ಇಲ್ಲಿಗೆ ಕರೆದುಕೊಂಡು ಬಾ' ಎಂದ.

ವೀರಭದ್ರನು ದಕ್ಷನ ತಲೆಯಿಲ್ಲದ ಮುಂಡವನ್ನು ತಂದು ಎದುರಿಗಿರಿಸಿದ. ಶಿವನು 'ದಕ್ಷನ ಶಿರಸ್ಸೆಲ್ಲಿ' ಎಂದು ಪ್ರಶ್ನಿಸಿದ. ವೀರಭದ್ರನು 'ಅಗ್ನಿಯಲ್ಲಿ ದಕ್ಷನ ಶಿರವನ್ನು ಹೋಮ ಮಾಡಿದೆ' ಎಂದ. ಕೈಲಾಸದಲ್ಲಿ ದೇವತೆಗಳಿಗೆ ಮಾತು ಕೊಟ್ಟಂತೆ ದಕ್ಷನನ್ನು ಬದುಕಿಸಿ, ಯಜ್ಞವನ್ನು ಯಶಸ್ವಿಗೊಳಿಸುವ ಭರವಸೆ ಈಡೇರಿಸಬೇಕಿತ್ತು. ದೇವತೆಗಳು ಸವನೀಯ ಯಾಗಕ್ಕಾಗಿ ಸಿದ್ಧಪಡಿಸಿದ್ದ ಪಶುವಿನ ಶಿರವನ್ನು ಕತ್ತರಿಸಿ ದಕ್ಷನ ಮುಂಡಕ್ಕೆ ಸೇರಿಸುವಂತೆ ಶಿವ ಸೂಚಿಸಿದ. ಅದರಂತೆ ದೇವತೆಗಳು ಯಜ್ಞಪಶುವಾದ ಆಡಿನ ಶಿರಸ್ಸನ್ನು ದಕ್ಷನ ಮುಂಡಕ್ಕೆ ಸೇರಿಸಿದರು. ಶಂಕರನು ಶುಭದೃಷ್ಟಿಯಿಂದ ದಕ್ಷನ ಶರೀರವನ್ನು ನೋಡಿದಾಗ ಆ ದೇಹದಲ್ಲಿ ಪ್ರಾಣ ಮೂಡಿತು. ಮಲಗಿ ಎದ್ದವನಂತೆ ದಕ್ಷಬ್ರಹ್ಮ ಎದ್ದು ಕುಳಿತ. ತನ್ನ ಎದುರಿನಲ್ಲಿ ನಿಂತಿರುವ ಶಂಕರನನ್ನು ನೋಡಿದ.


ಪಿವಿ ಫ್ಯಾಕ್ಟ್ ಚೆಕ್

ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ 9606038256

'10 ವರ್ಷಗಳ ನಂತರ ಮೀಸಲಾತಿಯನ್ನು ಕೊನೆಗೊಳಿಸಬೇಕು' ಎಂದು ಡಾ. ಬಿ.ಆರ್. ಅಂಬೇಡ್ಕರ್ ಅವರು 1956ರಲ್ಲಿ ಹೇಳಿದ್ದರು. ಆದರೆ, ಅಧಿಕಾರದಲ್ಲಿ ಇದ್ದ ಪಕ್ಷವು ಮೀಸಲಾತಿಯನ್ನು ಮುಂದುವರಿಸಿತು' ಎಂಬ ಬರಹ ಇರುವ ಪೋಸ್ಟರ್ ಸಾಮಾಜಿಕ ಜಾಲತಾಣಗಳಲ್ಲಿ ವೈರಲ್ ಆಗಿದೆ. ಬಿಜೆಪಿ ನಾಯಕಿ ಸುಮಿತ್ರಾ ಮಹಾಜನ್ ಅವರು 2018ರಲ್ಲಿ ಜಾರ್ಖಂಡ್‌ನಲ್ಲಿ ನಡೆದಿದ್ದ ಲೋಕ ಮಂಥನ ಕಾರ್ಯಕ್ರಮದಲ್ಲೂ ಇದೇ ಮಾತು ಹೇಳಿದ್ದರು. ದೇಶದ 75ನೇ ಸ್ವಾತಂತ್ರ್ಯೋತ್ಸವದ ಹೊಸ್ತಿಲಲ್ಲಿ ಮತ್ತೆ ಇಂತಹ ಪೋಸ್ಟರ್‌ಗಳು ಮುನ್ನೆಲೆಗೆ ಬಂದಿವೆ.

'10 ವರ್ಷಗಳ ನಂತರ ಮೀಸಲಾತಿಯನ್ನು ಕೊನೆಗೊಳಿಸಬೇಕು ಎಂದು ಡಾ.ಬಿ.ಆರ್.ಅಂಬೇಡ್ಕರ್ ಅವರು ಎಲ್ಲಿಯೂ ಹೇಳಿಲ್ಲ' ಎಂದು ಆಲ್ಟ್ ನ್ಯೂಸ್, ದಿ ಕ್ವಿಂಟ್ ಫ್ಯಾಕ್ಟ್‌ಚೆಕ್ ಪ್ರಕಟಿಸಿವೆ. '1932ರ ಪೂನಾ ಒಪ್ಪಂದದ ಸಂದರ್ಭದಲ್ಲಿ, '10 ವರ್ಷದ ನಂತರ ರಾಜಕೀಯ ಕ್ಷೇತ್ರದಲ್ಲಿನ ಮೀಸಲಾತಿಯನ್ನು ಪರಿಷ್ಕರಿಸಬೇಕು' ಎಂದು ಅಂಬೇಡ್ಕರ್ ಹೇಳಿದ್ದರು. ಆದರೆ ಮೀಸಲಾತಿಯನ್ನು ರದ್ದುಪಡಿಸಬೇಕು ಅಥವಾ ಕೊನೆಗೊಳಿಸಬೇಕು ಎಂದು ಅವರು ಹೇಳಿರಲಿಲ್ಲ. ಶಿಕ್ಷಣ, ಉದ್ಯೋಗ ಮತ್ತು ಬಡ್ತಿಯಲ್ಲಿನ ಮೀಸಲಾತಿಯನ್ನು ರದ್ದುಪಡಿಸಬೇಕು ಎಂದು ಅಂಬೇಡ್ಕರ್ ಅವರು ಎಲ್ಲಿಯೂ ಹೇಳಿಲ್ಲ. ಮೀಸಲಾತಿ ಕುರಿತಂತೆ ಅಂಬೇಡ್ಕರ್ ಅವರು ಹೇಳಿದ್ದಾರೆ ಎನ್ನಲಾದ ಸುಳ್ಳುಸುದ್ದಿಗಳ ಬಗ್ಗೆ, ಜಿಂದಾಲ್ ಗ್ಲೋಬಲ್ ಲಾ ಸ್ಕೂಲ್‌ನ ಸಹಾಯಕ ಪ್ರೊಫೆಸರ್ ಅನುರಾಗ್ ಭಾಸ್ಕರ್ ಅವರು ಅಧ್ಯಯನ ವರದಿ ಪ್ರಕಟಿಸಿದ್ದಾರೆ. ಮೀಸಲಾತಿ ಬಗ್ಗೆ ಅಂಬೇಡ್ಕರ್ ಅವರು ಈ ರೀತಿ ಎಲ್ಲಿಯೂ ಹೇಳಿಲ್ಲ ಎಂದು ಅನುರಾಗ್ ಭಾಸ್ಕರ್ ಹೇಳಿದ್ದಾರೆ ಎಂದು ಈ ಫ್ಯಾಕ್ಟ್‌ಚೆಕ್‌ಗಳಲ್ಲಿ ವಿವರಿಸಲಾಗಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ದರ್ಶನದಿಂದ ಅದ್ಭುತ

ಅತ್ಯಂತದುತ್ಕಟದ ಸನ್ನಿವೇಶಗಳ ಭರ |
ಪ್ರತ್ಯಕ್ಷ ದರ್ಶನದಿನಲ್ಲದೆಂತಹುದು? ||
ಪುಸ್ತಕದ ಚಿತ್ರದಿಂದೂಹಿಪೆಯ ಹಿಮಗಿರಿಯ |
ವಿಸ್ತಾರದದ್ಭುತವ ?- ಮಂಕುತಿಮ್ಮ || 687 ||

ಪದ-ಅರ್ಥ: ಅತ್ಯಂತದುತ್ಕಟದ = ಅತ್ಯಂತದ + ಉತ್ಕಟದ, ಭರ = ಭಾವ, ಪ್ರತ್ಯಕ್ಷದರ್ಶನದಿನಲ್ಲದೆಂತಹುದು = ಪ್ರತ್ಯಕ್ಷ + ದರ್ಶನದಿ + ಅಲ್ಲದೆ + ಎಂತಹುದು, ಚಿತ್ರದಿಂದೂಹಿಪೆಯ = ಚಿತ್ರದಿಂದ + ಊಹಿಪೆಯ(ಊಹಿಸುವೆಯಾ), ವಿಸ್ತಾರದದ್ಭುತವ = ವಿಸ್ತಾರದ + ಅದ್ಭುತವ

ವಾಚ್ಯಾರ್ಥ: ಪ್ರತ್ಯಕ್ಷ ದರ್ಶನವಿಲ್ಲದೆ ಅತ್ಯಂತ ಉತ್ಕಟವಾದ ಸನ್ನಿವೇಶಗಳ ಭಾವ ದೊರೆತೀತು ಹೇಗೆ? ಪುಸ್ತಕದಲ್ಲಿ ದೊರೆತ ಹಿಮಾಲಯದ ಚಿತ್ರವನ್ನು ನೋಡಿ ಅದರ ಅಗಾಧ ವಿಸ್ತಾರ ಮತ್ತು ಅದ್ಭುತವನ್ನು ಊಹಿಸಲು ಸಾಧ್ಯವೆ?

ವಿವರಣೆ: ಇಂದ್ರಿಯಗಳ ಅನುಭವ ಮತ್ತು ಅರ್ಥ ಇವುಗಳ ಸಂಯೋಗದಿಂದ ಆದ ಜ್ಞಾನವೇ ಪ್ರತ್ಯಕ್ಷಜ್ಞಾನ ಎಂದು ಭಾರತೀಯ ತತ್ವಶಾಸ್ತ್ರ ಪರಿಣಿತರು ಅಭಿಪ್ರಾಯ ಪಡುತ್ತಾರೆ (ಇಂದ್ರಿಯಾರ್ಥ ಸಂನಿಕರ್ಷಜನ್ಯ ಜ್ಞಾನಂ ಪ್ರತ್ಯಕ್ಷಂ). ಇಂದ್ರಿಯಗಳಿಗೆ ತೋರದ ಜ್ಞಾನ ಕೇವಲ ಭ್ರಾಂತಿ, ಕಲ್ಪನೆ. ಇಂದ್ರಿಯಗಳ ಅನುಭವಕ್ಕೆ ಬಂದರೂ ಅರ್ಥವಾಗದಿದ್ದರೆ ಅದು ವಿಪರೀತ ಜ್ಞಾನ. ಹೀಗೆ ಸನ್ನಿವೇಶವೊಂದು ನಮಗೆ ಪ್ರತ್ಯಕ್ಷ ಜ್ಞಾನವಾಗುವುದಕ್ಕೆ ದರ್ಶನದ ಅವಶ್ಯಕತೆ ಇದೆ. ಮೊನ್ನೆ ಪತ್ರಿಕೆಯೊಂದರಲ್ಲಿ ಘಟನೆಯೊಂದು ವರದಿಯಾಗಿತ್ತು. ರಶಿಯಾದ ಸೈನ್ಯದೊಡನೆ ಹೋರಾಡುವಾಗ ಯುಕ್ರೇನ್‌ನ ಸೈನಿಕನೊಬ್ಬ ಸತ್ತನೆಂದು ಸೈನ್ಯಾಧಿಕಾರಿಗಳು ಅವನ ಮನೆಗೆ ಸುದ್ದಿ ಮುಟ್ಟಿಸಿದ್ದರು. ಮನೆಯಲ್ಲಿ ಪರಿವಾರದ ದುಃಖ ಹೇಳತೀರದು. ಸೈನಿಕನ ತಾಯಿಯಂತೂ ಪ್ರಜ್ಞೆ ಕಳೆದುಕೊಂಡರು. ಸೈನಿಕನ ದೇಹ ಮನೆಗೆ ಬರುತ್ತದೆಂದು ಕಾಯುತ್ತಿರುವಾಗ ನಡೆದದ್ದು ಆಶ್ಚರ್ಯ! ಸತ್ತನೆಂದು ವರದಿಯಾಗಿದ್ದ ಸೈನಿಕನೇ ಮನೆಗೆ ಬಂದ! ಗುರುತಿಸುವುದರಲ್ಲಿ ತಪ್ಪಾಗಿತ್ತು. ಅವನ ತಾಯಿಗೆ ಎಷ್ಟು ಸಂತೋಷವಾಗಿರಬೇಡ? ಆಕೆ ಓಡಿ ಬಂದು ಅವನನ್ನು ತಬ್ಬಿಕೊಂಡು ಸಂತೋಷದ ಅತಿರೇಕದಲ್ಲಿ ಬಿಕ್ಕಿ ಬಿಕ್ಕಿ ಅತ್ತದ್ದರ ಬಗ್ಗೆ ಲೇಖನ ವಿವರ ನೀಡಿತ್ತು. ಅದನ್ನು ಓದಿದ ನಮಗೆ ಕಣ್ಣುಹನಿಯಾದರೂ, ಆ ತಾಯಿಯ ಅನುಭವದ, ಉತ್ಕಟತೆಯ,ಭಾವಪೂರದ ಒಂದಂಶವೂ ನಮ್ಮನ್ನು ತಟ್ಟಲಾರದು. ಅದು ಪ್ರತ್ಯಕ್ಷ ದರ್ಶನದ ಫಲ. ಪತ್ರಿಕೆಯಲ್ಲಿ ನಾವು ಓದಿದ್ದು ಆಕೆಯ ಅನುಭವದ ಕೇವಲ ಒಂದು ಚೂರು ಮಾತ್ರ. ತಾಯಿಗೆ ಆದದ್ದು ಪ್ರತ್ಯಕ್ಷ ದರ್ಶನ, ನಮಗೆ ದೊರೆತದ್ದು ಸನ್ನಿವೇಶದ ಊಹೆ. ಕಲ್ಪನೆಗೂ, ಪ್ರತ್ಯಕ್ಷಾನುಭವಕ್ಕೂ ಅಜಗಜಾಂತರ ವ್ಯತ್ಯಾಸ.

ಅರ್ಜುನ ಶ್ರೀಕೃಷ್ಣನನ್ನು ಸ್ನೇಹಿತನೆಂದು ಕಂಡವನು. ಅವನ ಜೊತೆಗೆ ಆಮೋದ, ವಿನೋದಗಳಲ್ಲಿ ದಿನ ಕಳೆದವನು. ಆದರೆ ಯುದ್ಧಭೂಮಿಯಲ್ಲಿ ಆತನ ವಿಶ್ವರೂಪವನ್ನು ಕಂಡಾಗ ನಡುಗಿ ಹೋದ, ಭಯದಿಂದ ಬೆವರಿದ. ಇವನೇನಾ ತಾನು ಸ್ನೇಹಿತನೆಂದು ಭಾವಿಸಿದ ವ್ಯಕ್ತಿ ಎಂದು ಕಂಗಾಲಾದ. ತನ್ನ ಊಹೆಗೂ ಮೀರಿದ ವ್ಯಕ್ತಿತ್ವವನ್ನು ಪ್ರತ್ಯಕ್ಷದರ್ಶನದಿಂದ ಅನುಭವಿಸಿದ್ದ. ಅದಕ್ಕೇ ಕಗ್ಗ ಕೇಳುತ್ತದೆ, ಪುಸ್ತಕದಲ್ಲಿಯ ಹಿಮಾಲಯದ ಚಿತ್ರವನ್ನು ನೋಡುವುದು ಹಿಮಾಲಯದ ಪ್ರತ್ಯಕ್ಷ ದರ್ಶನವೆ? ಆ ಪರ್ವತದ ವಿಸ್ತಾರ, ಅದ್ಭುತದ ಅನುಭವ ಚಿತ್ರದಿಂದ ದೊರಕೀತೇ? ದರ್ಶನದಿಂದ ಮಾತ್ರ ಅನುಭವ.

ದಿನ ಭವಿಷ್ಯ
ವಿದ್ವಾಶಂಕರ ಸೋಮಯಾಜಿ. ಕಮ್ಮರಡಿ | ಶುಕ್ರವಾರ ಆಗಸ್ಟ್ 5, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯಣ – ವರ್ಷ ಋತು ತಿಥಿ: (ಶ್ರಾವಣ ಶುಕ್ಲ) ಅಷ್ಟಮಿ ಗಂ. 27-57 ನಕ್ಷತ್ರ: ಸ್ವಾತಿ ಗಂ. 18-37 ಯೋಗ: ಶುಭ ಗಂ. 14-52, ಕರಣ: ವಿಷ್ಟಿ ಗಂ. 16-37 ಕರ್ಕಾಟಕ ಮಾಸದ 19 ನೇ ದಿನ. ರಾಹುಕಾಲ : ಬೆಳಿಗ್ಗೆ 10:30 – 12:00 ಸೂರ್ಯೋದಯ : 06-20 ಸೂರ್ಯಾಸ್ತ : 06-53, ಮುಸ್ಲಿಂ ದಿನಾಂಕ : 06 ಮೊಹರಮ್ ದಿನ ವಿಶೇಷ: ವರಮಹಾಲಕ್ಷ್ಮೀ ವ್ರತ,
ಅದೃಷ್ಟ ಸಂಖ್ಯೆ: 2, 10

ಮೇಷ: ಈ ದಿನ ಸ್ನೇಹಿತನ ಭೇಟಿಯಿಂದ ಒಂಟಿತನ ನಿವಾರಣೆಯಾಗುವುದು. ಧ್ಯಾನ ಮತ್ತು ಯೋಗದತ್ತ ಹೆಚ್ಚಿನ ಗಮನ ಹರಿಸಿ. ವೃತ್ತಿಯಲ್ಲಿನ ಸಣ್ಣ-ಪುಟ್ಟ ಬದಲಾವಣೆಯು ಹೆಚ್ಚಿನ ಧನಲಾಭ ತಂದು ಕೊಡುವುದು.

ವೃಷಭ : ಏನನ್ನಾದರೂ ಸಾಧಿಸಲೇಬೇಕೆಂದಿರುವ ನಿಮಗೆ, ಆತ್ಮವಿಶ್ವಾಸದ ಕೊರತೆಯಂತೂ ಕಾಣಿಸದು. ಬ್ಯಾಂಕ್ ನೌಕರರ ವರ್ಗಾವಣೆ ಮಾಡಿಸಿಕೊಳ್ಳುವ ಪ್ರಯತ್ನ ವಿಫಲವಾಗಲಿದೆ. ಗಾರ್ಮೆಂಟ್ಸ್ ನೌಕರರಿಗೆ ಹೆಚ್ಚಿನ ಕೆಲಸವಿರುವುದು.

ಮಿಥುನ : ಹೋಟೆಲ್ ಉದ್ಯಮಿಗಳಿಗೆ ಮತ್ತು ಕೇಟರಿಂಗ್ ಸೇವೆಯನ್ನು ಮಾಡುವವರಿಗೆ ಅಧಿಕ ಲಾಭದ ಜೊತೆಗೆ ಸಂಪನ್ಮೂಲ ವ್ಯಕ್ತಿಗಳ ಬಳಕೆ ಯಾಗುವುದು. ಸಿನಿಮಾ ರಂಗದವರಿಗೆ ಆರ್ಥಿಕವಾಗಿ ಲಾಭ ಉಂಟಾಗಲಿದೆ.

ಕರ್ಕಾಟಕ: ನಿಮ್ಮ ಬಾಲ್ಯದ ಕನಸುಗಳು ಕೈಗೂಡುವ ದಿನ ಇದಾಗಿದೆ. ಸ್ಥಿರಾಸ್ತಿ ವ್ಯವಹಾರಗಳಿಂದ ಉತ್ತಮ ಲಾಭವಾಗುವುದು. ವೃತ್ತಿ ಕ್ಷೇತ್ರದಲ್ಲಿ ನಿಷ್ಠೆ, ಪ್ರಾಮಾಣಿಕತೆಗೆ ಅತಿಯಾದ ಗೌರವ ಆದರಗಳು ಸಿಗುವುದು.

ಸಿಂಹ : ಸಂಸ್ಥೆಯ ನಿರ್ದೇಶಕ ವರ್ಗದವರು ಈ ದಿನ ಬಹಳಷ್ಟು ತಾಳ್ಮೆಯಿಂದ ಕೆಲಸ ನಿರ್ವಹಿಸಬೇಕಾಗುವುದು. ಕಾನೂನು ವಿಷಯದಲ್ಲಿ ಸಲಹೆ ಪಡೆದು ಕೊಳ್ಳುವಿರಿ. ಅಲಂಕಾರಿಕ ವಸ್ತುಗಳ ಮಾರಾಟ ಲಾಭ ತರುತ್ತದೆ.

ಕನ್ಯಾ: ಬಂಧುಗಳಲ್ಲಿನ ಮಾತಿನ ಚಕಮಕಿ ಮನಸ್ಸಿಗೆ ಕಿರಿಕಿರಿ ತಂದೀತು. ಯಾವುದೇ ವಾದ ವಿವಾದಗಳು ನಡೆದರೂ ಕಾರ್ಯ ಸಾಧನೆಗೆ ಅಡ್ಡಿಯಾಗದು. ಸೃಜನಶೀಲ ಬರವಣಿಗೆಗಳಿಂದ ಖ್ಯಾತಿ ಹಾಗೂ ಹೆಚ್ಚಿನ ಹಣವನ್ನು ಗಳಿಸುವಿರಿ.

ತುಲಾ : ನಿಮ್ಮ ಯೋಜನೆ ಹಾಗೂ ಅವುಗಳ ಬೆಳವಣಿಗೆಯ ಬಗ್ಗೆ ತಿಳಿದವರಲ್ಲಿ ಹಾಗೂ ಸಂಬಂಧಪಟ್ಟವರಲ್ಲಿ ಚರ್ಚೆ ನಡೆಸಿ, ಫಲವಾಗಿ ಮುಂದಿನ ಹಂತವನ್ನು ಮುಟ್ಟುವಿರಿ. ಖಾದ್ಯ ತೈಲಗಳ ವ್ಯಾಪಾರಗಳಿಂದ ಹೇರಳ ಲಾಭ.

ವೃಶ್ಚಿಕ : ನಿಮ್ಮ ವೈಯಕ್ತಿಕ ಆಸೆ ಆಕಾಂಕ್ಷೆಗಳು ಪೂರ್ಣಗೊಳ್ಳುವ ವಿಚಾರದಲ್ಲಿ ಪ್ರಯತ್ನ ಕಡಿಮೆಯಾಗುವುದು. ಕಾರ್ಮಿಕ ವರ್ಗದವರ ಹೆಚ್ಚಿನ ಬೇಡಿಕೆಗಳು ಈ ದಿನ ಈಡೇರಲಿವೆ. ಸಾಲದ ಬಾಕಿ ಬಾಬ್ತು ಹಿಂದಿರುಗಿಸುವರು.

ಧನು : ಸಹೋದ್ಯೋಗಿಗಳೊಡನೆ ಅನವಶ್ಯಕ ವಾದ-ವಿವಾದಗಳು ನಡೆಯದಂತೆ ವರ್ತಿಸಿ. ಸರ್ಕಾರಿ ನೌಕರರಿಗೆ ತಮ್ಮ ಉದ್ಯೋಗದಲ್ಲಿ ತೊಂದರೆಉಂಟಾಗುವುದು. ವಿಷ್ಣುಸಹಸ್ರನಾಮ ಸ್ತೋತ್ರ ಪಠಣೆಯಿಂದ ಶ್ರೇಯಸ್ಕರವಾಗುವುದು.

ಮಕರ : ಹಲವು ದಿನಗಳಿಂದ ಮನೆಯವರಲಿ ಕಾಣಿಸಿಕೊಂಡಿದ್ದ ಇರಿಸು ಮುರಿಸು ವಾತಾವರಣ ಇಂದು ಕ್ರಮೇಣ ಸರಿಹೋಗಲಿದೆ. ಭೂಮಿಯ ಮೇಲೆ ಹೂಡಿಕೆ ಮಾಡುವುದು ಸದ್ಯಕ್ಕೆ ಬೇಡ.


ಕುಂಭ : ದಂತ ವೈದ್ಯರಿಗೆ ಮತ್ತು ಶಸ್ತ್ರ ಚಿಕಿತ್ಸಕರಿಗೆ ವೃತ್ತಿಯಲ್ಲಿ ಅತೀವವಾದ ಗಮನವಿರುವುದು ಮುಖ್ಯವಾಗುತ್ತದೆ. ಕೆಲಸದ ಹೊರೆ ಹೆಚ್ಚಾಗಿ ಮಡದಿ ಮಕ್ಕಳಿಂದ ಸಲಹೆ ಸಹಕಾರ ಯಾಚಿಸಬೇಕಾಗುವ ಪರಿಸ್ಥಿತಿ ಎದುರಾಗಲಿದೆ.

ಮೀನ : ಕಾಗದ ಪತ್ರಗಳ ಬರವಣಿಗೆಗಾರರಿಗೆ ಮತ್ತು ಕಂಪ್ಯೂಟರ್ ಕೆಲಸಗಾರರಿಗೆ ತೃಪ್ತಿಕರ ದಿನ. ಇತರರಿಗೆ ಅಸೂಯೆಯಾಗದಂತೆ ಕಾರ್ಯಗಳನ್ನು ಸಾಧಿಸಿಕೊಳ್ಳುವ ಉತ್ತಮ ಗುಣವನ್ನು ವೃದ್ಧಿಸಿಕೊಳ್ಳಿ.

ಪದಬಂಧ 5040
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ಈತ ಬುದ್ಧಿಯಿಲ್ಲದವನು (4)
3.ಮಾವನವರ ಆದಾಯ (4)
5.ಆಕಾಶ ಇಲ್ಲಿಯೇ ಕಾಣುತ್ತಿದೆ (3)
7.ಪ್ರೇಮಿಗಳ ಅಗಲಿಕೆಯ ನೋವು (3)
9.ಲಾಂಗೂಲ ಹಿಡಿದಿರುವ ಹುಡುಗ (3)
10.ಮೊದಲನೆಯ ಹಿಂದೂ ಸಂವತ್ಸರ (3)
11.ಆಸೆ ಈ ರೀತಿ ಮೂಡಿದೆ (3)
13.ನಯವಾಗಿ ಹೊಳೆಯುತ್ತಿರುವ ಅಕ್ಷಿ (3)
14.ಆನೆಯ ಮರಿ ಇಲ್ಲಿದೆ (3)
16.ಮಾತೆಯಲ್ಲಿರುವ ಗೌರವ (3)
18.ಬರ ಬಿದ್ದಾಗ ಕಾಣಿಸಿದ ಶವ (4)
19.ಪಕ್ಕದ ಗೃಹವಿದು (4)

ಮೇಲಿಂದ ಕೆಳಕ್ಕೆ
1.ವಿನಯದಿಂದ ಮಾಡಿಕೊಂಡ ಅರಿಕೆ (3)
2.ನಗರದಿಂದ ತಂದಿರುವ ದಾಗೀನು (2)
3.ಭವನದ ಹತ್ತಿರವಿರುವ ಕಾಡು (2)
4.ನಡುವೆಯೇ ಬಂದಿರುವ ಕಂಪನ (3)
6.ಬೆಟ್ಟದ ಗವಿಯಿದು (3)
8.ಅಶ್ವದ ಮೊಗವಿದು (5)
9.ಬಾಲ ಹಿಡಿದು ಬಂದಿರುವ ಅನುಯಾಯಿ (5)
12.ಅದ್ವಿತೀಯವಾದುದನ್ನು ಹೀಗೆನ್ನಿ (3)
13.ಈತ ನೃತ್ಯ ಮಾಡುವವನು (3)
15.ದೇವರ ಸ್ತುತಿಯನ್ನು ಹಾಡುವುದು (3)
16.ಮನ್ಮಥನ ಇನ್ನೊಂದು ಹೆಸರು (2)
17.ಧಾನ್ಯದ ಹೊಡೆ ಇಲ್ಲಿದೆ (2)



5039ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಅಕಸ್ಮಿಕ 3.ಜಲಪಾತ
5.ವಿದಾಯ 7.ರಾಡಿ
8.ದರ 11.ರಿಪು
13.ಮಿತ್ರ 14.ಅಂಕುಶ
16.ತೆಗಳಿಕೆ 17.ರವಿಸುತ

ಮೇಲಿಂದ ಕೆಳಕ್ಕೆ:
1.ಆಯುರ್ವೇದ 2.ಕವಿ
3.ಜಯ 4.ತಕ್ಕಡಿ
6.ದಾನವ 7.ರಾಯಭಾರಿ
9.ರಕ್ಷಾಪತ್ರ 10.ಪರಾಕು
12.ಪುರಸ್ಕೃತ 13.ಮಿಡತೆ
14.ಅಂಕೆ 15.ಶರ

ಸುಡೊಕು 5426

						8	2	
8		9						5
	6	5				3		7
	8			1			5	
9		3	5		8	4		6
	5			3			8	
5		4		8			7	
2	9		1		7	5		4
		6		4			9	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5425 ಸುಡೊಕು

9	2	5	1	8	3	4	7	6
6	8	4	7	2	5	3	1	9
7	3	1	4	6	9	2	5	8
4	7	9	8	1	6	5	3	2
3	6	2	5	4	7	8	9	1
1	5	8	3	9	2	6	4	7
8	9	7	2	5	4	1	6	3
5	1	6	9	3	8	7	2	4
2	4	3	6	7	1	9	8	5

ನ್ಯಾಷನಲ್ ಹೆರಾಲ್ಡ್ ಪ್ರಕರಣ • ಜಾರಿ ನಿರ್ದೇಶನಾಲಯದ ವಿರುದ್ಧ ವಿಪಕ್ಷಗಳ ಆರೋಪ

'ಕಲಾಪದ ನಡುವೆಯೇ ಖರ್ಗೆಗೆ ಇ.ಡಿ ಸಮನ್ಸ್'

ನವದೆಹಲಿ (ಪಿಟಿಐ): ಮಲ್ಲಿಕಾರ್ಜುನ ಖರ್ಗೆ ಅವರಿಗೆ ರಾಜ್ಯಸಭೆ ಕಲಾಪದ ಮಧ್ಯೆಯೇ ಜಾರಿ ನಿರ್ದೇಶನಾಲಯವು (ಇ.ಡಿ) ನೋಟಿಸ್ ನೀಡಿದೆ. ಈ ಮೂಲಕ ಸಂಸತ್ತಿಗೆ ಇ.ಡಿ ಅವಮಾನ ಮಾಡಿದೆ ಎಂದು ವಿರೋಧ ಪಕ್ಷಗಳು ಆರೋಪಿಸಿವೆ.

ನ್ಯಾಷನಲ್ ಹೆರಾಲ್ಡ್ ಪ್ರಕರಣಕ್ಕೆ ಸಂಬಂಧಿಸಿದಂತೆ ಜಾರಿ ನಿರ್ದೇಶನಾಲಯವು ಗುರುವಾರ 'ಯಂಗ್ ಇಂಡಿಯನ್' ಕಚೇರಿಯಲ್ಲಿ ಶೋಧ ಕಾರ್ಯ ನಡೆಸುವ ವೇಳೆ ಹಾಜರಿರಬೇಕು ಎಂದು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ ಖರ್ಗೆ ಅವರಿಗೆ ಸಮನ್ಸ್ ನೀಡಿತ್ತು. ಈ ಬಗ್ಗೆ ಸದನಕ್ಕೆ ಮಾಹಿತಿ ನೀಡಿದ ಖರ್ಗೆ ಅವರು, ಕಲಾಪದ ಮಧ್ಯೆಯೇ 12.40ಕ್ಕೆ ಸದನದಿಂದ ಹೊರ ನಡೆದರು.

ಇ.ಡಿಯ ಈ ಕ್ರಮವನ್ನು ವಿರೋಧ ಪಕ್ಷಗಳು ರಾಜ್ಯಸಭೆಯ ಕಲಾಪದಲ್ಲೇ ಖಂಡಿಸಿದವು.

ಕಲಾಪದಲ್ಲಿ ಈ ಬಗ್ಗೆ ಪ್ರಸ್ತಾಪಿಸಿದ ಖರ್ಗೆ ಅವರು, 'ನಾನು ರಾಜ್ಯಸಭೆಯ ವಿರೋಧ ಪಕ್ಷದ ನಾಯಕ. ಈಗ ಸಂಸತ್ತಿನ ಅಧಿವೇಶನ ನಡೆಯುತ್ತಿದೆ. ಅದರ ಮಧ್ಯೆಯೇ ಹಾಜರಾಗುವಂತೆ, ಇ.ಡಿ ಸಮನ್ಸ್ ನೀಡಿದೆ. ಇದು ಎಷ್ಟು ಸರಿ' ಎಂದು ಅವರು ಪ್ರಶ್ನಿಸಿದರು. ವಿರೋಧ ಪಕ್ಷಗಳ ಸದಸ್ಯರು ಅವರಿಗೆ ಬೆಂಬಲ ಸೂಚಿಸಿ, 'ನಾಚಿಕೆಯಾಗಬೇಕು' ಎಂದು ಕೂಗಿದರು.

ಕಾಂಗ್ರೆಸ್ ಮುಖ್ಯ ಸಚೇತಕ ಜೈರಾಮ್ ರಮೇಶ್ ಮಾತನಾಡಿ, 'ಮೋದಿಶಾಹಿ'ಯು ಸರ್ಕಾರಿ ತನಿಖಾ ಸಂಸ್ಥೆಗಳನ್ನು ದುರುಪಯೋಗ ಮಾಡಿಕೊಳ್ಳುತ್ತಿದೆ ಎಂದು ಆರೋಪಿಸಿದರು.

ಇದಕ್ಕೆ ಪ್ರತಿಕ್ರಿಯೆ ನೀಡಿದ ಸಚಿವ ಪೀಯೂಷ್ ಗೋಯಲ್ ಅವರು, 'ತನಿಖಾ ಸಂಸ್ಥೆಗಳ ಕಾರ್ಯನಿರ್ವಹಣೆಯಲ್ಲಿ ನಮ್ಮ ಸರ್ಕಾರವು ಹಸ್ತಕ್ಷೇಪ ಮಾಡುವುದಿಲ್ಲ. ಅವರ ಸರ್ಕಾರ ಹಸ್ತಕ್ಷೇಪ ಮಾಡುತ್ತಿತ್ತೇನೋ. ಆದರೆ, ನಾವು ಅಂಥದ್ದೇನೂ ಮಾಡುವುದಿಲ್ಲ' ಎಂದರು.

ಕಲಾಪ ಮುಂದೂಡಿಕೆ: ಯಂಗ್ ಇಂಡಿಯನ್ ಕಚೇರಿಗೆ ಇ.ಡಿ ಅಧಿಕಾರಿಗಳು ಬೀಗ ಹಾಕಿದ್ದನ್ನು ಖಂಡಿಸಿ ಕಾಂಗ್ರೆಸ್ ಸಂಸದರು ಗುರುವಾರ ಲೋಕಸಭೆಯಲ್ಲಿ ಪ್ರತಿಭಟನೆ ನಡೆಸಿದರು. ಆಡಳಿತ ಮತ್ತು ವಿರೋಧ ಪಕ್ಷಗಳ ಸದಸ್ಯರ ಮಧ್ಯೆ ಗದ್ದಲ ನಡೆದ ಕಾರಣ ಲೋಕಸಭೆಯ ಕಲಾಪವನ್ನು ಮುಂದೂಡಲಾಯಿತು.


ವಿರೋಧ ಪಕ್ಷಗಳ ಸದಸ್ಯರು ರಾಜ್ಯಸಭೆಯಲ್ಲಿ ಪ್ರತಿಭಟನೆ ನಡೆಸಿದರು –ಪಿಟಿಐ ಚಿತ್ರ

ಕಲಾಪದ ಮಧ್ಯೆಯೇ ವಿರೋಧ ಪಕ್ಷದ ನಾಯಕನಿಗೆ ಸಮನ್ಸ್ ನೀಡಲಾಗಿದೆ. ಸ್ವತಂತ್ರ ಭಾರತದ ಇತಿಹಾಸದಲ್ಲೇ ಇಂತಹದ್ದು ಘಟಿಸಿರಲಿಲ್ಲ
ದಿಗ್ವಿಜಯ ಸಿಂಗ್, ಕಾಂಗ್ರೆಸ್ ಹಿರಿಯ ನಾಯಕ

ಸಂಸತ್ ಅಧಿವೇಶನದ ಮಧ್ಯೆಯೇ ಖರ್ಗೆ ಅವರಿಗೆ ಸಮನ್ಸ್ ನೀಡಲಾಗಿದೆ. ಈ ಮೂಲಕ 'ಮೋದಿಶಾಹಿ'ಯು ಇನ್ನಷ್ಟು ಕೆಳಮಟ್ಟಕ್ಕೆ ಇಳಿದಿದೆ
ಜೈರಾಮ್ ರಮೇಶ್, ರಾಜ್ಯಸಭೆಯಲ್ಲಿ ಕಾಂಗ್ರೆಸ್ ಮುಖ್ಯ ಸಚೇತಕ

ತಪ್ಪು ಮಾಡಿದವರು ಯಾರೇ ಆಗಿದ್ದರೂ ಅವರು ಕಾನೂನು ಕ್ರಮ ಎದುರಿಸಬೇಕಾಗುತ್ತದೆ. ಕಾಂಗ್ರೆಸ್ ನಾಯಕರು ಪಲಾಯನದ ಬದಲು ಕಾನೂನನ್ನು ಪಾಲಿಸಲಿ
ಪೀಯೂಷ್ ಗೋಯಲ್, ಕೇಂದ್ರ ಸಚಿವ

'ನಾವು ಮೋದಿಗೆ ಹೆದರುವುದಿಲ್ಲ'

ಸರ್ಕಾರವು ನಮ್ಮನ್ನು ಹೆದರಿಸಲು ಯತ್ನಿಸುತ್ತಿದೆ. ಆದರೆ ನಾವು ನರೇಂದ್ರ ಮೋದಿ ಅವರಿಗೆ ಹೆದರುವುದಿಲ್ಲ ಎಂದು ರಾಹುಲ್ ಗಾಂಧಿ ಹೇಳಿದ್ದಾರೆ. 'ಅವರು ಬೇಕಾದದ್ದು ಮಾಡಲಿ. ದೇಶ, ಪ್ರಜಾಪ್ರಭುತ್ವದ ರಕ್ಷಣೆ ಮತ್ತು ಸಾಮರಸ್ಯವನ್ನು ಕಾಪಾಡಲು ಏನು ಮಾಡಬೇಕೋ ಅದನ್ನೆಲ್ಲಾ ನಾವು ಮಾಡುತ್ತೇವೆ' ಎಂದು ರಾಹುಲ್ ಗಾಂಧಿ ಹೇಳಿದ್ದಾರೆ.

ನಾನೇನು ಕಾನೂನಿನಿಂದ ದೂರ ಓಡುತ್ತಿಲ್ಲ. ಮಧ್ಯಾಹ್ನ 12.30ಕ್ಕೆ ಇ.ಡಿ ಮುಂದೆ ಹಾಜರಾಗುತ್ತಿದ್ದೇನೆ. ನಮ್ಮನ್ನು ಬೆದರಿಸಲು ಯತ್ನಿಸಲಾಗುತ್ತಿದೆ. ಆದರೆ, ನಾವು ಬಗ್ಗುವವರಲ್ಲ
ಮಲ್ಲಿಕಾರ್ಜುನ ಖರ್ಗೆ, ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ

ಸುದ್ದಿ 2 ನಿಮಿಷ

ರೈಲು ಪ್ರಯಾಣ ದರ: ಹಿರಿಯ ನಾಗರಿಕರಿಗೆ ರಿಯಾಯಿತಿ ನೀಡಲು ಶಿಫಾರಸು

ನವದೆಹಲಿ: ರೈಲಿನಲ್ಲಿ ಹಿರಿಯ ನಾಗರಿಕರಿಗೆ ಪ್ರಯಾಣ ದರದಲ್ಲಿ ನೀಡುತ್ತಿದ್ದ ರಿಯಾಯಿತಿಯನ್ನು ಕನಿಷ್ಠ ಸ್ಲೀಪರ್ ದರ್ಜೆ ಮತ್ತು ಎ.ಸಿ. ಮೂರನೇ ದರ್ಜೆಯಲ್ಲಾದರೂ ತುರ್ತಾಗಿ ಮರುಜಾರಿಗೊಳಿಸಬೇಕು ಎಂದು ರೈಲ್ವೆ ಸಂಸದೀಯ ಸ್ಥಾಯಿ ಸಮಿತಿ ಸರ್ಕಾರಕ್ಕೆ ಶಿಫಾರಸು ಮಾಡಿದೆ.

ರೈಲು ಸಂಚಾರ ಸಾಮಾನ್ಯ ಸ್ಥಿತಿಗೆ ಮರಳಿರುವ ಕಾರಣ ವಿವಿಧ ವಿಭಾಗಗಳ ಪ್ರಯಾಣಿಕರಿಗೆ ನೀಡುತ್ತಿದ್ದ ರಿಯಾಯಿತಿಯನ್ನು ವಿವೇಚನೆಯಿಂದ ಪರಿಗಣಿಸಬೇಕು ಎಂದು ಸಮಿತಿಯು ಸಂಸತ್ತಿಗೆ ಗುರುವಾರ ಸಲ್ಲಿಸಿರುವ ವರದಿಯಲ್ಲಿ ಹೇಳಿದೆ.

ಕೋವಿಡ್ ಪೂರ್ವದಲ್ಲಿ ಹಿರಿಯ ನಾಗರಿಕರಿಗೆ ನೀಡುತ್ತಿದ್ದ ರಿಯಾಯಿತಿಯನ್ನು ಪರಿಗಣಿಸುವುದರಿಂದ ದುರ್ಬಲ ಮತ್ತು ನಿಜವಾಗಿಯೂ ಅಗತ್ಯವಿರುವ ಹಿರಿಯರಿಗೆ ಅನುಕೂಲವಾಗಲಿದೆ ಎಂದಿದೆ.

ಎಲ್ಲಾ ವಿಭಾಗಗಳಲ್ಲಿ ನೀಡುತ್ತಿದ್ದ ರಿಯಾಯಿತಿಯನ್ನು ರೈಲ್ವೆಯು 2020 ಮಾರ್ಚ್ 20ರಂದು ಕೋವಿಡ್ ಕಾರಣಕ್ಕೆ ನಿಲ್ಲಿಸಿತ್ತು. ಆದರೆ, ಅಂಗವಿಕಲ ಪ್ರಯಾಣಿಕರಿಗೆ 4 ವಿಭಾಗಗಳಲ್ಲಿ ಹಾಗೂ ವಿದ್ಯಾರ್ಥಿಗಳಿಗೆ ಮತ್ತು ರೋಗಿಗಳಿಗೆ 11 ವಿಭಾಗಗಳಲ್ಲಿ ರಿಯಾಯಿತಿಯನ್ನು ಮರುಪರಿಚಯಿಸಿತ್ತು. ಕೋವಿಡ್ ಪೂರ್ವದಲ್ಲಿ ರೈಲ್ವೆಯು 53 ವಿಭಾಗಗಳಲ್ಲಿ ಪ್ರಯಾಣಿಕರಿಗೆ ರಿಯಾಯಿತಿ ನೀಡುತ್ತಿತ್ತು.



ಇದೇ 7ರಂದು ಇಸ್ರೊದಿಂದ ಎರಡು ಉಪಗ್ರಹ ಉಡಾವಣೆ

ನವದೆಹಲಿ (ಪಿಟಿಐ): ಭಾರತೀಯ ಬಾಹ್ಯಾಕಾಶ ಸಂಶೋಧನಾ ಸಂಸ್ಥೆಯು (ಇಸ್ರೊ) ಸರ್ಕಾರಿ ಶಾಲೆಯ ವಿದ್ಯಾರ್ಥಿಗಳು ರೂಪಿಸಿದ ಎರಡು ಉಪಗ್ರಹಗಳನ್ನು ಕಕ್ಷೆಗೆ ಸೇರಿಸಲು ಇದೇ 7ರಂದು ತನ್ನ ಅತಿ ಸಣ್ಣ ವಾಣಿಜ್ಯ ರಾಕೆಟ್ ಎಸ್‌ಎಸ್‌ಎಲ್‌ವಿಯ ಉಡಾವಣೆಗೆ ಸಕಲ ಸಿದ್ಧತೆ ಮಾಡಿಕೊಂಡಿದೆ.

ಶ್ರೀಹರಿಕೋಟಾದಲ್ಲಿರುವ ಸತೀಶ್ ಧವನ್ ಬಾಹ್ಯಾಕಾಶ ಕೇಂದ್ರದಿಂದ ಭಾನುವಾರ ಬೆಳಿಗ್ಗೆ 9.18ಕ್ಕೆ ಎಸ್‌ಎಸ್‌ಎಲ್‌ವಿ ಡಿ-1 ರಾಕೆಟ್ ಗಗನಕ್ಕೆ ಚಿಮ್ಮಲಿದೆ. 13.2 ನಿಮಿಷಗಳ ಪಯಣದ ನಂತರ ಎರಡೂ ಉಪಗ್ರಹಗಳನ್ನು ಕಕ್ಷೆಗೆ ಸೇರಿಸಲಿದೆ. ಇಸ್ರೊದ ಅತೀ ಕಡಿಮೆ ವೆಚ್ಚದ, ಎಸ್‌ಎಸ್‌ಎಲ್‌ವಿ ತನ್ನ ಮೊದಲ ಉಡಾವಣೆಯಲ್ಲಿ 145 ಕೆ.ಜಿ ತೂಕದ, ಭೂವೀಕ್ಷಣೆ-2 ಉಪಗ್ರಹ ಮತ್ತು 8 ಕೆ.ಜಿ ತೂಕದ ಕ್ಯೂಬ್‌ಸ್ಯಾಟ್ (ಅಜಾದಿಸ್ಯಾಟ್) ಉಪಗ್ರಹವನ್ನು ಇದು ಕಕ್ಷೆಗೆ ಕೊಂಡೊಯ್ಯಲಿದೆ. ಈ ಉಪಗ್ರಹವನ್ನು 75ನೇ ಸ್ವಾತಂತ್ರ್ಯೋತ್ಸವದ ನಿಮಿತ್ತ ದೇಶದಾದ್ಯಂತ ಸರ್ಕಾರಿ ಶಾಲೆಗಳ ಆಯ್ದ 750 ವಿದ್ಯಾರ್ಥಿನಿಯರು ಸೇರಿ ವಿನ್ಯಾಸಗೊಳಿಸಿದ್ದರು.

34 ಮೀಟರ್ ಎತ್ತರ ಮತ್ತು 2 ಮೀಟರ್ ಸುತ್ತಳತೆಯ ಸಣ್ಣ ಉಪಗ್ರಹಉಡಾವಣಾವಾಹಕವು ಇಸ್ರೊದ ಪ್ರಮುಖ ರಾಕೆಟ್ ಪಿಎಸ್‌ಎಲ್‌ವಿಗಿಂತ 10 ಮೀಟರ್ ಚಿಕ್ಕದು, 500 ಕೆ.ಜಿಯವರೆಗಿನ ಭಾರದ ಉಪಗ್ರಹವನ್ನು 500 ಕಿ.ಮೀ ಕಕ್ಷೆಗೆ ಹೊತ್ತೊಯ್ಯುವ ಸಾಮರ್ಥ್ಯ ಹೊಂದಿದೆ.

ಸುಪ್ರೀಂ: ಇತ್ಯರ್ಥಕ್ಕೆ ಕಾಯುತ್ತಿವೆ 10 ಸಾವಿರ ಪ್ರಕರಣ

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನಲ್ಲಿ 71 ಸಾವಿರಕ್ಕೂ ಹೆಚ್ಚು ಪ್ರಕರಣಗಳು ಬಾಕಿ ಇವೆ. ಅವುಗಳಲ್ಲಿ 10 ಸಾವಿರ ಪ್ರಕರಣಗಳು ದಶಕದಿಂದ ಇತ್ಯರ್ಥಕ್ಕೆ ಕಾಯುತ್ತಿವೆ ಎಂದು ಗುರುವಾರ ಕಾನೂನು ಸಚಿವ ಕಿರಣ್ ರಿಜಿಜು ರಾಜ್ಯಸಭೆಗೆ ತಿಳಿಸಿದ್ದಾರೆ.

ಆ.2ರವರೆಗೆ 71,411 ಪ್ರಕರಣಗಳು ಸುಪ್ರೀಂ ಕೋರ್ಟ್‌ನಲ್ಲಿ ಬಾಕಿ ಇದ್ದು, ಈ ಪೈಕಿ 56 ಸಾವಿರ ಸಿವಿಲ್ ಮತ್ತು 15 ಸಾವಿರ ಕ್ರಿಮಿನಲ್ ವ್ಯಾಜ್ಯಗಳು ಎಂದು ಲಿಖಿತ ಉತ್ತರದಲ್ಲಿ ಹೇಳಿದ್ದಾರೆ.

ಬಾಕಿ ಇರುವ 71,411 ಪ್ರಕರಣಗಳಲ್ಲಿ 10,491 ಪ್ರಕರಣಗಳು ಹತ್ತು ವರ್ಷಗಳಿಂದ ಬಾಕಿ ಉಳಿದಿವೆ.

ಮಹಾರಾಷ್ಟ್ರ: ಶಿವಸೇನಾ ಶಿಂದೆ ಬಣಕ್ಕೆ ಸುಪ್ರೀಂ ಕೋರ್ಟ್ ಪ್ರಶ್ನೆ

'ಪಕ್ಷ ನಿರ್ಲಕ್ಷ್ಯ: ಪ್ರಜಾಪ್ರಭುತ್ವಕ್ಕೆ ಮಾರಕವಲ್ಲವೇ'

ಪ್ರಜಾವಾಣಿ ವಾರ್ತೆ

ನವದೆಹಲಿ: 'ರಾಜಕೀಯ ಪಕ್ಷವನ್ನು ಸಂಪೂರ್ಣವಾಗಿ ನಿರ್ಲಕ್ಷಿಸುವುದು ಪ್ರಜಾಪ್ರಭುತ್ವಕ್ಕೆ ಮಾರಕವಾಗುವುದಿಲ್ಲವೇ' ಎಂದು ಸುಪ್ರೀಂ ಕೋರ್ಟ್ ಮಹಾರಾಷ್ಟ್ರ ಮುಖ್ಯಮಂತ್ರಿ ಏಕನಾಥ ಶಿಂದೆ ಬಣವನ್ನು ಪ್ರಶ್ನಿಸಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ತ್ರಿಸದಸ್ಯ ಪೀಠವು ಶಿಂದೆ ಬಣದ ಹಿರಿಯ ವಕೀಲ ಹರೀಶ್ ಸಾಳ್ವೆ ಅವರನ್ನು ಈ ಕುರಿತು ಪ್ರಶ್ನೆ ಮಾಡಿದೆ.

ಇದಕ್ಕೂ ಮುನ್ನ ವಾದ ಮಂಡಿಸಿದ ಸಾಳ್ವೆ ಅವರು, ಶಿವಸೇನಾ ಪಕ್ಷ ತ್ಯಜಿಸದ ಭಿನ್ನಮತೀಯರಿಗೆ ಪಕ್ಷಾಂತರ ನಿಷೇಧ ಕಾನೂನು ಅನ್ವಯವಾಗುವುದಿಲ್ಲ ಎಂದು ಪ್ರತಿಪಾದಿಸಿದರು. ಅಲ್ಲದೆ, 'ಶಾಸಕರು ಪಕ್ಷದ ನಿಲುವಿಗೆ ವಿರುದ್ಧವಾಗಿ ಮತ ಚಲಾಯಿಸಿದ್ದಾರೆ ಎಂಬ ತೀರ್ಮಾನಕ್ಕೆ ಸ್ಪೀಕರ್ ಬಂದಾಗ ಮಾತ್ರ ಸಂವಿಧಾನದ 10ನೇ ಪರಿಚ್ಛೇದದ ಅನ್ವಯ ಅನರ್ಹಗೊಳಿಸಲು ಸಾಧ್ಯ' ಎಂದರು.

ಮೊದಲಿಗೆ ಈ ಬಿಕ್ಕಟ್ಟಿಗೆ ಸಂಬಂಧಿಸಿದಂತೆ ನ್ಯಾಯಾಲಯದ ಮೊರೆ ಬಂದದ್ದು ಶಿಂದೆ ಮತ್ತು ಇತರ ಬಂಡಾಯ ಶಾಸಕರು ಎಂಬುದನ್ನು ನೆನಪು ಮಾಡಿದ ಪೀಠ, ಈಗ ಇದೇ ಬಣವು ಈ ವಿಚಾರವನ್ನು ಸ್ಪೀಕರ್ ನಿರ್ಧಾರಕ್ಕೆ ಬಿಡುವಂತೆ ಮನವಿ ಮಾಡುತ್ತಿದೆ ಎಂದು ಹೇಳಿತು.

ಉದ್ಧವ್ ಠಾಕ್ರೆ ಬಣದ ಪರ ಹಾಜರಾದ ಹಿರಿಯ ವಕೀಲ ಕಪಿಲ್ ಸಿಬಲ್ ಅವರು, ಈ ವಿಷಯವನ್ನು ಸಾಂವಿಧಾನಿಕ ಪೀಠಕ್ಕೆ ವಹಿಸುವ ಅಗತ್ಯವಿಲ್ಲ ಎಂದು ಪ್ರತಿಪಾದಿಸಿ ಮನವಿ ಸಲ್ಲಿಸಿದರು.

'ಯಾವುದೇ ಪಕ್ಷದ 50 ಶಾಸಕರ ಪೈಕಿ 40 ಶಾಸಕರನ್ನು ಹೊಂದಿರುವ ಗುಂಪು ನಿಜವಾದ ರಾಜಕೀಯ ಪಕ್ಷ ಎನಿಸಿಕೊಳ್ಳಬಹುದು. ಆದರೆ, ಆ 40 ಶಾಸಕರೂ ಅನರ್ಹರಾಗಿದ್ದರೆ ಮತ್ತು ಚುನಾವಣಾ ಆಯೋಗ ಈ ಕುರಿತು ಏಕ ಮುಖ ಅಥವಾ ಭಿನ್ನ ನಿರ್ಧಾರ ತೆಗೆದುಕೊಂಡರೆ ಹೇಗಿರುತ್ತದೆ. ಆಗ ಪಕ್ಷಾಂತರದ ವಿಷಯ ಏನಾಗಬಹುದು' ಎಂದು ಕೇಳಿದರು.

ಎರಡೂ ಕಡೆಯ ವಾದ, ಪ್ರತಿವಾದ ಆಲಿಸಿದ ಪೀಠವು ಈ ಕುರಿತ ಅರ್ಜಿಗಳನ್ನು ಸಾಂವಿಧಾನಿಕ ಪೀಠಕ್ಕೆ ವಹಿಸುವ ಕುರಿತು ಇದೇ 8ರಂದು ನಿರ್ಧರಿಸುವುದಾಗಿ ತಿಳಿಸಿತು.

'ತಕ್ಷಣ ನಿರ್ಧಾರ ಬೇಡ'



ನವದೆಹಲಿ (ಪಿಟಿಐ): 'ತಮ್ಮದೇ ನಿಜವಾದ ಶಿವಸೇನಾ ಎಂದು ಮಾನ್ಯ ಮಾಡಿ, ಚಿಹ್ನೆ ನೀಡಬೇಕು' ಎಂಬ ಏಕನಾಥ ಶಿಂದೆ ಬಣದ ಮನವಿ ಕುರಿತಂತೆ ತಕ್ಷಣಕ್ಕೆ ನಿರ್ಧಾರ ತೆಗೆದುಕೊಳ್ಳಬಾರದು ಎಂದು ಸುಪ್ರೀಂ ಕೋರ್ಟ್ ಚುನಾವಣಾ ಆಯೋಗಕ್ಕೆ ಸೂಚಿಸಿದೆ.

ಮುಖ್ಯ ನ್ಯಾಯಮೂರ್ತಿ ಎನ್.ವಿ.ರಮಣ ನೇತೃತ್ವದ ನ್ಯಾಯಪೀಠವು, 'ಮಹಾರಾಷ್ಟ್ರದ ರಾಜಕೀಯ ಬಿಕ್ಕಟ್ಟಿಗೆ ಸಂಬಂಧಿಸಿದ ಅರ್ಜಿಗಳನ್ನು ಸಾಂವಿಧಾನಿಕ ಪೀಠಕ್ಕೆ ವರ್ಗಾಯಿಸುವ ಕುರಿತು ಸೋಮವಾರ ನಿರ್ಧಾರ ತೆಗೆದುಕೊಳ್ಳಲಾಗುವುದು' ಎಂದು ತಿಳಿಸಿದೆ.

ಶಿಂದೆ ಬಣದ ಅರ್ಜಿಗೆ ಸಂಬಂಧಿಸಿದ ನೋಟಿಸ್‌ಗೆ ಉತ್ತರಿಸಲು ಠಾಕ್ರೆ ಬಣವು ಕಾಲಾವಕಾಶವನ್ನು ಕೇಳಿದರೆ, ಆ ಮನವಿಯನ್ನು ಪುರಸ್ಕರಿಸಬೇಕು. ಅಗತ್ಯ ಸಮಯ ನೀಡಬೇಕು ಎಂದೂ ನ್ಯಾಯಾಲಯ ಆಯೋಗಕ್ಕೆ ನಿರ್ದೇಶಿಸಿತು.

ಸಂಬಂಧಿಸಿದ ವಕೀಲರು ಮಂಡಿಸುವ ವಾದವನ್ನು ಆಧರಿಸಿ ಈ ವಿಷಯವನ್ನು ಐವರು ನ್ಯಾಯಮೂರ್ತಿಗಳಿರುವ ಸಾಂವಿಧಾನಿಕ ಪೀಠಕ್ಕೆ ಒಪ್ಪಿಸುವುದರ ಕುರಿತು ನಿರ್ಧರಿಸಲಾಗುವುದು ಎಂದು ನ್ಯಾಯಪೀಠವು ತಿಳಿಸಿತು.

ಡ್ರಗ್ಸ್ ದಂಧೆ: ಎಂಎಸ್‌ಸಿ ಪದವೀಧರ ಸೇರಿ ಐವರ ಬಂಧನ

ಮುಂಬೈನಲ್ಲಿ ₹1,403 ಕೋಟಿ ಮೌಲ್ಯದ ಮಾದಕ ವಸ್ತು ವಶ

ಪ್ರಜಾವಾಣಿ ವಾರ್ತೆ



ಮುಂಬೈ: ಮಾದಕ ವಸ್ತು ತಯಾರಿಕೆ, ಕಳ್ಳ ಸಾಗಣೆ ಮತ್ತು ಮಾರಾಟದ ಬಹುದೊಡ್ಡ ಜಾಲವೊಂದನ್ನು ಭೇದಿಸಿರುವ ಮುಂಬೈ ಅಪರಾಧ ಪತ್ತೆ ವಿಭಾಗದ ಪೊಲೀಸರು ಮಹಾರಾಷ್ಟ್ರದ ಪಾಲ್ಘರ್ ಜಿಲ್ಲೆಯ ನಲಸೋಪರದಲ್ಲಿ ಸುಮಾರು ₹1,403 ಕೋಟಿ ಮೌಲ್ಯದ ಸುಮಾರು 701 ಕೆ.ಜಿ ಮೆಫೆಡ್ರೋನ್ (ಮಾದಕ ವಸ್ತು) ವಶಪಡಿಸಿಕೊಂಡಿದ್ದಾರೆ.

ಮಾದಕ ವಸ್ತು ಜಾಲದ ಬೆನ್ನುಹತ್ತಿದ್ದ ಮುಂಬೈ ಅಪರಾಧ ಪತ್ತೆ ವಿಭಾಗದ ಮಾದಕ ವಸ್ತು ನಿಗ್ರಹ ಘಟಕವು (ಎಎನ್‌ಸಿ) ಬುಧವಾರ ನಲಸೋಪರದಲ್ಲಿನ ಮಾದಕ ವಸ್ತು ತಯಾರಿಕೆ ಘಟಕದ ಮೇಲೆ ದಾಳಿ ನಡೆಸಿದೆ. ರಾಸಾಯನ ವಿಜ್ಞಾನ (ಆರ್ಗ್ಯಾನಿಕ್) ಸ್ನಾತಕೋತ್ತರ ಪದವೀಧರ ಸೇರಿ ಐವರು ಆರೋಪಿಗಳನ್ನು ಬಂಧಿಸಲಾಗಿದೆ ಎಂದು ಎಎನ್‌ಸಿಯ ಡಿಸಿಪಿ ದತ್ತ ನಲವಾಡೆ ಪತ್ರಿಕಾಗೋಷ್ಠಿಯಲ್ಲಿ ಗುರುವಾರ ತಿಳಿಸಿದ್ದಾರೆ.

ಬಂಧಿತರ ಪೈಕಿ ಒಬ್ಬ ಮಹಿಳೆಯೂ ಇದ್ದಾಳೆ. ಸ್ನಾತಕೋತ್ತರ ಪದವೀಧರನಾದ 52 ವರ್ಷದ ಆರೋಪಿಯೇ ಈ ದಂದೆಯ ಪ್ರಮುಖ ರೂವಾರಿ. ವಿವಿಧ ರಾಸಾಯನಿಕಗಳನ್ನು ಪ್ರಯೋಗಕ್ಕೆ ಒಳಪಡಿಸಿ, ನಿಷೇಧಿತ ಮತ್ತಿನ ವಸ್ತು ಮೆಫೆಡ್ರೋನ್ ಉತ್ಪಾದಿಸುವ ಸೂತ್ರವನ್ನು ಕಂಡುಹಿಡಿದಿರುವ ಆರೋಪಿ, 'ಗರಿಷ್ಠ ಗುಣಮಟ್ಟ'ದ ಮಾದಕ ವಸ್ತುಗಳನ್ನು ತಯಾರಿಸುತ್ತಿದ್ದ. 25 ಕೆ.ಜಿ ಗಿಂತ ಕಡಿಮೆ ಪ್ರಮಾಣದಲ್ಲಿ ಯಾರಿಗೂ ಮಾರಾಟ ಮಾಡುತ್ತಿರಲಿಲ್ಲ. ಮಾರಾಟಕ್ಕಾಗಿಯೇ ಸಾಮಾಜಿಕ ಜಾಲತಾಣದಲ್ಲಿ ಆ್ಯಪ್ ವೊಂದನ್ನು ರೂಪಿಸಿಕೊಂಡಿದ್ದ ಎಂದು ಅವರು ತಿಳಿಸಿದ್ದಾರೆ.

ಕಳೆದ ಒಂದು ವರ್ಷದಲ್ಲಿ ವಶಪಡಿಸಿಕೊಂಡ ಅತೀ ದೊಡ್ಡ ಪ್ರಮಾಣದ (ಏಳು ಕ್ವಿಂಟಲ್) ಮಾದಕ ವಸ್ತು ಎನಿಸಿದೆ. ಎಂಡಿ ಹೆಸರಿನ ಈ ಮಾದಕ ವಸ್ತುವನ್ನು ಮುಂಬೈ ಮತ್ತು ನೆರೆಹೊರೆಯ ಪ್ರದೇಶಗಳ ಡ್ರಗ್ ಪೆಡ್ಲರ್‌ಗಳಿಗೆ ಪೂರೈಸಲಾಗುತ್ತಿತ್ತು. ಮುಂಬೈ ಉಪನಗರ ಗೋವಂಡಿಯಲ್ಲಿ ಡ್ರಗ್ ಪೆಡ್ಲರ್ ಒಬ್ಬನನ್ನು 250 ಗ್ರಾಂ ಮಾದಕ ವಸ್ತು ಸಮೇತ ಕಳೆದ ಮಾರ್ಚ್ 29ರಂದು ಎಎನ್‌ಸಿಯ ವೊರ್ಲಿ ತಂಡವು ಬಂಧಿಸಿ ವಿಚಾರಣೆ ನಡೆಸಿದಾಗ, ಸಿಕ್ಕಿದ ಮಹತ್ವದ ಸುಳಿವುಗಳಿಂದ ಈ ಜಾಲ ಭೇದಿಸಲಾಗಿದೆ. ತನಿಖೆ ಮುಂದುವರಿದಿದೆ ಎಂದು ಹೇಳಿದ್ದಾರೆ.


ಅರಬ್ಬಿ ಸಮುದ್ರದ ಉತ್ತರ ಭಾಗದಲ್ಲಿ ಸ್ಥಳಾನ್ವೇಷಣೆ ಹಾಗೂ ಕಣ್ಗಾವಲು ಕಾರ್ಯಾಚರಣೆ ನಡೆಸಿದ ಐವರು ಮಹಿಳಾ ಅಧಿಕಾರಿಗಳು –ಪಿಟಿಐ ಚಿತ್ರ

ಇತಿಹಾಸ ಬರೆದ 'ನೌಕಾ' ವನಿತೆಯರು

ನವದೆಹಲಿ (ಪಿಟಿಐ): ಭಾರತೀಯ ನೌಕಾಪಡೆಯ ಐವರು ಮಹಿಳಾ ಅಧಿಕಾರಿಗಳ ತಂಡವು 'ಡಾರ್ನಿಯರ್ 228' ವಿಮಾನದ ಮೂಲಕ ಅರಬ್ಬಿ ಸಮುದ್ರದ ಉತ್ತರ ಭಾಗದಲ್ಲಿ ಮೊದಲ ಬಾರಿಗೆ ಸ್ವತಂತ್ರವಾಗಿ ಸ್ಥಳಾನ್ವೇಷಣೆ ಹಾಗೂ ಕಣ್ಗಾವಲು ಕಾರ್ಯಾಚರಣೆ ನಡೆಸಿ ದಾಖಲೆ ಬರೆದಿದೆ.

ಮಿಷನ್ ಕಮಾಂಡರ್, ಲೆಫ್ಟಿನೆಂಟ್ ಅಂಚಲ್ ಶರ್ಮಾ ನೇತೃತ್ವದ ತಂಡವು ಬುಧವಾರ ಈ ಸಾಧನೆ ಮಾಡಿದೆ.

ಲೆಫ್ಟಿನೆಂಟ್ ಶಿವಾಂಗಿ, ಲೆಫ್ಟಿನೆಂಟ್ ಅಪೂರ್ವ ಗಿತೆ (ಇಬ್ಬರೂ ಪೈಲಟ್), ಸೆನ್ಸಾರ್ ಅಧಿಕಾರಿ ಲೆಫ್ಟಿನೆಂಟ್ ಪೂಜಾ ಪಾಂಡಾ ಮತ್ತು ಸಬ್ ಲೆಫ್ಟಿನೆಂಟ್ ಪೂಜಾ ಶೇಖಾವತ್ ಅವರು ಈ ತಂಡದಲ್ಲಿದ್ದರು.

'ಪೋರಬಂದರಿನಲ್ಲಿರುವ 'ಐಎನ್‌ಎಎಸ್ 314' ನೌಕಾ ವಾಯುದಳದ ವನಿತೆಯರ ತಂಡದಿಂದ ಚಾರಿತ್ರಿಕ ಸಾಧನೆ ಮೂಡಿಬಂದಿದೆ' ಎಂದು ನೌಕಾಪಡೆ ಗುರುವಾರ ಸಂತಸ ವ್ಯಕ್ತಪಡಿಸಿದೆ.

'ಮಹಿಳಾ ತಂಡದವರಿಗೆ ಒಂದು ತಿಂಗಳು ತರಬೇತಿ ನೀಡಲಾಗಿತ್ತು. ಜೊತೆಗೆ ಕಾರ್ಯಾಚರಣೆಯ ವೇಳೆ ಅನುಸರಿಸಬೇಕಿರುವ ಕ್ರಮಗಳ ಬಗ್ಗೆ ಸಮಗ್ರ ಮಾಹಿತಿ ಒದಗಿಸಲಾಗಿತ್ತು' ಎಂದು ಭಾರತೀಯ ನೌಕಾಪಡೆಯ ವಕ್ತಾರರಾಗಿರುವ ಕಮಾಂಡರ್ ವಿವೇಕ್ ಮಾಧವಳ್ ತಿಳಿಸಿದ್ದಾರೆ.

ಸೌಹಾರ್ದ ಸಮ್ಮಾನ ಪುರಸ್ಕಾರಕ್ಕೆ ಲಕ್ಷ್ಮಿನಾರಾಯಣ ಆಯ್ಕೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಉತ್ತರ ಪ್ರದೇಶದ ಹಿಂದಿ ಸಂಸ್ಥಾನ ನೀಡುವ 2021ನೇ ಸಾಲಿನ ಸೌಹಾರ್ದ ಸಮ್ಮಾನ ಪುರಸ್ಕಾರಕ್ಕೆ ಕನ್ನಡದ ಹಿರಿಯ ಲೇಖಕ ಡಾ.ಆರ್. ಲಕ್ಷ್ಮಿನಾರಾಯಣ ಆಯ್ಕೆಯಾಗಿದ್ದಾರೆ.

ಹಿಂದಿಯೇತರ ಪ್ರದೇಶದ ಲೇಖಕರು, ಹಿಂದಿ ಮತ್ತು ಆಯಾ ಪ್ರಾದೇಶಿಕ ಭಾಷೆಗಳ ನಡುವೆ ಸೌಹಾರ್ದ ಸಂವರ್ಧನೆಗಾಗಿ ಅನುವಾದದ ಮೂಲಕ ನೀಡಿರುವ ಕೊಡುಗೆಗಾಗಿ ಈ ಪುರಸ್ಕಾರ ನೀಡಲಾಗುತ್ತದೆ. ₹2.5 ಲಕ್ಷ ನಗದು ಹಾಗೂ ಪ್ರಶಸ್ತಿ ಪತ್ರವನ್ನು ಒಳಗೊಂಡಿದೆ ಎಂದು ಪ್ರಕಟಣೆ ತಿಳಿಸಿದೆ.

1949ರ ಡಿಸೆಂಬರ್ 2ರಂದು ತುಮಕೂರಿನಲ್ಲಿ ಜನಿಸಿದ ಅವರು, ಮೈಸೂರು ವಿಶ್ವವಿದ್ಯಾಲಯದಿಂದ ಎಂ.ಎ. ಪದವಿ ಪಡೆದರು. 1971ರಿಂದ 2006ರ ವರೆಗೆ ವಿವಿಧ ಸರ್ಕಾರಿ ಕಾಲೇಜುಗಳಲ್ಲಿ ಕನ್ನಡ ಅಧ್ಯಾಪಕ, ಪ್ರಾಧ್ಯಾಪಕ ಹಾಗೂ ಪ್ರಾಂಶುಪಾಲರಾಗಿ ಸೇವೆ ಸಲ್ಲಿಸಿದರು. 2006ರಿಂದ 2007ರ ವರೆಗೆ ಕಾಲೇಜು ಶಿಕ್ಷಣ ಇಲಾಖೆಯ ಜಂಟಿ ನಿರ್ದೇಶಕರಾಗಿ ಕಾರ್ಯನಿರ್ವಹಿಸಿದರು.

ಬೆಂಗಳೂರಿನ ಬಿಎಂಶ್ರೀ ಪ್ರತಿಷ್ಠಾನದ ಮಾಜಿ ಅಧ್ಯಕ್ಷರಾಗಿರುವ ಲಕ್ಷ್ಮಿನಾರಾಯಣ ಅವರು 6 ಕೃತಿಗಳನ್ನು ರಚಿಸಿದ್ದಾರೆ ಹಾಗೂ 17 ಕೃತಿಗಳನ್ನು ಅನುವಾದ ಮಾಡಿದ್ದಾರೆ. ಪ್ರಾಕೃತ ಕನ್ನಡ ಬೃಹತ್ ನಿಘಂಟು ರಚಿಸಿದ್ದಾರೆ. 'ಮಾಸ್ತಿ', 'ಆಹ್ಲಾದ', 'ಎಸ್.ವಿ.ಪರಮೇಶ್ವರ ಭಟ್ಟ' (ವಿಮರ್ಶಾ ಕೃತಿಗಳು), 'ಚಿನ್ನದ ಕಳಶ', 'ಇನ್ನೊಬ್ಬ ದ್ರೋಣಾಚಾರ್ಯ', 'ವಾಜಿಯ ವಿವೇಕ', 'ರುದ್ರ ಭಟ್ಟ', 'ಎಂ.ವಿ.ಸೀ. ಸಮಗ್ರ ಸಾಹಿತ್ಯ ಸಂಪುಟ-4', 'ಹೊಸಗನ್ನಡ ಕಾವ್ಯ ಸಂಗ್ರಹ' ಅವರ ಪ್ರಮುಖ ಕೃತಿಗಳು.

ಅವರಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಅನುವಾದ ಪ್ರಶಸ್ತಿ, ಕರ್ನಾಟಕ ಸಾಹಿತ್ಯ ಅಕಾಡೆಮಿ ಪ್ರಶಸ್ತಿ, ಕುವೆಂಪು ಭಾಷಾ ಭಾರತಿಯ ವಿಶೇಷ ಪುರಸ್ಕಾರ ಸೇರಿದಂತೆ ಹಲವು ಪ್ರಶಸ್ತಿಗಳು ಲಭಿಸಿವೆ.

ನ್ಯಾಯಮೂರ್ತಿ ಲಲಿತ್ ಮುಂದಿನ ಸಿಜೆಐ ಕೇಂದ್ರಕ್ಕೆ ಶಿಫಾರಸು


ಉದಯ್ ಲಲಿತ್

ನವದೆಹಲಿ (ಪಿಟಿಐ): ಸುಪ್ರೀಂ ಕೋರ್ಟ್‌ನ ನೂತನ ಮುಖ್ಯ ನ್ಯಾಯಮೂರ್ತಿಯನ್ನಾಗಿ ನ್ಯಾಯಮೂರ್ತಿ ಉದಯ್ ಉಮೇಶ್ ಲಲಿತ್ ಅವರನ್ನು ನೇಮಕ ಮಾಡುವಂತೆ ಹಾಲಿ ಸಿಜೆಐ ಎನ್.ವಿ.ರಮಣ ಅವರು ಕೇಂದ್ರ ಸರ್ಕಾರಕ್ಕೆ ಶಿಫಾರಸು ಮಾಡಿದ್ದಾರೆ.

48ನೇ ಸಿಜೆಐ ಆಗಿರುವ ಎನ್.ವಿ. ರಮಣ ಅಧಿಕಾರಾವಧಿ ಆಗಸ್ಟ್ 26ರಂದು ಪೂರ್ಣಗೊಳ್ಳಲಿದೆ. ಉತ್ತರಾಧಿಕಾರಿ ನೇಮಕ ಸಂಬಂಧ ಶಿಫಾರಸು ಮಾಡುವಂತೆ ಕಾನೂನು ಸಚಿವಾಲಯವು ಸಿಜೆಐ ಅವರ ಕಾರ್ಯಾಲಯಕ್ಕೆ ಆಗಸ್ಟ್ 3ರಂದು ಪತ್ರ ಬರೆದಿತ್ತು.

ತಪ್ಪು ಮರುಕಳಿಸದಂತೆ ಜಾಗ್ರತೆ ವಹಿಸಿ: ಶಾ

ಒಂದನೇ ಪುಟದಿಂದ...

ಸುಳ್ಯ ಸಮೀಪದ ಬೆಳ್ಳಾರೆಯಲ್ಲಿ ಪಕ್ಷದ ಕಾರ್ಯಕರ್ತ ಪ್ರವೀಣ್ ಹತ್ಯೆ, ಆ ಬಳಿಕ ಪಕ್ಷದ ಕಾರ್ಯಕರ್ತರ ಆಕ್ರೋಶ ಮತ್ತು ರಾಜೀನಾಮೆ ಪರ್ವದ ಬಗ್ಗೆ ಯಡಿಯೂರಪ್ಪ ಅವರು ಶಾ ಅವರಿಗೆ ವಿವರ ನೀಡಿದರು.

ಪಕ್ಷ–ಸರ್ಕಾರದ ಮುಖ್ಯಸ್ಥರ ಜತೆ ಮಾತನಾಡಿದ ಶಾ ಅವರು, 'ಚುನಾವಣೆ ಹೊತ್ತಿನಲ್ಲಿ ಪಕ್ಷದ ಜಿಲ್ಲಾ ಮಟ್ಟದ ನಾಯಕರು, ಕಾರ್ಯಕರ್ತರು ಅಸಮಾಧಾನಗೊಂಡಾಗ ಅದನ್ನು ಬಗೆಹರಿಸಲು ತಕ್ಷಣವೇ ಕಾರ್ಯಪ್ರವೃತ್ತವಾಗಬೇಕಿತ್ತು. ಇಂತಹ ಬೆಳವಣಿಗೆಗಳು ಪಕ್ಷದ ಸಂಘಟನೆಗಳ ಮೇಲೆ ಹೊಡೆತ ಕೊಡುತ್ತವೆ. ಈ ಬಗ್ಗೆ ಸರ್ಕಾರ ಮತ್ತು ಪಕ್ಷ ಮುನ್ನಡೆಸುವವರು ಜಾಗರೂಕತೆಯಿಂದ ಇದ್ದು, ಇದು ಮರುಕಳಿಸದಂತೆ ಎಚ್ಚರ ವಹಿಸಿ' ಎಂದಿದ್ದಾಗಿ ಗೊತ್ತಾಗಿದೆ.

ನಳಿನ್ ಮೇಲೂ ಬೇಸರ: ಪಕ್ಷದ ರಾಜ್ಯ ಘಟಕದ ಅಧ್ಯಕ್ಷ ನಳಿನ್ ಕುಮಾರ್ ಕಟೀಲ್ ಅವರ ಮೇಲೂ ಶಾ ಬೇಸರಗೊಂಡಿದ್ದರು. ಶಾ ಅವರಿಗೆ ನಳಿನ್ ಹೂ ಗುಚ್ಛ ಕೊಡಲು ಹೋದಾಗ ಅದನ್ನು ವ್ಯಕ್ತಪಡಿಸಿದರು ಎಂದು ಪ್ರತ್ಯಕ್ಷದರ್ಶಿಗಳು ಹೇಳಿದ್ದಾರೆ.

ಲೋಕಾಭಿರಾಮ ಅಷ್ಟೇ–ರವಿ: 'ಸರ್ಕಾರದ ಅಥವಾ ಪಕ್ಷದ ಯಾವುದೇ ನಾಯಕರ ಬಗ್ಗೆ ಅಮಿತ್ ಶಾ ಏನೂ ಹೇಳಿಲ್ಲ. ಅಸಮಾಧಾನ ಮತ್ತು ಅತೃಪ್ತಿಯ ಪ್ರಶ್ನೆಯೇ ಇಲ್ಲ. ಈ ಕುರಿತು ವದಂತಿ ಹರಡಲಾಗಿದೆ' ಎಂದು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಸಿ.ಟಿ.ರವಿ 'ಪ್ರಜಾವಾಣಿ'ಗೆ ತಿಳಿಸಿದರು.

ಮುಲಾಜಿಲ್ಲದೇ ಉಚ್ಚಾಟಿಸಿ: ರಾಹುಲ್

ಒಂದನೇ ಪುಟದಿಂದ...

'ಪಕ್ಷವನ್ನು ಅಧಿಕಾರಕ್ಕೆ ತರುವ ಕೆಲಸವನ್ನು ಮೊದಲು ಮಾಡಬೇಕು. ಬಿಜೆಪಿ ವಿರುದ್ಧ ಹೋರಾಡುವುದು, ಆ ಪಕ್ಷದವರ ಜನವಿರೋಧಿ ನೀತಿಯ ಬಗ್ಗೆ ಜನರಿಗೆ ಮನವರಿಕೆ ಮಾಡಿಕೊಡುವುದು ನಮ್ಮ ಮೊದಲ ಆದ್ಯತೆಯಾಗಬೇಕಿದೆ. ಅದನ್ನು ಬಿಟ್ಟು ಮುಖ್ಯಮಂತ್ರಿ ಯಾರಾಗಬೇಕೆಂಬ ವಿಚಾರವೂ ಸೇರಿದಂತೆ, ಆಂತರಿಕ ವಿಚಾರಗಳನ್ನು ಪಕ್ಷದೊಳಗೆ ಚರ್ಚಿಸುವುದು ಸರಿಯಲ್ಲ' ಎಂದೂ ರಾಹುಲ್ ಹೇಳಿದ್ದಾರೆ ಎಂದೂ ಗೊತ್ತಾಗಿದೆ.

'ಸಿದ್ದರಾಮಯ್ಯನವರೇ ಮುಂದಿನ ಮುಖ್ಯಮಂತ್ರಿಯಾಗಬೇಕು' ಎಂದು ಶಾಸಕ ಜಮೀರ್ ಅಹಮದ್ ಖಾನ್ ಪದೇ ಪದೇ ಹೇಳಿದ್ದು ಕಾಂಗ್ರೆಸ್ ಹೈಕಮಾಂಡ್‌ನ್ನು ಮುಜುಗರಕ್ಕೆ ಸಿಲುಕಿಸಿತ್ತು.

ಪ್ರಧಾನಿ ನಿವಾಸಕ್ಕೆ ಇಂದು ಮುತ್ತಿಗೆ

ಬೆಲೆ ಏರಿಕೆ: ದೇಶವ್ಯಾಪಿ ಪ್ರತಿಭಟನೆಗೆ ಕಾಂಗ್ರೆಸ್ ಕರೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಬೆಲೆ ಏರಿಕೆ ವಿರುದ್ಧದ ಹೋರಾಟವನ್ನು ತೀವ್ರಗೊಳಿಸಿರುವ ಕಾಂಗ್ರೆಸ್, ರಾಷ್ಟ್ರವ್ಯಾಪಿ ಪ್ರತಿಭಟನೆಗೆ ನಿರ್ಧರಿಸಿದೆ. ಪ್ರಧಾನಿ ನಿವಾಸಕ್ಕೆ ಶುಕ್ರವಾರ ಮುತ್ತಿಗೆ ಹಾಕಲು ತೀರ್ಮಾನಿಸಲಾಗಿದೆ. ಆದರೆ ನಿರ್ಬಂಧ ಆದೇಶವನ್ನು ಪಕ್ಷದ ಮುಖಂಡರು ಉಲ್ಲಂಘಿಸಿದರೆ, ಕಾನೂನು ಕ್ರಮ ಎದುರಿಸಬೇಕಾಗುತ್ತದೆ ಎಂದು ದೆಹಲಿ ಪೊಲೀಸರು ಎಚ್ಚರಿಕೆ ನೀಡಿದ್ದಾರೆ. ಬೆಲೆ ಏರಿಕೆ, ನಿರುದ್ಯೋಗ ಹಾಗೂ ಅಗತ್ಯ ವಸ್ತುಗಳಿಗೆ ಜಿಎಸ್‌ಟಿ ಹೇರಿಕೆ ಖಂಡಿಸಿ ಶುಕ್ರವಾರ 'ರಾಷ್ಟ್ರಪತಿ ಭವನ ಚಲೋ' ನಡೆಸಲೂ ಕಾಂಗ್ರೆಸ್ ಸಂಸದರು ನಿರ್ಧರಿಸಿದ್ದಾರೆ.

ಪ್ರತಿಭಟನೆಗೆ ಅವಕಾಶವಿಲ್ಲ ಎಂದು ಬೆದರಿಕೆ ರೀತಿ ಪತ್ರ ಬರೆಯಲಾಗಿದೆ. ಪ್ರತಿಭಟನೆ ನಡೆಸಲೂ ದೇಶದಲ್ಲಿ ಸ್ವಾತಂತ್ರ್ಯವಿಲ್ಲವೇ?
ಕೆ.ಸಿ. ವೇಣುಗೋಪಾಲ್, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ

ಕಾಂಗ್ರೆಸ್ ಅಧ್ಯಕ್ಷೆ ಸೋನಿಯಾ ಗಾಂಧಿ ಅವರನ್ನು ನ್ಯಾಷನಲ್ ಹೆರಾಲ್ಡ್ ಪ್ರಕರಣದಲ್ಲಿ ವಿಚಾರಣೆಗೆ ಒಳಪಡಿಸಿರುವುದು, ಸೋನಿಯಾ ಅವರ ನಿವಾಸಕ್ಕೆ ಹೋಗುವ ಮಾರ್ಗದಲ್ಲಿ ಬ್ಯಾರಿಕೇಡ್ ಅಳವಡಿಕೆ ಹಾಗೂ ನ್ಯಾಷನಲ್ ಹೆರಾಲ್ಡ್ ಕಚೇರಿಯಲ್ಲಿ ಇ.ಡಿ. ಅಧಿಕಾರಿಗಳು ಶೋಧ ನಡೆಸಿದ ಬೆಳವಣಿಗೆಗಳ ಬೆನ್ನಲ್ಲೇ, ಕಾಂಗ್ರೆಸ್ ತೀವ್ರ ಪ್ರತಿಭಟನೆಗೆ ಮುಂದಾಗಿದೆ. ಗ್ರಾಮ ಮಟ್ಟದಿಂದ ಜಿಲ್ಲಾ ಮಟ್ಟದವರೆಗೆ ಪ್ರತಿಭಟನೆಗಳನ್ನು ಹಮ್ಮಿಕೊಳ್ಳಲಾಗಿದೆ. ಎಲ್ಲ ರಾಜ್ಯಗಳಲ್ಲಿ ರಾಜಭವನ ಚಲೋ ನಡೆಸಲು ನಿರ್ಧರಿಸಲಾಗಿದೆ.

ದೆಹಲಿ ಪೊಲೀಸ್ ಉಪ ಆಯುಕ್ತೆ ಅಮೃತಾ ಗುಗುಲೋಥ್ ಅವರು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಕೆ.ಸಿ. ವೇಣುಗೋಪಾಲ್ ಅವರಿಗೆ ಪತ್ರ ಬರೆದಿದ್ದಾರೆ. 'ಕಾಂಗ್ರೆಸ್ ಪಕ್ಷವು ಪ್ರತಿಭಟನೆ ಹಮ್ಮಿಕೊಳ್ಳುವ ಬಗ್ಗೆ ಮಾಹಿತಿ ಬಂದಿದೆ. ಆದರೆ, ಜಂತರ್ ಮಂತರ್ ಹೊರತುಪಡಿಸಿ, ಉಳಿದ ಕಡೆ 144ನೇ ಸೆಕ್ಷನ್ ಜಾರಿಯಲ್ಲಿದೆ. ಈ ನಿಯಮಾವಳಿಗಳನ್ನು ಉಲ್ಲಂಘಿಸಿ ಧರಣಿ ನಡೆಸುವ ಅಥವಾ ಮುತ್ತಿಗೆ ಹಾಕುವ ಯಾವುದೇ ಯತ್ನಕ್ಕೆ ಅವಕಾಶ ನೀಡುವುದಿಲ್ಲ' ಎಂದು ಪತ್ರದಲ್ಲಿ ಉಲ್ಲೇಖಿಸಿದ್ದಾರೆ.

ಸಂಕ್ಷಿಪ್ತ ಸುದ್ದಿ

ಶ್ರೀಕೃಷ್ಣನ ಜನ್ಮಸ್ಥಳ ವಿವಾದ: ವಿಚಾರಣೆಗೆ ತಡೆ

ಪ್ರಯಾಗ್‌ರಾಜ್ (ಪಿಟಿಐ): ಶ್ರೀಕೃಷ್ಣನ 'ವಾಸ್ತವ ಜನ್ಮಸ್ಥಳ'ವಾದ ಮಥುರಾದಲ್ಲಿ ಪೂಜೆ ಸಲ್ಲಿಸಲು ಅವಕಾಶ ನೀಡಬೇಕು ಎಂಬ ಕೆಲ ಭಕ್ತರ ಅರ್ಜಿ ಕುರಿತಂತೆ ಕೆಳಹಂತದ ನ್ಯಾಯಾಲಯದಲ್ಲಿ ನಡೆಯುತ್ತಿದ್ದ ವಿಚಾರಣೆಗೆ ಅಲಹಾಬಾದ್ ಹೈಕೋರ್ಟ್ ತಡೆ ನೀಡಿದೆ.

ಸದ್ಯ, ಈ ಸ್ಥಳವು ಈದ್ಗಾ ಮಸೀದಿ ಟ್ರಸ್ಟ್‌ನ ಸುಪರ್ದಿಯಲ್ಲಿದೆ ಎಂದು ಅರ್ಜಿದಾರರು ವಾದಿಸಿದ್ದರು. ಪ್ರಕರಣ ಕುರಿತಂತೆ ಪ್ರಮಾಣಪತ್ರ ಸಲ್ಲಿಸುವಂತೆ ಎರಡೂ ಕಡೆಯ ಅರ್ಜಿದಾರರಿಗೆ ಹೈಕೋರ್ಟ್ ಸೂಚಿಸಿತು. ರಿಜಿಸ್ಟ್ರಾರ್ ಅವರು ವಿಚಾರಣೆಯ ಮುಂದಿನ ದಿನಾಂಕ ಗೊತ್ತುಪಡಿಸಲಿದ್ದಾರೆ.

ಲಖನೌ (ಪಿಟಿಐ): ಕಾನೂನು

'1,472 ಐಎಎಸ್ ಹುದ್ದೆಗಳು ಖಾಲಿ'

ನವದೆಹಲಿ (ಪಿಟಿಐ): 'ಈ ವರ್ಷದ ಜನವರಿ 1ರ ಮಾಹಿತಿ ಪ್ರಕಾರ ವಿವಿಧ ರಾಜ್ಯಗಳಲ್ಲಿ 1,472 ಐಎಎಸ್ ಹಾಗೂ 864 ಐಪಿಎಸ್ ಹುದ್ದೆಗಳು ಖಾಲಿ ಇವೆ' ಎಂದು ಕೇಂದ್ರ ಸಚಿವ ಜಿತೇಂದ್ರ ಸಿಂಗ್ ಗುರುವಾರ ರಾಜ್ಯಸಭೆಗೆ ಲಿಖಿತ ಉತ್ತರ ನೀಡಿದ್ದಾರೆ.

ಪತ್ರಕರ್ತ ಕಪ್ಪನ್‌ಗೆ ಜಾಮೀನು ಇಲ್ಲ

ಲಖನೌ (ಪಿಟಿಐ): ಕಾನೂನು ಬಾಹಿರ ಚಟುವಟಿಕೆ ತಡೆ ಕಾಯಿದೆ ಅಡಿ ದಾಖಲಾಗಿರುವ ಪ್ರಕರಣದಲ್ಲಿ ಪತ್ರಕರ್ತ ಸಿದ್ದಿಕ್ ಕಪ್ಪನ್ ಜಾಮೀನು ಅರ್ಜಿಯನ್ನು ಗುರುವಾರ ಅಲಹಬಾದ್ ಹೈಕೋರ್ಟ್‌ನ ಲಖನೌ ಪೀಠ ತಿರಸ್ಕರಿಸಿದೆ.

ತಾಂತ್ರಿಕ ಕಾರಣ: ಸಿಯುಇಟಿ–ಯುಜಿ 2022 ಪರೀಕ್ಷೆ ರದ್ದು



ನವದೆಹಲಿ (ಪಿಟಿಐ): ಪದವಿ ಕೋರ್ಸ್‌ಗಳ ಪ್ರವೇಶಕ್ಕೆ ಗುರುವಾರ ಮಧ್ಯಾಹ್ನ ನಿಗದಿಯಾಗಿದ್ದ ಸಾಮಾನ್ಯ ಪ್ರವೇಶ ಪರೀಕ್ಷೆಯನ್ನು (ಸಿಯುಇಟಿ–ಯುಜಿ) ರಾಷ್ಟ್ರೀಯ ಪರೀಕ್ಷಾ ಏಜೆನ್ಸಿ (ಎನ್‌ಟಿಎ) ತಾಂತ್ರಿಕ ಕಾರಣಗಳಿಂದ ರದ್ದುಗೊಳಿಸಿತು.

ಅದೇ ರೀತಿ ಗುರುವಾರ ಬೆಳಿಗ್ಗೆ ನಿಗದಿಯಾಗಿದ್ದ ಪರೀಕ್ಷೆಯನ್ನು ದೇಶದ 17 ರಾಜ್ಯಗಳ ಕೆಲ ಪರೀಕ್ಷಾ ಕೇಂದ್ರಗಳಲ್ಲಿ ಆಡಳಿತಾತ್ಮಕ ಮತ್ತು ತಾಂತ್ರಿಕ ಕಾರಣಗಳಿಂದಾಗಿ ಮುಂದೂಡಬೇಕಾಯಿತು ಎಂದು ಎನ್‌ಟಿಎ ತಿಳಿಸಿದೆ. ಮುಂದೂಡಲಾಗಿರುವ ಈ ಪರೀಕ್ಷೆಯನ್ನು 17 ರಾಜ್ಯಗಳ ಆಯಾ ಪರೀಕ್ಷಾ ಕೇಂದ್ರಗಳಲ್ಲಿ ಇದೇ 12ರಂದು ನಡೆಸಲಾಗುವುದು ಎಂದು ಎನ್‌ಟಿಎ ಹಿರಿಯ ನಿರ್ದೇಶಕರಾದ ಸಾಧನಾ ಪರಾಶರ ತಿಳಿಸಿದ್ದಾರೆ.

ಗುರುವಾರ ಮಧ್ಯಾಹ್ನ 3ರಿಂದ 6ರವರೆಗೆ ನಡೆಯಬೇಕಿದ್ದ ಪರೀಕ್ಷೆಗೆ ಪ್ರಶ್ನೆ ಪತ್ರಿಕೆಗಳು ತಾಂತ್ರಿಕ ಕಾರಣಗಳಿಂದಾಗಿ ಅಪ್‌ಲೋಡ್ ಆಗಿದ್ದೇ ಸಂಜೆ 5 ಗಂಟೆಗೆ. ಆ ಪ್ರಶ್ನೆ ಪತ್ರಿಕೆಗಳನ್ನು ದೇಶದ 489 ಕೇಂದ್ರಗಳು ಡೌನ್‌ಲೋಡ್ ಮಾಡಿಕೊಳ್ಳಲು ಆರಂಭಿಸಿದಾಗ ಸಂಜೆ 5.25 ಗಂಟೆಯಾಗಿತ್ತು. ಮಧ್ಯಾಹ್ನ 3 ಗಂಟೆಗೆ ಆರಂಭವಾಗಬೇಕಿದ್ದ ಪರೀಕ್ಷೆ ವಿಳಂಬವಾಗಿದ್ದರಿಂದ ರದ್ದುಗೊಳಿಸಲಾಯಿತು. ಈ ಪರೀಕ್ಷೆಯನ್ನು ಇದೇ 12ರಿಂದ 14ರ ನಡುವೆ ನಡೆಸುವುದಾಗಿ ಅವರು ಮಾಹಿತಿ ನೀಡಿದ್ದಾರೆ.

ಇದೇ 12 ಮತ್ತು 14ರಂದು ಪರೀಕ್ಷೆ ಬರೆಯಲು ಅಭ್ಯರ್ಥಿಗಳಿಗೆ ತೊಂದರೆ ಯಿದ್ದರೆ ತಮ್ಮ ಹೆಸರು ಮತ್ತು ನೋಂದಣಿ ಸಂಖ್ಯೆಯೊಂದಿಗೆ datechange@nta.ac.inಗೆ ಮೇಲ್ ಮಾಡಬಹುದು ಎಂದು ಅವರು ತಿಳಿಸಿದ್ದಾರೆ. ಎನ್‌ಟಿಎ ದೇಶದ 259 ನಗರಗಳ 489 ಪರೀಕ್ಷಾ ಕೇಂದ್ರಗಳಲ್ಲಿ ಜುಲೈ 15ರಿಂದ ಸಿಯುಇಟಿ ನಡೆಸುತ್ತಿದ್ದು, ಆಗಸ್ಟ್ 20ರವರೆಗೆ ಪರೀಕ್ಷೆಗಳು ನಿಗದಿಯಾಗಿವೆ.

ರಾವುತ್ ಆರೋಪ • 8ರವರೆಗೆ ಇ.ಡಿ ಕಸ್ಟಡಿಗೆ ನೀಡಿದ ಕೋರ್ಟ್

'ಕಿಟಕಿಯಿಲ್ಲದ ಕೋಣೆಯಲ್ಲಿ ಬಂದಿ'

ಮುಂಬೈ (ಪಿಟಿಐ): ಜಾರಿ ನಿರ್ದೇಶನಾಲಯದ (ಇ.ಡಿ) ಕಸ್ಟಡಿಯಲ್ಲಿರುವ ಶಿವಸೇನಾ ಸಂಸದ ಸಂಜಯ ರಾವುತ್ ಅವರ ಕಸ್ಟಡಿ ಅವಧಿಯನ್ನು ಆಗಸ್ಟ್ 8ರವರೆಗೆ ವಿಸ್ತರಿಸಲಾಗಿದೆ. ಈ ಮಧ್ಯೆ, ರಾವುತ್ ಅವರ ಪತ್ನಿ ವರ್ಷಾ ಅವರಿಗೆ ಸಮನ್ಸ್ ಜಾರಿ ಮಾಡಿರುವ ಇ.ಡಿ., ವಿಚಾರಣೆಗೆ ಹಾಜರಾಗುವಂತೆ ಸೂಚಿಸಿದೆ. ಈ ಹಿಂದೆ ವರ್ಷಾ ಅವರನ್ನು ಒಮ್ಮೆ ವಿಚಾರಣೆಗೆ ಒಳಪಡಿಸಿದ್ದ ಇ.ಡಿ. ಈಗ ಮತ್ತಷ್ಟು ಮಾಹಿತಿ ಲಭ್ಯವಾಗಿರುವ ಕಾರಣ, ಅವರನ್ನು ಮತ್ತೆ ವಿಚಾರಣೆಗೆ ಕರೆದಿದೆ.

ಸರಿಯಾದ ಗಾಳಿ ವ್ಯವಸ್ಥೆ ಇಲ್ಲದ ಹಾಗೂ ಕಿಟಕಿಗಳಿಲ್ಲದ ಕೋಣೆಯಲ್ಲಿ ತಮ್ಮನ್ನು ಬಂಧಿಸಿಡಲಾಗಿದೆ ಎಂದು ವಿಶೇಷ ನ್ಯಾಯಾಲಯದ ಎದುರು ರಾವುತ್ ಗುರುವಾರ ಆರೋಪಿಸಿದ್ದಾರೆ. ವಿಚಾರಣೆ ವೇಳೆ, ಇ.ಡಿ ವಿರುದ್ಧ ಏನಾದರೂ ದೂರುಗಳಿವೆಯೇ ಎಂದು ರಾವುತ್ ಅವರನ್ನು ಕೋರ್ಟ್ ಪ್ರಶ್ನಿಸಿತು. ಅವರು ನಿರ್ದಿಷ್ಟವಾಗಿ ಯಾವ ದೂರು ಸಲ್ಲಿಸದಿದ್ದರೂ, ತಮಗೆ ಇ.ಡಿ. ಒದಗಿಸಿರುವ ಕೋಣೆಯಲ್ಲಿ ಗಾಳಿ ಸರಿಯಾಗಿ ಬರುತ್ತಿಲ್ಲ ಹಾಗೂ ಕಿಟಕಿಗಳು ಇಲ್ಲ ಎಂದು ಹೇಳಿದರು.


ರಾವುತ್ ಅವರ ಆರೋಪಕ್ಕೆ ಸ್ಪಷ್ಟನೆ ನೀಡುವಂತೆ ಕೋರ್ಟ್ ಸೂಚಿಸಿತು. ರಾವುತ್ ಅವರನ್ನು ಹವಾನಿಯಂತ್ರಿತ (ಎ.ಸಿ) ಕೋಣೆಯಲ್ಲಿ ಇರಿಸಲಾಗಿರುವ ಕಾರಣ, ಕೋಣೆಗೆ ಕಿಟಕಿಗಳಿಲ್ಲ ಎಂದು ಇ.ಡಿ ಪರ ಹಾಜರಿದ್ದ ವಿಶೇಷ ಪಬ್ಲಿಕ್ ಪ್ರಾಸಿಕ್ಯೂಟರ್ ಹಿತೇನ್ ವಿನೇಗಾಂವ್ಕರ್ ಅವರು ಹೇಳಿದರು. ಆದರೆ ತಮಗೆ ಆರೋಗ್ಯ ಸಮಸ್ಯೆ ಇರುವುದರಿಂದ ಎ.ಸಿ ಬಳಸುವುದಿಲ್ಲ ಎಂದು ರಾವುತ್ ಹೇಳಿದರು. ರಾವುತ್ ಅವರಿಗೆ ಕಿಟಕಿಯಿರುವ ಬೇರೆ ಕೋಣೆಯ ವ್ಯವಸ್ಥೆ ಮಾಡಲಾಗುವುದು ಎಂದು ಹಿತೇನ್ ಭರವಸೆ ನೀಡಿದರು.

ಹಣ ಅಕ್ರಮ ವರ್ಗಾವಣೆ ಪ್ರಕರಣಗಳ ವಿಚಾರಣೆ ನಡೆಸುತ್ತಿರುವ ವಿಶೇಷ ನ್ಯಾಯಾಲಯದ ನ್ಯಾಯಾಧೀಶ ಎಂ.ಜಿ ದೇಶಪಾಂಡೆ ಅವರ ಎದುರು ರಾವುತ್ ಅವರನ್ನು ಹಾಜರುಪಡಿಸಿದ ಇ.ಡಿ., ಆಗಸ್ಟ್ 10ರವರೆಗೆ ಕಸ್ಟಡಿ ಅವಧಿ ವಿಸ್ತರಿಸುವಂತೆ ಕೋರಿತು. ಆದರೆ, ನ್ಯಾಯಾಧೀಶರು ಆಗಸ್ಟ್ 8ರವರೆಗೆ ಕಸ್ಟಡಿ ಅವಧಿ ವಿಸ್ತರಿಸಿದರು.

ಪಾತ್ರಾ ಚಾಳ್ ಪ್ರಕರಣದಲ್ಲಿ ನಡೆದಿದೆ ಎನ್ನಲಾದ ಹಣಕಾಸು ಅವ್ಯವಹಾರ ಸಂಬಂಧ ರಾವುತ್ ಅವರನ್ನು ಇ.ಡಿ ಬಂಧಿಸಿತ್ತು. ಕಸ್ಟಡಿ ಅವಧಿ ಗುರುವಾರ ಮುಗಿದಿದ್ದರಿಂದ ಅಧಿಕಾರಿಗಳು ರಾವುತ್ ಅವರನ್ನು ಕೋರ್ಟ್‌ಗೆ ಹಾಜರುಪಡಿಸಿದರು.

ಮುಖ್ಯಾಂಶಗಳು

- ರಾವುತ್ ವಿಚಾರಣೆಯಲ್ಲಿ ಗಮನಾರ್ಹ ಪ್ರಗತಿ
- ಕೋರ್ಟ್ ಎದುರು ಜಾರಿ ನಿರ್ದೇಶನಾಲಯ ಹೇಳಿಕೆ



ದೇವಕನ್ಯೆಯಾದ ಆಶಿಕಾ ರಂಗನಾಥ್!

'ಪಟಾಕಿ ಪೋರಿ' ಆಶಿಕಾ ರಂಗನಾಥ್ ದೇವಕನ್ಯೆಯಾಗಿದ್ದಾರೆ. ತಮ್ಮ ಮುಂದಿನ ಪ್ರೊಜೆಕ್ಟ್‌ಗಾಗಿ ನಾನಾವತಾರವನ್ನೆತ್ತಲು ಅವರು ಸಜ್ಜಾಗಿದ್ದಾರೆ. 'ಸಿಂಪಲ್' ಸುನಿ ನಿರ್ದೇಶನದ 'ಗತವೈಭವ' ಸಿನಿಮಾದ ನಾಯಕಿಯಾಗಿ ಆಶಿಕಾ ಆಯ್ಕೆಯಾಗಿದ್ದು, ಹಲವು ವಿಭಿನ್ನ ಪಾತ್ರಗಳಲ್ಲಿ ಅವರು ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ.

ಕಳೆದ ಮೇ ತಿಂಗಳಲ್ಲಿ ತೆರೆಕಂಡಿದ್ದ ಸುನಿ ನಿರ್ದೇಶನದ 'ಅವತಾರ ಪುರುಷ'ದಲ್ಲೂ ಆಶಿಕಾ ನಾಯಕಿಯಾಗಿದ್ದರು. ಇದೀಗ ಯುವನಟ ದುಷ್ಯಂತ್ ಅವರ ಚೊಚ್ಚಲ ಸಿನಿಮಾ 'ಗತವೈಭವ'ಕ್ಕೂ ಆಶಿಕಾ ಜೋಡಿಯಾಗಿದ್ದಾರೆ. ರೋಮ್ಯಾಂಟಿಕ್ ಲವ್ ಸ್ಟೋರಿ ಕಥಾಹಂದರದ ಈ ಸಿನಿಮಾದಲ್ಲಿ ಸೈಂಟಿಫಿಕ್ ಥ್ರಿಲ್ಲರ್ ಕಂಟೆಂಟ್ ಕೂಡ ಇರಲಿದೆ. ಈಗಾಗಲೇ ಶೇ 40ರಷ್ಟು ಚಿತ್ರೀಕರಣ ಪೂರ್ಣಗೊಂಡಿದ್ದು, ವಿಎಫ್‌ಎಕ್ಸ್ ಕಲಾವಿದನ ಪಾತ್ರದಲ್ಲಿ ದುಷ್ಯಂತ್ ಕಾಣಿಸಿಕೊಳ್ಳುತ್ತಿದ್ದಾರೆ. ಹೀಗಾಗಿ ಸಿನಿಮಾದಲ್ಲಿ ಅವರೆತ್ತುವ ಅವತಾರಕ್ಕೆ ಪೂರಕವಾಗಿ ಆಶಿಕಾ ಕೂಡಾ ಹಲವು ಭಿನ್ನ ಪಾತ್ರಗಳಲ್ಲಿ ಕಾಣಿಸಿಕೊಳ್ಳಲಿದ್ದಾರೆ. ದೇವಕನ್ಯೆಯಾಗಿ, ಪೋರ್ಚುಗೀಸ್ ಮರ್ಚೆಂಟ್ ಆಗಿ ಹೀಗೆ ನಾನಾ ಪಾತ್ರಗಳಲ್ಲಿ ತೆರೆ ಮೇಲೆ ಕಾಣಿಸಿಕೊಳ್ಳಲಿದ್ದಾರೆ ಆಶಿಕಾ.

ಗತವೈಭವ ಸಿನಿಮಾಕ್ಕೆ ಸುನಿ ಅವರೇ ಕಥೆ-ಚಿತ್ರಕಥೆ ಮತ್ತು ಸಂಭಾಷಣೆ ಬರೆದಿದ್ದು, ಸುನಿ ಸಿನಿಮಾಸ್ ಸಂಸ್ಥೆಯಡಿ ದೀಪಿಕ್ ಹಾಗೂ ಸುನಿ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ವಿಲಿಯಂ ಡೇವಿಡ್ ಛಾಯಾಗ್ರಹಣ, ಜುಡಾ ಸ್ಯಾಂಡಿ ಸಂಗೀತ, ನಿರ್ಮಲ್ ಅವರ ವಿಎಫ್‌ಎಕ್ಸ್ ಈ ಚಿತ್ರಕ್ಕಿದೆ. 'ಅವತಾರ ಪುರುಷ' ಸಿನಿಮಾ ಬಿಡುಗಡೆ ಬಳಿಕ ಆಶಿಕಾ ಶೂಟಿಂಗ್‌ನಿಂದ ಕೊಂಚ ಬಿಡುವು ಪಡೆದುಕೊಂಡಿದ್ದರು. ಸದ್ಯ ಪವನ್ ಒಡೆಯರ್ ನಿರ್ದೇಶನದ 'ರೇಮೊ' ಚಿತ್ರದ ಬಿಡುಗಡೆಗಾಗಿ ಅವರು ಕಾಯುತ್ತಿದ್ದು, ಇಲ್ಲಿ ಗಾಯಕಿಯ ಪಾತ್ರದಲ್ಲಿ ಕಾಣಿಸಿಕೊಂಡಿದ್ದಾರೆ. ಸೆಪ್ಟೆಂಬರ್‌ನಲ್ಲಿ ಈ ಸಿನಿಮಾ ತೆರೆಕಾಣಲಿದೆ.

'ಗಾಳಿಪಟಕ್ಕಾಗಿ 'ಯಂಗ್' ಆದೆ!

ನಟನೆಯ ಹಂಬಲದಿಂದ ಎಂಜಿನಿಯರಿಂಗ್ ಓದುವುದನ್ನೇ ಬಿಟ್ಟು, ಬಣ್ಣ ಬೆಳಕಿಗೆ ಒಡ್ಡಿಕೊಂಡವರು ಪವನ್ ಕುಮಾರ್. ನಿರ್ದೇಶಕನಾಗಿ ಮಿಂಚಿ ಯೋಗರಾಜ್ ಭಟ್ ಜೊತೆಗೂಡಿ ಮತ್ತೊಮ್ಮೆ ಬಣ್ಣಹಚ್ಚಿ 'ಗಾಳಿಪಟ' ಹಾರಿಸಲು ಸಜ್ಜಾದ ಹೊತ್ತಿನಲ್ಲಿ ಅವರ ಜೊತೆ ಒಂದು ಮಾತುಕತೆ...

ಶರತ್ ಹೆಗ್ಡೆ

• ಬರಹ, ಬಣ್ಣದ ಬದುಕನ್ನು ಅವಲೋಕಿಸಿದರೆ, ಏನು ಕಾಣಿಸುತ್ತಿದೆ...

20 ವರ್ಷಗಳ ಹಿಂದೆ ನಾನೇನು ಬಯಸಿದ್ದೆನೋ, ಅದು ಈಗ ಸಿಗುತ್ತಿದೆ. ಅದ್ಯಾವುದೋ ಜೋಶ್‌ನಲ್ಲಿ 2002ರಲ್ಲಿ ಎಂಜಿನಿಯರಿಂಗ್ ಓದಿಗೆ ಗುಡ್‌ಬೈ ಹೇಳಿ ಬಂದವನು ನಾನು. ಆ ಬಳಿಕ ಅಲೆದಾಟ ಶುರು. ಸಿನಿಮಾ ಬಗ್ಗೆ ಅಷ್ಟಾಗಿ ಗೊತ್ತಿರಲಿಲ್ಲ. ರಂಗಪ್ರಯೋಗಗಳಿಗೆ ಒಡ್ಡಿಕೊಂಡಾಗ, ಟಿಪಿಕಲ್ ಭಾರತೀಯ ಸಿನಿಮಾಗಳಾಚೆಗಿನ ವಿಶ್ವ ಸಿನಿಮಾಗಳ ಬಗ್ಗೆ ತಿಳಿಯುತ್ತಾ ಹೋಯಿತು. ಈಗಲೂ ರಂಗಭೂಮಿಯ ಮೇಲಿನ ಪ್ರೀತಿ, ತುಡಿತ, ಪ್ರಯೋಗಗಳು ಹಾಗೇ ಮುಂದುವರಿದಿವೆ. ಈಗ ಹೆಚ್ಚಾಗಿ ಬರವಣಿಗೆ, ನಿರ್ದೇಶನದತ್ತ ಗಮನವಿದೆ. ಸಣ್ಣಪುಟ್ಟ ಅವಕಾಶಗಳು ಬಂದಾಗ ನಟನೆಗೂ ಹೋಗುತ್ತೇನೆ.

• ಸಿನಿಮಾ ಕಡೆ ಹೊರಳಿದ್ದು?

ನಾಟಕಗಳಲ್ಲಿ ತೋರಿಸಲಾಗದ್ದನ್ನು ಸಿನಿಮಾದ ಮೂಲಕ ಅಗಾಧವಾಗಿ ತೋರಿಸಬಹುದು ಎಂದು ಗೊತ್ತಾಯಿತು. ಆಗ ಸ್ವಲ್ಪ ಅಧ್ಯಯನ ಮಾಡಿದೆ. ರಂಗಭೂಮಿಯಲ್ಲೇ ಬದುಕು ಹುಡುಕಿಕೊಂಡು ಮುಂಬೈಗೆ ಹೋದೆ. ಅಲ್ಲಿ ತಿಂಗಳುಗಳ ಕಾಲ ಕೆಲಸವಿಲ್ಲದೇ ಕೂತದ್ದು, ತೆರೆಯ ಹಿಂದಿನ ಕೆಲಸಗಳನ್ನಷ್ಟೇ ಮಾಡಿದ್ದೂ ನಡೆದಿದೆ. ಹಾಗಿರುವ ಒಂದು ದಿನ ನಿರ್ದೇಶಕ ಸೂರಿ ಅವರು 'ಇಂತಿ ನಿನ್ನ ಪ್ರೀತಿಯ' ಚಿತ್ರ ಮಾಡುತ್ತಿದ್ದರು. ಅದರಲ್ಲಿ ನನಗೆ ವಾಸ್ನೆ ಬಾಬು ಎಂಬ ಪಾತ್ರ ಕೊಟ್ಟರು. ನಿಜವಾಗಿ ಹೇಳಬೇಕೆಂದರೆ ಆ ಪಾತ್ರ ನನಗೆ ಸಂಬಂಧಪಡುತ್ತಲೇ ಇರಲಿಲ್ಲ. ಹಾಗಿದ್ದರೂ ಅನಿವಾರ್ಯವಾಗಿ ಮಾಡಿದೆ. ಪಾತ್ರ ತುಂಬಾ ಕ್ಲಿಕ್ ಆಯಿತು. ಆ ವೇಳೆ ನಿರ್ದೇಶಕ ಯೋಗರಾಜ್ ಭಟ್ಟರು ಸೂರಿ ಅವರ ಕಚೇರಿಯಲ್ಲೇ ಸಿಕ್ಕಿದರು. ಅದೂ ಇದೂ ಮಾತನಾಡಿ ಅವರ ಜೊತೆ ನನ್ನನ್ನು ಬರವಣಿಗೆಗೆ ಸೇರಿಸಿಕೊಂಡರು. ಅವರಿಂದ ಕಲಿತದ್ದು ತುಂಬಾ ಇದೆ. 'ಮನಸಾರೆ', 'ಪಂಚರಂಗಿ' ಚಿತ್ರಗಳಿಗೆ ನಾನು ಬರೆದೆ. ಈ ಚಿತ್ರಗಳಲ್ಲಿ ನಟನೆಯ ಅವಕಾಶವೂ ಸಿಕ್ಕಿತು. ಹಾಗೆ ಮುಂದುವರಿದು ನಿರ್ದೇಶನದತ್ತ ಹೊರಳಿದೆ. ಆ ಶ್ರಮದ ಫಲವೇ 'ಲೈಫು ಇಷ್ಟೇನೇ', 'ಯೂ ಟರ್ನ್', 'ಲೂಸಿಯಾ' ಇತ್ಯಾದಿ...

• ಗಾಳಿಪಟ – 2ರಲ್ಲಿ ನಿಮ್ಮ ಪ್ರವೇಶವೇ ಹೆಚ್ಚು ಸದ್ದು ಮಾಡುತ್ತಿದೆಯಲ್ಲಾ?

ಹೌದು, 'ಗಾಳಿಪಟ-2'ರಲ್ಲಿ ನಾನು ನಟಿಸುತ್ತೇನೆ ಎಂಬ ಯಾವ ನಿರೀಕ್ಷೆಯೂ ಇರಲಿಲ್ಲ. 2018ರಲ್ಲಿ ಮಾತುಕತೆ ಹಂತದಲ್ಲಿದ್ದ ಸಿನಿಮಾ ಅದು. ಆಗ ಇನ್ನೂ ಹೆಸರಿಟ್ಟಿರಲಿಲ್ಲ. ಈ ನಡುವೆ ನಾನು ತೆಲುಗಿನಲ್ಲಿ 'ಯೂ ಟರ್ನ್' ಸಿನಿಮಾ ಮಾಡುತ್ತಿದ್ದೆ. ಇದ್ದಕ್ಕಿದ್ದಂತೆಯೇ ಯೋಗರಾಜ್ ಭಟ್ಟರು ಕರೆ ಮಾಡಿ, ನನ್ನದೊಂದು ಫೋಟೊ ಕೇಳಿದರು. ಆಗ ಹೇಗ್ಹೇಗೋ ಇದ್ದೆ. ಅದೇ ರೀತಿ ಸೆಲ್ಫಿ ತೆಗೆದು ಕಳುಹಿಸಿದೆ. ಅವರು ಇಂಥ ವ್ಯಕ್ತಿಗೇ ಹುಡುಕುತ್ತಿದ್ದರಂತೆ. ಈ ಪಾತ್ರಕ್ಕಾಗಿ ನಾನು ಥಾಯ್ಲೆಂಡ್‌ಗೆ ಹೋಗಿ ಮೊಯ್‌ಥಾಯ್ ಬಾಕ್ಸಿಂಗ್ ಕಲಿತೆ. 6 ವಾರಗಳಲ್ಲಿ 10 ಕೆ.ಜಿ ತೂಕ ಇಳಿಸಿಕೊಂಡೆ. ನಾನು ಇಪ್ಪತ್ತು ವರ್ಷಗಳ ಹಿಂದೆ ಹೇಗಿದ್ದೆನೋ ಈಗ ಹಾಗೆ ಕಾಣುತ್ತಿದ್ದೇನೆ. ಏಕೆಂದರೆ ಈ ಪಾತ್ರಕ್ಕೂ ನನ್ನ ವಯಸ್ಸಿಗೂ ಸುಮಾರು ಹತ್ತು ವರ್ಷಗಳ ಅಂತರ ಇದೆ.

• ಹೆಚ್ಚು ರೊಮ್ಯಾಂಟಿಕ್ ಸನ್ನಿವೇಶ ಇದ್ದ ಹಾಗಿದೆ?

ಈ ಚಿತ್ರದಲ್ಲಿ ತೋರಿಸಿರುವ ರೊಮ್ಯಾನ್ಸ್, ಕ್ರಿಯೇಟಿವಿಟಿ ಎಲ್ಲವೂ ಭಟ್ಟರದ್ದೇ. ಚಿತ್ರದ ಪ್ರಮೋಷನ್‌ಗಾಗಿ ಚಿತ್ರರಂಗದ ಗೆಳೆಯರಲ್ಲಿ ಒಂದು ಪುಟ್ಟ ವಿಡಿಯೊಗಾಗಿ ಕೋರಿದೆ. ಎಲ್ಲರೂ ಕಳುಹಿಸಿದರು. ಅದು ಇಷ್ಟೊಂದು ಪ್ರಸಿದ್ಧವಾಗುತ್ತದೆ ಎಂದು ಊಹಿಸಿರಲಿಲ್ಲ. ನಾನು ಮತ್ತು ಗಣೇಶ್ ಅವರು ಈ ಹಿಂದೆ ಕೂಡಾ ಒಟ್ಟಿಗೇ ಕೆಲಸ ಮಾಡಿದವರು. ಹಾಗಾಗಿ ತುಂಬಾ ಚೆನ್ನಾಗಿ ಹೊಂದಾಣಿಕೆ ಆಯಿತು. ದಿಗಂತ್ ಕೂಡಾ ಇದ್ದಾರೆ. ಮೂವರ ಪಾತ್ರಗಳಿಗೂ ಸಮಾನವಾದ ಆದ್ಯತೆ ಮತ್ತು ತೂಕ ಇದೆ. ಮೂವರದ್ದೂ ಒಂದೊಂದು ಕಥೆ ಇಲ್ಲಿದೆ.

• ನಟನೆ, ನಿರ್ದೇಶನ ಯಾವುದು ಹೆಚ್ಚು ಇಷ್ಟ?

ಆಯಾ ಸಂದರ್ಭಕ್ಕೆ ಯಾವುದು ಬರುತ್ತದೋ ಅದೇ ಇಷ್ಟ. ಎಲ್ಲದರಲ್ಲೂ ತೊಡಗಿಕೊಳ್ಳಬೇಕು ಅಷ್ಟೆ.

• ನಟನೆ ಆಯ್ಕೆಗೆ ಮನೆಯಲ್ಲಿ ಬೆಂಬಲ ಇತ್ತೇ?

ಇರಲಿಲ್ಲ. ಅಪ್ಪ, ಅಮ್ಮ ಇಬ್ಬರಿಗೂ ಇಷ್ಟವಿರಲಿಲ್ಲ. ನಾನು ಎಂಜಿನಿಯರಿಂಗ್ ಬಿಟ್ಟು ಬಂದದ್ದಕ್ಕೆ ಅಮ್ಮನಿಗೆ ಈಗಲೂ ಬೇಸರವಿದೆ. ಆದರೆ, ಇಷ್ಟು ವರ್ಷ ಕಾದ, ಪರಿಶ್ರಮದ ಫಲ ಈಗ ಸಿಗುತ್ತಿದೆ ಎಂಬ ತೃಪ್ತಿ ನನಗಿದೆ.

• ಸಿನಿ ಕ್ಷೇತ್ರದ ಕನಸು ಕಾಣುವವರಿಗೆ ಏನು ಹೇಳುತ್ತೀರಿ?

ತಾಳ್ಮೆ ಇರಲಿ. ಈಗ ನಾನೇ 20 ವರ್ಷ ಕಾಯಬೇಕಾಯಿತು. ನಿಮ್ಮಲ್ಲಿ ಪ್ರತಿಭೆ ಇದೆಯೇ ಪರೀಕ್ಷಿಸಿಕೊಳ್ಳಿ. ಇದೆ ಎಂದಾದರೆ ಅದನ್ನೇ ಸಾಣೆಗೆ ಒಡ್ಡುತ್ತಾ ಮುಂದುವರಿಯಿರಿ. ಪರಿಶ್ರಮಕ್ಕೆ ಖಂಡಿತಾ ಪ್ರತಿಫಲ ಇದೆ.



ಪವನ್ ಕುಮಾರ್



ಗಾಳಿಪಟ-2
ವೈಭವಿ ಶಾಂಡಿಲ್ಯ

ಭಾವನೆಗಳ ಪಟ ಹಾರಿಬಿಟ್ಟ ಭಟ್ರು!

2008ರಲ್ಲಿ 'ಮನದ ಮುಗಿಲಲ್ಲಿ ಮೊಹಬ್ಬತ್' ಎಂಬ ಟ್ಯಾಗ್‌ಲೈನ್‌ನೊಂದಿಗೆ ಮೊದಲ 'ಗಾಳಿಪಟ'ವನ್ನು ಹಾರಿಬಿಟ್ಟಿದ್ದ ನಿರ್ದೇಶಕ ಯೋಗರಾಜ್ ಭಟ್ ಅವರು, ದಶಕದ ಬಳಿಕ ಮತ್ತೊಂದು ಭಾವನಾತ್ಮಕ ಗಾಳಿಪಟ ಹಾರಿಸಲು ಸಜ್ಜಾಗಿದ್ದಾರೆ.

ಸ್ಯಾಂಡಲ್‌ವುಡ್ ನಟರಾದ ಶಿವರಾಜ್‌ಕುಮಾರ್, ರಮೇಶ್ ಅರವಿಂದ್ ಹಾಗೂ ಉಪೇಂದ್ರ ಅವರ ಸಮ್ಮುಖದಲ್ಲಿ ಇತ್ತೀಚೆಗೆ 'ಗಾಳಿಪಟ-2' ಸಿನಿಮಾದ ಟ್ರೇಲರ್ ಬಿಡುಗಡೆಯಾಯಿತು. 'ಗಾಳಿಪಟ-2' ಸಿನಿಮಾ ಆಗಸ್ಟ್ 12ಕ್ಕೆ ಬಿಡುಗಡೆಯಾಗುತ್ತಿದೆ. 'ಸ್ನೇಹವೇ ಬಹಳ ಕೈಹಿಡಿದಿದೆ' ಎಂದು ಸದಾ ಹೇಳುತ್ತಿರುವ ಯೋಗರಾಜ್ ಭಟ್ ಎರಡನೇ ಭಾಗದಲ್ಲೂ ಸ್ನೇಹದ ಮಳೆಯನ್ನು ಸುರಿಸಿದ್ದಾರೆ. ಮೂವರು ಗೆಳೆಯರ ಕಥೆಯನ್ನು ಭಾವನಾತ್ಮಕವಾಗಿ ಹೆಣೆದಿದ್ದಾರೆ ಎನ್ನುವುದಕ್ಕೆ ಟ್ರೇಲರ್ ಸಾಕ್ಷಿ. ಮೊದಲ ಭಾಗದಲ್ಲೇ ಬರುವ ಬಹುತೇಕ ಪಾತ್ರಗಳು ಎರಡನೇ ಭಾಗದಲ್ಲೂ ಬಣ್ಣಹಚ್ಚಿದ್ದು, ಮತ್ತೊಂದಿಷ್ಟು ಹೊಸ ಪಾತ್ರಗಳು ಸೇರಿಕೊಂಡಿವೆ. ಚಿತ್ರದಲ್ಲಿ ಗಣೇಶ್ ಅವರ ತಂದೆ ಪಾತ್ರದಲ್ಲಿ ಕಾಣಿಸಿಕೊಂಡಿದ್ದ ರಂಗಾಯಣ ರಘು, ಎರಡನೇ ಭಾಗದಲ್ಲೂ ಮಗನಿಗೆ ತಕ್ಕ ಶಾಸ್ತಿ ಮಾಡಿದ್ದಾರೆ. ಅನಂತನಾಗ್ ಅವರು ಇಲ್ಲಿ ಕನ್ನಡ ಮೇಷ್ಟ್ರಾಗಿದ್ದು, 'ಕನ್ನಡ ಸಾಯುತ್ತೆ ಎನ್ನುವವರು ಬೇಗ ಸಾಯುತ್ತಾರೆ' ಎನ್ನುತ್ತಾ ಮತ್ತೊಮ್ಮೆ ಸರ್ಕಾರಿ ಹಿ. ಪ್ರಾ. ಶಾಲೆ ಕಾಸರಗೋಡಿಗೆ ಪ್ರೇಕ್ಷಕರನ್ನು ಕೊಂಡೊಯ್ದಿದ್ದಾರೆ.

ಈಗಾಗಲೇ ಬಿಡುಗಡೆಯಾಗಿರುವ ಸಿನಿಮಾದ ಹಾಡುಗಳು ಹಾಗೂ ಕ್ಯಾರೆಕ್ಟರ್ ಟೀಸರ್ ಹಿಟ್ ಆಗಿವೆ. ಅರ್ಜುನ್ ಜನ್ಯ ಅವರ ಸಂಗೀತ ಕೇಳುಗರನ್ನು ಮೋಡಿ ಮಾಡಿದೆ. ಎರಡನೇ ಭಾಗದಲ್ಲಿ ಗಣಿಗೆ ದೂದ್‌ಪೇಢ ದಿಗಂತ್, ಪವನ್ ಕುಮಾರ್ ಜೊತೆಯಾಗಿದ್ದಾರೆ. ನಾಯಕಿಯರಾಗಿ ಶರ್ಮಿಳಾ ಮಾಂಡ್ರೆ, ವೈಭವಿ ಶಾಂಡಿಲ್ಯ, ನಿಶ್ವಿಕಾ ನಾಯ್ಡು ಹಾಗೂ ಸಂಯುಕ್ತ ಮೆನನ್ ಬಣ್ಣಹಚ್ಚಿದ್ದಾರೆ.

ಪ್ರಜಾವಾಣಿ ನೋಡಿಯೊ
ಸಿನಿಮಾತು ನೋಡಲು
ಈ ಕೋಡ್ ಸ್ಕ್ಯಾನ್ ಮಾಡಿ

ಷೇರುಪೇಟೆ ವಹಿವಾಟು ▼52
ಹಿಂದಿನ ಅಂತ್ಯ 58,350
ಇಂದಿನ ಅಂತ್ಯ 58,298

ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	17,388
ಇಂದಿನ ಅಂತ್ಯ	17,382
▼	6
ದಿನದ ಕನಿಷ್ಠ	17,161

ವಿನಿಮಯ ದರ

$ ಡಾಲರ್	79.40
£ ಪೌಂಡ್	97.06
€ ಯುರೊ	81.32
¥ ಯೆನ್ (100ಕ್ಕೆ)	59

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ
ಬೆಂಗಳೂರು
100 ಮೊಟ್ಟೆಗೆ ₹405
12 ಮೊಟ್ಟೆಗೆ ₹57
ಮೈಸೂರು
100 ಮೊಟ್ಟೆಗೆ ₹405

ಖಾದ್ಯ ತೈಲ ಮುಂಬೈ (10 ಕೆಜಿಗೆ)

ಶೇಂಗಾ (ರಿಫೈನ್ಡ್)	₹1620 (1620)
ಸೋಯಾ (ರಿಫೈನ್ಡ್)	₹1240(1252)
ಸೂರ್ಯಕಾಂತಿ (ರಿಫೈನ್ಡ್)	₹1570 (1570)
ಪಾಮೋಲಿನ್	₹1215 (1240)

ರಾಮನಗರ ರೇಷ್ಮೆಗೂಡು ಧಾರಣೆ
ಮಿಶ್ರತಳಿ (ಸಿ.ಬಿ) ₹222-542
ದ್ವಿತಳಿ (ಬಿ.ವಿ) ₹342-802

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)
ಆರ್‌ಎಸ್‌ಎಸ್-4 ₹165
ಆರ್‌ಎಸ್‌ಎಸ್-5 ₹155
ಗುಡ್ ಲಾಟ್ ₹148

ತೆಂಗು ಧಾರಣೆ (ಸಾವಿರಕ್ಕೆ)
ಮಂಗಳೂರು
1ನೇ ದರ್ಜೆ ₹16000-20000
2ನೇ ದರ್ಜೆ ₹12000-15000

ಗರಿಷ್ಠ ಮಟ್ಟದಲ್ಲಿ ಹಣದುಬ್ಬರ, ವಾಹನಗಳ ಬೆಲೆ ಏರಿಕೆ ಪರಿಣಾಮ


ವಾಹನ ರಿಟೇಲ್ ಮಾರಾಟ ಇಳಿಕೆ

ನವದೆಹಲಿ (ಪಿಟಿಐ): ವಾಹನಗಳ ರಿಟೇಲ್ ಮಾರಾಟವು 2021ರ ಜುಲೈಗೆ ಹೋಲಿಸಿದರೆ 2022ರ ಜುಲೈನಲ್ಲಿ ಶೇ 8ರಷ್ಟು ಇಳಿಕೆ ಕಂಡಿದೆ ಎಂದು ಭಾರತೀಯ ವಾಹನ ವಿತರಕರ ಒಕ್ಕೂಟ (ಎಫ್‌ಎಡಿಎ) ಗುರುವಾರ ತಿಳಿಸಿದೆ.

ಪ್ರಯಾಣಿಕ ವಾಹನಗಳು, ದ್ವಿಚಕ್ರ ಮತ್ತು ಟ್ರ್ಯಾಕ್ಟರ್‌ಗಳ ಮಾರಾಟದಲ್ಲಿ ಇಳಿಕೆ ಆಗಿರುವುದೇ ಇದಕ್ಕೆ ಕಾರಣ ಎಂದು ಅದು ಹೇಳಿದೆ. 2021ರ ಜುಲೈನಲ್ಲಿ 15.59 ಲಕ್ಷ ವಾಹನಗಳು ಮಾರಾಟ ಆಗಿದ್ದವು. 2022ರ ಜುಲೈನಲ್ಲಿ 14.36 ಲಕ್ಷ ವಾಹನಗಳು ಮಾರಾಟ ಆಗಿವೆ ಎಂದು ಅದು ಮಾಹಿತಿ ನೀಡಿದೆ.

ತ್ರಿಚಕ್ರ ವಾಹನ ಮತ್ತು ವಾಣಿಜ್ಯ ಬಳಕೆ ವಾಹನಗಳ ಮಾರಾಟವು 2021ರ ಜುಲೈಗೆ ಹೋಲಿಸಿದರೆ 2022ರ ಜುಲೈನಲ್ಲಿ ಏರಿಕೆ ಆಗಿದೆ.

ಮಾರಾಟದಲ್ಲಿ ಇಳಿಕೆ ಕಂಡಿದ್ದರೂ ಹೊಸ ಮಾದರಿಗಳು ಅದರಲ್ಲಿಯೂ ಮುಖ್ಯವಾಗಿ ಕಾಂಪ್ಯಾಕ್ಟ್ ಎಸ್‌ಯುವಿ ಬಿಡುಗಡೆ ಆಗುತ್ತಿರುವುದು ಬೆಳವಣಿಗೆಗೆ ನೆರವಾಗುತ್ತಿದೆ. ಜೊತೆಗೆ, ಪೂರೈಕೆ ವ್ಯವಸ್ಥೆಯು ಸುಧಾರಿಸುತ್ತಿರುವುರಿಂದ ಗ್ರಾಹಕರು ವಾಹನಗಳಿಗಾಗಿ ಹೆಚ್ಚಿನ ಅವಧಿಯವರೆಗೆ ಕಾಯುವುದು ತಪ್ಪಲಿದೆ ಎಂದು ಒಕ್ಕೂಟದ ಅಧ್ಯಕ್ಷ ವಿಂಕೇಶ್ ಗುಲಾಟಿ ತಿಳಿಸಿದ್ದಾರೆ.



ಗ್ರಾಮೀಣ ಭಾಗದಲ್ಲಿ ಬೇಡಿಕೆ ಕಡಿಮೆ ಇರುವುದರಿಂದ ದ್ವಿಚಕ್ರವಾಹನ ಬೇಡಿಕೆಯು ಇಳಿಕೆ ಕಂಡಿದೆ. ಹಣದುಬ್ಬರ ಗರಿಷ್ಠ ಮಟ್ಟದಲ್ಲಿ ಇರುವುದು, ಪ್ರತಿಕೂಲ ಹವಾಮಾನ ಮತ್ತು ಬೆಲೆ ಏರಿಕೆಯಿಂದಾಗಿ ಗ್ರಾಮೀಣ ಭಾಗದ ಗ್ರಾಹಕರು ಖರೀದಿಯಿಂದ ಹಿಂದೆ ಸರಿಯುವಂತಾಗಿದೆ ಎಂದು ಅವರು ಹೇಳಿದ್ದಾರೆ.

ಕೇಂದ್ರ ಸರ್ಕಾರವು ಮೂಲಸೌಕರ್ಯಕ್ಕೆ ಉತ್ತೇಜನ ನೀಡುವ ಯೋಜನೆಗಳನ್ನು ಘೋಷಿಸಿರುವುದರಿಂದ ವಾಣಿಜ್ಯ ಬಳಕೆಯ ವಾಹನಗಳಿಗೆ ಉತ್ತಮ ಬೇಡಿಕೆ ಇದೆ. ಶಿಕ್ಷಣ ಸಂಸ್ಥೆಗಳು ಮತ್ತು ಕಚೇರಿಗಳು ಸಹಜ ಸ್ಥಿತಿಗೆ ಮರಳಿರುವುದರಿಂದ ಬಸ್‌ಗಳಿಗೆ ಬೇಡಿಕೆ ಹೆಚ್ಚಾಗುತ್ತಿದೆ ಎಂದು ಅವರು ಮಾಹಿತಿ ನೀಡಿದ್ದಾರೆ.

ತೈವಾನ್–ಚೀನಾ ಬಿಕ್ಕಟ್ಟು ತೀವ್ರಗೊಂಡಲ್ಲಿ ಚಿಪ್ ಪೂರೈಕೆ ವ್ಯವಸ್ಥೆಯಲ್ಲಿ ಹೆಚ್ಚಿನ ಸಮಸ್ಯೆ ಎದುರಾಗಬಹುದು ಎಂದು ಅವರು ಎಚ್ಚರಿಕೆ ನೀಡಿದ್ದಾರೆ.

ಸೌಭಾಗ್ಯ ಸಂತೋಷಗಳ ಹಬ್ಬ

• ನವೀನ ಗಂಗೋತ್ರಿ

ಇಂದು ವರಮಹಾಲಕ್ಷ್ಮೀ ವ್ರತ



ಆಷಾಢ ಕಳೆದು ಶ್ರಾವಣ ಬರುವ ಹೊತ್ತಿಗೆ ದಕ್ಷಿಣ ಭಾರತದ ಬಹುತೇಕ ಭೂಪ್ರದೇಶದಲ್ಲಿ ಮಳೆಗಾಲವು ಉಚ್ಛ್ರಾಯ ಹಂತದಲ್ಲಿರುತ್ತದೆ. ಕೃಷಿ ಚಟುವಟಿಕೆಗಳ ಜೊತೆಯಲ್ಲಿಯೇ ಹಬ್ಬಗಳ ಸಾಲು ಸಾಲು ಮೆರವಣಿಗೆಯೂ ಇರುವ ಮಾಸ ಶ್ರಾವಣ. ಶ್ರಾವಣ ಎನ್ನುವುದು ಕೇಳುವ ಮತ್ತು ಕೇಳಿಸುವ ಕ್ರಿಯೆಯನ್ನು ಹೇಳುವ ಒಂದು ಶಬ್ದವೂ ಹೌದು. ಅದಾದ ಕಾರಣದಿಂದಲೇ ಒಳ್ಳೆಯದನ್ನು ಕೇಳುವುದು ಮತ್ತು ಒಳ್ಳೆಯದನ್ನು ಕೇಳಿಸುವುದು ಶ್ರಾವಣಮಾಸದ ಬಹುಮುಖ್ಯ ಆಚರಣೆಯಾಗಿರುತ್ತದೆ. ಶ್ರಾವಣದ ಪೂರ್ಣಿಮೆ ಅಥವಾ ಪೂರ್ಣಿಮೆಯ ಮುಂಚಿನ ಶ್ರಾವಣ ಶುಕ್ರವಾರದಂದು ನಮ್ಮ ದಕ್ಷಿಣ ಭಾರತದ ಬಹುತೇಕ ಎಲ್ಲ ರಾಜ್ಯಗಳ ಸ್ತ್ರೀಯರು ಆಚರಿಸುವ ವರಮಹಾಲಕ್ಷ್ಮೀ ವ್ರತವೂ ಹಾಗೊಂದು ಕೇಳುವ, ಕೇಳಿಸುವ ಆಚರಣೆ. ಈ ವರ್ಷ ಶುಕ್ರವಾರವೇ ಪೂರ್ಣಿಮೆ ಬಂದಿರುವುದು ವಿಶೇಷ.

ಹಬ್ಬಗಳಾಗಿ ಆಚರಣೆಯಾಗುವ ವ್ರತಗಳಲ್ಲಿ ಬಹುತೇಕ 'ಶ್ರವಣ' (ಕೇಳುವುದು) ಮತ್ತು 'ಶ್ರಾವಣ' (ಕೇಳಿಸುವುದು) ಮುಖ್ಯವಾಗಿರುತ್ತದೆ. ಅಂದರೆ ವ್ರತಕ್ಕೊಂದು ಕಥೆಯಿರುತ್ತದೆ. ಕಥೆ ಎಂದಾದಮೇಲೆ ಅಲ್ಲಿ ಹೇಳುವವರು ಮತ್ತು ಕೇಳುವವರು ಇರಬೇಕಷ್ಟೆ. ನಮ್ಮ ಎಲ್ಲ ವ್ರತಕಥೆಗಳೂ ಹೇಳುವ ಮತ್ತು ಕೇಳಿಸಿಕೊಳ್ಳುವ ಪರಂಪರೆಯಲ್ಲಿ ಬಂದವಾಗಿವೆ. ನಮ್ಮ ಎಣಿಕೆಗೆ ನಿಲುಕದ ಕಾಲದಿಂದಲೂ ಆ ಕಥೆಗಳನ್ನು ಹೇಳಿಕೊಂಡು ಕೇಳಿಕೊಂಡು ಬರಲಾಗಿದೆ. ಹಾಗಾಗಿಯೇ ಹೇಳುವವರು ಮತ್ತು ಕೇಳುವವರು ಆ ಕಥೆಯ ಭಾಗವಾಗಿಯೇ ಇರುತ್ತಾರೆ. ವರಮಹಾಲಕ್ಷ್ಮೀ ಕಥೆಯೂ ಹಾಗೊಂದು ಕಥಾಕಥನಪರಂಪರೆಯ ಅನನ್ಯ ಭಾಗವಾಗಿರುವ ಕಥೆ; ಮತ್ತು ಆ ಕಥೆಯನ್ನು ವಿಧಿವತ್ತಾಗಿ ಕೇಳುವುದಕ್ಕಾಗಿಯೇ ಇರುವುದು ವರಮಹಾಲಕ್ಷ್ಮೀ ವ್ರತ.

ನೈಮಿಷಾರಣ್ಯದಲ್ಲಿ ಋಷಿಮುನಿಗಳೆಲ್ಲ ಕಥೆ ಹೇಳೆಂದು ಕೇಳಿಕೊಂಡಾಗ ಸೂತಮುನಿಗಳು ಹೇಳಿದ ಒಂದು ಕಥೆ ವರಮಹಾಲಕ್ಷ್ಮೀ ಕಥೆ. ಸೂತಮುನಿಗಳು ಹೇಳುವಂತೆ ಈ ಕಥೆಯನ್ನು ಪರಮೇಶ್ವರನು ಪಾರ್ವತೀ ದೇವಿಗೆ ಅರುಹುತ್ತಾನೆ. 'ಲೋಕದಲ್ಲಿ ಎಲ್ಲ ಸುಖಗಳನ್ನು ಕೊಡಮಾಡಿ, ಕಷ್ಟವನ್ನು ಪರಿಹರಿಸಿ, ಸೌಭಾಗ್ಯ–ಸಂತೋಷಗಳನ್ನು ಉಂಟುಮಾಡುವ ವ್ರತ ಯಾವುದು?' ಎನ್ನುವ ಮಡದಿಯ ಪ್ರಶ್ನೆಗೆ ಪರಮೇಶ್ವರನು ಹೇಳುವ ಕಥೆ ಮಹಾಲಕ್ಷ್ಮಿಯದ್ದು! ಶೈವ–ವೈಷ್ಣವ ಧಾರೆಗಳ ಏಕಸೂತ್ರತೆಗೂ ಇದು ಉದಾಹರಣೆಯಾಗಬಲ್ಲದು.

ಲಕ್ಷ್ಮೀ ಎನ್ನುವಾಕೆ ಭಾರತೀಯರ ಬದುಕಿನ ಸಮೃದ್ಧಿಯ ದೇವತೆ. ಇಲ್ಲಿ ಸಮೃದ್ಧಿ ಎನ್ನುವುದು ಹಣದ ಸುತ್ತಲೂ ಹೆಣೆದುಕೊಂಡಿರುವ ನಮ್ಮ ಕಾಲದ ಕಲ್ಪನೆಗಿಂತ ವಿಸ್ತಾರವಾದದ್ದು. ಬದುಕಿನಲ್ಲಿ ಸೌಖ್ಯವೆನ್ನುವುದು ಹಣಮಾತ್ರದಿಂದ ಒದಗುವಂಥದಲ್ಲ. ಅದು ಲೌಕಿಕ ಬದುಕಿನಲ್ಲಿ ನಮಗಿರುವ ಕರ್ತವ್ಯ ಮತ್ತು ಬಾಧ್ಯತೆಗಳನ್ನು ನೆರವೇರಿಸುವುದಕ್ಕೆ ಅನುಕೂಲವಾದ ಸ್ಥಿತಿಯನ್ನೂ ಒಳಗೊಂಡಿರುತ್ತದೆ. ಲಕ್ಷ್ಮೀ ಆ ಬಗೆಯ ಸಮೃದ್ಧಿಯ ದೇವತೆ.

ವ್ರತದ ಕಥೆಯನ್ನೂ, ವ್ರತವನ್ನು ಆಚರಿಸಬೇಕಾದ ವಿಧಾನವನ್ನೂ ಪಾರ್ವತೀದೇವಿಗೆ ಶ್ರೀಪರಮೇಶ್ವರನು ಅರುಹುತ್ತಾನೆ. ಅದನ್ನೇ ಸೂತಮಹರ್ಷಿಗಳು ಉಳಿದ ಋಷಿಗಳಿಗೆ ಅರುಹುತ್ತಾರೆ. ಅದನ್ನೇ ನಾವು ಸಾಮಾನ್ಯ ಮಾನವರು ಇಂದಿಗೂ ಪ್ರತಿವರ್ಷವೂ ಕೇಳಿಸಿಕೊಳ್ಳುತ್ತ, ಕೇಳಿಸುತ್ತ ಪರಂಪರೆಯನ್ನು ಜೀವಂತವಾಗಿ ಇಟ್ಟಿದ್ದೇವೆ. ಒಂದು ಧಾರ್ಮಿಕ ಆಚರಣೆಯಾಗುತ್ತಲೇ ಕಥಾಕಥನ ಪರಂಪರೆಗೆ ವರಮಹಾಲಕ್ಷ್ಮೀ ವ್ರತವೂ ಸೇರಿದಂತೆ ಉಳಿದ ವ್ರತಗಳು ಕೊಡಮಾಡಿರುವ ಕಾಣಿಕೆ ಗಮನೀಯವಾದ್ದು.

ಈ ಬಾರಿಯ ವರಮಹಾಲಕ್ಷ್ಮೀ ವ್ರತವು ನಾಡಿಗೂ ಕಾಡಿಗೂ ಮನುಷ್ಯನ ಬದುಕಿಗೂ ಸಮೃದ್ಧಿಯನ್ನು ತರಲಿ. ❖

ಟ್ರೆಂಡ್ಸ್‌ನಿಂದ ವಿಶಿಷ್ಟ ಸ್ಪರ್ಧೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಫ್ಯಾಷನ್ ರಿಟೇಲ್ ಬ್ರ್ಯಾಂಡ್ ಆಗಿರುವ ಟ್ರೆಂಡ್ಸ್, ವರಮಹಾಲಕ್ಷ್ಮಿ ಹಬ್ಬದ ಪ್ರಯುಕ್ತ ಗ್ರಾಹಕರಿಗೆ ವಿಶಿಷ್ಟ ಸ್ಪರ್ಧೆ ಆಯೋಜಿಸಿದೆ.

ಅಲಂಕಾರ ಮಾಡಿದ ವಿಗ್ರಹ ಅಥವಾ ಲಕ್ಷ್ಮಿ ದೇವಿಯ ಪೂಜೆಯ ಸಂದರ್ಭದಲ್ಲಿ ತೆಗೆದುಕೊಂಡ ಸೆಲ್ಫಿಯನ್ನು ತಮ್ಮ ಫೇಸ್‌ಬುಕ್ ಪುಟದಲ್ಲಿ #Trends Varamahalakshmi ಎಂಬ ಹ್ಯಾಷ್‌ಟ್ಯಾಗ್ ಬಳಸಿ ಹಂಚಿಕೊಳ್ಳುವಂತೆ ಗೃಹಿಣಿಯರಿಗೆ ಆಹ್ವಾನ ನೀಡಿದೆ. ಉತ್ತಮವಾಗಿ ಅಲಂಕಾರ ಮಾಡಿರುವ ದೇವಿ/ಲಕ್ಷ್ಮಿ ದೇವತೆ ಎಂದು ಗುರುತಿಸಲಾಗಿರುವ ಚಿತ್ರಕ್ಕೆ ಮೊದಲ ಬಹುಮಾನವಾಗಿ ₹ 1,500 ರೂಪಾಯಿ ಮೌಲ್ಯದ ಸೀರೆ ನೀಡಲಾಗುವುದು. ಅಲ್ಲದೆ, ಪ್ರತಿ ಸ್ಪರ್ಧಿಗೂ ಟ್ರೆಂಡ್ಸ್ ವಿನಾಯಿತಿ ಕೂಪನ್ ಸಿಗಲಿದ್ದು, ಅದನ್ನು ಸಮೀಪದ ಟ್ರೆಂಡ್ಸ್ ಮಳಿಗೆಯಿಂದ ಪಡೆದುಕೊಳ್ಳಬಹುದು. ಸ್ಪರ್ಧೆಯು ಆಗಸ್ಟ್ 17ರಂದು ಅಂತ್ಯಗೊಳ್ಳಲಿದೆ ಎಂದು ಪ್ರಕಟಣೆಯಲ್ಲಿ ತಿಳಿಸಿದೆ.

ಹೆಚ್ಚಿನ ವಿವರಗಳಿಗೆ ಸಮೀಪದ ಟ್ರೆಂಡ್ಸ್ ಮಳಿಗೆಯನ್ನು ಸಂಪರ್ಕಿಸುವಂತೆ ಹೇಳಿದೆ.

ಕರೆನ್ಸಿ ಚಲಾವಣೆ: ₹50,800 ಕೋಟಿ ಏರಿಕೆ

ಮುಂಬೈ (ರಾಯಿಟರ್ಸ್): ದೇಶದಲ್ಲಿ ಕರೆನ್ಸಿಗಳ ಚಲಾವಣೆಯಲ್ಲಿ ಆಗಿರುವ ಹೆಚ್ಚಳವು ಹಿಂದಿನ ಹಣಕಾಸು ವರ್ಷದ ಏಪ್ರಿಲ್–ಜುಲೈ ಅವಧಿಗೆ ಹೋಲಿಸಿದರೆ ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜುಲೈ ಅವಧಿಯಲ್ಲಿ ಇಳಿಕೆ ಆಗಿದೆ.

ಭಾರತೀಯ ರಿಸರ್ವ್ ಬ್ಯಾಂಕ್‌ನ (ಆರ್‌ಬಿಐ) ಮಾಹಿತಿಯ ಪ್ರಕಾರ, ಪ್ರಸಕ್ತ ಹಣಕಾಸು ವರ್ಷದ ಏಪ್ರಿಲ್–ಜುಲೈ ಅವಧಿಯಲ್ಲಿ ಕರೆನ್ಸಿಗಳ ಚಲಾವಣೆಯು ₹ 50,800 ಕೋಟಿಗಳಷ್ಟು ಹೆಚ್ಚಾಗಿದೆ. ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ₹ 92,800 ಕೋಟಿಗಳಷ್ಟು ಏರಿಕೆ ಕಂಡಿತ್ತು. 2020–21ರ ಏಪ್ರಿಲ್–ಜುಲೈ ಅವಧಿಯಲ್ಲಿ ₹ 2.25 ಲಕ್ಷ ಕೋಟಿಗಳಷ್ಟು ಹೆಚ್ಚಾಗಿತ್ತು.



ಆರ್ಥಿಕ ಚಟುವಟಿಕೆಗಳು ಕೋವಿಡ್‌ಗೂ ಮುಂಚಿನ ಮಟ್ಟಕ್ಕೆ ಮರಳಿವೆ. ಹೀಗಾಗಿ ಜನರು ಆತಂಕಕ್ಕೆ ಒಳಗಾಗಿ ಬ್ಯಾಂಕ್‌ಗಳಿಂದ ಹೆಚ್ಚಿನ ಪ್ರಮಾಣದಲ್ಲಿ ನಗದು ಹಿಂದಕ್ಕೆ ಪಡೆಯುವ ಅಗತ್ಯ ಇಲ್ಲದಂತಾಗಿದೆ. ಈ ಕಾರಣದಿಂದಾಗಿ ಚಲಾವಣೆಯಲ್ಲಿ ಇರುವ ನಗದು ಪ್ರಮಾಣದಲ್ಲಿ ಇಳಿಕೆ ಕಂಡುಬಂದಿದೆ ಎಂದು ಮಾರುಕಟ್ಟೆ ತಜ್ಞರೊಬ್ಬರು ಹೇಳಿದ್ದಾರೆ.

2020–21ರಲ್ಲಿ ಕರೆನ್ಸಿಗಳ ಚಲಾವಣೆಯು ₹ 4 ಲಕ್ಷ ಕೋಟಿಗೂ ಹೆಚ್ಚಿನ ಏರಿಕೆ ಕಂಡಿತ್ತು. 2021–22ನೇ ಹಣಕಾಸು ವರ್ಷದಲ್ಲಿ ಹೆಚ್ಚಳವು ₹ 2.80 ಲಕ್ಷ ಕೋಟಿ ತಗ್ಗಿತ್ತು. ಮಾರುಕಟ್ಟೆಯ ಪಾಲುದಾರರ ಪ್ರಕಾರ, ಕರೆನ್ಸಿಗಳ ಹೆಚ್ಚಳವು ಪ್ರಸಕ್ತ ಹಣಕಾಸು ವರ್ಷದಲ್ಲಿ ಇನ್ನಷ್ಟು ಇಳಿಕೆ ಕಾಣುವ ನಿರೀಕ್ಷೆ ಇದೆ. ಪ್ರಸಕ್ತ ಹಣಕಾಸು ವರ್ಷದ ಅಂತ್ಯದವರೆಗೆ ದೇಶದಲ್ಲಿ ಪ್ರಮುಖ ಯಾವುದೇ ಚುನಾವಣೆಗಳು ಇಲ್ಲ. ಹೀಗಾಗಿ, ಪೂರ್ತಿ ವರ್ಷಕ್ಕೆ ಕರೆನ್ಸಿಗಳ ಹೆಚ್ಚಳವು ₹ 2 ಲಕ್ಷ ಕೋಟಿಗಳಷ್ಟು ಆಗಬಹುದು ಎಂದು ಹೇಳಿದ್ದಾರೆ.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	400-420
ನಡುಗೋಲು	450-480
ರಾಶಿ	500-600
ರಾಶಿ ಉತ್ತಮ	550-600
ಜರಡಿ	600-650
ಹೆರಕಿದ್ದು	1000-1100
ಹಸಿರು ಸಾಧಾರಣ	600-700
ಹಸಿರು ಉತ್ತಮ	900-1000
ಹಸಿರು ಅತಿ ಉತ್ತಮ	1150-1250
ಕಾಳು ಮೆಣಸು	485
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-45000
ಹಳತು	46000-56000
ಕಾರ್ಕಳ	
ಹೊಸತು	40000-45000
ಕುಮಟ	
ಚಿಪ್ಪು	25099-31869
ಕೋಕ	17099-31399
ಹೊಸಚಾಲಿ	35269-40019
ಪುತ್ತೂರು	
ಹೊಸತು	32000-45000
ಸಾಗರ	
ಬಿಳಿಗೋಟು	25429-32099
ಚಾಲಿ	32560-38229
ಕೋಕ	21010-36299
ಕೆಂಪುಗೋಟು	25119-38699
ರಾಶಿ	42899-50899
ಸಿಪ್ಪೆಗೋಟು	12199-22299
ಸಿದ್ದಾಪುರ	
ಬಿಳಿಗೋಟು	28000-33519
ಚಾಲಿ	37889-40100
ಕೋಕ	27000-33019
ಕೆಂಪುಗೋಟು	32899-33611
ರಾಶಿ	48899-49909
ತಟ್ಟಿಬೆಟ್ಟೆ	44099-46899
ಶಿರಸಿ	
ಬೆಟ್ಟೆ	29199-47899
ಬಿಳಿಗೋಟು	23989-33886
ಚಾಲಿ	34799-40922
ರಾಶಿ	46299-50889

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

	ಮೂಡಿಗೆರೆ	ಹಾಸನ		
	ಮುದ್ರಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	16000	15500	15850	209.90 ಸೆಂಟ್ಸ್
ಎಸಿ	8820	8400	8800	
ಆರ್‌ಪಿ	9500	9500	9700	ಲಂಡನ್
ಆರ್‌ಸಿ	4700	4500	4550	2027 ಡಾಲರ್ಸ್

ಮುಂಬೈ ಧಾರಣೆ

ಶೇಂಗಾ 4-8-2022

ಜಾವಾ 70/80(ಹೊಸ)	11250-11300
ಜಾವಾ 80/90(ಹೊಸ)	10650-10700
ದಪ್ಪ ಮಧ್ಯಪ್ರದೇಶ(ಹೊಸ)	9950-10000
ದಪ್ಪ ಗುಜರಾತ್(ಹೊಸ)	10650-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1630)
ಒಂದು ವಾರದ ಡೆಲಿವರಿ	1625 (1625)
ಸೋಯಾ ಕಚ್ಚಾ	1175 (1195)
ಪಾಮ್ ವಾರದ ಡೆಲಿವರಿ	1213 (1238)
ಸೂರ್ಯಕಾಂತಿ ಎಣ್ಣೆ ಕಚ್ಚಾ	1490 (1490)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)
ಅಪರಂಜಿ ಚಿನ್ನ 10ಗ್ರಾಂ 51,700 (51,350)
ಬೆಳ್ಳಿ ಕೆ.ಜಿ 57,900 (57,250)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಕನಿಷ್ಠ ವೇತನ ಶೇ 10ರಷ್ಟು ಹೆಚ್ಚಳ

ಒಂದನೇ ಪುಟದಿಂದ

ತುಟ್ಟಿಭತ್ಯೆಯನ್ನು ವರ್ಷಕ್ಕೊಮ್ಮೆ ಲೆಕ್ಕಾಚಾರ ಮಾಡಲಾಗುತ್ತದೆ. ಆಯಾ ವರ್ಷ ಹೆಚ್ಚಾಗುವ ಅಥವಾ ಕಡಿಮೆಯಾಗುವ ಗ್ರಾಹಕ ಬೆಲೆ ಸೂಚ್ಯಂಕದ ಸರಾಸರಿಯನ್ನು ಗಮನದಲ್ಲಿಟ್ಟುಕೊಂಡು ವಾರ್ಷಿಕ ಆಧಾರದ ಮೇಲೆ ತುಟ್ಟಿಭತ್ಯೆಯನ್ನು ಉದ್ಯೋಗದಾತರು ಪರಿಷ್ಕರಿಸಬೇಕು. ಸದ್ಯದ ಗ್ರಾಹಕ ಬೆಲೆ ಸೂಚ್ಯಂಕದ ಪ್ರಕಾರ, ₹ 17,555 ಕನಿಷ್ಠ ವೇತನಕ್ಕೆ ₹ 900 ತುಟ್ಟಿಭತ್ಯೆ, ಪಿಎಫ್ ₹ 2,100, ಇಎಸ್‌ಐ ₹ 550 ಸೇರಿ ₹ 22,505 ಮಾಸಿಕ ವೇತನ ಆಗುತ್ತದೆ.

2016ಕ್ಕೆ ಹೋಲಿಸಿದರೆ ಪರಿಷ್ಕೃತ ಕನಿಷ್ಠ ವೇತನ ಸರಾಸರಿ ಶೇ 10ರಷ್ಟು ಹೆಚ್ಚಳವಾಗಿದೆ. ಪರಿಷ್ಕರಣೆಯ ಪ್ರಮಾಣವು ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ ಮತ್ತು ಇತರ ಮಹಾನಗರಪಾಲಿಕೆಗಳ ವ್ಯಾಪ್ತಿಯಲ್ಲಿ ಹೆಚ್ಚು, ಇತರ ಸಣ್ಣ ಪಟ್ಟಣಗಳಲ್ಲಿ (ನಗರಸಭೆ, ಪಟ್ಟಣ ಪಂಚಾಯಿತಿ, ಗ್ರಾಮ ಪಂಚಾಯಿತಿ ವ್ಯಾಪ್ತಿ) ಕಡಿಮೆ ಇರುತ್ತದೆ.

ಉದ್ಯೋಗದಾತರು ಒಂದೇ ರೀತಿಯ ಹಾಗೂ ಸಮ ಪ್ರಮಾಣದ ಕೆಲಸ ನಿರ್ವಹಿಸಿದ ಮಹಿಳೆಯರು, ಪುರುಷರು, ತೃತೀಯ ಲಿಂಗಿಗಳು ಮತ್ತ ಅಂಗವಿಕಲರಿಗೆ ಎಲ್ಲರಿಗೂ ಸಮಾನ ವೇತನ ನೀಡಬೇಕು. ಅಧಿಸೂಚನೆಯಲ್ಲಿ ನಮೂದಿಸದೆ ಇರುವ ವರ್ಗಗಳ ಕಾರ್ಮಿಕರಿಗೆ ಅದೇ ಸ್ವರೂಪದ ಕೆಲಸ ನಿರ್ವಹಿಸುತ್ತಿರುವ ಇತರ ವರ್ಗದ ಕಾರ್ಮಿಕರಿಗೆ ಪಾವತಿಸುವ ವೇತನವನ್ನೇ ನೀಡಬೇಕು ಎಂದೂ ಸರ್ಕಾರ ಸ್ಪಷ್ಟಪಡಿಸಿದೆ.

'ವಿವಿಧ ಇಲಾಖೆಗಳಲ್ಲಿ ಕಂಪ್ಯೂಟರ್ ಆಪರೇಟರ್, ಡಾಟಾ ಎಂಟ್ರಿ ಆಪರೇಟರ್‌ಗಳು, ಚಾಲಕ ಹುದ್ದೆಗಳಿಗೆ ಕಾಯಂ ನೇಮಕಾತಿಗೆ ಮುಂದಾಗ ಸರ್ಕಾರ, ಹೊರಗುತ್ತಿಗೆಯಲ್ಲಿ ನೇಮಿಸಿಕೊಳ್ಳಲು ಅವಕಾಶ ಕಲ್ಪಿಸಿದೆ. ಆದರೆ, ಏಜೆನ್ಸಿಗಳ ಮೂಲಕ ನೇಮಕಗೊಳ್ಳುವ ಈ ನೌಕರರಿಗೆ ಕನಿಷ್ಠ ವೇತನವನ್ನೂ ಪಾವತಿಸದೆ ಶೋಷಣೆಗೆ ಒಳಪಡಿಸುವ ಆರೋಪಗಳಿವೆ. ಈ ನೌಕರರಿಗೂ ಪರಿಷ್ಕೃತ ಕನಿಷ್ಠ ವೇತನ ಅನ್ವಯವಾಗಲಿದೆ' ಎಂದು ಕಾರ್ಮಿಕ ಇಲಾಖೆ ಮೂಲಗಳು ತಿಳಿಸಿವೆ.

ಕನಿಷ್ಠ ವೇತನ ಯಾವ ಕೆಲಸಕ್ಕೆ ಎಷ್ಟು?

ಕೆಲಸ	ಬಿಬಿಎಂಪಿ ಮತ್ತು ಎಲ್ಲ ಮಹಾನಗರ ಪಾಲಿಕೆ	ಎಲ್ಲ ನಗರಸಭೆಗಳು (ಗ್ರೇಡ್–1)	ಎಲ್ಲ ನಗರಸಭೆಗಳು (ಗ್ರೇಡ್–2), ಪುರಸಭೆಗಳು	ಎಲ್ಲ ಪ.ಪಂ. ಮತ್ತು ಗ್ರಾ.ಪಂ
ಕೆಮಿಸ್ಟ್, ಸೂಪರ್‌ವೈಸರ್ (ಸ್ಯಾನಿಟರಿ)	17,955.52	17,471.52	16,999.62	16,382.52
ಗುಮಾಸ್ತ, ಕ್ಲರ್ಕ್, ಕಂಪ್ಯೂಟರ್ ಆಪರೇಟರ್, ಡಾಟಾ ಎಂಟ್ರಿ ಆಪರೇಟರ್, ಕರ ವಸೂಲಿಗಾರರು, ಎಲೆಕ್ಟ್ರೀಷಿಯನ್, ಲ್ಯಾಬ್ ಟೆಕ್ನಿಷಿಯನ್, ಸಹಾಯಕ ಗ್ರಂಥಪಾಲಕ	16,564.01	16,116.32	15,729.12	15,196.72
ಚಾಲಕರು ಕಂ ಆಪರೇಟರ್ಸ್– ಯುಜಿಡಿ, ಜೆಸಿಪಿ, ಕಾಂಪಾಕ್ಟ್ ಮೆಷಿನ್, ಸ್ವೀಪಿಂಗ್ ಮೆಷಿನ್	15,777.52	15,354.02	14,991.02	14,446.52
ಚಾಲಕರು–ಲಾರಿ, ಬಸ್ಸು, ಟ್ರ್ಯಾಕ್ಟರ್, ಜೀಪು, ಕಾರು	15,112.02	14,749.02	14,386.02	13,902.02
ಕ್ಲೀನರ್ಸ್	13,974.62	13,660.02	13,345.42	12,873.52
ಪಂಪ್ ಆಪರೇಟರ್, ಮೆಕ್ಯಾನಿಕ್, ಬಾಲವಾಡಿ ಕಾರ್ಯಕರ್ತರು, ಪ್ಲಂಬರ್, ತೋಟಗಾರಿಕೆ ಸಹಾಯಕ, ಪಂಪ್ ರಿಪೇರಿ ಮಾಡುವವರು, ವಾಟರ್ ಮ್ಯಾನ್ (ನೀರುಗಂಟಿ), ವಾಲ್ವ ಮ್ಯಾನ್ (ನೀರು ಸರಬರಾಜು)	14,657.72	14,325.52	13,993.32	13,509.32
ಜವಾನರು, ಅಟೆಂಡರ್, ಗಾರ್ಡನರ್, ದಫೇದಾರ್, ಸ್ಮಶಾನ ಕಾವಲುಗಾರ, ಕಚೇರಿ ಮತ್ತು ಆವರಣ ಸ್ವಚ್ಛತೆಗಾರ, ಕುಶಲರಲ್ಲದ ಇತರ ವರ್ಗ	13,974.62	13,660.02	13,345.42	12,873.52
ರಸ್ತೆ ಗುಡಿಸುವುದು, ಯಂತ್ರಗಳ ಸಹಾಯದಿಂದ ಶುಚಿತ್ವ, ಒಳಚರಂಡಿ, ಸ್ನಾನಗೃಹ, ಶೌಚಾಲಯ ಸ್ವಚ್ಛಗೊಳಿಸುವುದು, ಕಸ ಮತ್ತು ತ್ಯಾಜ್ಯ ವಿಲೇವಾರಿ, ಲೋಡಿಂಗ್, ಅನ್‌ಲೋಡಿಂಗ್ ಕೆಲಸಗಾರರು	17,306.52	16,877.52	16,448.52	16,019.52

ಸಂಕ್ಷಿಪ್ತ ಸುದ್ದಿ

ಜೊಮಾಟೊದಲ್ಲಿನ ಷೇರು ಮಾರಿದ ಟೈಗರ್ ಗ್ಲೋಬಲ್

ನವದೆಹಲಿ (ಪಿಟಿಐ): ಟೈಗರ್ ಗ್ಲೋಬಲ್ ಕಂಪನಿಯು ಜೊಮಾಟೊದಲ್ಲಿ ಹೊಂದಿದ್ದ ಷೇರುಗಳಲ್ಲಿ ಶೇ 2.34ರಷ್ಟನ್ನು ಮುಕ್ತ ಮಾರುಕಟ್ಟೆಯಲ್ಲಿ ಮಾರಾಟ ಮಾಡಿದೆ.

18.45 ಕೋಟಿ ಷೇರುಗಳನ್ನು ಮಾರಾಟ ಮಾಡುವ ಮೂಲಕ ಟೈಗರ್ ಗ್ಲೋಬಲ್ ಕಂಪನಿಯು ಜೊಮಾಟೊದಲ್ಲಿನ ತನ್ನ ಷೇರುಪಾಲನ್ನು ಶೇ 2.77ಕ್ಕೆ ತಗ್ಗಿಸಿಕೊಂಡಿದೆ ಎಂದು ಜೊಮಾಟೊ ಗುರುವಾರ ತಿಳಿಸಿದೆ.

ಜುಲೈ 25 ರಿಂದ ಆಗಸ್ಟ್ 2ರ ನಡುವಿನ ಅವಧಿಯಲ್ಲಿ ಷೇರುಗಳನ್ನು ಮಾರಾಟ ಮಾಡಲಾಗಿದೆ ಎಂದು ಜೊಮಾಟೊ ಷೇರುಪೇಟೆಗೆ ಮಾಹಿತಿ ನೀಡಿದೆ.

ರೂಪಾಯಿ ಮೌಲ್ಯ 25 ಪೈಸೆ ಇಳಿಕೆ

ಮುಂಬೈ (ಪಿಟಿಐ): ಕರೆನ್ಸಿ ವಿನಿಮಯ ಮಾರುಕಟ್ಟೆಯಲ್ಲಿ ಅಮೆರಿಕದ ಡಾಲರ್ ಎದುರು ರೂಪಾಯಿ ಮೌಲ್ಯವು ಸತತ ಎರಡನೇ ದಿನವೂ ಇಳಿಕೆ ಕಂಡಿತು. ಗುರುವಾರ 25 ಪೈಸೆ ಇಳಿಕೆ ಕಂಡು ಒಂದು ಡಾಲರ್‌ಗೆ ₹ 79.40ರಂತೆ ವಿನಿಮಯಗೊಂಡಿತು.

ದೇಶದ ಆರ್ಥಿಕ ಬೆಳವಣಿಗೆಯನ್ನು ಸೂಚಿಸುವ ಅಂಶಗಳು ನಿರಾಸೆ ಮೂಡಿಸುತ್ತಿರುವುದು ಹಾಗೂ ಅಮೆರಿಕ–ಚೀನಾ ಬಿಕ್ಕಟ್ಟು ರೂಪಾಯಿ ಮೌಲ್ಯ ಇಳಿಕೆಗೆ ಕಾರಣಗಳಾಗಿವೆ.

ಭಾರತೀಯ ರಿಸರ್ವ್ ಬ್ಯಾಂಕ್ (ಆರ್‌ಬಿಐ) ಶುಕ್ರವಾರ ಬಡ್ಡಿದರದ ಕುರಿತು ನಿರ್ಧಾರ ಪ್ರಕಟಿಸಲಿದೆ. ಹೀಗಾಗಿ ವರ್ತಕರು ವಹಿವಾಟಿನಿಂದ ಹಿಂದೆ ಸರಿದರು. ಇದು ಸಹ ರೂಪಾಯಿ ಇಳಿಕೆಗೆ ಕಾರಣವಾಯಿತು ಎಂದು ವರ್ತಕರು ಹೇಳಿದ್ದಾರೆ.

ಸೆನ್ಸೆಕ್ಸ್ ಇಳಿಕೆ: ದಿನದ ವಹಿವಾಟಿನಲ್ಲಿ ಬಿಎಸ್‌ಇ ಸೆನ್ಸೆಕ್ಸ್ 52 ಅಂಶ ಇಳಿಕೆ ಕಂಡು 58,298 ಅಂಶಗಳಿಗೆ ತಲುಪಿತು. ಎನ್‌ಎಸ್‌ಇ ನಿಫ್ಟಿ 6 ಅಂಶ ಇಳಿಕೆಯಾಗಿ 17,382 ಅಂಶಗಳಿಗೆ ಇಳಿಕೆ ಕಂಡಿತು.

ಗೇಲ್ ಲಾಭ ಶೇ 51ರಷ್ಟು ಹೆಚ್ಚಳ

ನವದೆಹಲಿ (ಪಿಟಿಐ): ಗೇಲ್ ಇಂಡಿಯಾ ಲಿಮಿಟೆಡ್ ಕಂಪನಿಯ ನಿವ್ವಳ ಲಾಭವು ಪ್ರಸಕ್ತ ಹಣಕಾಸು ವರ್ಷದ ಜೂನ್ ತ್ರೈಮಾಸಿಕದಲ್ಲಿ ಶೇ 51ರಷ್ಟು ಹೆಚ್ಚಾಗಿದ್ದು, ₹ 3,250 ಕೋಟಿಗೆ ತಲುಪಿದೆ.

ಹಿಂದಿನ ಹಣಕಾಸು ವರ್ಷದ ಇದೇ ಅವಧಿಯಲ್ಲಿ ನಿವ್ವಳ ಲಾಭ ₹ 2,157 ಕೋಟಿ ಇತ್ತು ಎಂದು ಕಂಪನಿಯು ಷೇರುಪೇಟೆಗೆ ಮಾಹಿತಿ ನೀಡಿದೆ.

ಜನವರಿ–ಮಾರ್ಚ್ ತ್ರೈಮಾಸಿಕದಲ್ಲಿ ₹ 3,473 ಕೋಟಿ ಲಾಭ ಗಳಿಸಿತ್ತು. ಇದಕ್ಕೆ ಹೋಲಿಸಿದರೆ ಏಪ್ರಿಲ್–ಜೂನ್ ತ್ರೈಮಾಸಿಕದ ಲಾಭ ಇಳಿಕೆ ಆಗಿದೆ.

ಜೂನ್ ತ್ರೈಮಾಸಿಕದಲ್ಲಿ ವಹಿವಾಟು ಮೊತ್ತವು ₹ 17,702 ಕೋಟಿಯಿಂದ ₹ 38,033 ಕೋಟಿಗೆ ಎರಡು ಪಟ್ಟು ಏರಿಕೆ ಅಗಿದೆ ಎಂದು ಕಂಪನಿಯು ತಿಳಿಸಿದೆ. ನೈಸರ್ಗಿಕ ಅನಿಲ ಮಾರಾಟದಿಂದ ಉತ್ತಮ ಗಳಿಕೆ ಬಂದಿರುವುದೇ ಲಾಭ ಹೆಚ್ಚಾಗಲು ಕಾರಣ ಎಂದು ಕಂಪನಿ ಹೇಳಿದೆ.

ಚಿನ್ನದ ದರ ಏರಿಕೆ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಗುರುವಾರ 10 ಗ್ರಾಂ ಚಿನ್ನದ ದರ ₹487ರಷ್ಟು ಹೆಚ್ಚಾಗಿ ₹ 52,566ರಂತೆ ಮಾರಾಟ ಆಗಿದೆ. ಬೆಳ್ಳಿ ಧಾರಣೆ ಕೆ.ಜಿಗೆ ₹426ರಷ್ಟು ಏರಿಕೆ ಕಂಡು ₹ 58,806ಕ್ಕೆ ತಲುಪಿತು.

ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಮತ್ತು ರೂಪಾಯಿ ಮೌಲ್ಯ ಇಳಿಕೆಯ ಕಾರಣಗಳಿಂದಾಗಿ ದೇಶದಲ್ಲಿ ಚಿನ್ನದ ದರ ಹೆಚ್ಚಾಗಿದೆ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

'ಭಾರತದ ತಾಳೆ ಎಣ್ಣೆ ಬೇಡಿಕೆ ಈಡೇರಿಸಲು ಸಿದ್ಧ'

ಕ್ವಾಲಾಲಂಪುರ (ರಾಯಿಟರ್ಸ್): ಭಾರತದ ತಾಳೆ ಎಣ್ಣೆ ಬೇಡಿಕೆಯನ್ನು ಈಡೇರಿಸಲು ಸಿದ್ಧವಿರುವುದಾಗಿ ಮಲೇಷ್ಯಾ ಗುರುವಾರ ಹೇಳಿದೆ.

ಭಾರತದಲ್ಲಿ ಮುಂದಿನ ಆರು ತಿಂಗಳುಗಳಲ್ಲಿ ತಾಳೆ ಎಣ್ಣೆ ಬೇಡಿಕೆಯು ಹೆಚ್ಚಾಗಲಿದ್ದು, ಪ್ರತಿ ತಿಂಗಳಿಗೆ 8 ಲಕ್ಷ ಟನ್‌ಗಳಷ್ಟು ತಾಳೆ ಎಣ್ಣೆ ಬೇಕಾಗುವ ನಿರೀಕ್ಷೆ ಇದೆ ಎಂದು ಭಾರತದಲ್ಲಿ ಅಡುಗೆ ಎಣ್ಣೆ ತಯಾರಕರ ಒಕ್ಕೂಟದ ಮಾಹಿತಿಯನ್ನು ಉಲ್ಲೇಖಿಸಿ ಮಲೇಷ್ಯಾದ ಪ್ಲಾಂಟೇಷನ್ ಇಂಡಸ್ಟ್ರೀಸ್ ಆ್ಯಂಡ್ ಕಮಾಡಿಟೀಸ್‌ನ ಸಚಿವ ಜುರೈದ್ ಕಮರುದ್ದೀನ್ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

7 ಕೋಟಿ ದಾಟಿದ ಸಕ್ರಿಯ ಡಿಮ್ಯಾಟ್ ಖಾತೆಗಳ ಸಂಖ್ಯೆ

ನವದೆಹಲಿ (ಪಿಟಿಐ): ಸಕ್ರಿಯವಾಗಿರುವ ಡಿಮ್ಯಾಟ್ ಖಾತೆಗಳ ಸಂಖ್ಯೆಯು 7 ಕೋಟಿಯನ್ನು ದಾಟಿದೆ ಎಂದು ಸೆಂಟ್ರಲ್ ಡೆಪಾಸಿಟರಿ ಸರ್ವೀಸಸ್ ಲಿಮಿಟೆಡ್ (ಎನ್‌ಎಸ್‌ಡಿಎಲ್) ಗುರುವಾರ ತಿಳಿಸಿದೆ.

ವಿವಿಧ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳ ಹೂಡಿಕೆದಾರರು ದೇಶದ ಬೆಳವಣಿಗೆಗೆ ಈಗ ಕೊಡುಗೆ ನೀಡುತ್ತಿದ್ದಾರೆ ಎಂದು ಸಿಡಿಎಸ್‌ಎಲ್ ವ್ಯವಸ್ಥಾಪಕ ನಿರ್ದೇಶಕ ನೆಹಲ್ ವೋರಾ ಹೇಳಿದ್ದಾರೆ.

ಹಿರಿಯ ನಟ ಮಿಥಿಲೇಶ್ ಚತುರ್ವೇದಿ ನಿಧನ

ಮುಂಬೈ (ಪಿಟಿಐ): 'ಗದರ್: ಏಕ್ ಪ್ರೇಮ್‌ಕಥಾ', 'ಕೋಯಿ ಮಿಲ್‌ಗಯಾ' ಮತ್ತು 'ರೆಡಿ' ಚಿತ್ರಗಳ ಅಭಿನಯಕ್ಕಾಗಿ ಹೆಸರಾಗಿದ್ದ ಹಿರಿಯ ನಟ ಮಿಥಿಲೇಶ್ ಚತುರ್ವೇದಿ (67) ಅವರು ಹೃದಯಸ್ತಂಭನದಿಂದಾಗಿ ಗುರುವಾರ ಬೆಳಿಗ್ಗೆ ನಿಧನರಾಗಿದ್ದಾರೆ.

ಅವರಿಗೆ ಪತ್ನಿ, ಪುತ್ರ ಮತ್ತು ಇಬ್ಬರು ಪುತ್ರಿಯರು ಇದ್ದಾರೆ. ಹೃದಯ ಸ್ತಂಭನವಾಗಿದ್ದರಿಂದ ಹತ್ತು ದಿನಗಳ ಹಿಂದೆ ಮುಂಬೈನ ಕೋಕಿಲಾ ಬೆನ್ ದೀರೂಭಾಯಿ ಅಂಬಾನಿ ಆಸ್ಪತ್ರೆಗೆ ಅವರನ್ನು ದಾಖಲು ಮಾಡಲಾಗಿತ್ತು. ಚತುರ್ವೇದಿ ಅವರ ಅಂತ್ಯಕ್ರಿಯೆ ಗುರುವಾರ ಸಂಜೆ ನಡೆಯಿತು.

'ಕೆಲವು ದಿನಗಳಿಂದ ಆಸ್ಪತ್ರೆಯಲ್ಲಿದ್ದರು. ಉಸಿರಾಟ ಸಮಸ್ಯೆಯೂ ಇತ್ತು. ಗುರುವಾರ ಬೆಳಗಿನ ಜಾವ ನಿಧನರಾದರು' ಎಂದು ಅವರ ಅಳಿಯ ಆಶಿಶ್ ಚತುರ್ವೇದಿ ಮಾಹಿತಿ ನೀಡಿದರು.

'ತಾಲ್', 'ಫಿಝಾ', 'ಅಶೋಕ', 'ಬಂಟಿ ಔರ್ ಬಬ್ಲಿ', 'ಕ್ರಿಶ್', 'ಗುಲಾಬೊ ಸಿತಾಬೊ' ಚಿತ್ರಗಳಲ್ಲಿನ ಅವರ ನಟನೆ ನೆನಪಿನಲ್ಲಿ ಉಳಿಯುವಂಥವು. ಇತ್ತೀಚೆಗೆ 'ಸ್ಕ್ಯಾಮ್ 1992: ದಿ ಹರ್ಷದ್ ಮೆಹ್ತಾ ಸ್ಟೋರಿ' ಎನ್ನುವ ವೆಬ್‌ಸರಣಿಯಲ್ಲೂ ಅಭಿನಯಿಸಿದ್ದರು.

ಮುನ್ನೆಚ್ಚರಿಕೆ ಡೋಸ್ ತೆಗೆದುಕೊಳ್ಳಿ: ಮೋದಿ

ವಲ್ಸಾದ್, ಗುಜರಾತ್ (ಪಿಟಿಐ): ಕೋವಿಡ್ ಮುನ್ನೆಚ್ಚರಿಕೆ ಡೋಸ್ ತೆಗೆದುಕೊಳ್ಳುವಂತೆ ಪ್ರಧಾನಿ ನರೇಂದ್ರ ಮೋದಿ ಅವರು ನಾಗರಿಕರನ್ನು ಒತ್ತಾಯಿಸಿದ್ದಾರೆ.

ಭಾರತಕ್ಕೆ ಸ್ವಾತಂತ್ರ್ಯ ದೊರೆತು 75 ವರ್ಷಗಳು ತುಂಬಿದ ಹಿನ್ನೆಲೆಯಲ್ಲಿ, ಸರ್ಕಾರವು 75 ದಿನಗಳ ಕಾಲದ ಉಚಿತ ಲಸಿಕಾ ಅಭಿಯಾನವನ್ನು ಪ್ರಾರಂಭಿಸಿದೆ. ಈ ಅವಧಿಯಲ್ಲಿ ಎಲ್ಲರೂ ಕೋವಿಡ್‌ನ ಮುನ್ನೆಚ್ಚರಿಕಾ ಲಸಿಕೆ ತೆಗೆದುಕೊಳ್ಳಬೇಕು ಎಂದು ಅವರು ಒತ್ತಾಯಿಸಿದರು.

ಹೈಜಂಪ್‌ನಲ್ಲಿ ಕಂಚು; ಈ ಶ್ರೇಯ ಪಡೆದ ಭಾರತದ ಮೊದಲ ಅಥ್ಲೀಟ್

ತೇಜಸ್ವಿನ್ ಎತ್ತರದ ಸಾಧನೆ



ಹೈಜಂಪ್‌ನಲ್ಲಿ ಕಂಚು ಗೆದ್ದ ತೇಜಸ್ವಿನ್ ಶಂಕರ್ –ಪಿಟಿಐ ಚಿತ್ರ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತ ಅಥ್ಲೆಟಿಕ್ಸ್ ತಂಡದಲ್ಲಿ ಕೊನೆಯ ಕ್ಷಣದಲ್ಲಿ ಸ್ಥಾನ ಪಡೆದಿದ್ದ ಹೈಜಂಪ್ ಸ್ಪರ್ಧಿ ತೇಜಸ್ವಿನ್ ಶಂಕರ್ ಅವರು ಕಂಚು ಗೆದ್ದು ಐತಿಹಾಸಿಕ ಸಾಧನೆ ಮಾಡಿದರು.

ಬುಧವಾರ ರಾತ್ರಿ ನಡೆದ ಪುರುಷರ ವಿಭಾಗದ ಸ್ಪರ್ಧೆಯಲ್ಲಿ ಅವರು 2.22 ಮೀ. ಎತ್ತರ ಜಿಗಿಯುವಲ್ಲಿ ಯಶಸ್ವಿಯಾದರು. ಕಾಮನ್‌ವೆಲ್ತ್ ಕೂಟದ ಹೈಜಂಪ್‌ನಲ್ಲಿ ಪದಕ ಗೆದ್ದ ಭಾರತದ ಮೊದಲ ಅಥ್ಲೀಟ್ ಎಂಬ ಗೌರವ ಅವರಿಗೆ ಒಲಿಯಿತು.

1970ರ ಎಡಿನ್‌ಬರೋ ಕೂಟದಲ್ಲಿ ಭೀಮ್ ಸಿಂಗ್ ಅವರು 2.06 ಮೀ. ಎತ್ತರ ಜಿಗಿದದ್ದು, ಭಾರತದ ಅಥ್ಲೀಟ್‌ವೊಬ್ಬರ ಇದುವರೆಗಿನ ಶ್ರೇಷ್ಠ ಸಾಧನೆ ಎನಿಸಿಕೊಂಡಿತ್ತು.

ನ್ಯೂಜಿಲೆಂಡ್‌ನ ಹಾಮಿಷ್ ಕೆರ್ ಮತ್ತು ಆಸ್ಟ್ರೇಲಿಯಾದ ಬ್ರೆಂಡನ್ ಸ್ಟಾರ್ಕ್ ಕ್ರಮವಾಗಿ ಚಿನ್ನ ಹಾಗೂ ಬೆಳ್ಳಿ ಗೆದ್ದರು. ಇಬ್ಬರೂ 2.25 ಮೀ. ಜಿಗಿದರು. ಆದರೆ 'ಕೌಂಟ್‌ಬ್ಯಾಕ್'ನಲ್ಲಿ ಚಿನ್ನ ಹಾಮಿಷ್ ಪಾಲಾಯಿತು.

23 ವರ್ಷದ ಶಂಕರ್ ಮೊದಲ ಎರಡು ಅವಕಾಶಗಳಲ್ಲಿ 2.25 ಮೀ. ಜಿಗಿಯಲು ವಿಫಲರಾದರು. ಬೆಳ್ಳಿ ಗೆಲ್ಲುವ ಗುರಿಯೊಂದಿಗೆ ಕೊನೆಯ ಪ್ರಯತ್ನದಲ್ಲಿ ಅವರು 2.28 ಮೀ. ಎತ್ತರ ಜಿಗಿಯಲು ಪ್ರಯತ್ನಿಸಿದರೂ ಯಶಸ್ಸು ಸಿಗಲಿಲ್ಲ.

ಬಹಾಮಸ್‌ನ ಡೊನಾಲ್ಡ್ ಥಾಮಸ್ ಮತ್ತು ಇಂಗ್ಲೆಂಡ್‌ನ ಜೊಯೆಲ್ ಕ್ಲಾರ್ಕ್ ಅವರೂ 2.22 ಮೀ. ಸಾಧನೆ ಮಾಡಿದ್ದರು. ಆದರೆ ಇವರಿಬ್ಬರು ತಮ್ಮ ಎರಡನೇ ಪ್ರಯತ್ನದಲ್ಲಿ ಯಶ ಕಂಡರೆ, ಶಂಕರ್ ಮೊದಲ ಪ್ರಯತ್ನದಲ್ಲೇ ಈ ಎತ್ತರ ಜಿಗಿದರು. 'ಕೌಂಟ್ ಬ್ಯಾಕ್'ನಲ್ಲಿ ಕಂಚು ಭಾರತದ ಅಥ್ಲೀಟ್ ಪಾಲಾಯಿತು.

2018ರಲ್ಲಿ ಗೋಲ್ಡ್‌ಕೋಸ್ಟ್‌ನಲ್ಲಿ ನಡೆದಿದ್ದ ಕೂಟದಲ್ಲಿ ಅವರು 2.24 ಮೀ. ಎತ್ತರ ಜಿಗಿದು ಆರನೇ ಸ್ಥಾನ ಗಳಿಸಿದ್ದರು. ಈ ಋತುವಿನಲ್ಲಿ ಅವರ ಶ್ರೇಷ್ಠ ಸಾಧನೆ 2.27 ಮೀ. ಹಾಗೂ ವೈಯಕ್ತಿಕ ಶ್ರೇಷ್ಠ ಸಾಧನೆ 2.29 ಮೀ. ಆಗಿದೆ.

ಕೊನೆಯ ಕ್ಷಣದಲ್ಲಿ ಸ್ಥಾನ: ಕೂಟ ಆರಂಭಗೊಳ್ಳಲು 5 ದಿನಗಳು ಇರುವಾಗಲಷ್ಟೆ ಶಂಕರ್, ಕಾಮನ್ ವೆಲ್ತ್‌ನಲ್ಲಿ ಪಾಲ್ಗೊಳ್ಳುವುದು ಖಚಿತವಾಗಿತ್ತು.

ಅಮೆರಿಕದಲ್ಲಿ ಶಿಕ್ಷಣ ಪಡೆಯುತ್ತಿರುವ ಅವರು ಅಲ್ಲಿ ನಡೆದ ಎನ್‌ಸಿಎಎ ಚಾಂಪಿಯನ್‌ಷಿಪ್‌ನಲ್ಲಿ 2.27 ಮೀ. ಸಾಧನೆ ಮಾಡಿದ್ದರು. ಆ ಮೂಲಕ ಕಾಮನ್‌ವೆಲ್ತ್ ಕೂಟದ ಅರ್ಹತೆಗೆ ಭಾರತ ಅಥ್ಲೆಟಿಕ್ ಫೆಡರೇಷನ್ ನಿಗದಿಪಡಿಸಿದ್ದ ಎತ್ತರ ಕಂಡುಕೊಂಡಿದ್ದರು.

ಆದರೂ ಅವರ ಹೆಸರನ್ನು ಭಾರತ ಅಥ್ಲೆಟಿಕ್ಸ್ ತಂಡದಲ್ಲಿ ಸೇರ್ಪಡೆ ಮಾಡಿರಲಿಲ್ಲ. ಅದನ್ನು ಪ್ರಶ್ನಿಸಿದ್ದ ಶಂಕರ್ ದೆಹಲಿ ಹೈಕೋರ್ಟ್ ಮೆಟ್ಟಿಲೇರಿದ್ದರು. ಇದರ ನಂತರ ಶಂಕರ್ ಅವರನ್ನು ಆರೋಕ್ಯ ರಾಜೀವ ಅವರ ಸ್ಥಾನದಲ್ಲಿ ಸೇರ್ಪಡೆ ಮಾಡಲಾಗಿದೆ ಎಂದು ಎಎಫ್‌ಐ ಕೋರ್ಟ್‌ಗೆ ತಿಳಿಸಿತ್ತು.

ತೇಜಸ್ವಿನ್ ಅವರ ಹೆಸರನ್ನು ತಡವಾಗಿ ನೋಂದಾಯಿಸಲಾಗಿದೆ ಎಂದು ಕಾಮನ್‌ವೆಲ್ತ್ ಗೇಮ್ಸ್ ಫೆಡರೇಷನ್ (ಸಿಜಿಎಫ್) ತಿರಸ್ಕರಿಸಿತ್ತು. ಸುಮಾರು ಒಂದು ತಿಂಗಳ ಪ್ರಹಸನದ ಬಳಿಕ, ಭಾರತ ಒಲಿಂಪಿಕ್ ಸಂಸ್ಥೆಯು ತೇಜಸ್ವಿನ್ ಅವರನ್ನು ತಂಡಕ್ಕೆ ಸೇರಿಸಲು ಯಶಸ್ವಿಯಾಗಿತ್ತು.

ಮನ್‌ಪ್ರೀತ್‌ಗೆ ನಿರಾಸೆ: ಮಹಿಳೆಯರ ಷಾಟ್‌ಪಟ್ ಸ್ಪರ್ಧೆಯಲ್ಲಿ ಭಾರತದ ಮನ್‌ಪ್ರೀತ್ ಕೌರ್ ಅವರು 15.69 ಮೀ. ಸಾಧನೆಯೊಂದಿಗೆ 12ನೇ ಹಾಗೂ ಕೊನೆಯ ಸ್ಥಾನ ಪಡೆದರು.

ಫೈನಲ್‌ಗೆ ಮಂಜುಬಾಲಾ: ಮಂಜು ಬಾಲಾ ಅವರು ಮಹಿಳೆಯರ ಹ್ಯಾಮರ್ ಥ್ರೋ ಸ್ಪರ್ಧೆಯ ಅರ್ಹತಾ ಸುತ್ತಿನಲ್ಲಿ 11ನೇ ಸ್ಥಾನ ಪಡೆದು ಫೈನಲ್ ಪ್ರವೇಶಿಸಿದರು. ಅವರು 59.68 ಮೀ. ಸಾಧನೆ ಮಾಡಿದರು. ಇದೇ ವಿಭಾಗದಲ್ಲಿ ಕಣದಲ್ಲಿದ್ದ ಭಾರತದ ಸರಿತಾ (57.48 ಮೀ.) ಫೈನಲ್ ಪ್ರವೇಶಿಸಲು ವಿಫಲರಾದರು.

ಗುರುದೀಪ್‌ಸಿಂಗ್‌ಗೆ ಕಂಚು

ವೇಟ್‌ಲಿಫ್ಟಿಂಗ್‌ನಲ್ಲಿ ಭಾರತಕ್ಕೆ ಒಟ್ಟು 10 ಪದಕ

ಪದಕ ಪಟ್ಟಿ

ಸ್ಥಾನ	ದೇಶ	ಚಿನ್ನ	ಬೆಳ್ಳಿ	ಕಂಚು	ಒಟ್ಟು
1	ಆಸ್ಟ್ರೇಲಿಯಾ	48	39	39	126
2	ಇಂಗ್ಲೆಂಡ್	41	41	30	112
3	ಕೆನಡಾ	16	20	21	57
4	ನ್ಯೂಜಿಲೆಂಡ್	16	10	11	37
5	ಸ್ಕಾಟ್ಲೆಂಡ್	7	8	17	32
7	ಭಾರತ	5	6	7	18

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ವೇಟ್‌ಲಿಫ್ಟರ್ ಗುರುದೀಪ್ ಸಿಂಗ್, ಪುರುಷರ +109 ಕೆ.ಜಿ. ವಿಭಾಗದಲ್ಲಿ ಕಂಚು ಗೆದ್ದರು.

ಬುಧವಾರ ರಾತ್ರಿ ನಡೆದ ಸ್ಪರ್ಧೆಯಲ್ಲಿ ಅವರು ಒಟ್ಟು 390 ಕೆ.ಜಿ. ಭಾರ ಎತ್ತುವಲ್ಲಿ ಯಶಸ್ವಿಯಾದರು. ಸ್ನ್ಯಾಚ್‌ನಲ್ಲಿ 167 ಕೆ.ಜಿ ಹಾಗೂ ಕ್ಲೀನ್–ಜರ್ಕ್‌ನಲ್ಲಿ 223 ಕೆ.ಜಿ. ಸಾಧನೆ ಮಾಡಿದರು.

ಪಾಕಿಸ್ತಾನದ ಮೊಹಮ್ಮದ್ ನೂಹ್ ಬಟ್ 405 ಕೆ.ಜಿ. (173 + 232) ಭಾರ ಎತ್ತಿ, ಕೂಟ ದಾಖಲೆಯೊಂದಿಗೆ ಚಿನ್ನ ಗೆದ್ದರೆ, ನ್ಯೂಜಿಲೆಂಡ್‌ನ ಡೇವಿಡ್ ಆ್ಯಂಡ್ರ್ಯೂ ಲಿಟಿ (170 + 224) ಬೆಳ್ಳಿ ಪಡೆದರು.

ಸ್ನ್ಯಾಚ್‌ನಲ್ಲಿ 167 ಕೆ.ಜಿ.ಯೊಂದಿಗೆ ಸ್ಪರ್ಧೆ ಆರಂಭಿಸಿದ ಗುರುದೀಪ್ ಮೊದಲ ಪ್ರಯತ್ನದಲ್ಲಿ ವಿಫಲರಾದರು. ಎರಡನೇ ಅವಕಾಶದಲ್ಲಿ ಯಶ ಕಂಡ ಅವರು ಕೊನೆಯ ಅವಕಾಶದಲ್ಲಿ 173 ಕೆ.ಜಿ. ಎತ್ತಿದರು.

ಜಂಟಿ 3ನೇ ಸ್ಥಾನದೊಂದಿಗೆ ಕ್ಲೀನ್–ಜರ್ಕ್‌ನಲ್ಲಿ ಪೈಪೋಟಿಗಿಳಿದ ಅವರು ಮೊದಲ ಪ್ರಯತ್ನದಲ್ಲಿ 207 ಕೆ.ಜಿ. ಎತ್ತಿದರು. ಎರಡನೇ ಪ್ರಯತ್ನದಲ್ಲಿ 215 ಕೆ.ಜಿ ಎತ್ತುವಲ್ಲಿ ಎಡವಿದರು. ಮೂರನೇ ಪ್ರಯತ್ನದಲ್ಲಿ ಭಾರವನ್ನು 8 ಕೆ.ಜಿ ಯಷ್ಟು ಹೆಚ್ಚಿಸಿ, 223 ಕೆ.ಜಿ. ಎತ್ತಲು ಯಶ ಕಂಡರು. ಕ್ಲೀನ್–ಜರ್ಕ್‌ನಲ್ಲಿ ಇದು ಅವರ ವೈಯಕ್ತಿಕ ಶ್ರೇಷ್ಠ ಸಾಧನೆಯೂ ಹೌದು.

'ಮೊಣಕೈನಲ್ಲಿ ನೋವು ಇದ್ದ ಕಾರಣ ನನಗೆ ಸ್ನ್ಯಾಚ್‌ನಲ್ಲಿ ಪೂರ್ಣ ಸಾಮರ್ಥ್ಯ ತೋರಲು ಆಗಲಿಲ್ಲ. ಇಲ್ಲದಿದ್ದರೆ, ಕನಿಷ್ಠ ಬೆಳ್ಳಿಯ ಪದಕ ಗೆಲ್ಲಬಹುದಿತ್ತು' ಎಂದು ಏಳು ಬಾರಿಯ ರಾಷ್ಟ್ರೀಯ ಚಾಂಪಿಯನ್ ಆಗಿರುವ ಗುರುದೀಪ್ ಪ್ರತಿಕ್ರಿಯಿಸಿದರು. ವೇಟ್‌ಲಿಫ್ಟಿಂಗ್‌ನಲ್ಲಿ ಭಾರತದ ಸವಾಲು ಇದರೊಂದಿಗೆ ಕೊನೆಗೊಂಡಿದೆ. 3 ಚಿನ್ನ, 3 ಬೆಳ್ಳಿ ಮತ್ತು 4 ಕಂಚಿನ ಪದಕಗಳನ್ನು ಭಾರತ ಜಯಿಸಿದೆ.

ಮುಖ್ಯಾಂಶಗಳು

- 2.22 ಮೀ. ಎತ್ತರ ಜಿಗಿದ ತೇಜಸ್ವಿನ್ ಶಂಕರ್
- ಕೊನೆಯ ಕ್ಷಣದಲ್ಲಿ ತಂಡದಲ್ಲಿ ಸ್ಥಾನ ಪಡೆದಿದ್ದ ಅಥ್ಲೀಟ್
- ಷಾಟ್‌ಪಟ್: ಮನ್‌ಪ್ರೀತ್ ಕೌರ್‌ಗೆ 12ನೇ ಸ್ಥಾನ



ವೇಟ್‌ಲಿಫ್ಟಿಂಗ್‌ನಲ್ಲಿ ಕಂಚು ಗೆದ್ದ ಗುರುದೀಪ್ ಸಿಂಗ್ –ಪಿಟಿಐ ಚಿತ್ರ

ಸೆಮಿಗೆ ಹಿಮಾ ದಾಸ್



ಅರ್ಹತಾ ಹಂತದಲ್ಲಿ ಪಾಲ್ಗೊಂಡ ಹಿಮಾ ದಾಸ್–ಪಿಟಿಐ ಚಿತ್ರ

ಭಾರತದ ಹಿಮಾ ದಾಸ್ ಅವರು ಮಹಿಳೆಯರ 200 ಮೀ. ಓಟದಲ್ಲಿ ಸೆಮಿಫೈನಲ್ ಪ್ರವೇಶಿಸಿದರು. ಗುರುವಾರ ನಡೆದ ಹೀಟ್ಸ್‌ನಲ್ಲಿ 23.42 ಸೆ.ಗಳಲ್ಲಿ ಗುರಿ ತಲುಪಿದರು.ಐವರು ಸ್ಪರ್ಧಿಗಳು ಪಾಲ್ಗೊಂಡಿದ್ದ ಎರಡನೇ ಹೀಟ್‌ನಲ್ಲಿ (ಅರ್ಹತಾ ಹಂತ) ಓಡಿದ ಹಿಮಾ ಮೊದಲನೆಯವರಾಗಿ ಗುರಿ ತಲುಪಿದರು. ಒಟ್ಟು ಆರು ಹೀಟ್ಸ್ ನಡೆದವು. ಅಗ್ರ 16 ಅಥ್ಲೀಟ್‌ಗಳು ಸೆಮಿ ಪ್ರವೇಶಿಸಿದರು. ಮೊದಲ ಹೀಟ್‌ನಲ್ಲಿದ್ದ ನೈಜೀರಿಯದ ಫೇವರ್ ಒಫಿಲಿ (22.71 ಸೆ.) ಮತ್ತು ಜಮೈಕದ ಎಲೈನ್ ಥಾಂಪ್ಸನ್ ಹೆರಾ (22.80 ಸೆ.) ಅವರು ಒಳಗೊಂಡಂತೆ ಆರು ಅಥ್ಲೀಟ್‌ಗಳು ಹಿಮಾ ಅವರಿಗಿಂತ ಉತ್ತಮ ಸಮಯ ಕಂಡುಕೊಂಡರು.



ಮಹಿಳೆಯರ ಲೈಟ್‌ವೇಟ್ ವಿಭಾಗದಲ್ಲಿ ಭಾರತದ ಜಾಸ್ಮಿನ್ (ಎಡ) ಅವರು ಎದುರಾಳಿಗೆ ಪಂಚ್ ನೀಡಿದರು –ಪಿಟಿಐ ಚಿತ್ರ

ಬಾಕ್ಸಿಂಗ್: ಸೆಮಿಗೆ ಅಮಿತ್, ಜಾಸ್ಮಿನ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಬಾಕ್ಸರ್‌ಗಳಾದ ಅಮಿತ್ ಪಂಘಾಲ್, ಸಾಗರ್ ಅಹ್ಲಾವತ್ ಮತ್ತು ಜಾಸ್ಮಿನ್ ಅವರು ಸೆಮಿಫೈನಲ್ ಪ್ರವೇಶಿಸಿದ್ದು, ಪದಕ ಖಚಿತಪಡಿಸಿಕೊಂಡಿದ್ದಾರೆ. ಇದರೊಂದಿಗೆ ಬಾಕ್ಸಿಂಗ್ ರಿಂಗ್‌ನಲ್ಲಿ ಭಾರತಕ್ಕೆ ಆರು ಪದಕಗಳು ಖಚಿತವಾದಂತಾಗಿದೆ.

ಗುರುವಾರ ನಡೆದ ಪುರುಷರ ಫ್ಲೈವೇಟ್ (48–51 ಕೆ.ಜಿ) ವಿಭಾಗದಲ್ಲಿ ಅಮಿತ್ 5–0 ರಲ್ಲಿ ಸ್ಕಾಟ್ಲೆಂಡ್‌ನ ಲೆನನ್ ಮಲಿಗನ್ ಎದುರು ಗೆದ್ದರು.

ಕಳೆದ ಬಾರಿಯ ಬೆಳ್ಳಿ ಪದಕ ವಿಜೇತ 26 ವರ್ಷದ ಅಮಿತ್, ಶ್ರೇಷ್ಠ ಪ್ರದರ್ಶನ ನೀಡಲು ವಿಫಲವಾದರೂ ತನಗಿಂತ ಕಿರಿಯ ವಯಸ್ಸಿನ ಎದುರಾಳಿಯನ್ನು ಮಣಿಸಲು ಯಶಸ್ವಿಯಾದರು. ಎಲ್ಲ ತೀರ್ಪುಗಾರರು ಅಮಿತ್ ಪರ ಪಾಯಿಂಟ್ ನೀಡಿದರು.

ಮೊದಲ ಎರಡು ಸುತ್ತುಗಳಲ್ಲಿ ರಕ್ಷಣೆಗೆ ಒತ್ತು ನೀಡಿದ ಅಮಿತ್, ಎದುರಾಳಿಯನ್ನು ಪಂಚ್ ನೀಡಲು ಪ್ರೇರೇಪಿಸಿದರು. ಆದರೆ ಮಲಿಗನ್ ಪಂಚ್ ಮಾಡಿದಾಗಲೆಲ್ಲಾ, ಚುರುಕಿನ ಪಾದಚಲನೆ ಮೂಲಕ ತಪ್ಪಿಸಿಕೊಳ್ಳುತ್ತಿದ್ದರು. ಅವಕಾಶ ಸಿಕ್ಕಾಗ ತಮ್ಮ ಎಡಗೈನಿಂದ ಒಂದಷ್ಟು ಪಂಚ್‌ಗಳನ್ನು ನೀಡಿದರು.

ಮೂರನೇ ಸುತ್ತಿನಲ್ಲಿ ನೈಜ ಸಾಮರ್ಥ್ಯ ತೋರಿದ ಭಾರತದ ಬಾಕ್ಸರ್, ಎಡ ಹಾಗೂ ಬಲಗೈನಿಂದ ಒಂದರ ಮೇಲೊಂದರಂತೆ ಪಂಚ್ ನೀಡಿ ಎದುರಾಳಿಯನ್ನು ತಬ್ಬಿಬ್ಬುಗೊಳಿಸಿದರು.

ಜಾಸ್ಮಿನ್ ಅವರು ಮಹಿಳೆಯರ ಲೈಟ್‌ವೇಟ್ (60 ಕೆ.ಜಿ) ವಿಭಾಗದ ಕ್ವಾರ್ಟರ್ ಫೈನಲ್‌ನಲ್ಲಿ 4–1 ರಲ್ಲಿ ನ್ಯೂಜಿಲೆಂಡ್‌ನ ಟ್ರಾಯ್ ಗಾರ್ಟನ್ ಅವರನ್ನು ಸೋಲಿಸಿದರು.

ಸಾಗರ್ ಅಹ್ಲಾವತ್ ಅವರು ಪುರುಷರ +92 ಕೆ.ಜಿ. ವಿಭಾಗದಲ್ಲಿ 5–0 ರಲ್ಲಿ ಸೀಶೆಲ್‌ನ ಕೆಡ್ಡಿ ಇವಾನ್ಸ್ ಅವರನ್ನು ಪರಾಭವಗೊಳಿಸಿದರು.

ಆಶೀಶ್, ಲವ್ಲಿನಾಗೆ ಸೋಲು: ಭಾರತದ ಆಶೀಶ್ ಕುಮಾರ್ ಮತ್ತು ಲವ್ಲಿನಾ ಬೊರ್ಗೊಹೈನ್ ಅವರು ಕ್ವಾರ್ಟರ್ ಫೈನಲ್‌ನಲ್ಲಿ ಸೋತು ಹೊರಬಿದ್ದರು.

ಬುಧವಾರ ರಾತ್ರಿ ನಡೆದ ಪುರುಷರ 80 ಕೆ.ಜಿ ವಿಭಾಗದಲ್ಲಿ ಆಶೀಶ್ 1–4 ರಲ್ಲಿ ಇಂಗ್ಲೆಂಡ್‌ನ ಆ್ಯರನ್ ಬೋವೆನ್ ಕೈಯಲ್ಲಿ ಪರಾಭವಗೊಂಡರು.

ಆದರೆ ಮಹಿಳೆಯರ 66– 70 ಕೆ.ಜಿ ವಿಭಾಗದಲ್ಲಿ ವಿಶ್ವ ಚಾಂಪಿಯನ್‌ಷಿಪ್‌ನಲ್ಲಿ ಎರಡು ಬಾರಿಯ ಪದಕ ವಿಜೇತೆ ಲವ್ಲಿನಾ ಸೋಲು ಅನಿರೀಕ್ಷಿತವಾಗಿತ್ತು. ವೇಲ್ಸ್‌ನ ರೋಸಿ ಎಕ್ಲೆಸ್ ಅವರು 2–3 ರಲ್ಲಿ ಲವ್ಲಿನಾ ಎದುರು ಗೆದ್ದರು. ಮೊದಲ ಎರಡು ಸುತ್ತುಗಳ ಬಳಿಕ ಮುನ್ನಡೆಯಲ್ಲಿದ್ದ ಭಾರತದ ಬಾಕ್ಸರ್, ಕೊನೆಯ ಸುತ್ತಿನಲ್ಲಿ ಹಿನ್ನಡೆ ಅನುಭವಿಸಿದರು.

ಬ್ಯಾಡ್ಮಿಂಟನ್: ಕಿದಂಬಿ ಶ್ರೀಕಾಂತ್ ಜಯಭೇರಿ

ಪ್ರೀ ಕ್ವಾರ್ಟರ್‌ಗೆ ಸಿಂಧು


ಬರ್ಮಿಂಗ್‌ಹ್ಯಾಮ್ (ಪಿಟಿಐ): ಬ್ಯಾಡ್ಮಿಂಟನ್‌ನಲ್ಲಿ ಭಾರತದ ಪದಕದ ಭರವಸೆ ಎನಿಸಿರುವ ಪಿ.ವಿ.ಸಿಂಧು ಮತ್ತು ಕಿದಂಬಿ ಶ್ರೀಕಾಂತ್ ಅವರು ಸಿಂಗಲ್ಸ್ ವಿಭಾಗದಲ್ಲಿ ಪ್ರೀ ಕ್ವಾರ್ಟರ್ ಫೈನಲ್ ಪ್ರವೇಶಿಸಿದರು.

ಗುರುವಾರ ನಡೆದ ಮಹಿಳೆಯರ ವಿಭಾಗದ ಪಂದ್ಯದಲ್ಲಿ ಸಿಂಧು 21–4, 21–11 ರಲ್ಲಿ ಮಾಲ್ಡೀವ್ಸ್‌ನ ಫಾತಿಮಾ ನಬಾ ಅಬ್ದುಲ್ ರಜಾಕ್ ಎದುರು ಗೆದ್ದರು. ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆಗೆ ಫಾತಿಮಾ ಅವರು ಸರಿಸಾಟಿಯಾಗಲಿಲ್ಲ.

ಸಿಂಧು ಮೊದಲ ಗೇಮ್‌ನಲ್ಲಿ ಎದುರಾಳಿಗೆ ಕೇವಲ ನಾಲ್ಕು ಪಾಯಿಂಟ್ ಬಿಟ್ಟುಕೊಟ್ಟರು. ಎರಡನೇ ಗೇಮ್‌ನಲ್ಲಿ ಅಲ್ಪ ಪ್ರತಿರೋಧ ಒಡ್ಡಿದ ಮಾಲ್ಡೀವ್ಸ್‌ನ ಆಟಗಾರ್ತಿ 9–9 ರಲ್ಲಿ ಸಮಬಲ ಸಾಧಿಸಿದರು. ಆ ಬಳಿಕ ಮೇಲಿಂದ ಮೇಲೆ ಪಾಯಿಂಟ್ ಕಲೆಹಾಕಿದ ಸಿಂಧು ಗೆಲುವಿನ ನಗು ಬೀರಿದರು.

ಪುರುಷರ ಸಿಂಗಲ್ಸ್ ವಿಭಾಗದ ಮೊದಲ ಸುತ್ತಿನ ಪಂದ್ಯದಲ್ಲಿ ಶ್ರೀಕಾಂತ್ ಅವರು 21–9, 21–9 ರಲ್ಲಿ ಉಗಾಂಡದ ಡೇನಿಯಲ್ ವಾನಗಲಿಯ ಅವರನ್ನು ಮಣಿಸಿದರು.

ಕ್ರಾಸ್ ಕೋರ್ಟ್ ಸ್ಮ್ಯಾಷ್ ಮತ್ತು ಡ್ರಾಪ್ ಶಾಟ್‌ಗಳ ಮೂಲಕ ಅವರು ಮಿಂಚಿದರು.



ಪಿ.ವಿ.ಸಿಂಧು ಆಟದ ವೈಖರಿ –ಪಿಟಿಐ ಚಿತ್ರ

ಸ್ಕ್ವಾಷ್: ಸೌರವ್– ದೀಪಿಕಾ ಮುನ್ನಡೆ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ದೀಪಿಕಾ ಪಳ್ಳಿಕಲ್ ಮತ್ತು ಸೌರವ್ ಘೋಷಾಲ್ ಅವರು ಸ್ಕ್ವಾಷ್ ಸ್ಪರ್ಧೆಯ ಮಿಶ್ರ ಡಬಲ್ಸ್ ವಿಭಾಗದಲ್ಲಿ ಕ್ವಾರ್ಟರ್‌ಫೈನಲ್ ತಲುಪಿದ್ದಾರೆ.

ಗುರುವಾರ ನಡೆದ ಪ್ರೀಕ್ವಾರ್ಟರ್‌ಫೈನಲ್ ಪಂದ್ಯದಲ್ಲಿ ಭಾರತದ ಜೋಡಿಯು 11-8, 11-4ರಿಂದ ವೇಲ್ಸ್‌ನ ಎಮಿಲಿ ವಿಟ್‌ಲಾಕ್ –ಪೀಟರ್ ಕಾರ್ಡ್ ಅವರನ್ನು ಸೋಲಿಸಿದರು.

ಪ್ರೀಕ್ವಾರ್ಟರ್‌ಗೆ ಅನಾಹತ್–ಸುನೈನಾ: ಸುನೈನಾ ಕುರುವಿಲ್ಲಾ ಮತ್ತು ಅನಾಹತ್ ಸಿಂಗ್ ಮಹಿಳಾ ಡಬಲ್ಸ್ ವಿಭಾಗದ ಪ್ರೀಕ್ವಾರ್ಟರ್‌ಫೈನಲ್ ತಲುಪಿದರು. ಮೊದಲ ಸುತ್ತಿನಲ್ಲಿ ಅನಾಹತ್ ಮತ್ತು ಸುನೈನಾ 11-9, 11-4ರಿಂದ ಶ್ರೀಲಂಕಾದ ಯೆಹಿನಿ ಕುರುಪ್ಪು– ಚನಿತ್ಮಾ ಸಿನಲಿ ಅವರನ್ನು ಸೋಲಿಸಿದರು.

ಪುರುಷರ ಡಬಲ್ಸ್ ವಿಭಾಗದಲ್ಲಿ ಅಭಯ್ ಸಿಂಗ್– ವೇಲವನ್ ಸೆಂಥಿಲ್ ಕುಮಾರ್ ಜೋಡಿಯೂ ನೇರ ಗೇಮ್‌ಗಳಿಂದ ಗೆದ್ದು ಪ್ರೀಕ್ವಾರ್ಟರ್‌ಫೈನಲ್ ತಲುಪಿತು. ಭಾರತದ ಜೋಡಿಯು ಬ್ರಿಟಿಷ್ ವರ್ಜಿನ್ ಐಸ್‌ಲ್ಯಾಂಡ್‌ನ ಲೂಕಾ ರಿಚ್ ಮತ್ತು ಜೊ ಚಾಪ್‌ಮನ್ ಎದುರು ಜಯ ಸಾಧಿಸಿದರು.

ಜೋಷ್ನಾ– ಸಂಧುಗೆ ನಿರಾಸೆ: ಪದಕದ ಭರವಸೆ ಮೂಡಿಸಿದ್ದ ಜೋಷ್ನಾ ಚಿಣ್ಣಪ್ಪ– ಹರಿಂದರ್‌ಪಾಲ್ ಸಂಧು ಮಿಶ್ರ ಡಬಲ್ಸ್ ವಿಭಾಗದ ಪ್ರೀಕ್ವಾರ್ಟರ್‌ನಲ್ಲಿ ಸೋತರು. ಭಾರತದ ಜೋಡಿಯು 8-11, 9-11ರಿಂದ ಆಸ್ಟ್ರೇಲಿಯಾದ ಡೊನ್ನಾ ಲೊಬ್ಬನ್ ಮತ್ತು ಕ್ಯಾಮರಾನ್ ಪಿಲ್ಲೆ ಎದುರು ಎಡವಿತು.



ದೀಪಿಕಾ ಪಳ್ಳಿಕಲ್

ಟಿಟಿಯಲ್ಲಿ ಸನಿಲ್–ರೀತ್‌ಗೆ ಸೋಲು: ಭಾರತದ ಸನಿಲ್ ಶೆಟ್ಟಿ ಮತ್ತು ರೀತ್ ಟೆನ್ನಿಸನ್ ಜೋಡಿಯು ಟೇಬಲ್ ಟೆನಿಸ್ ಮಿಶ್ರ ಡಬಲ್ಸ್ ಸ್ಪರ್ಧೆಯಿಂದ ಸೋತು ಹೊರಬಿದ್ದಿದೆ. ಭಾರತದ ಜೋಡಿಯು ಮೊದಲ ಸುತ್ತಿನ ಪಂದ್ಯದಲ್ಲಿ 6-11, 10-12, 13-11, 11-8, 8-11ರಿಂದ ಮಲೇಷ್ಯಾದ ವಾಂಗ್ ಕಿ ಶೆನ್ ಮತ್ತು ಟೀ ಐ ಷಿನ್ ಎದುರು ಎಡವಿತು.

ಮೃದುಲ್‌ಗೆ ನಿರಾಸೆ: ಭಾರತದ ಮೃದುಲ್ ಬೊರ್ಗೊಹೈನ್ ಕ್ರೀಡಾ ಕೂಟದ ಲಾನ್‌ಬಾಲ್ಸ್ ಟೂರ್ನಿಯ ಪುರುಷರ ಸಿಂಗಲ್ಸ್ ವಿಭಾಗದ ಕ್ವಾರ್ಟರ್ ಫೈನಲ್ ಪ್ರವೇಶಿಸಲು ವಿಫಲರಾದರು.

ಐದನೇ ಸುತ್ತಿನ ಪಂದ್ಯದಲ್ಲಿ ಅವರು 13–21 ರಲ್ಲಿ ಜೆರ್ಸಿ ದ್ವೀಪದ ರಾಸ್ ಡೇವಿಸ್ ಎದುರು ಸೋತರು.

ಹಾಕಿ: ವೇಲ್ಸ್ ಮಣಿಸಿ ಸೆಮಿಫೈನಲ್ ತಲುಪಿದ ಭಾರತ

ಹರ್ಮನ್‌ಪ್ರೀತ್ ಹ್ಯಾಟ್ರಿಕ್

ಬರ್ಮಿಂಗ್‌ಹ್ಯಾಮ್ (ಪಿಟಿಐ): ಹರ್ಮನ್‌ಪ್ರೀತ್ ಸಿಂಗ್ ಅವರ ಹ್ಯಾಟ್ರಿಕ್ ಗೋಲುಗಳ ನೆರವಿನಿಂದ ವೇಲ್ಸ್ ತಂಡವನ್ನು 4–1 ರಲ್ಲಿ ಮಣಿಸಿದ ಭಾರತ, ಕಾಮನ್‌ವೆಲ್ತ್ ಕೂಟದ ಹಾಕಿ ಟೂರ್ನಿಯ ಸೆಮಿಫೈನಲ್ ಪ್ರವೇಶಿಸಿತು.

ಈ ಗೆಲುವಿನ ಮೂಲಕ 'ಬಿ' ಗುಂಪಿನಲ್ಲಿ ಅಗ್ರಸ್ಥಾನವನ್ನು ಭಾರತ ಖಚಿತಪಡಿಸಿಕೊಂಡಿತು.

ಗುರುವಾರ ನಡೆದ ಪಂದ್ಯದ 19, 20 ಮತ್ತು 40ನೇ ನಿಮಿಷಗಳಲ್ಲಿ ಹರ್ಮನ್‌ಪ್ರೀತ್ ಗೋಲು ಗಳಿಸಿದರು. ಮತ್ತೊಂದು ಗೋಲನ್ನು ಗುರ್ಜಂತ್ ಸಿಂಗ್ 49ನೇ ನಿಮಿಷದಲ್ಲಿ ತಂದಿತ್ತರು.

ವೇಲ್ಸ್ ತಂಡದ ಏಕೈಕ ಗೋಲನ್ನು ಡ್ರ್ಯಾಗ್ ಫ್ಲಿಕ್ಕರ್ ಗ್ಯಾರೆತ್ ಫರ್ಲಾಂಗ್ ಅವರು 55ನೇ ನಿಮಿಷದಲ್ಲಿ ಗಳಿಸಿದರು.

ಪಂದ್ಯದ ಮೊದಲ ಎರಡು ಕ್ವಾರ್ಟರ್‌ಗಳ ಹೆಚ್ಚಿನ ಸಮಯದಲ್ಲೂ ಚೆಂಡು ಭಾರತದ ಆಟಗಾರರ ನಿಯಂತ್ರಣದಲ್ಲಿತ್ತು. ಆದರೂ ಮೊದಲ ಕ್ವಾರ್ಟರ್‌ನಲ್ಲಿ ವೇಲ್ಸ್, ಪ್ರಬಲ ಪೈಪೋಟಿ ಒಡ್ಡಿತು.

ಮೊದಲ ಕ್ವಾರ್ಟರ್‌ನ ಎಂಟನೇ ನಿಮಿಷದಲ್ಲಿ ಪೆನಾಲ್ಟಿ ಕಾರ್ನರ್ ಗಳಿಸಿದ್ದು ಬಿಟ್ಟರೆ, ಗೋಲು ಗಳಿಸುವ ಬೇರೆ ಉತ್ತಮ ಅವಕಾಶಗಳನ್ನು ಭಾರತ ಸೃಷ್ಟಿಸಲಿಲ್ಲ. ಪೆನಾಲ್ಟಿ ಕಾರ್ನರ್‌ನಲ್ಲಿ ವರುಣ್ ಕುಮಾರ್ ಗೋಲು ಗಳಿಸಲು ವಿಫಲರಾದರು.

18ನೇ ನಿಮಿಷದಲ್ಲಿ ಬೆನ್ನುಬೆನ್ನಿಗೆ ಎರಡು ಪೆನಾಲ್ಟಿ ಕಾರ್ನರ್‌ಗಳು ಲಭಿಸಿದವು. ಎರಡನೇ ಅವಕಾಶವನ್ನು ಗೋಲಾಗಿ ಪರಿವರ್ತಿಸಿದ ಹರ್ಮನ್‌ಪ್ರೀತ್, ಭಾರತಕ್ಕೆ ಮುನ್ನಡೆ ತಂದಿತ್ತರು. 20 ನಿಮಿಷದಲ್ಲಿ ಅವರು ಪೆನಾಲ್ಟಿ ಅವಕಾಶದಲ್ಲಿ ಮತ್ತೊಂದು ಗೋಲು ಗಳಿಸಿಕೊಟ್ಟರು.

40ನೇ ನಿಮಿಷದಲ್ಲಿ ಲಭಿಸಿದ ಎರಡು ಪೆನಾಲ್ಟಿ ಕಾರ್ನರ್ ಅವಕಾಶಗಳಲ್ಲಿ ಒಂದನ್ನು ಸದುಪಯೋಗಪಡಿಸಿಕೊಂಡ ಹರ್ಮನ್‌ಪ್ರೀತ್ ಹ್ಯಾಟ್ರಿಕ್ ಸಾಧನೆ ಮಾಡಿದರು. ಇದಾದ ಒಂಭತ್ತು ನಿಮಿಷಗಳ ಬಳಿಕ ಭಾರತ ನಾಲ್ಕನೇ ಗೋಲು ಗಳಿಸಿತು.

ವೇಲ್ಸ್ ಕೊನೆಯ ಕ್ವಾರ್ಟರ್‌ನಲ್ಲಿ ಉತ್ತಮ ಪ್ರದರ್ಶನ ನೀಡಿತಾದರೂ, ಆಗ ಕಾಲ ಮಿಂಚಿಹೋಗಿತ್ತು.



ವೇಲ್ಸ್ ಎದುರು ಗೋಲು ಗಳಿಸಿದ ಭಾರತ ತಂಡದ ಆಟಗಾರರು ಸಂಭ್ರಮಿಸಿದರು –ಪಿಟಿಐ ಚಿತ್ರ



ಲಾಹೋರ್‌ನಲ್ಲಿ ಸಾರ್ವಜನಿಕರ ದರ್ಶನಕ್ಕೆ ತೆರೆಯಲಾಗಿರುವ 1,200 ವರ್ಷದಷ್ಟು ಹಳೆಯ ವಾಲ್ಮೀಕಿ ದೇವಾಲಯದಲ್ಲಿ ಜನರು ಪೂಜೆ ಸಲ್ಲಿಸಿದರು – ಪಿಟಿಐ ಚಿತ್ರ

1,200 ವರ್ಷದಷ್ಟು ಹಳೆಯ ದೇವಾಲಯ ಸಾರ್ವಜನಿಕರ ದರ್ಶನಕ್ಕೆ ಮುಕ್ತ

ಲಾಹೋರ್ (ಪಿಟಿಐ): ಇಲ್ಲಿನ ಪಂಜಾಬ್ ಪ್ರಾಂತ್ಯದಲ್ಲಿರುವ 1,200 ವರ್ಷದಷ್ಟು ಹಳೆಯದಾದ ವಾಲ್ಮೀಕಿ ದೇವಾಲಯವನ್ನು ಸಾರ್ವಜನಿಕರ ದರ್ಶನಕ್ಕೆ ಬುಧವಾರ ಮುಕ್ತಗೊಳಿಸಲಾಗಿದೆ.

'100 ಮಂದಿ ಹಿಂದೂಗಳು, ಕೆಲವು ಸಿಖ್ಖರು, ಕ್ರಿಶ್ಚಿಯನ್ನರು ಹಾಗೂ ಮುಸ್ಲಿಂ ನಾಯಕರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು' ಎಂದು ರಾಷ್ಟ್ರೀಯ ಸಮಿತಿಯು ವಕ್ತಾರ ಆಮೀರ್ ಹಶ್ಮಿ ತಿಳಿಸಿದರು.

ಹಿಂದೂ ಧರ್ಮಕ್ಕೆ ಮತಾಂತರ ಆಗಿದ್ದೇವೆ ಎಂದು ಹೇಳಿಕೊಂಡಿದ್ದ ಕ್ರೈಸ್ತ ಕುಟುಂಬವೊಂದು ಕಳೆದ ಎರಡು ದಶಕಗಳಿಂದ ವಾಲ್ಮೀಕಿ ದೇವಸ್ಥಾನ ಇರುವ ಜಾಗವನ್ನು ತನ್ನ ವಶದಲ್ಲಿರಿಸಿಕೊಂಡಿತ್ತು. ಬಹುವರ್ಷಗಳ ಕಾನೂನು ಹೋರಾಟದ ಮೂಲಕ ಈ ದೇವಾಲಯವನ್ನು ಬಿಡಿಸಿಕೊಳ್ಳಲಾಗಿದೆ. ಪಾಕಿಸ್ತಾನದಲ್ಲಿ ಅಲ್ಪಸಂಖ್ಯಾತರ ಪೂಜಾಸ್ಥಳಗಳ ಉಸ್ತುವಾರಿ ನೋಡಿಕೊಳ್ಳುವ 'ದಿ ಇವ್ಯಾಕ್ಯೂ ಟ್ರಸ್ಟ್ ಪ್ರಾಪರ್ಟಿ ಬೋರ್ಡ್' (ಇಟಿಪಿಬಿ) ಎಂಬ ರಾಷ್ಟ್ರೀಯ ಸಮಿತಿಯು ದೇವಾಲಯ ಇರುವ ಜಾಗವನ್ನು ಕಳೆದ ತಿಂಗಳು ತನ್ನ ಉಸ್ತುವಾರಿಗೆ ಪಡೆದುಕೊಂಡಿದೆ.

ವಾಲ್ಮೀಕಿ ಸಮುದಾಯದವರಿಗೆ ಮಾತ್ರವೇ ದೇವಾಲಯ ಪ್ರವೇಶಕ್ಕೆ ಕ್ರೈಸ್ತ ಕುಟುಂಬವು ಅನುಮತಿ ನೀಡುತ್ತಿತ್ತು ಎನ್ನಲಾಗಿದೆ.

ನೇಪಾಳ: ನವೆಂಬರ್ 20ಕ್ಕೆ ಸಾರ್ವತ್ರಿಕ ಚುನಾವಣೆ

ಕಠ್ಮಂಡು: ನೆರೆಯ ನೇಪಾಳದ ಸಂಸತ್ತಿಗೆ ನವೆಂಬರ್ 20 ರಂದು ಒಂದೇ ಹಂತದಲ್ಲಿ ಚುನಾವಣೆ ನಡೆಯಲಿದೆ. ಪ್ರಧಾನಿ ಶೇರ್ ಬಹದ್ದೂರ್ ದೇವುಬಾ ನೇತೃತ್ವದಲ್ಲಿ ನಡೆದ ಸಚಿವ ಸಂಪುಟ ಸಭೆಯಲ್ಲಿ ಈ ನಿರ್ಧಾರ ಕೈಗೊಳ್ಳಲಾಗಿದೆ.

ಸಂಸತ್ತಿನ ಪ್ರಜಾಪ್ರತಿನಿಧಿ ಸಭೆ ಮತ್ತು ಪ್ರಾಂತೀಯ ವಿಧಾನಸಭೆಗಳಿಗೆ ಚುನಾವಣೆ ನಡೆಯಲಿದೆ ಎಂದು ಮೂಲಗಳು ತಿಳಿಸಿವೆ.

ತೈವಾನ್ ಸುತ್ತ ಯುದ್ಧವಿಮಾನ, ಯುದ್ಧನೌಕೆ ನಿಯೋಜನೆ

11 ಕ್ಷಿಪಣಿ ಉಡಾಯಿಸಿದ ಚೀನಾ

ಪಿಂಗ್‌ಟ್ಯಾನ್, ಚೀನಾ (ಎಎಫ್‌ಪಿ/ಪಿಟಿಐ): ಅಮೆರಿಕದ ಸಂಸತ್ ಸ್ಪೀಕರ್ ನ್ಯಾನ್ಸಿ ಪೆಲೋಸಿ ಅವರು ತೈವಾನ್‌ಗೆ ನೀಡಿದ ಭೇಟಿಯಿಂದ ವ್ಯಗ್ರಗೊಂಡು ಪ್ರತೀಕಾರಕ್ಕಿಳಿದಿರುವ ಚೀನಾ ಗುರುವಾರ ತೈವಾನ್ ದ್ವೀಪ ಗುರಿಯಾಗಿಸಿ ಸರಣಿ ಕ್ಷಿಪಣಿಗಳನ್ನು ಉಡಾಯಿಸಿದೆ.

'ಪ್ರಚೋದನೆ ನೀಡುವ ದೇಶ ಅಮೆರಿಕ ತಕ್ಕಬೆಲೆ ತೆರಲಿದೆ' ಎಂದು ಎಚ್ಚರಿಸಿದ್ದ ಚೀನಾ, ಗುರುವಾರದಿಂದ ತೈವಾನ್ ಸುತ್ತಲೂ ಸೇನಾ ತಾಲೀಮು ಮತ್ತು ಕ್ಷಿಪಣಿ ಪ್ರಯೋಗ ನಡೆಸುವುದಾಗಿ ಘೋಷಿಸಿತ್ತು. ತೈವಾನ್ ಮತ್ತು ಅದರ ನೆರವಿಗೆ ಬರುವ ಮಿತ್ರ ದೇಶವನ್ನು ನೇರ ಗುರಿಯಾಗಿಸಿ ಡಾಂಗ್ ಫೆಂಗ್ ದರ್ಜೆಯ 11 ಖಂಡಾಂತರ ಕ್ಷಿಪಣಿಗಳನ್ನು ಸ್ಥಳೀಯ ಕಾಲಮಾನ ಮಧ್ಯಾಹ್ನ 1.56ರಿಂದ ಸಂಜೆ 4ರ ನಡುವೆ ಎಚ್ಚರಿಕೆ ರೂಪದಲ್ಲಿ ಪ್ರಯೋಗಿಸಿದೆ.

ತೈವಾನ್ ಭೂ ಪ್ರದೇಶಕ್ಕೆ ಅತೀ ಸನಿಹದಲ್ಲಿ ಜಪಾನ್ ಸಮುದ್ರದ ವಿಶೇಷ ಆರ್ಥಿಕ ವಲಯದ ಮೇಲೆ ಈ ಕ್ಷಿಪಣಿಗಳು ಬಿದ್ದಿವೆ. ನೀರಿನೊಳಗಿನಿಂದಲೂ 500 ಕಿ.ಮೀ ದೂರದ ಗುರಿ ಭೇದಿಸುವ ಈ ಕ್ಷಿಪಣಿಗಳು ತೈವಾನ್‌ನ ಈಶಾನ್ಯ ಮತ್ತು ನೈಋತ್ಯ ದಿಕ್ಕನ್ನೂ ತಲುಪಿವೆ ಎಂದು ಚೀನಾ ಸೇನೆ ಹೇಳಿದೆ.

'ಕ್ಷಿಪಣಿಗಳ ನಿಖರತೆ ಮತ್ತು ಸಾಮರ್ಥ್ಯ ಪರೀಕ್ಷಿಸುವುದು ಮತ್ತು ಶತ್ರು ಪ್ರವೇಶ ತಡೆಯುವುದು ಅಥವಾ ಆ ಪ್ರದೇಶದ ಮೇಲೆ ನಿಯಂತ್ರಣ ಸಾಧಿಸುವ ಗುರಿ ಈ ಪ್ರಯೋಗದ ಉದ್ದೇಶವಾಗಿತ್ತು. ನಿರೀಕ್ಷಿತ ಫಲಿತಾಂಶ ಸಿಕ್ಕಿದೆ' ಎಂದು ಚೀನಾ ಹೇಳಿದೆ.



ಚೀನಾ ಸೇನೆ ಗುರುವಾರ ಕ್ಷಿಪಣಿ ಪ್ರಯೋಗ ನಡೆಸಿತು – ಎಪಿ/ಪಿಟಿಐ ಚಿತ್ರ

ಯುದ್ಧ ವಿಮಾನಗಳು, ಸಮರ ನೌಕೆಗಳನ್ನು ನಿಯೋಜಿಸುವ ಮೂಲಕ ತೈವಾನ್ ಸುತ್ತಲೂ ದಿಗ್ಬಂಧನ ವಿಧಿಸುವಂತೆ ಅತಿ ದೊಡ್ಡ ಸೇನಾ ತಾಲೀಮನ್ನೂ ಚೀನಾ ನಡೆಸುತ್ತಿದೆ.

ತೈವಾನ್ ಖಂಡನೆ: 'ಚೀನಾ ಸರಣಿಯಾಗಿ 11 ಕ್ಷಿಪಣಿಗಳನ್ನು ಉಡಾಯಿಸಿದೆ. ಇದು ಪ್ರಾದೇಶಿಕ ಶಾಂತಿ– ಸ್ಥಿರತೆಗೆ ಧಕ್ಕೆ ತರಲಿದೆ. ಇದು ಖಂಡನೀಯ' ಎಂದು ತೈವಾನ್ ಪ್ರತಿಕ್ರಿಯಿಸಿದೆ.

ಚೀನಾ ಯುದ್ಧ ವಿಮಾನಗಳು ಹಾರಾಟ ಆರಂಭಿಸುವುದಕ್ಕೂ ಮುನ್ನ ಗುರುವಾರ ನಸುಕಿನಲ್ಲಿ ತೈವಾನ್‌ನ ವಾಯುಪಡೆ ಮಿರಾಜ್ 2000 ಮತ್ತು ಎಫ್ -5 ಫೈಟರ್ ಜೆಟ್‌ಗಳ ಹಾರಾಟ ನಡೆಸಿದ್ದವು ಎಂದು ಮಾಧ್ಯಮಗಳು ವರದಿ ಮಾಡಿವೆ.

ಶ್ರೀಲಂಕಾದತ್ತ ಚೀನಾ ನೌಕೆ (ನವದೆಹಲಿ ವರದಿ): ತೈವಾನ್ ಜತೆಗಿನ ಸಂಘರ್ಷದ ಬೆನ್ನಲ್ಲೇ ಚೀನಾ ತನ್ನ ಅತ್ಯಾಧುನಿಕ ಸಮರನೌಕೆಯೊಂದನ್ನು ಕಣ್ಗಾವಲಿಗಾಗಿ ಶ್ರೀಲಂಕಾದ ಹಂಬನ್‌ತೋಟ ಬಂದರಿನತ್ತ ಕಳುಹಿಸುತ್ತಿದೆ. ಭಾರತದ ಭದ್ರತೆಯ ದೃಷ್ಟಿಯಲ್ಲಿ ಇದು ಕಳವಳ ಹೆಚ್ಚಿಸಿದೆ. ಖಂಡಾಂತರ ಕ್ಷಿಪಣಿ ಹಾಗೂ ಉಪಗ್ರಹಗಳನ್ನು ಜಾಡನ್ನು ಪತ್ತೆಹಚ್ಚುವ ಸಾಮರ್ಥ್ಯವನ್ನು ಈ ನೌಕೆ ಹೊಂದಿದೆ. ಈ ನೌಕೆ ಇದೇ 11 ಅಥವಾ 12ಕ್ಕೆ ಬಂದರಿಗೆ ಬರಲಿದೆ ಎನ್ನಲಾಗಿದೆ.

ತೈವಾನ್– ಚೀನಾ ಸಂಘರ್ಷದ ಪ್ರಮುಖಾಂಶಗಳು

- ಚೀನಾ ಸರಣಿ ಕ್ಷಿಪಣಿ ಉಡಾಯಿಸಿ ಉತ್ತರ ಕೊರಿಯಾವನ್ನು ಅನುಕರಿಸುತ್ತಿದೆ– ತೈವಾನ್ ಕಿಡಿ
- ಜಪಾನ್ ತಲುಪಿರುವ ನ್ಯಾನ್ಸಿ ಪೆಲೋಸಿ ಅವರು ತೈವಾನ್–ಬೀಜಿಂಗ್ ನಡುವಿನ ಉದ್ವಿಗ್ನತೆ ಬಗ್ಗೆ ದಕ್ಷಿಣ ಕೊರಿಯಾ ಭೇಟಿ ವೇಳೆ ಬಹಿರಂಗ ಹೇಳಿಕೆ ನೀಡಲಿಲ್ಲ
- ಚೀನಾಕ್ಕೆ ತೆರಳಬೇಕಿದ್ದ 40 ವಿಮಾನಗಳ ಸಂಚಾರವನ್ನು ತೈವಾನ್ ರದ್ದುಗೊಳಿಸಿತು
- ಚೀನಾ ಸೇನೆ ತೈವಾನ್ ಬಳಿ ಅಣ್ವಸ್ತ್ರ ಜಲಾಂತರ್ಗಾಮಿ ನೌಕೆಯಿಂದಲೂ ತಾಲೀಮು ನಡೆಸಿದೆ.

ಸಂಕ್ಷಿಪ್ತ ಸುದ್ದಿ

ವಿಶ್ವಸಂಸ್ಥೆ ಭದ್ರತಾ ಮಂಡಳಿ ವಿಶೇಷ ಸಭೆಗೆ ಭಾರತ ಆತಿಥ್ಯ

ವಿಶ್ವಸಂಸ್ಥೆ (ಪಿಟಿಐ): ಭಯೋತ್ಪಾದನೆ ನಿಗ್ರಹ ಸಂಬಂಧ ಚರ್ಚಿಸಲು ಈ ವರ್ಷದ ಅಕ್ಟೋಬರ್ 29ರಂದು ನಡೆಯಲಿರುವ ವಿಶ್ವಸಂಸ್ಥೆಯ ಭದ್ರತಾ ಮಂಡಳಿ ವಿಶೇಷ ಸಭೆಗೆ ಭಾರತ ಆತಿಥ್ಯ ವಹಿಸಲಿದೆ.

ಭಾರತವು ಭದ್ರತಾ ಮಂಡಳಿಯ ತಾತ್ಕಾಲಿಕ ಸದಸ್ಯತ್ವ ಹೊಂದಿದ್ದು, ಎರಡು ವರ್ಷಗಳ ಈ ಸದಸ್ಯತ್ವದ ಅವಧಿ ಈ ವರ್ಷದ ಡಿಸೆಂಬರ್‌ನಲ್ಲಿ ಅಂತ್ಯಗೊಳ್ಳಲಿದೆ.

ಅಮೆರಿಕ, ಚೀನಾ, ರಷ್ಯಾ, ಫ್ರಾನ್ಸ್, ಬ್ರಿಟನ್, ಅಲ್ಬೇನಿಯಾ, ಬ್ರೆಜಿಲ್, ಗಬೊನ್, ಘಾನಾ, ಐರ್ಲೆಂಡ್, ಕೆನ್ಯಾ, ಮೆಕ್ಸಿಕೊ, ನಾರ್ವೆ ಮತ್ತು ಯುನೈಟೆಡ್ ಅರಬ್ ಎಮಿರೇಟ್ಸ್‌ನ (ಯುಎಇ) ಪ್ರತಿನಿಧಿಗಳು ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ.

2ನೇ ಸಮೀಕ್ಷೆಯಲ್ಲೂ ರಿಷಿ ಸುನಕ್ ಹಿಂದಿಕ್ಕಿದ ಲಿಜ್

ಲಂಡನ್: ಬ್ರಿಟನ್‌ನ ಆಡಳಿತಾರೂಢ ಕನ್ಸರ್ವೇಟಿವ್ ಪಕ್ಷದ ಸದಸ್ಯರನ್ನು ಒಳಗೊಂಡಂತೆ ನಡೆದ 2ನೇ ಸಮೀಕ್ಷೆಯಲ್ಲಿ ಮುಂದಿನ ಪ್ರಧಾನಿ ಸ್ಥಾನಕ್ಕಾಗಿ ರಿಷಿ ಸುನಕ್ ಅವರಿಗಿಂತಲೂ ವಿದೇಶಾಂಗ ಕಾರ್ಯದರ್ಶಿ ಲಿಜ್ ಟ್ರಸ್ ಅವರು ಮುಂದಿದ್ದಾರೆ.

ಬುಧವಾರ ಕನ್ಸರ್ವೇಟಿವ್ ಹೋಮ್ ವೆಬ್‌ಸೈಟ್‌ನಲ್ಲಿ ಸಮೀಕ್ಷೆಯನ್ನು ಬಿಡುಗಡೆ ಮಾಡಲಾಗಿದ್ದು, ಲಿಜ್ ಟ್ರಸ್ ಪರವಾಗಿ ಶೇಕಡ 58ರಷ್ಟು ಸದಸ್ಯರ ಬೆಂಬಲವಿರುವುದು ಕಂಡುಬಂದಿದೆ.

ಬ್ರಿಟನ್‌ನ ಮಾಜಿ ಹಣಕಾಸು ಸಚಿವ ಮತ್ತು ಭಾರತ ಮೂಲದ ರಿಷಿ ಸುನಕ್ ಅವರು ಶೇಕಡ 26ರಷ್ಟು ಬೆಂಬಲ ಹೊಂದಿದ್ದು, ಶೇಕಡ 12 ರಷ್ಟು ಸದಸ್ಯರು ತಟಸ್ಥರಾಗಿದ್ದಾರೆ.

'ಅನರ್ಹತೆ ಭೀತಿಯಲ್ಲಿ ಇಮ್ರಾನ್ ಖಾನ್'

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ಅನರ್ಹತೆಯ ಭೀತಿ ಎದುರಿಸುತ್ತಿದ್ದಾರೆ ಎಂದು ಸ್ಥಳೀಯ ಮಾಧ್ಯಮವೊಂದು ಗುರುವಾರ ವರದಿ ಮಾಡಿದೆ.

'ಇಮ್ರಾನ್ ಅವರು ಆಸ್ತಿ ಘೋಷಣೆ ವೇಳೆ 'ತೋಷಖಾನ'ದಿಂದ (ಸರ್ಕಾರಿ ಖಜಾನೆ) ಸ್ವೀಕರಿಸಿರುವ ಉಡುಗೊರೆಗಳ ಕುರಿತ ಮಾಹಿತಿ ಬಹಿರಂಗಪಡಿಸಿಲ್ಲ. ಹೀಗಾಗಿ ಸಂವಿಧಾನದ 62 (1)(ಎಫ್) ವಿಧಿ ಅಡಿಯಲ್ಲಿ ಬದುಕಿರುವವರೆಗೂ ಚುನಾವಣೆಗೆ ಸ್ಪರ್ಧಿಸದಂತೆ ಅವರ ಮೇಲೆ ನಿರ್ಬಂಧ ಹೇರಬೇಕು ಎಂದು ಆಡಳಿತರೂಢ ಪಾಕಿಸ್ತಾನ ಡೆಮಾಕ್ರಟಿಕ್ ಮೂವ್‌ಮೆಂಟ್ (ಪಿಡಿಎಂ) ಚುನಾವಣಾ ಆಯೋಗಕ್ಕೆ ದೂರು ನೀಡಿದೆ' ಎಂದು ಎಕ್ಸ್‌ಪ್ರೆಸ್ ಟ್ರಿಬ್ಯೂನಲ್ ಪತ್ರಿಕೆಯು ವರದಿಯಲ್ಲಿ ವಿವರಿಸಿದೆ.

ಗರ್ಭಪಾತಕ್ಕೆ ವೈದ್ಯಕೀಯ ವೆಚ್ಚ: ಕಾರ್ಯಾದೇಶಕ್ಕೆ ಸಹಿ

ವಾಷಿಂಗ್ಟನ್ (ಎಪಿ): ಗರ್ಭಪಾತಕ್ಕೆ ಅವಕಾಶ ಇಲ್ಲದ ರಾಜ್ಯದಿಂದ ಗರ್ಭಪಾತಕ್ಕೆ ಅವಕಾಶ ಇರುವ ರಾಜ್ಯಗಳಿಗೆ ಹೋಗುವ ಮಹಿಳೆಯರಿಗೆ ವೈದ್ಯಕೀಯ ವೆಚ್ಚ ಭರಿಸುವುದಕ್ಕೆ ಸಂಬಂಧಿಸಿದ ಕಾರ್ಯಾದೇಶಕ್ಕೆ ಅಮೆರಿಕ ಅಧ್ಯಕ್ಷ ಜೋ ಬೈಡನ್ ಸಹಿ ಹಾಕಿದ್ದಾರೆ.

ಗರ್ಭಪಾತ ಮಾಡಿಸಿಕೊಳ್ಳುವ ಮಹಿಳೆಯರಿಗೆ ವೈದ್ಯಕೀಯ ವೆಚ್ಚ ಭರಿಸಲು ಅನುಮತಿ ಕೋರಿ ಅರ್ಜಿ ಸಲ್ಲಿಸಲು ಗರ್ಭಪಾತಕ್ಕೆ ಅವಕಾಶ ಇರುವ ರಾಜ್ಯಗಳಿಗೆ ಆಹ್ವಾನ ನೀಡಿ ಎಂದು ಶ್ವೇತಭವನದ ಮಾಧ್ಯಮ ಕಾರ್ಯದರ್ಶಿ ಕೆರಿನ್ ಜೀನ್ ಪೆರಿ ಅವರು ಆರೋಗ್ಯ ಮತ್ತು ಮಾನವ ಸೇವೆ ಇಲಾಖೆಗೆ ಹೇಳಿದ್ದಾರೆ.

ಗರ್ಭಪಾತವನ್ನು ಕಾನೂನುಬಾಹಿರ ಎಂದು ಸುಪ್ರೀಂ ಕೋರ್ಟ್ ಆದೇಶ ನೀಡಿದ ನಂತರದಲ್ಲಿ, ಗರ್ಭಪಾತಕ್ಕಾಗಿ ಅಂತರರಾಜ್ಯ ಪ್ರಯಾಣವು ಹೆಚ್ಚಾಗಿದೆ.

ಅಕ್ಟೋಬರ್ ವೇಳೆಗೆ ಪಾಕ್ ಚುನಾವಣೆ?

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದಲ್ಲಿ ಈ ವರ್ಷದ ಅಕ್ಟೋಬರ್ ವೇಳೆಗೆ ಸಾರ್ವತ್ರಿಕ ಚುನಾವಣೆ ನಡೆಸಲು ಪಾಕಿಸ್ತಾನ ಚುನಾವಣಾ ಆಯೋಗವು ಸಕಲ ಸಿದ್ಧತೆಗಳನ್ನೂ ಮಾಡಿಕೊಳ್ಳುತ್ತಿದೆ ಎಂದು ಮಾಧ್ಯಮವೊಂದು ಗುರುವಾರ ವರದಿ ಮಾಡಿದೆ.

'ನಿಗದಿಗಿಂತಲೂ ಒಂದು ವರ್ಷ ಮುಂಚಿತವಾಗಿ ಚುನಾವಣೆ ನಡೆಸಲು ಆಯೋಗ ನಿರ್ಧರಿಸಿದೆ. ಇದಕ್ಕೆ ಪೂರಕವೆಂಬಂತೆ ಕ್ಷೇತ್ರಗಳ ವಿಂಗಡಣೆ ಕಾರ್ಯ ಪೂರ್ಣಗೊಳಿಸಿದೆ' ಎಂದು ದಿ ಎಕ್ಸ್‌ಪ್ರೆಸ್ ಟ್ರಿಬ್ಯೂನಲ್ ಪತ್ರಿಕೆ ವರದಿಯಲ್ಲಿ ಉಲ್ಲೇಖಿಸಿದೆ.

ಪ್ರೊ ಕಬಡ್ಡಿ ಲೀಗ್ ಆಟಗಾರರ ಹರಾಜು ಪ್ರಕ್ರಿಯೆ ಇಂದಿನಿಂದ

ಬಲಿಷ್ಠ ಆಟಗಾರರ ಮೇಲೆ ತಂಡಗಳ ಕಣ್ಣು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರೊ ಕಬಡ್ಡಿ ಲೀಗ್ (ಪಿಕೆಎಲ್) ಟೂರ್ನಿಯ ಒಂಬತ್ತನೇ ಆವೃತ್ತಿಗೆ ಆಟಗಾರರ ಹರಾಜು ಪ್ರಕ್ರಿಯೆ ಶುಕ್ರವಾರ ಮತ್ತು ಶನಿವಾರ ನಡೆಯಲಿದ್ದು, ಬಲಿಷ್ಠ ಆಟಗಾರರನ್ನು ಸೆಳೆಯಲು 12 ಫ್ರಾಂಚೈಸ್‌ಗಳು ಪ್ರಯತ್ನಿಸಲಿವೆ.

ಮುಂಬೈನಲ್ಲಿ ಎರಡು ದಿನಗಳ ಕಾಲ ಹರಾಜು ಪ್ರಕ್ರಿಯೆ ನಡೆಯಲಿದೆ. ಹೊಸ ಯುವ ಆಟಗಾರರು (ಎನ್‌ವೈಪಿ), ದೇಶಿ ಆಟಗಾರರು ಮತ್ತು ವಿದೇಶಿ ಆಟಗಾರರು ಎಂಬ ವಿಭಾಗಗಳಲ್ಲಿ ಹರಾಜು ನಡೆಯಲಿದೆ. ಪ್ರತಿ ಫ್ರಾಂಚೈಸ್‌ಗಳು ₹ 4.4 ಕೋಟಿ ವೆಚ್ಚ ಮಾಡಬಹುದಾಗಿದೆ.

ಆಟಗಾರರನ್ನು ಎ,ಬಿ,ಸಿ ಮತ್ತು ಡಿ ವಿಭಾಗಗಳಾಗಿ ವಿಂಗಡಿಸಲಾಗಿದೆ. 'ಎ' ವಿಭಾಗದವರಿಗೆ ಗರಿಷ್ಠ ಮೂಲ ಬೆಲೆ ₹ 30 ಲಕ್ಷ ಸಿಗಲಿದೆ. 'ಬಿ' ವಿಭಾಗದವರಿಗೆ ₹ 20 ಲಕ್ಷ, 'ಸಿ' ವಿಭಾಗದವರಿಗೆ ₹ 10 ಲಕ್ಷ ಮತ್ತು 'ಡಿ' ವಿಭಾಗದವರಿಗೆ ₹ 6 ಲಕ್ಷ ಸಿಗಲಿದೆ.

ಬೆಂಗಳೂರು ಬುಲ್ಸ್ ತಂಡವು ತಾರಾ ಆಟಗಾರ ಪವನ್‌ಕುಮಾರ್ ಶೆರಾವತ್ ಅವರನ್ನು ಬಿಡುಗಡೆ ಮಾಡಿದ್ದು, ಮಹೇಂದರ್ ಸಿಂಗ್, ಮಯೂರ್ ಕದಂ ಮತ್ತು ಜಿ.ಬಿ. ಮೋರೆ ಅವರನ್ನು ಉಳಿಸಿಕೊಂಡಿದೆ.

500ಕ್ಕಿಂತ ಹೆಚ್ಚು ಆಟಗಾರರು ಹರಾಜಿಗೆ ಲಭ್ಯವಿದ್ದಾರೆ. ಈ ವರ್ಷ ಬೆಂಗಳೂರಿನಲ್ಲಿ ನಡೆದ ಖೇಲೊ ಇಂಡಿಯಾ ವಿಶ್ವವಿದ್ಯಾಲಯ ಕ್ರೀಡಾಕೂಟದಲ್ಲಿ ಅಗ್ರ ಎರಡು ಸ್ಥಾನ ಗಳಿಸಿದ ತಂಡಗಳ 24 ಆಟಗಾರರೂ ಇದರಲ್ಲಿ ಸೇರಿದ್ದಾರೆ. ಮಶಾಲ್ ಸ್ಪೋರ್ಟ್ಸ್ ಆಯೋಜಿಸುವ ಟೂರ್ನಿಯು ಅಕ್ಟೋಬರ್‌ನಿಂದ ಡಿಸೆಂಬರ್‌ವರೆಗೆ ನಡೆಯುವ ನಿರೀಕ್ಷೆಯಿದೆ.



ಎಂಟನೇ ಆವೃತ್ತಿಯ ಪ್ರೊ ಕಬಡ್ಡಿ ಲೀಗ್ ಟೂರ್ನಿಯ ಪಂದ್ಯದಲ್ಲಿ ಪವನ್ ಶೆರಾವತ್ ರೇಡ್

ಬಿಡುಗಡೆಗೊಂಡಿರುವ ಪ್ರಮುಖ ಆಟಗಾರರು:
ಪವನ್ ಶೆರಾವತ್ (ಬೆಂಗಳೂರು ಬುಲ್ಸ್), ಪ್ರದೀಪ್ ನರ್ವಾಲ್ (ಯುಪಿ ಯೋಧಾ), ಅಭಿಷೇಕ್ ಸಿಂಗ್ (ಯು ಮುಂಬಾ), ವಿಕಾಸ್ ಖಂಡೋಲ (ಹರಿಯಾಣ ಸ್ಟೀಲರ್ಸ್), ದೀಪಕ್ ಹೂಡಾ (ಜೈಪುರ ಪಿಂಕ್ ಪ್ಯಾಂಥರ್ಸ್), ಸುರ್ಜಿತ್ ಸಿಂಗ್ (ತಮಿಳ್ ತಲೈವಾಸ್), ನಿತಿನ್ ತೋಮರ್ (ಪುಣೇರಿ ಪಲ್ಟನ್), ಜೋಗಿಂದರ್ ನರ್ವಾಲ್ (ದಬಾಂಗ್ ಡೆಲ್ಲಿ), ರೋಹಿತ್ ಕುಮಾರ್ (ತೆಲುಗು ಟೈಟನ್ಸ್)

500+ ಹರಾಜಿಗೆ ಲಭ್ಯ ಇರುವ ಆಟಗಾರರು

111 ತಂಡಗಳಲ್ಲಿ ಉಳಿದುಕೊಂಡಿರುವವರು

25 ತಂಡಗಳ ಗರಿಷ್ಠ ಆಟಗಾರರ ಸಂಖ್ಯೆ

18 ತಂಡಗಳ ಕನಿಷ್ಠ ಆಟಗಾರರ ಸಂಖ್ಯೆ

ಹರಾಜು: ಆಗಸ್ಟ್ 5 ಮತ್ತು 6
ಸ್ಥಳ: ಮುಂಬೈ, **ಆರಂಭ:** ಸಂಜೆ 6.30
ನೇರ ಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್‌ಸ್ಟಾರ್

ನಾಲ್ಕರ ಘಟ್ಟಕ್ಕೆ ಲಗ್ಗೆಯಿಟ್ಟ ಭಾರತ

ಕ್ರಿಕೆಟ್: ರೇಣುಕಾಸಿಂಗ್ ಉತ್ತಮ ಬೌಲಿಂಗ್; ಜೆಮಿಮಾ ಅರ್ಧಶತಕದ ಆಟ



ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತ ಮಹಿಳಾ ಕ್ರಿಕೆಟ್ ತಂಡವು ಕಾಮನ್‌ವೆಲ್ತ್ ಕ್ರೀಡಾಕೂಟದಲ್ಲಿ ಇದೇ ಮೊದಲ ಬಾರಿ ನಡೆಯುತ್ತಿರುವ ಟಿ20 ಕ್ರಿಕೆಟ್‌ನಲ್ಲಿ ಸೆಮಿಫೈನಲ್ ಪ್ರವೇಶಿಸಿತು.

ಬುಧವಾರ ತಡರಾತ್ರಿ ಮುಗಿದ 'ಎ' ಗುಂಪಿನ ಪಂದ್ಯದಲ್ಲಿ ಹರ್ಮನ್‌ಪ್ರೀತ್ ಕೌರ್ ಬಳಗವು 100 ರನ್‌ಗಳಿಂದ ಬಾರ್ಬಡಿಸ್ ವಿರುದ್ಧ ಜಯಿಸಿತು.

ಟಾಸ್ ಗೆದ್ದ ಬಾರ್ಬಡಿಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಆರಂಭಿಕ ಬ್ಯಾಟರ್ ಶಫಾಲಿ ವರ್ಮಾ (43; 26ಎ, 4X7, 6X1) ಮತ್ತು ಜೆಮಿಮಾ ರಾಡ್ರಿಗಸ್ (ಔಟಾಗದೆ 56; 46ಎ, 4X6, 6X1) ಎರಡನೇ ವಿಕೆಟ್ ಜೊತೆಯಾಟದಲ್ಲಿ ಗಳಿಸಿದ 71 ರನ್‌ಗಳನ್ನು ಸೇರಿಸಿದರು. ಇದರಿಂದಾಗಿ ತಂಡವು 20 ಓವರ್‌ಗಳಲ್ಲಿ 4 ವಿಕೆಟ್‌ಗಳಿಗೆ 162 ರನ್ ಗಳಿಸಿತು.

ಇದಕ್ಕುತ್ತರವಾಗಿ ಬಾರ್ಬಡಿಸ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 62 ರನ್ ಗಳಿಸಲಷ್ಟೇ ಶಕ್ತವಾಯಿತು. ಮಧ್ಯಮವೇಗಿ ರೇಣುಕಾ ಸಿಂಗ್ (10ಕ್ಕೆ4) ಅವರ ಬೌಲಿಂಗ್‌ಗೆ ತಂಡದ ಪ್ರಮುಖ ಬ್ಯಾಟರ್‌ಗಳು ವಿಫಲರಾದರು. ಕೈಶೊನಾ ನೈಟ್ (16; 20ಎ) ಮತ್ತು ಶಕೀರಾ ಸೆಲ್ಮಾನ್ (ಔಟಾಗದೆ 12) ಅವರಿಬ್ಬರನ್ನು ಬಿಟ್ಟರೆ ಉಳಿದವರು ಎರಡಂಕಿ ಸ್ಕೋರ್ ತಲುಪಲಿಲ್ಲ. ಗುಂಪಿನಲ್ಲಿ ಅಗ್ರಸ್ಥಾನ ಪಡೆದ ಭಾರತ ತಂಡವು ನಾಲ್ಕರ ಘಟ್ಟಕ್ಕೆ ಲಗ್ಗೆ ಇಟ್ಟಿತು.

ಸಂಕ್ಷಿಪ್ತ ಸ್ಕೋರು: 20 ಓವರ್‌ಗಳಲ್ಲಿ 4ಕ್ಕೆ162, ಬಾರ್ಬಡಿಸ್: 20 ಓವರ್‌ಗಳಲ್ಲಿ 8ಕ್ಕೆ62 (ಕೈಶೊನಾ ನೈಟ್ 16, ಶಕೀರಾ ಸೆಲ್ಮನ್ ಔಟಾಗದೆ 12, ರೇಣುಕಾಸಿಂಗ್ 10ಕ್ಕೆ4) ಫಲಿತಾಂಶ: ಭಾರತ ತಂಡಕ್ಕೆ 100 ರನ್‌ಗಳ ಜಯ. ಸೆಮಿಫೈನಲ್‌ಗೆ ಪ್ರವೇಶ



ಭಾರತ ತಂಡದ ಆಟಗಾರ್ತಿಯರ ಸಂಭ್ರಮ–ಪಿಟಿಐ ಚಿತ್ರ

ಕಂಠೀರವ ಕ್ರೀಡಾಂಗಣದಲ್ಲಿ ಮತ್ತೆ ಕಾಮಗಾರಿ

ಅಥ್ಲೀಟ್‌ಗಳಿಗೆ ತೊಂದರೆ: ಆರೋಪ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಂಠೀರವ ಕ್ರೀಡಾಂಗಣದಲ್ಲಿ ನಡೆಯುತ್ತಿರುವ ಕಾಮಗಾರಿಯಿಂದ ಅಥ್ಲೀಟ್‌ಗಳ ಅಭ್ಯಾಸಕ್ಕೆ ತೊಂದರೆಯಾಗಿದೆ ಎಂದು ಕೋಚ್‌ಗಳು ದೂರಿದ್ದಾರೆ.

'ಟ್ರ್ಯಾಕ್‌ನ ಮಧ್ಯಭಾಗದಲ್ಲಿರುವ ಹುಲ್ಲಿನ ಅಂಕಣವನ್ನು ಹೊಸದಾಗಿ ಸಜ್ಜುಗೊಳಿಸುವ ಕೆಲಸ ನಡೆಯುತ್ತಿದೆ. ಥ್ರೋ (ಜಾವೆಲಿನ್, ಡಿಸ್ಕಸ್ ಮತ್ತು ಹ್ಯಾಮರ್) ಸ್ಪರ್ಧೆಗಳಿಗೆ ಕ್ರೀಡಾಂಗಣದ ಹುಲ್ಲಿನ ಅಂಕಣ ಬಳಸಲು ಅವಕಾಶ ನೀಡುತ್ತಿಲ್ಲ' ಎಂದು ಕೋಚ್ ಎನ್. ಆರ್.ರಮೇಶ್ ಆರೋಪಿಸಿದ್ದಾರೆ.

'ಟ್ರ್ಯಾಕ್‌ನ ಸುತ್ತಲೂ 20 ರಿಂದ 30 ಲೋಡ್‌ಗಳಷ್ಟು ಮರಳು ರಾಶಿ ಹಾಕಿದ್ದಾರೆ. ಇದರಿಂದ ಮಳೆ ನೀರು ಸರಿಯಾಗಿ ಹರಿದುಹೋಗದೆ ಟ್ರ್ಯಾಕ್ ಮೇಲೆ ನಿಂತಿದೆ. ಇತ್ತೀಚೆಗಷ್ಟೇ ₹ 3.5 ಕೋಟಿ ಖರ್ಚು ಮಾಡಿ ಹೊಸ ಟ್ರ್ಯಾಕ್ ಹಾಸಲಾಗಿತ್ತು. ಅದಕ್ಕೆ ಹಾನಿಯಾಗುವ ಸಾಧ್ಯತೆಯಿದೆ' ಎಂದು ದೂರಿದರು.


ಕಂಠೀರವ ಕ್ರೀಡಾಂಗಣದ ಹುಲ್ಲಿನ ಅಂಕಣದಲ್ಲಿ ಮರಳು ಸುರಿದಿರುವುದು

ಕಂಠೀರವ ಕ್ರೀಡಾಂಗಣದಲ್ಲಿ ಮತ್ತೆ ಫುಟ್‌ಬಾಲ್ ಪಂದ್ಯಗಳನ್ನು ಆಯೋಜಿಸಲು ಹುಲ್ಲಿನ ಅಂಕಣ ಅಣಿಗೊಳಿಸಲಾಗುತ್ತಿದೆ ಎಂಬ ಆತಂಕವನ್ನು ಅವರು ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ಎಫ್‌ಸಿ ತಂಡ, ಇಂಡಿಯನ್ ಸೂಪರ್‌ಲೀಗ್‌ನ ತವರು ಪಂದ್ಯಗಳನ್ನು ಕಂಠೀರವ ಕ್ರೀಡಾಂಗಣದಲ್ಲಿ ಆಡುತ್ತದೆ. ಆದರೆ ಕೋವಿಡ್ ಕಾರಣ ಕಳೆದ ಎರಡು ವರ್ಷಗಳಲ್ಲಿ ಇಲ್ಲಿ ಯಾವುದೇ ಪಂದ್ಯ ನಡೆದಿಲ್ಲ.

'ಕಂಠೀರವ ಕ್ರೀಡಾಂಗಣದಲ್ಲಿ ಅಥ್ಲೆಟಿಕ್ಸ್ ಹೊರತುಪಡಿಸಿ, ಬೇರೆ ಕ್ರೀಡೆಗಳಿಗೆ ಅವಕಾಶ ನೀಡುವುದಿಲ್ಲ ಎಂದು ಕ್ರೀಡಾ ಸಚಿವರು ಭರವಸೆ ನೀಡಿದ್ದರು. ಅಥ್ಲೆಟಿಕ್ ಕೂಟಗಳ ಆಯೋಜನೆ ಮತ್ತು ಅಥ್ಲೀಟ್‌ಗಳ ಅಭ್ಯಾಸಕ್ಕೆ ಯಾವುದೇ ಅಡ್ಡಿ ಉಂಟಾಗಬಾರದು' ಎಂದು ಆಗ್ರಹಿಸಿದ್ದಾರೆ.

ಕ್ರೀಡಾಂಗಣದಲ್ಲಿ ಕೈಗೊಂಡಿರುವ ಕಾಮಗಾರಿ ಬಗ್ಗೆ ಸ್ಪಷ್ಟನೆ ನೀಡಿರುವ ಡಿವೈಇಎಸ್ ಜಂಟಿ ನಿರ್ದೇಶಕ ಎಂ.ಎಸ್. ರಮೇಶ್, 'ಫುಟ್‌ಬಾಲ್ ಪಂದ್ಯಕ್ಕಾಗಿ ಹುಲ್ಲಿನ ಅಂಕಣ ಸಜ್ಜುಗೊಳಿಸುವ ಕೆಲಸ ನಡೆಯುತ್ತಿಲ್ಲ. ಈಗ ಕೈಗೊಂಡಿರುವುದು ನಿಯಮಿತ ನಿರ್ವಹಣಾ ಕೆಲಸ ಮಾತ್ರ. ಈ ಕಾಮಗಾರಿ ಇನ್ನೂ 15 ದಿನ ಮುಂದುವರಿಯಲಿದೆ' ಎಂದಿದ್ದಾರೆ.

ಫುಟ್‌ಬಾಲ್: ಭಾರತ– ಬಾಂಗ್ಲಾ ಹಣಾಹಣಿ

ಭುವನೇಶ್ವರ (ಪಿಟಿಐ): ಭಾರತ ತಂಡವು ಸ್ಯಾಫ್ 20 ವರ್ಷದೊಳಗಿನವರ ಫುಟ್‌ಬಾಲ್ ಟೂರ್ನಿಯ ಫೈನಲ್‌ನಲ್ಲಿ ಶುಕ್ರವಾರ ಬಾಂಗ್ಲಾದೇಶ ಸವಾಲು ಎದುರಿಸಲಿದ್ದು, ಗೆಲ್ಲುವ ನೆಚ್ಚಿನ ತಂಡ ಎನಿಸಿದೆ.

ರೌಂಡ್ ರಾಬಿನ್ ಲೀಗ್ ಹಂತದ ಪಂದ್ಯಗಳಲ್ಲಿ ಬಾಂಗ್ಲಾದೇಶ ಮತ್ತು ಭಾರತ ಕ್ರಮವಾಗಿ ಮೊದಲ ಮತ್ತು ಎರಡನೇ ಸ್ಥಾನ ಗಳಿಸಿದ್ದವು.

ಇಲ್ಲಿನ ಕಳಿಂಗ ಕ್ರೀಡಾಂಗಣದಲ್ಲಿ ಹಣಾಹಣಿ ನಡೆಯಲಿದೆ.

ಟೂರ್ನಿಯಲ್ಲಿ ಉಭಯ ತಂಡಗಳ ಇಬ್ಬರು ಆಟಗಾರರು ಅಮಾನತುಗೊಂಡಿದ್ದಾರೆ. ಬಾಂಗ್ಲಾದೇಶದ ಶಹೀದುಲ್ ಇಸ್ಲಾಮ್ ಮತ್ತು ಭಾರತದ ಪಾರ್ಥಿವ್ ಗೊಗೊಯಿ ಅಮಾನತುಗೊಂಡವರು.

ಬ್ರಿಟ್ನಿ ಗ್ರಿನರ್‌ಗೆ 9 ವರ್ಷ ಜೈಲು

ಕಿಮ್ಕಿ, ರಷ್ಯಾ (ಎಎಫ್‌ಪಿ): ಮಾದಕ ದ್ರವ್ಯ ಸಾಗಣೆ ಆರೋಪದಲ್ಲಿ ಸಿಲುಕಿರುವ ಅಮೆರಿಕದ ಬ್ಯಾಸ್ಕೆಟ್‌ಬಾಲ್ ತಾರೆ ಬ್ರಿಟ್ನಿ ಗ್ರಿನರ್ ಅವರಿಗೆ ರಷ್ಯಾದ ನ್ಯಾಯಾಲಯ 9 ವರ್ಷ ಜೈಲು ಹಾಗೂ ₹ 13 ಲಕ್ಷ ದಂಡ ವಿಧಿಸಿದೆ.

'ಮಾದಕ ದ್ರವ್ಯ ಸಾಗಣೆ ಪ್ರಕರಣದಲ್ಲಿ ಬ್ರಿಟ್ನಿ ತಪ್ಪಿತಸ್ಥೆ ಎಂಬುದು ಸಾಬೀತಾಗಿದೆ' ಎಂದು ತೀರ್ಪು ಪ್ರಕಟಿಸಿದ ಮಾಸ್ಕೊ ಹೊರವಲಯದ ಕಿಮ್ಕಿಯ ನ್ಯಾಯಾಲಯದ ನ್ಯಾಯಾಧೀಶರಾದ ಅನ್ನಾ ಸೊಟ್ನಿಕೊವಾ ಹೇಳಿದರು.ಈ ತೀರ್ಪಿಗೆ ಅಮೆರಿಕ ತೀವ್ರ ಆಕ್ಷೇಪ ವ್ಯಕ್ತಪಡಿಸಿದೆ. ತೀರ್ಪಿನ ಬೆನ್ನಲ್ಲೇ ಪ್ರಕಟಣೆ ಹೊರಡಿಸಿರುವ ಅಮೆರಿಕದ ಅಧ್ಯಕ್ಷ ಜೊ ಬೈಡನ್, 'ತೀರ್ಪನ್ನು ಒಪ್ಪಲಾಗದು. ಗ್ರಿನರ್ ಅವರನ್ನು ರಷ್ಯಾ ಅಕ್ರಮವಾಗಿ ವಶದಲ್ಲಿರಿಸಿದೆ' ಎಂದು ಟೀಕಿಸಿದ್ದಾರೆ.


ಬ್ರಿಟ್ನಿ ಗ್ರೆನರ್

'ಗ್ರಿನರ್ ತಪ್ಪಿತಸ್ಥರಾಗಿದ್ದಾರೆ. ಅವರಿಗೆ ಒಂಬತ್ತೂವರೆ ವರ್ಷಗಳ ಜೈಲು ಶಿಕ್ಷೆಯಾಗಬೇಕು' ಎಂದು ಸರ್ಕಾರಿ ವಕೀಲರಾದ ನಿಕೊಲೆ ವ್ಲಾಸೆಂಕೊ ನ್ಯಾಯಾಲಯಕ್ಕೆ ಮನವಿ ಮಾಡಿದ್ದರು.ನಿಷೇಧಿತ ಮಾದಕ ಪದಾರ್ಥಗಳನ್ನು ಸಾಗಿಸುತ್ತಿದ್ದ ಗ್ರಿನರ್ ಅವರನ್ನು ಆರು ತಿಂಗಳ ಹಿಂದೆ ಮಾಸ್ಕೊ ವಿಮಾನ ನಿಲ್ದಾಣದಲ್ಲಿ ಬಂಧಿಸಲಾಗಿತ್ತು.

ಈಜು: ಅದ್ವೈತ್‌ಗೆ 7ನೇ ಸ್ಥಾನ

ಬರ್ಮಿಂಗ್‌ಹ್ಯಾಮ್ (ಪಿಟಿಐ): ಭಾರತದ ಅದ್ವೈತ್ ಪಾಗೆ ಮತ್ತು ಕುಶಾಗ್ರ ರಾವತ್ ಅವರು ಪುರುಷರ ಈಜು ಸ್ಪರ್ಧೆಯ 1,500 ಮೀ. ಫ್ರೀಸ್ಟೈಲ್‌ನಲ್ಲಿ ಕ್ರಮವಾಗಿ 7 ಹಾಗೂ 8ನೇ ಸ್ಥಾನ ಗಳಿಸಿದರು.

ಪಾಗೆ ಅವರು 15 ನಿ. 32.36 ಸೆ.ಗಳಲ್ಲಿ ಗುರಿ ತಲುಪಿದರೆ, ರಾವತ್ 15 ನಿ. 42.67 ಸೆ.ಗಳನ್ನು ತೆಗೆದುಕೊಂಡರು. ಫೈನಲ್‌ನಲ್ಲಿ ಒಟ್ಟು 8 ಸ್ಪರ್ಧಿಗಳು ಕಣದಲ್ಲಿದ್ದರು. ಇದರೊಂದಿಗೆ ಕಾಮನ್‌ವೆಲ್ತ್ ಕೂಟದ ಈಜು ಸ್ಪರ್ಧೆಯಲ್ಲಿ ಭಾರತದ ಸವಾಲು ಕೊನೆಗೊಂಡಿದೆ.

ಶ್ರೀಹರಿ ನಟರಾಜ್ ಅವರು ಪುರುಷರ 50 ಮೀ. ಬ್ಯಾಕ್‌ಸ್ಟ್ರೋಕ್ ಐದನೇ ಸ್ಥಾನ ಪಡೆದುಕೊಂಡದ್ದು ಭಾರತದ ಪರ ಅತ್ಯುತ್ತಮ ಸಾಧನೆ ಎನಿಸಿಕೊಂಡಿತು.

ಆಸ್ಟ್ರೇಲಿಯಾ, ದಕ್ಷಿಣ ಆಫ್ರಿಕಾ ಎದುರಿನ ಸರಣಿ: ಭಾರತ ಆತಿಥ್ಯ

ನವದೆಹಲಿ (ಪಿಟಿಐ): ಸೆಪ್ಟೆಂಬರ್ ಹಾಗೂ ಅಕ್ಟೋಬರ್‌ನಲ್ಲಿ ಆಸ್ಟ್ರೇಲಿಯಾ ಕ್ರಿಕೆಟ್ ತಂಡದ ಎದುರಿನ ಸರಣಿಗಳಿಗೆ ಭಾರತವು ಆತಿಥ್ಯ ವಹಿಸಲಿದೆ.

ಸೆ 20ರಿಂದ 25ರವರೆಗೆ ಆಸ್ಟ್ರೇಲಿಯಾ ತಂಡವು ಮೂರು ಟಿ20 ಪಂದ್ಯಗಳ ಸರಣಿಯಲ್ಲಿ ಆಡಲಿದೆ. ದಕ್ಷಿಣ ಆಫ್ರಿಕಾ ತಂಡವು ಸೆ 28ರಿಂದ ಅಕ್ಟೋಬರ್ 4ವರೆಗೆ ಮೂರು ಟಿ20 ಪಂದ್ಯಗಳನ್ನು ಆಡಲಿದೆ. ಈ ಎರಡೂ ಸರಣಿಗಳು ಆಸ್ಟ್ರೇಲಿಯಾದಲ್ಲಿ ನಡೆಯಲಿರುವ ಟಿ20 ವಿಶ್ವಕಪ್‌ಗೂ ಮುನ್ನದ ಸಿದ್ಧತೆಯ ವೇದಿಕೆಗಳಾಗಿವೆ. ಅ. 6ರಿಂದ 11ರವರೆಗೆ ದಕ್ಷಿಣ ಆಫ್ರಿಕಾ ಹಾಗೂ ಭಾರತ 3 ಏಕದಿನ ಪಂದ್ಯಗಳಲ್ಲಿ ಆಡಲಿವೆ.

ಮಹಾರಾಜ ಟ್ರೋಫಿ: ಹುಬ್ಬಳ್ಳಿ – ಮಂಗಳೂರು ಹಣಾಹಣಿ

ಮೈಸೂರು: ಅರಮನೆ ನಗರಿಯಲ್ಲಿ ಇದೇ ಏಳರಿಂದ ಆರಂಭವಾಗಲಿರುವ ಮಹಾರಾಜ ಟ್ರೋಫಿ ಕೆಎಸ್‌ಸಿಎ ಟಿ20 ಟೂರ್ನಿಯ ಮೊದಲ ಪಂದ್ಯದಲ್ಲಿ ಹುಬ್ಬಳ್ಳಿ ಟೈಗರ್ಸ್ ಹಾಗೂ ಮಂಗಳೂರು ಯುನೈಟೆಡ್‌ಮುಖಾಮುಖಿಯಾಗಲಿವೆ.

ಮಾನಸಗಂಗೋತ್ರಿಯಲ್ಲಿರುವ ಶ್ರೀಕಂಠದತ್ತ ನರಸಿಂಹರಾಜ ಒಡೆಯರ್ ಕ್ರೀಡಾಂಗಣದಲ್ಲಿ ಟೂರ್ನಿಯ 18 ಪಂದ್ಯಗಳು ನಡೆಯಲಿವೆ. ಆ.7ರಂದು ಟೂರ್ನಿಗೆ ರಾಜವಂಶಸ್ಥೆ ಪ್ರಮೋದಾದೇವಿ ಒಡೆಯರ್ ಚಾಲನೆ ನೀಡಲಿದ್ದಾರೆ. ಗುರುವಾರ ನಡೆದ ಸಮಾರಂಭದಲ್ಲಿ ನಟ ಸುದೀಪ್ ಹಾಗೂ ಕೆಎಸ್‌ಸಿಎ ಅಧ್ಯಕ್ಷ ರೋಜರ್ ಬಿನ್ನಿ ಟ್ರೋಫಿ ಅನಾವರಣಗೊಳಿಸಿದರು. ಟೂರ್ನಿಯಲ್ಲಿ ಆಡಲಿರುವ ತಂಡಗಳ ನಾಯಕರನ್ನು ಘೋಷಿಸಲಾಯಿತು.

ತಂಡ ಹಾಗೂ ನಾಯಕ: ಮೈಸೂರು ವಾರಿಯರ್ಸ್– ಕರುಣ್ ನಾಯರ್, ಕಲ್ಯಾಣಿ ಬೆಂಗಳೂರು ಬ್ಲಾಸ್ಟರ್ಸ್– ಮಯಂಕ್ ಅಗರ್‌ವಾಲ್, ಶಿವಮೊಗ್ಗ ಸ್ಟ್ರೈಕರ್ಸ್– ಕೆ.ಗೌತಮ್, ಗುಲ್ಬರ್ಗ ಮಿಸ್ಟಿಕ್– ಮನೀಷ್ ಪಾಂಡೆ, ಹುಬ್ಬಳ್ಳಿ ಟೈಗರ್ಸ್– ಅಭಿಮನ್ಯು ಮಿಥುನ್, ಮಂಗಳೂರು ಯುನೈಟೆಡ್ ತಂಡವನ್ನು ಆರ್.ಸಮರ್ಥ್ ಮುನ್ನಡೆಸಲಿದ್ದಾರೆ.

ಮೈಸೂರು ವಾರಿಯರ್ಸ್ ಫ್ರಾಂಚೈಸಿ ಸೈಕಲ್ ಪ್ಯೂರ್‌ನ ಪವನ್ ರಂಗ, ಸುಧಾಕರ್ ರೈ, ಹರಿ, ಇರ್ಫಾನ್ ಸೇಠ್ ಇದ್ದರು.



ಮೈಸೂರಿನಲ್ಲಿ 'ಮಹಾರಾಜ ಟ್ರೋಫಿ ಕೆಎಸ್‌ಸಿಎ ಟ್ವೆಂಟಿ20' ಟೂರ್ನಿಯ ಟ್ರೋಫಿಯನ್ನು ಚಲನಚಿತ್ರ ನಟ ಸುದೀಪ್ ಅನಾವರಣಗೊಳಿಸಿದರು. ಸುಧಾಕರ್ ರೈ, ವಿನಯ್ ಮೃತ್ಯುಂಜಯ, ರೋಜರ್ ಬಿನ್ನಿ, ಕರುಣ್ ನಾಯರ್, ಪವನ್ ರಂಗ ಇದ್ದರು– ಪ್ರಜಾವಾಣಿ ಚಿತ್ರ

13ರಿಂದ ಚೆಸ್

ಬೆಂಗಳೂರು: ಅಖಿಲ ಭಾರತ ಫಿಡೆ ರ್‍ಯಾಪಿಡ್ ಚೆಸ್ ಟೂರ್ನಿಯು ಇದೇ 13 ಮತ್ತು 14ರಂದು ನಡೆಯಲಿದೆ. ಕರ್ನಾಟಕ ರಾಜ್ಯ ಚೆಸ್ ಸಂಸ್ಥೆಯ(ಕೆಎಸ್‌ಸಿಎ) ಸಹಯೋಗದಲ್ಲಿ ಬೆಂಗಳೂರು ಗ್ರಾಮಾಂತರ ಜಿಲ್ಲಾ ಚೆಸ್ ಸಂಸ್ಥೆಯು (ಬಿಆರ್‌ಡಿಸಿಎ) ಹೊಸಕೋಟೆಯ ವೈಟ್‌ಫೀಲ್ಡ್‌ನಲ್ಲಿ ಟೂರ್ನಿಯನ್ನು ಆಯೋಜಿಸಲಿದೆ.

ಟೂರ್ನಿಯ ಒಟ್ಟು ಬಹುಮಾನ ಮೊತ್ತವು ₹ 4 ಲಕ್ಷ ಆಗಿದೆ. ಗ್ರ್ಯಾಂಡ್‌ಮಾಸ್ಟರ್ ಆರ್.ಆರ್. ಲಕ್ಷ್ಮಣ್, ಇಂಟರ್‌ನ್ಯಾಷನಲ್ ಮಾಸ್ಟರ್‌ಗಳಾದ ರತ್ನಾಕರನ್ ಕೆ, ಡಿ.ವಿ.ಪ್ರಸಾದ್, ರವಿ ತೇಜ, ಅನ್ವೇಷ್ ಉಪಾಧ್ಯಾಯ, ರವಿ ಟಿ. ಷಣ್ಮುಗಂ ಅವರು ಟೂರ್ನಿಯಲ್ಲಿ ಭಾಗವಹಿಸುವುದನ್ನು ಖಚಿತಪಡಿಸಿದ್ದಾರೆ ಎಂದು ಬಿಆರ್‌ಡಿಸಿಎ ಪ್ರಧಾನ ಕಾರ್ಯದರ್ಶಿ ಎ.ಚಿದಾನಂದ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ www.karnatakachess.com ವೆಬ್ ವಿಳಾಸ ಮತ್ತು ಚಿದಾನಂದ (ಮೊಬೈಲ್ ಸಂಖ್ಯೆ 9663405589) ಅವರನ್ನು ಸಂಪರ್ಕಿಸಬೇಕು. ನೋಂದಣಿ ಶುಲ್ಕವನ್ನು www.easypaychess.com ಮೂಲಕ ಪಾವತಿಸಬಹುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.